# ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ವಿಧಾನ ಸೌಧದ ಭವ್ಯ ಮೆಟ್ಟಿಲುಗಳ ಬಳಿ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆಯ ಕಾರ್ಯಕ್ರಮದ ವೇಳೆ ಸಂವಿಧಾನದ ಪೀಠಿಕೆ ಬೋಧಿಸಲಾಯಿತು. ಈ ವೇಳೆ ಸಿಎಂ ಸಿದ್ದರಾಮಯ್ಯ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಉಪ ಡಿಸಿಎಂ ಡಿ.ಕೆ.ಶಿವಕುಮಾರ್, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸೇರಿದಂತೆ ಅನೇಕರಿದ್ದರು.

### ಅಂಬೇಡ್ಕರ್ ಜಯಂತಿಯಂದೇ ಪರಿಶಿಷ್ಟ ಜಾತಿ ಒಳ ಮೀಸಲನ್ನು ಜಾರಿಗೊಳಿಸಿ ಅಧಿಕೃತ ಆದೇಶ ಹೊರಡಿಸಿದ ತೆಲಂಗಾಣ ಸರಕಾರ

# ನೆರೆ ರಾಜ್ಯದಲ್ಲಿ ಒಳ ಮೀಸಲು ಜಾರಿ
# ರಾಜ್ಯದಲ್ಲೂ ಹೆಚ್ಚಿದ ಒತ್ತಡ

**ಬೆಂಗಳೂರು/ಹೈದರಾಬಾದ್:** ರಾಜ್ಯ ರಾಜಕೀಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ಜಾತಿ ಗಣತಿಯನ್ನು ಸಂಪುಟದಲ್ಲಿ ಮಂಡಿಸಿ ಮುಂದೇನು ಎನ್ನುವ 'ಪ್ರಶ್ನೆ'ಯ ಸಮಯದಲ್ಲಿಯೇ ತೆಲಂಗಾಣ ಸರಕಾರ ಪರಿಶಿಷ್ಟ ಜಾತಿಯ ಒಳ ಮೀಸಲು ಪ್ರಕಟಿಸಿದೆ. ನೆರೆ ರಾಜ್ಯದ ಈ ಮಹತ್ವದ ನಿರ್ಣಯದ ಬೆನ್ನಲ್ಲೇ, ಕರ್ನಾಟಕದಲ್ಲಿರುವ ಒಳ ಮೀಸಲಿನ ಕೂಗಿಗೆ ಇನ್ನಷ್ಟು ಧ್ವನಿ ಬಂದಿದೆ.

ಅಂಬೇಡ್ಕರ್ ಜಯಂತಿಯಂದೇ ತೆಲಂಗಾಣ ಸರಕಾರ ಪರಿಶಿಷ್ಟ ಜಾತಿ ಒಳ ಮೀಸಲನ್ನು ಜಾರಿಗೊಳಿಸಿ ಅಧಿಕೃತ ಆದೇಶ ಹೊರಡಿಸಿದೆ. ಈ ಮೂಲಕ ಒಳ ಮೀಸಲು ಜಾರಿ ಗೊಳಿಸಿದ ದೇಶದ ಮೊದಲ ರಾಜ್ಯ ತೆಲಂಗಾಣವಾಗಿದೆ. ಇದರ ಬೆನ್ನಲ್ಲೇ, ಕರ್ನಾಟಕದಲ್ಲಿ ಹಲವು ವರ್ಷಗಳಿಂದ ಕೇಳುತ್ತಿರುವ ಒಳ ಮೀಸಲಿಗೆ ಮತ್ತಷ್ಟು ಒತ್ತಡ ಹೆಚ್ಚಾಗುವುದು ನಿಶ್ಚಿತವಾಗಿದೆ. ತೆಲಂಗಾಣ ಮಾದರಿಯಲ್ಲಿಯೇ ಕರ್ನಾಟಕ ದಲ್ಲಿಯೂ ಒಳ ಮೀಸಲು ನೀಡಬೇಕೆಂಬ ಒತ್ತಡ ಭವಿಷ್ಯದಲ್ಲಿ ಸರಕಾರ ಮುಂದೆ ಬರಲಿದೆ ಎಂದು ಅಂದಾಜಿಸಲಾಗಿದೆ.

ಕರ್ನಾಟಕದಲ್ಲಿ ಒಳ ಮೀಸಲು ಜಾರಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರ ಈಗಾಗಲೇ ನಾಗಮೋಹನ್ ದಾಸ್ ನೇತೃತ್ವ ದಲ್ಲಿ ಸಮೀಕ್ಷೆ ನಡೆಸಲು ಈಗಾಗಲೇ ವಿಚಾರಣಾ ಆಯೋಗ ವನ್ನು ರಚಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾ ಗಿದೆ. ಈ ವರದಿ ಸಲ್ಲಿಸಲು 60 ದಿನಗಳ ಸಮಯಾವಕಾಶ ವನ್ನು ನೀಡಿದ್ದರೂ, ಎರಡು ತಿಂಗಳಲ್ಲಿ ವರದಿ ನೀಡುವುದು ಸಾಧ್ಯ ವಿಲ್ಲ ಎನ್ನುವ ಮಾತುಗಳು ಕೇಳಿಬಂದಿರುವುದರಿಂದ, ಒಳ ಮೀಸಲು ಜಾರಿ ಸಂಬಂಧ ಸರಕಾರ ಸದ್ಯಕ್ಕೆ ಕೈಹಾಕುವುದಿಲ್ಲ ಎನ್ನುವುದು ಸ್ಪಷ್ಟ. ಇದರೊಂದಿಗೆ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 101 ಉಪಜಾತಿಗಳಿವೆ, ಜತೆಗೆ ಎಡ-ಬಲದ ಗೊಂದಲ ಗಳಿವೆ. ಆದ್ದರಿಂದ ಈಗಾಗಲೇ ಜಾತಿ ಗಣತಿ ಮಂಡಿ ಸಿರುವ ರಾಜ್ಯ ಸರಕಾರಕ್ಕೆ, ಇದೀಗ ತೆಲಂಗಾಣದ ಈ ನಡೆ ಮತ್ತೊಂದು ತಲೆಬಿಸಿಯನ್ನು ತರಲಿದೆ ಎನ್ನುವ ವಿಶ್ಲೇಷಣೆಗಳು ಕೇಳಿಬರುತ್ತಿದೆ.

**ತೆಲಂಗಾಣದ ಒಳಮೀಸಲು ಜಾರಿ ಹೇಗಿದೆ?:** ಪರಿಶಿಷ್ಟ ಜಾತಿಗೆ ಒಳ ಮೀಸಲು ಜಾರಿಗೊಳಿಸಿರುವ ತೆಲಂಗಾಣ ಸರಕಾರ ಅಸ್ತಿತ್ವದಲ್ಲಿರುವ ಶೇ.15ರಷ್ಟು ಮೀಸಲನ್ನು ಎ, ಬಿ, ಸಿ ಎಂದು ವರ್ಗೀಕರಿಸಿ, ತೆಲಂಗಾಣದಲ್ಲಿರುವ 59 ಉಪಜಾತಿಯನ್ನು ಮೂರು ವರ್ಗಗಳಾಗಿ ವಿಂಗಡಿಸಿ ಅಸ್ತಿತ್ವದಲ್ಲಿರುವ ಮೀಸಲನ್ನು ನೀಡಲಾಗಿದೆ.

ಈ ಬಗ್ಗೆ ಮಾತನಾಡಿರುವ ತೆಲಂಗಾಣ ನೀರಾವರಿ ಸಚಿವ ಉತ್ತಮ್‌ಕುಮಾರ್ ರೆಡ್ಡಿ, ಒಳ ಮೀಸಲು ಕುರಿತು ವರದಿ ನೀಡಲು ತೆಲಂಗಾಣ ಸರಕಾರವು ಈ ಹಿಂದೆ ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ಶಮೀಮ್ ಅಕ್ತರ್ ನೇತೃತ್ವದಲ್ಲಿ ಆಯೋಗ ರಚಿಸಿತ್ತು. ಈ ಆಯೋಗ ತೆಲಂಗಾಣದಲ್ಲಿ ಪರಿಶಿಷ್ಟ ಜಾತಿಗಳಲ್ಲಿ 59 ಉಪಜಾತಿಗಳನ್ನು ಸಮಿತಿ ಗುರುತಿಸಿದೆ ಮತ್ತು ಅಸ್ತಿತ್ವದಲ್ಲಿರುವ ಶೇ. 15 ರಷ್ಟು ಮೀಸಲಾತಿ ಯೊಳಗೆ ಅವುಗಳನ್ನು ಮೂರು ಮೂರು ಗುಂಪು ಗಳಾಗಿ ವಿಂಗಡಿಸಲು ಶಿಫಾರಸುಗಳನ್ನು ಮಾಡಿತ್ತು. ಈ ಸಂಬಂಧ ತೆಲಂಗಾಣ ಸರಕಾರ, ತೆಲಂಗಾಣ ಪರಿಶಿಷ್ಟ ಜಾತಿಗಳ ಮೀಸಲಾತಿ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿ ಅಂಗೀಕರಿಸಿದ್ದು, ಇದಕ್ಕೆ ಏಪ್ರಿಲ್ 8, 2025 ರಂದು ತೆಲಂಗಾಣ ರಾಜ್ಯಪಾಲರು ಅಂಕಿತ ಸಹ ಹಾಕಿದ್ದಾರೆ. → 4

**ತೆಲಂಗಾಣ 3 ಗುಂಪುಗಳಾಗಿ ಮೀಸಲು**

| ಗುಂಪು | | |
|---|---|---|
| 1 | 1% | ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಸಮುದಾಯ ಗಳನ್ನು ಒಳಗೊಂಡಿರುವ ಮೀಸಲು |
| 2 | 9% | ಮಧ್ಯಮ ಪ್ರಯೋಜನ ಪಡೆದ 18 ಉಪಜಾತಿಗಳ ಮೀಸಲು |
| 3 | 5% | ಗಮನಾರ್ಹವಾಗಿ ಪ್ರಯೋಜನ ಪಡೆದ 26 ಉಪಜಾತಿಗಳನ್ನು ಒಳಗೊಂಡಿರುವ ಗುಂಪಿಗೆ ಇರುವ ಮೀಸಲಾತಿ |

### ಇಂದು ಒಕ್ಕಲಿಗರ ಸಭೆ

ಜಾತಿಗಣತಿ ಬಗ್ಗೆ ಅವಸರದ ತೀರ್ಮಾನವಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆಯ ಬೆನ್ನಲ್ಲೇ, ಜಾತಿ ಗಣತಿ ವಿಚಾರವಾಗಿ ಮಂಗಳವಾರ ಕಾಂಗ್ರೆಸ್ ಪಕ್ಷದ ಒಕ್ಕಲಿಗ ಸಮುದಾಯದ ಶಾಸಕರ ಜತೆ ಚರ್ಚೆ ಮಾಡಿ ಅಭಿಪ್ರಾಯ ಸಂಗ್ರಹಿಸಲು ತೀರ್ಮಾನಿಸಿದ್ದಾರೆ. ಈ ಬಗ್ಗೆ ಮಾತನಾಡಿರುವ ಡಿ.ಕೆ.ಶಿವಕುಮಾರ್, ನಾನು ಜಾತಿ ಗಣತಿ ವರದಿಯನ್ನು ಸಂಪೂರ್ಣವಾಗಿ ನೋಡಿಲ್ಲ. ಅದರ ಅಧ್ಯಯನ ಮಾಡಲಾಗುತ್ತಿದೆ. ಮಂಗಳವಾರ ನಮ್ಮ ಸಮುದಾಯದ ಶಾಸಕರ ಸಭೆ ಕರೆದಿದ್ದೇನೆ. ಅವರ ಜತೆ ಚರ್ಚೆ ಮಾಡಿ, ಯಾರ ಮನಸ್ಸನ್ನೂ ನೋಯಿಸದೇ ಎಲ್ಲರ ಗೌರವ ಕಾಪಾಡಲು ಸಲಹೆ ನೀಡುತ್ತೇವೆ ಎಂದು ತಿಳಿಸಿದರು. ಬೆಂಗಳೂರಿನ ಕುಮಾರ ಪಾರ್ಕ್ ಗಾಂಧಿ ಭವನ ರಸ್ತೆಯಲ್ಲಿರುವ ಡಿಸಿಎಂ ಅವರ ಸರಕಾರಿ ನಿವಾಸದಲ್ಲಿ ಮಂಗಳವಾರ ಸಂಜೆ 6 ಗಂಟೆಗೆ ಕಾಂಗ್ರೆಸ್ ಪಕ್ಷದ ಒಕ್ಕಲಿಗ ಶಾಸಕರ ಸಭೆ ಕರೆಯಲಾಗಿದೆ.

### ಲಿಂಗಾಯತರ ಸಭೆ

ಭಿನ್ನಮತಗಳನ್ನು ಬದಿಗಿಟ್ಟು, ಜಾತಿಗಣತಿ ವಿರುದ್ಧ ಒಂದಾಗಿ ಹೋರಾಡಬೇಕಿದೆ ಎನ್ನುವ ಮಾತುಗಳು ವೀರಶೈವ- ಲಿಂಗಾಯತ ಸಮುದಾಯದಲ್ಲಿ ಇದೀಗ ಕೇಳಿಬರುತ್ತಿದೆ. ಅಖಿಲ ಭಾರತ ವೀರಶೈವ ಮಹಾಸಭಾ ಅನೌಪಚಾರಿಕ ಸಭೆ ನಡೆಸಿದ್ದು, ಪ್ರಭಾವಿ ಸಚಿವರೊಬ್ಬರನ್ನು ಕರೆಸಿ ಗಂಭೀರ ಚರ್ಚೆ ನಡೆಸಿದ್ದಾರೆ. ಇದರೊಂದಿಗೆ ಜಾತಿ ಗಣತಿಯಲ್ಲಿ ಸೋರಿಕೆಯಾಗಿರುವ ಅಂಶ ಮುಂದಿಟ್ಟುಕೊಂಡು ಜಾತಿಗಣತಿಯಲ್ಲಿರುವ ವಿಷಯಗಳು, ಅವುಗಳ ಸತ್ಯಾಸತ್ಯತೆ, ಭವಿಷ್ಯದಲ್ಲಿ ಇದರಿಂದ ಆಗಬಹುದಾದ ಪರಿಣಾಮ ಸೇರಿ ವಿವಿಧ ಆಯಾಮಗಳ ಬಗ್ಗೆ ಅಧ್ಯಯನ ನಡೆಸಿ ಏ.17ರೊಳಗೆ ಪ್ರಾಥಮಿಕ ವರದಿ ನೀಡುವಂತೆ ಸೂಚನೆ ನೀಡಲಾಗಿದೆ. ಈ ಪ್ರಾಥಮಿಕ ವರದಿಯನ್ನು ಎಲ್ಲ ಲಿಂಗಾಯತ ಸಚಿವರಿಗೆ ನೀಡಿ, ವಿಶೇಷ ಸಚಿವ ಸಂಪುಟದಲ್ಲಿ ಚರ್ಚಿಸಬೇಕು ಎಂದು ಹೇಳಿದ್ದಾರೆ ಎನ್ನಲಾಗಿದೆ.

**10 ವರ್ಷದ ಹಳೆಯ ವರದಿ ಅವೈಜ್ಞಾನಿಕವಾಗಿದ್ದು, ಇದನ್ನು ಕಸದ ಬುಟ್ಟಿಗೆ ಹಾಕಬೇಕಿದೆ. ವೈಜ್ಞಾನಿಕವಾಗಿ ಮರು ಸಮೀಕ್ಷೆ ಮಾಡಿ, ಎಲ್ಲರ ಸಭೆ ಕರೆದು ಜಾರಿಗೊಳಿಸಲಿ. ಸಿಎಂ ಒಂದು ಹೇಳಿದರೆ, ಡಿಸಿಎಂ ಇನ್ನೊಂದು ಹೇಳುತ್ತಾರೆ. ಎಂ.ಬಿ.ಪಾಟೀಲ್, ಪರಮೇಶ್ವರ್ ಬೇರೆ ಬೇರೆ ರೀತಿಯ ಹೇಳಿಕೆ ಕೊಡುತ್ತಾರೆ. ಆಡಳಿತ ಪಕ್ಷದಲ್ಲೇ ಗೊಂದಲವಿದೆ.**
**-ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

### ಮುಷ್ಕರ ಹಿಂಪಡೆಯುವಂತೆ ಸಚಿವ ರಾಮಲಿಂಗಾರೆಡ್ಡಿ ಮನವಿ ಸರಕಾರ ಮಾತುಕತೆಗೆ ಕರೆದರೆ ಚರ್ಚೆಗೆ ಸಿದ್ಧ ಎಂದ ಷಣ್ಮುಗಪ್ಪ

# ಲಾರಿ ಮುಷ್ಕರ ಬಹುತೇಕ ಡೌಟ್

**ಬೆಂಗಳೂರು:** ಡೀಸೆಲ್ ದರ ಇಳಿಕೆ ಸೇರಿದಂತೆ ವಿವಿಧ ಬೇಡಿಕೆ ಮುಂದಿಟ್ಟುಕೊಂಡು ಕರೆ ನೀಡಿರುವ ಲಾರಿ ಮುಷ್ಕರ ಗೊಂದಲ ಗೂಡಾಗಿದ್ದು, ಕೆಲ ಸಂಘಟನೆಗಳು ಮುಷ್ಕರಕ್ಕೆ ಬೆಂಬಲಿಸಿದ್ದರೆ, ಇನ್ನು ಕೆಲವರು ವಿರೋಧಿಸಿದ್ದಾರೆ. ಈ ನಡುವೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮುಷ್ಕರ ಹಿಂಪಡೆಯುವಂತೆ ಮನವಿ ಮಾಡಿದ್ದು, ಅದಕ್ಕೆ ಪೂರಕವಾಗಿ ಷಣ್ಮುಗಪ್ಪ ಅವರು ಸರಕಾರ ಮಾತುಕತೆಗೆ ಕರೆದರೆ ಚರ್ಚೆಗೆ ಸಿದ್ಧ ಎಂದಿದ್ದಾರೆ. ಹೀಗಾಗಿ ಲಾರಿ ಮುಷ್ಕರ ನಡೆಯುವುದು ಅನುಮಾನ ಎನ್ನಲಾಗಿದೆ.

ಬೇಡಿಕೆಗಳ ಈಡೇರಿಕೆಗೆ ಸರಕಾರ ಒಪ್ಪದಿದ್ದರೆ ಡಿಸೆಲ್ ದರ ಏರಿಕೆ , ಟೋಲ್ ಶುಲ್ಕ ಹೆಚ್ಚಳ, ಆರ್‌ಟಿಒ ಅಧಿಕಾರಿಗಳ ಕಿರುಕುಳ ಸೇರಿ ಹಲವು ವಿಚಾರಗಳನ್ನಿಟ್ಟುಕೊಂಡು ಸೋಮವಾರ ಮಧ್ಯರಾತ್ರಿಯಿಂದಲೇ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಲಾರಿ ಮಾಲೀಕರ ಸಂಘ ತೀರ್ಮಾನಿಸಿರುವುದರಿಂದ 6 ಲಕ್ಷಕ್ಕೂ ಅಧಿಕ ಲಾರಿಗಳು ಮಧ್ಯರಾತ್ರಿಯಿಂದಲೇ ಸೇವೆಯನ್ನು ಬಂದ್ ಮಾಡಲಿವೆ. ಜಲ್ಲಿ ಕಲ್ಲು, ಮರಳು ಲಾರಿಗಳು, ಗೂಡ್ಸ್ ವಾಹನಗಳು, ಅಕ್ಕಿ ಸಾಗಿಸುವ ಲಾರಿಗಳ ಸಂಚಾರ ಸ್ಥಗಿತಗೊಳ್ಳಲಿವೆ ಎಂದು ಲಾರಿ ಮಾಲೀಕರ ಸಂಘ ತಿಳಿಸಿದೆ. → 4



### ಬೇಡಿಕೆಗಳು ಯಾವುವು?

- ಡಿಸೇಲ್ ದರ ಕಡಿಮೆ ಮಾಡಬೇಕು, ಚಾಲಕರ ಮೇಲೆ ಹಲ್ಲೆ ನಿಲ್ಲಬೇಕು
- ರಾಜ್ಯ ಹೆದ್ದಾರಿಯ ಟೋಲ್‌ಗಳಲ್ಲಿ ಹಣ ವಸೂಲಿ ನಿಲ್ಲಿಸಬೇಕು
- ಆರ್‌ಟಿಒ ಬಾರ್ಡರ್‌ನ ಚೆಕ್ ಪೋಸ್ಟ್ ತೆಗೆದು ಹಾಕಬೇಕು

**ಮುಷ್ಕರಕ್ಕೆ ಪೆಟ್ರೋಲ್ ಬಂಕ್ ಸಂಘಟನೆಗಳು ಬೆಂಬಲ ನೀಡಿವೆ. ನಮ್ಮ ಬೇಡಿಕೆ ಈಡೇರುವ ತನಕ ಮುಷ್ಕರ ನಿಲ್ಲಿಸುವುದಿಲ್ಲ. ಸೋಮವಾರ ಮಧ್ಯರಾತ್ರಿಯಿಂದ ಸುಮಾರು ಆರು ಲಕ್ಷಕ್ಕೂ ಅಧಿಕ ಲಾರಿಗಳು ರಸ್ತೆಗಿಳಿಯುವುದಿಲ್ಲ. ಹೊರ ರಾಜ್ಯದಿಂದ ಬರುವ ಲಾರಿಗಳನ್ನು ತಡೆಯುತ್ತೇವೆ.**
**-ಷಣ್ಮುಗಪ್ಪ** ಲಾರಿ ಮಾಲೀಕರ ಸಂಘದ ಅಧ್ಯಕ್ಷ

## ₹1,800 ಕೋಟಿ ಮೌಲ್ಯದ ಡ್ರಗ್ಸ್ ವಶ

**ಅಹಮದಾಬಾದ್:** ಗುಜರಾತ್ ಭಯೋತ್ಪಾದನಾ ನಿಗ್ರಹ ದಳ ಮತ್ತು ಕರಾವಳಿ ಕಾವಲು ಪಡೆ ಜಂಟಿಯಾಗಿ ಅರಬ್ಬೀ ಸಮುದ್ರದಲ್ಲಿ ಏ.13ರ ನಸುಕಿನಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ 1,800 ಕೋಟಿ ರು. ಮೌಲ್ಯದ ಮಾದಕ ದ್ರವ್ಯವನ್ನು ವಶಪಡಿಸಿಕೊಳ್ಳಲಾಗಿದೆ. ಮಾದಕದ್ರವ್ಯ ಕಳ್ಳಸಾಗಣೆದಾರರು ಅಂತಾರಾಷ್ಟ್ರೀಯ ಗಡಿ ರೇಖೆ ದಾಟಿ ಪರಾರಿಯಾಗುವ ಭರದಲ್ಲಿ ಸಮುದ್ರಕ್ಕೆ 300 ಕಿಲೊ ಮಾದಕದ್ರವ್ಯವನ್ನು ಎಸೆದಿದ್ದರು. ವಶವಾಗಿರುವ ಮಾದಕದ್ರವ್ಯ ಮೆಥಾಫೆಂಟಮೈನ್ ಇರ ಬಹುದು ಎಂದು ಶಂಕಿಸಲಾಗಿದೆ. ಮಾದಕವಸ್ತು ವನ್ನು ಪೋರಬಂದರ್‌ಗೆ ತರಲಾಗಿದೆ. ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಎಟಿಎಸ್‌ಗೆ ಹಸ್ತಾಂತರಿ ಸಲಾಗಿದೆ ಎಂದು ಭಾರತೀಯ ಕರಾವಳಿ ಕಾವಲು ಪಡೆ ಅಧಿಕಾರಿಗಳು ತಿಳಿಸಿದ್ದಾರೆ.

### ಮೋದಿ ಪ್ರಧಾನಿ ಆಗುವವರೆಗೆ ಚಪ್ಪಲಿ ಧರಿಸಲ್ಲ ಎಂದು ಪಣತೊಟ್ಟಿದ್ದ ಕಶ್ಯಪ್

## ಅಭಿಮಾನಿಗೆ ಶೂ ತೊಡಿಸಿದ ಪ್ರಧಾನಿ

ರಾಮ್ ಪಾಲ್ ಅವರಿಗೆ ಹೊಸ ಶೂ ತೊಡಿಸಿದ ಮೋದಿ.

**ದೆಹಲಿ:** ಮೋದಿಯವರು ಪ್ರಧಾನಿಯಾಗುವವರೆಗೆ ಪಾದರಕ್ಷೆಗಳನ್ನು ಧರಿಸುವುದಿಲ್ಲವೆಂದು ಸುಮಾರು 11 ವರ್ಷಗಳ ಹಿಂದೆ ಪ್ರತಿಜ್ಞೆ ಮಾಡಿದ್ದ ಹರಿಯಾಣದ ಕೈಥಾಲ್ ನಗರದ ರಾಮ್ ಪಾಲ್ ಕಶ್ಯಪ್ ಅವರನ್ನು ಸೋಮವಾರ ಭೇಟಿ ಮಾಡಿದ ಪ್ರಧಾನಿ ನರೇಂದ್ರ ಮೋದಿಯವರು ತಾವೇ ತಮ್ಮ ಕೈಯ್ಯಾರೆ ಶೂಗಳನ್ನು ತೊಡಿಸಿದ್ದಾರೆ. ಕಶ್ಯಪ್ ಅವರು, 2014 ರಲ್ಲಿ ನಡೆದಿದ್ದ ಲೋಕಸಭಾ ಚುನಾವಣೆಗೂ ಮುನ್ನ ಪ್ರತಿಜ್ಞೆ ಮಾಡಿ, ಮೋದಿಯವರು ಪ್ರಧಾನಿಯಾಗುವವರೆಗೆ ಹಾಗೂ ತಾವು ಖುದ್ದಾಗಿ ಮೋದಿಯವರನ್ನು ಜೀವನದಲ್ಲಿ ಒಮ್ಮೆಯಾದರೂ ಭೇಟಿಯಾಗುವವವರೆಗೆ ತಮ್ಮ ಕಾಲಿಗೆ ಪಾದರಕ್ಷೆಗಳನ್ನು ಧರಿಸುವುದಿಲ್ಲ ಎಂದು ಶಪಥ ಮಾಡಿದ್ದರು.

## ಚೋಕ್ಸಿ ಬಂಧನ

**ಬ್ರುಸೆಲ್ಸ್:** ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ವಂಚನೆ ಪ್ರಕರಣದ ಆರೋಪಿ ಮೆಹುಲ್ ಚೋಕ್ಸಿಯನ್ನು ಬೆಲ್ಜಿಯಂನಲ್ಲಿ ಪೊಲೀಸರು ಬಂಧಿಸಿದ್ದಾರೆ.

ಸರಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ₹13,850 ಕೋಟಿ ಸಾಲ ಪಡೆದಿದ್ದ ನೀರವ್ ಮೋದಿ ಮತ್ತು ಮೆಹುಲ್ ಚೋಕ್ಸಿ, ಸಾಲ ಮರುಪಾವತಿ ಸದೆ ವಂಚಿಸಿ 2018ರಲ್ಲಿ ವಿದೇಶಕ್ಕೆ ಪರಾರಿಯಾಗಿದ್ದರು. ಇವರಿಬ್ಬರಿಗಾಗಿ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ ಹುಡುಕಾಟ ನಡೆಸುತ್ತಿತ್ತು. ಇದೀಗ ಬಂಧಿಸಲಾಗಿದೆ.

### ರಾಜ್ಯದಲ್ಲಿ ಸಂಚಲನ ಸೃಷ್ಟಿಸಿದ ಐದು ವರ್ಷದ ಹೆಣ್ಣು ಮಗುವಿನ ಕೊಲೆ ಪ್ರಕರಣ

# ಲೇಡಿ ಸಿಂಗಂಗೆ ಮೆಚ್ಚುಗೆಗಳ ಮಹಾಪೂರ

- ಹುಬ್ಬಳ್ಳಿ ಧಾರವಾಡ ಮಹಾನಗರ ಪೊಲೀಸ್ ಘಟಕದಲ್ಲಿ ಇದು ಮೊದಲನೇ ಎನ್‌ಕೌಂಟರ್
- ಮಹಿಳಾ ಪಿಎಸ್‌ಐ ದಿಟ್ಟ ಹೆಜ್ಜೆಗೆ ಸಾರ್ವಜನಿಕ ವಲಯದಿಂದ ವ್ಯಾಪಕ ಮೆಚ್ಚುಗೆ

**ಹುಬ್ಬಳ್ಳಿ:** ಐದು ವರ್ಷದ ಹೆಣ್ಣು ಮಗುವನ್ನು ಅಪಹರಣ ಮಾಡಿ, ಅತ್ಯಾಚಾರಕ್ಕೆ ಯತ್ನಿಸಿ ಕೊಲೆ ಮಾಡಿದ ಆರೋಪಿಯನ್ನು ಎನ್‌ಕೌಂಟರ್ ಮಾಡಿರುವ ಮಹಿಳಾ ಪಿಎಸ್‌ಐ ಅನ್ನಪೂರ್ಣ ಅವರಿಗೆ ರಾಜ್ಯಾದ್ಯಂತ ಮೆಚ್ಚುಗೆಗಳ ಮಹಾಪೂರವೇ ಹರಿದುಬರುತ್ತಿವೆ.

ಹುಬ್ಬಳ್ಳಿಯ ಅಶೋಕ ನಗರದಲ್ಲಿ ಐದು ವರ್ಷದ ಮಗುವನ್ನು ಅಪಹರಿಸಿ ಅತ್ಯಾಚಾರಕ್ಕೆ ಯತ್ನಿಸಿ ಕೊಲೆ ಮಾಡಿದ ಪ್ರಕರಣ ಇಡೀ ರಾಜ್ಯವನ್ನೇ ಬೆಚ್ಚಿಬೀಳಿಸಿತ್ತು. ಬಾಲಕಿಯನ್ನು ಕೊಲೆ ಮಾಡಿದ್ದ ಆರೋಪಿ ಬಿಹಾರ ಮೂಲದ ರಿತೇಶ್‌ನನ್ನು ಪ್ರಕರಣ ನಡೆದ ದಿನವೇ ಎನ್‌ಕೌಂಟರ್ ಮಾಡಲಾಗಿದೆ. ಆ ಮೂಲಕ ಶೀಘ್ರವೇ ನ್ಯಾಯ ಕೊಡಿಸಿದ್ದಾರೆ ಎಂದು ಜನರು ಅವರಿಗೆ ಲೇಡಿ ಸಿಂಗಂ ಎಂದು ಬಿರುದು ನೀಡಿದ್ದಾರೆ.

**ಎಂಎಸ್‌ಸಿ ಚಿನ್ನದ ಪದಕ ವಿಜೇತೆ:** ಸದ್ಯ ಅಶೋಕ ನಗರ ಪೊಲೀಸ್ ಠಾಣೆಯ ಪಿಎಸ್‌ಐ ಆಗಿ ಕೆಲಸ ಮಾಡುತ್ತಿರುವ ಅನ್ನಪೂರ್ಣ ಅವರು ಮೂಲತಃ ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ಗುಜನಗಟ್ಟಿ ಗ್ರಾಮದವರು. 2018ನೇ ಬ್ಯಾಚ್‌ನಲ್ಲಿ ಪಿಎಸ್‌ಐ ಹುದ್ದೆಗೆ ನೇಮಕಗೊಂಡ ಅವರು, ರೈತಾಪಿ ಕುಟುಂಬದಲ್ಲಿ ಹುಟ್ಟಿ ಬೆಳೆದಿದ್ದಾರೆ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು, ತಾಯಿಯ ನೆರಳಲ್ಲಿ ಬದುಕಿದ್ದ ಅವರು, ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ಬಿಎಸ್‌ಸಿ ಪದವಿ ಪಡೆದು, ಬೆಂಗಳೂರಿನ ಜಿಕೆವಿಕೆಯಲ್ಲಿ ಎಂಎಸ್‌ಸಿ ಪದವಿಯಲ್ಲಿ ಚಿನ್ನದ ಪದಕ ಪಡೆದಿದ್ದಾರೆ. → 4

**ಪಿಎಸ್‌ಐ ಅನ್ನಪೂರ್ಣ ಅವರಿಗೆ ಅತ್ಯುನ್ನತ ಪದಕ ನೀಡುವಂತೆ ಸಿಎಂ, ಡಿಸಿಎಂ, ಮತ್ತು ಗೃಹ ಸಚಿವರಿಗೆ ಶಿಫಾರಸು ಮಾಡುತ್ತೇನೆ. ಹುಬ್ಬಳ್ಳಿ ಪ್ರಕರಣದಲ್ಲಿ ತೆಗೆದುಕೊಂಡ ಕ್ರಮಕ್ಕಾಗಿ ಅನ್ನಪೂರ್ಣ ಅವರನ್ನು ಅಭಿನಂದಿಸುತ್ತೇನೆ. ಅವರ ನಡೆ ಬೇರೆ ಅಧಿಕಾರಿಗಳಿಗೆ ದಾರಿದೀಪವಾಗಬೇಕು. ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ದಂಥ ಪಿಡುಗು ನಿರ್ಮೂಲನೆಯಾಗಬೇಕು.**
**-ಲಕ್ಷ್ಮೀ ಹೆಬ್ಬಾಳ್ಕರ್**, ಸಚಿವೆ

### ಸೊಂಪಾದ ಪುಟಗಳು

ಜಾತಿ ಗಣತಿಯೆಂಬ ಜೇನುಗೂಡು!
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ

ನೆದರ್ಲ್ಯಾಂಡಿನಲ್ಲೂ ತಪ್ಪಿದ್ದಲ್ಲ ಇಲಿಕಾಟ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ


### ದಾರಿದೀಪೋಕ್ತಿ

ಜೀವನದಲ್ಲಿ ನಿಮಗೆ ನೋವೇ ಆಗದಿದ್ದರೆ, ನಿಮಗೆ ಸುಖದ ಮಹತ್ವವೇ ಗೊತ್ತಾಗುವುದಿಲ್ಲ. ನೀವು ತಪ್ಪುಗಳನ್ನು ಮಾಡದಿದ್ದರೆ ಯಾವ ಸಂಗತಿಗಳನ್ನೂ ಕಲಿಯಲಾರಿರಿ. ಬದುಕಿನಲ್ಲಿ ಸೋಲದ ಹೊರತು ಯಶಸ್ಸಿನ ಮಹತ್ವ ತಿಳಿಯುವುದಿಲ್ಲ. ಬದುಕಿನಲ್ಲಿ ಹಿನ್ನಡೆಗಳೂ ಬಹು ದೊಡ್ಡ ಪಾಠಗಳನ್ನು ಹೇಳುತ್ತವೆ.

### ವಕ್ರತುಂಡೋಕ್ತಿ

ಸೂರ್ಯೋದಯ ಸುಂದರವಾಗಿರುತ್ತದೆ. ಆದರೆ ಬೆಳಗ್ಗೆ ಬೇಗ ಎದ್ದು ಕಣ್ಣುಜ್ಜಿಕೊಳ್ಳುತ್ತಾ ನೋಡುವಷ್ಟು ಸುಂದರವಾಗಿರುವುದಿಲ್ಲ.

## ಡೀಸೆಲ್‌ಗೆ ಬೇಡಿಕೆ ಇಳಿಕೆ

**ದೆಹಲಿ:** 2024-25ರ ಆರ್ಥಿಕ ವರ್ಷದಲ್ಲಿ ದೇಶದಲ್ಲಿ ಡೀಸೆಲ್‌ಗೆ ಬೇಡಿಕೆಯ ಬೆಳವಣಿಗೆ ಪ್ರಮಾಣ ಇಳಿಕೆಯಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕ ತಿಳಿಸಿದೆ. 2022-23ರ ಆರ್ಥಿಕ ವರ್ಷದಲ್ಲಿ ಡೀಸೆಲ್‌ಗೆ ಬೇಡಿಕೆ ಶೇ.12.1ರಷ್ಟಿತ್ತು. 2023-24ರಲ್ಲಿ ಶೇ.4.3 ರಷ್ಟಿದ್ದರೆ, 2024-25ರಲ್ಲಿ ಬೇಡಿಕೆ ಪ್ರಮಾಣ ಶೇ.2ರಷ್ಟು ಮಾತ್ರ ಇದೆ. ದೇಶದ ಆರ್ಥಿಕ ಪ್ರಗತಿಯು ಮಂದಗತಿಯಲ್ಲಿರುವುದು ಮತ್ತು ಪರಿಸರ ಸ್ನೇಹಿ ಇಂಧನ ಬಳಕೆ ಹೆಚ್ಚಳ ದಿಂದ ಡೀಸೆಲ್ ಬೇಡಿಕೆಯ ಬೆಳವಣಿಗೆ ಪ್ರಮಾಣ ಕುಸಿದಿದೆ ಎಂದು ತಿಳಿಸಿದೆ.

## ಹಾಸ್ಯನಟ ಬ್ಯಾಂಕ್ ಜನಾರ್ದನ್ ನಿಧನ

**ಬೆಂಗಳೂರು:** ಕನ್ನಡ ಚಿತ್ರರಂಗದಲ್ಲಿ ತಮ್ಮ ಹಾಸ್ಯ ಪಾತ್ರಗಳ ಮೂಲಕ ಜನಪ್ರಿಯತೆ ಪಡೆದಿದ್ದ ಹಿರಿಯ ನಟ ಬ್ಯಾಂಕ್ ಜನಾರ್ದನ್ (76) ಸೋಮವಾರ ಮಧ್ಯರಾತ್ರಿ 2.30ರ ಸುಮಾರಿಗೆ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೂರು ಬಾರಿ ಅವರಿಗೆ ಹೃದಯಾಘಾತ ಸಂಭವಿಸಿತ್ತು. ಚಿಕಿತ್ಸೆಗಾಗಿ ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.



### ಫನ್‌ತರಂಗ
- ರಘುಪತಿ ಶೃಂಗೇರಿ -

ಈ ಬಾರಿಯ ಐಪಿಎಲ್-2025ರಲ್ಲಿ ಜನರನ್ನು ಆಕರ್ಷಿಸುತ್ತಿರುವ 'ರೋಬೋಟ್ ನಾಯಿ' ಸುದ್ದಿ



## ಸಮಾಚಾರ ಸಣ್ಣದಲ್ಲ

### ಹೃದಯಾಘಾತದಿಂದ ಹೆಡ್‌ಕಾನ್‌ಸ್ಟೆಬಲ್ ಸಾವು

**ಕಾಗವಾಡ:** ಕುಡಚಿ ಪಟ್ಟಣದಲ್ಲಿ ಕರ್ತವ್ಯದಲ್ಲಿದ್ದ ಹೆಡ್ ಕಾನ್‌ಸ್ಟೆಬಲ್ ಹೃಯಾಘಾತದಿಂದ ಸಾವನ್ನಪ್ಪಿದ ಘಟನೆ ಕುಡಚಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಮೃತ ಯಲ್ಲಪ್ಪ ಭೋಜ ಅವರಿಗೆ ರವಿವಾರ ರಾತ್ರಿ ಇದ್ದಕ್ಕಿದ್ದಂತೆ ತೀವ್ರ ಎದೆ ನೋವು ಕಾಣಿಸಿಕೊಂಡಿದ್ದು, ಅವರು ತಮ್ಮ ಸಹೋದ್ಯೋಗಿಗಳಿಗೆ ಮಾಹಿತಿ ನೀಡಿದ್ದಾರೆ. ನಂತರ ಅವರನ್ನು ತಕ್ಷಣವೇ ಮಹಾರಾಷ್ಟ್ರದ ಸಾಂಗಲಿ ನಗರದ ಭಾರತಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ವೈದ್ಯರು ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಿದ್ದಾರೆ. ಕುಡಚಿ ಚೆಕ್‌ಪೋಸ್ಟ್‌ನಲ್ಲಿ ಕರ್ತವ್ಯಕ್ಕೆ ನಿಯೋಜಿಸಲ್ಪಟ್ಟಿದ್ದ ಮೂಡಲಗಿ ತಾಲೂಕಿನ ತುಕ್ಕಾನಟ್ಟಿ ನಿವಾಸಿಯಾದ 46 ವರ್ಷದ ಹವಾಲ್ದಾರ ಯಲ್ಲಪ್ಪ ಭೋಜ್ ಹೃದಯಾಘಾತದಿಂದ ನಿಧನರಾಗಿದ್ದಾರೆ. ಕುಡಚಿ ಚೆಕ್‌ಪೋಸ್ಟ್‌ನಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಅವರನ್ನು ನಿಯೋಜಿಸಲಾಗಿತ್ತು. ಅಲ್ಲಿ ರವಿವಾರ ಈ ಘಟನೆ ನಡೆದಿದೆ. ಅವರು ಕಳೆದ 9 ತಿಂಗಳಿನಿಂದ ಕುಡಚಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದರು. ಇದಕ್ಕೂ ಮೊದಲು ಅವರು ಕಾಗವಾಡ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಪೋಷಕರು, ತಾಲೂಕಿನಲ್ಲಿ ಗ್ರಾಮ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಪತ್ನಿ, ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗನನ್ನು ಅಗಲಿದ್ದಾರೆ.

### ಅಂಬೇಡ್ಕರ್ ಜಯಂತಿ ಅದ್ದೂರಿ ಆಚರಣೆ

**ಗೋಕಾಕ:** ದಲಿತ ಸಂಘರ್ಷ ಸಮಿತಿ ಕರ್ನಾಟಕ(ರಿ) ಅಣ್ಣಯ್ಯ ಬಣ ಸಂಘಟನೆಯ ತಾಲೂಕು ಸಮಿತಿ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 134ನೇ ಜಯಂತಿ ಉತ್ಸವ ಕಾರ್ಯಕ್ರಮ ನಗರದ ಆಶ್ರಯ ಬಡಾವಣೆಯ ಯಲ್ಲಮ್ಮ ದೇವಿ ದೇವಸ್ಥಾನ ಆವರಣದಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ತಹಶೀಲ್ದಾರ್ ಡಾ.ಮೋಹನ ಭಸ್ಮೆ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ ಘಸ್ತೆ, ಡಿವೈಎಸ್‌ಪಿ ಡಿ ಎಚ್ ಮುಲ್ಲಾ, ತಾಲೂಕು ಸಂಚಾಲಕ ರಮೇಶ್ ಮೇಸ್ತ್ರಿ, ನಗರ ಸಂಚಾಲಕ ಪ್ರಕಾಶ್ ಕಳ್ಳಿಮನಿ, ಗೀತಾ ಸಣ್ಣಕ್ಕಿ, ಗೋವಿಂದ ಕಳ್ಳಿಮನಿ, ಬಸವರಾಜ ಮೇಸ್ತ್ರಿ, ಅಲ್ಲಾಭಕ್ಷ ಮುಲ್ಲಾ, ಅಬ್ದುಲ್ ರೌಫ ಖಾಜಿ, ಹಣಮಂತ ಅಮ್ಮಣಗಿ, ಮುತ್ತು ಹರಿಜನ, ರವಿ ಕುದರಿ, ಯಮನಪ್ಪಾ ರತ್ನಾಕರ್, ಬಸು ಹರಿಜನ ಹಾಗೂ ಸಂಘಟನೆಯ ಎಲ್ಲ ಪದಾಧಿಕಾರಿಗಳು ಉಪಸ್ಥಿತರಿದ್ದರು.

### ಜಾತಿ ನಿರ್ಮೂಲನೆಗೆ ಶ್ರಮಿಸಿದ ಅಂಬೇಡ್ಕರ್

**ಯರಗಟ್ಟಿ:** ದೇಶದಲ್ಲಿ ಜಾತಿ ವ್ಯವಸ್ಥೆ ನಿರ್ಮೂಲನೆಗೆ ಅಂಬೇಡ್ಕರ ಅವರ ಪಾತ್ರ ಬಹು ಮುಖ್ಯವಾಗಿದೆ ಎಂದು ತಹಶೀಲ್ದಾರ ಎಂ ವಿ ಗುಂಡಪ್ಪಗೋಳ ಹೇಳಿದರು. ಸ್ಥಳೀಯ ತಹಶೀಲ್ದಾರ ಕಚೇರಿಯ ಸಭಾ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ ಅವರ 134ನೇ ಜಯಂತಿ ಅಂಗವಾಗಿ ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಮಹಾನ್ ಮಾನವತಾವಾದಿಯಾಗಿರುವ ಅಂಬೇಡ್ಕರ ಅವರು ದಲಿತರ ಉದ್ಧಾರಕ್ಕಾಗಿ ತಮ್ಮ ಜೀವನವನ್ನೆ ಮುಡಿಪಾಗಿಟ್ಟಿದ್ದರು ಎಂದರು. ಮಹಾನ್ ನಾಯಕನ ಆದರ್ಶಗಳನ್ನು ಯುವ ಜನಾಂಗ ಜೀವನದಲ್ಲಿ ಅಳವಡಿಸಿಕೊಂಡು ಬದುಕು ಸಾರ್ಥಕಗೊಳಿಸಿಕೊಳ್ಳುವಂತೆ ಕರೆ ನೀಡಿದರು. ದಲಿತ ಮುಖಂಡರಾದ ಭಾಸ್ಕರ ಹಿರೇಮೆತ್ರಿ ಮಾತನಾಡಿ, ಜಗತ್ತಿನಲ್ಲಿಯೇ ಅತ್ಯುತ್ತಮ ಸಂವಿಧಾನವನ್ನು ನೀಡಿದ ಕೀರ್ತಿ ಡಾ.ಬಿ.ಆರ್.ಅಂಬೇಡ್ಕರ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು. ಪಂ. ಪಂ. ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಮುಖ್ಯ ವೈದ್ಯಾಧಿಕಾರಿ ಡಾ. ಬಿ. ಎಸ್. ಬಳ್ಳೂರ, ನಿಕಟಪೂರ್ವ ಪ. ಪಂ. ಮುಖ್ಯಾಧಿಕಾರಿ ಡಿ. ಎನ್. ತಹಸೀಲ್ದಾರ,ಪಶು ವೈದ್ಯಾಧಿಕಾರಿ ಎಂ. ವಿ. ಪಾಟೀಲ, ಕೃಷಿ ಅಧಿಕಾರಿ ಎಂ. ಜಿ. ಕಳಸಪ್ಪನವರ, ಕಂದಾಯ ನಿರೀಕ್ಷಕ ವಾಯ್ ಎಫ್. ಮುರ್ತೆನ್ನವರ, ಗ್ರಾಮ ಆಡಳಿತ ಅಧಿಕಾರಿ ಎಲ್. ಬಿ. ದಳವಾಯಿ ಕುಮಾರ ಹಿರೇಮಠ, ಸಂತೋಷ ಚನ್ನಮೆತ್ರಿ, ವಿಲ್ಸನ್ ಸೊಪಡ್ಲ, ಬಾಬು ಚನ್ನಮೆತ್ರಿ, ಬಸವರಾಜ ಚನ್ನಮೆತ್ರಿ, ಲಕ್ಕಪ್ಪ ಹುಣಶೀಕಟ್ಟಿ, ಸುರೇಶ ಭಜಂತ್ರಿ ಇದ್ದರು.

### ಅಗಲಿದ ಜೀವ

#### ವೆಂಕಣ್ಣ ಲಕ್ಕಾರ

**ಮೂಡಲಗಿ:** ತಾಲೂಕಿನ ಹೊಸಯರಗುದ್ರಿ ಗ್ರಾಮದ ನಿವಾಸಿ ಹಾಗೂ ಮಾಜಿ ಸೈನಿಕ ವೆಂಕಣ್ಣ ಹಣಮಂತ ಲಕ್ಕಾರ (41) ರವಿವಾರ ನಿಧನರಾದರು. ಮೃತರು ತಂದೆ -ತಾಯಿ, ಪತ್ನಿ, ಒಬ್ಬ ಪುತ್ರಿ, ಸಹೋದರ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

{ಬಾಲಚಂದ್ರ ಜಾರಕಿಹೊಳಿ} ಶಾಸಕ

**ಡಾ.ಬಿ.ಆರ್.ಅಂಬೇಡ್ಕರ್ ಎಲ್ಲರಿಗೂ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯ ದೊರಕಿಸಲು ಶ್ರಮಿಸಿದವರು. ಅಂತಹ ಮಹಾತ್ಮರ ಸ್ಮರಣೆ ಮಾಡುವುದು ಇಂದು ನಮಗೆಲ್ಲರಿಗೂ ಸಂಭ್ರಮದ ವಿಚಾರವೆ. ಭಾರತದ ಕಾನೂನು ಸುವ್ಯವಸ್ಥೆ, ಸಮಾನತೆ, ಶಿಕ್ಷಣ ಕ್ಷೇತ್ರ ಸೇರಿದಂತೆ ಹಲವು ಕ್ಷೇತ್ರಗಳಿಗೆ ಅವರು ನೀಡಿದ ಕೊಡುಗೆ ಇಂದಿಗೂ ಸ್ಮರಣೀಯವಾಗಿವೆ.**



ಅಂಬೇಡ್ಕರ್ 134ನೇ ಜನ್ಮ ದಿನಾಚರಣೆ | ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್

# ಏಕತೆಯ ಮಂತ್ರ ಜಪಿಸಿದ ಡಾ.ಬಿ.ಆರ್.ಅಂಬೇಡ್ಕರ್

ಅಂಬೇಡ್ಕರ್ ಅವರ 134ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ವರು ಉದ್ಘಾಟಿಸಿದರು.

**ಬೆಳಗಾವಿ:** ನಮ್ಮ ದೇಶದ ಮೂಲ ತತ್ವ, ನಮ್ಮ ಜೀವನದ ಮೂಲ ಮೌಲ್ಯ, ವಿಭಿನ್ನತೆಯಲ್ಲಿ ಏಕತೆ ಮೂಲಕ ನಾವೆಲ್ಲರೂ ಒಂದೇ ಎಂಬ ಮೂಲ ಸಿದ್ಧಾಂತವನ್ನು ನೀಡಿದ್ದು ಡಾ.ಬಿ.ಆರ್.ಅಂಬೇಡ್ಕರ ಅವರು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ನುಡಿದರು.

ನಗರದ ಡಾ.ಬಾಬಾಸಾಹೇಬ ಅಂಬೇಡ್ಕರ ಉದ್ಯಾನವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಸೋಮವಾರ(ಏ.14) ಜರುಗಿದ ಡಾ.ಬಾಬಾಸಾಹೇಬ ಅಂಬೇಡ್ಕರ ಅವರ 134ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಬಾಸಾಹೇಬರ ಮಹಾನ ವಿಚಾರ ಧಾರೆಗಳನ್ನು ಶಾಯರಿ ಮೂಲಕ ವ್ಯಕ್ತ ಪಡಿಸಿ ಅವರು ಕೇವಲ ಒಬ್ಬ ವ್ಯಕ್ತಿಯಾಗಿರದೇ ಒಂದು ದೊಡ್ಡ ಶಕ್ತಿ ಎಂಬ ವಿಚಾರವನ್ನು ನಾವೆಲ್ಲರೂ ಮನಗಾಣಬೇಕು. ಅವರನ್ನು ಕೇವಲ ಒಂದೇ ಜಾತಿಗೆ ಸೀಮಿತಗೊಳಿಸಬಾರದು. ಡಾ.ಬಿ.ಆರ್. ಅಂಬೇಡ್ಕರ ಅವರು ಭಾರತದ ಗುರುತಾಗಿದ್ದು ನಾವೆಲ್ಲರೂ ಒಂದೇ ಎಂಬ ಮನೋಭಾವನೆ ಹೊಂದಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಹೇಳಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ವಿಚಾರವಾದಿ ಭೀಮಪುತ್ರ ಸಂತೋಷ ಅವರು ಡಾ.ಬಿ.ಆರ್.ಅಂಬೇಡ್ಕರ ಅವರ ಜೀವನ ಸಾಧನೆಗಳ ಕುರಿತು ಮಾತನಾಡಿ ಡಾ.ಬಿ.ಆರ್. ಅಂಬೇಡ್ಕರ ಅವರು ಈ ದೇಶದ ನಿಜವಾದ ಅಗ್ರಗಣ್ಯ ನಾಯಕರಾಗಿದ್ದಾರೆ. ಅಂಬೇಡ್ಕರ ಅವರು ಪುತ್ಥಳಿಯಲ್ಲಿ ಇಲ್ಲ ಅವರು ಪುಸ್ತಕದಲ್ಲಿದ್ದು ಅವರನ್ನು ಅರಿತುಕೊಳ್ಳಲು ಪ್ರತಿಯೊಬ್ಬರು ಸಂವಿಧಾನವನ್ನು ಓದಬೇಕು ಎಂದರು.

ದೇಶದಲ್ಲಿ ಹುಟ್ಟಿ ಎಂದಿಗೂ ಮುಳುಗದ ಸೂರ್ಯ ಬಾಬಾಸಾಹೇಬರು, ಅವರು ಸಂವಿಧಾನ ಪೀಠಿಕೆ ಬರೆಯುವಂತಹ ಸಂದರ್ಭದಲ್ಲಿ ಭಾರತದ ನಾಗರಿಕರಾದ ನಾವು ಎಂಬ ಪದವನ್ನು ಬಳಸುವದರ ಮೂಲಕ ದೇಶದ ಐಕ್ಯತೆಗೆ ಪ್ರಾಮುಖ್ಯತೇ ನೀಡಿದರು.

ಬಾಬಾಸಾಹೇಬ ಅಂಬೇಡ್ಕರ ಅವರ ವಾಹನ ಕೇವಲ ಬಟ್ಟೆ ಅಂಗಡಿ ಹಾಗೂ ಗ್ರಂಥಾಲಯದ ಹತ್ತಿರ ಮಾತ್ರ ನಿಲುಗಡೆಯಾಗುತ್ತಿತ್ತು. ಇದರಿಂದಾಗಿ ಜನ ಪ್ರೇರೆಪಣೆಗೊಂಡು ಒಳ್ಳೆ ಬಟ್ಟೆ ಧರಿಸಲು ಹಾಗೂ ಓದಿನ ಕಡೆ ಹೆಚ್ಚಿನ ಗಮನ ನೀಡಲಿ ಎಂಬ ಕಾರಣವಿತ್ತು ಎಂದು ತಿಳಿಸಿದರು.

ಬಾಬಾಸಾಹೇಬರಿಗೆ ಹಣ ಮತ್ತು ಸಂಪತ್ತು ಮುಖ್ಯವಾಗಿರಲಿಲ್ಲ. ಅವರಿಗೆ ದೇಶದ ಜನರ ಭವಿಷ್ಯವೇ ಪ್ರಮುಖವಾಗಿತ್ತು. ಆದ್ದರಿಂದ ಬಾಬಾಸಾಹೇಬರನ್ನು ಕೇವಲ ಜಯಂತಿಗೆ ಸೀಮಿತಗೊಳಿಸದೆ ಅವರನ್ನು ಹಾಗೂ ಅವರ ಸಿದ್ಧಾಂತಗಳನ್ನು ಅನುಸರಿಸುವ ಮೂಲಕ ಸದೃಢ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗುವಂತೆ ಭೀಮಪುತ್ರ ಸಂತೋಷ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಮಹಾ ಪೌರರಾದ ಮಂಗೇಶ ಪವಾರ ಉಪ ಮಹಾ ಪೌರರಾದ ವಾಣಿ ವಿಲಾಸ ಜೋಶಿ, ನಗರ ಸೇವಕರುಗಳಾದ ಶ್ರೇಯಸ್, ಜಯತೀರ್ಥ, ಸಿದ್ದರಾಯ ಮೇತ್ರಿ, ಪೊಲೀಸ್ ಆಯುಕ್ತರಾದ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಶಿಂಧೆ, ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ, ಮಹಾನಗರ ಪಾಲಿಕೆ ಉಪ ಆಯುಕ್ತ ಉದಯಕುಮಾರ ತಳವಾರ, ಗಣ್ಯರುಗಳಾದ ಬಸವರಾಜ, ಮಲ್ಲೇಶ ಚೌಗಲೆ, ವಿವಿಧ ಇಲಾಖೆ ಅಧಿಕಾರಿಗಳು, ವಿವಿಧ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸಂಘಟನೆಯ ಪದಾಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ರಾಮನಗೌಡ ಕನ್ನೋಳಿ ಸ್ವಾಗತಿಸಿದರು.

ಹನುಮಂತ ಪೂಜಾರ ಅವರು ಸಂವಿಧಾನದ ಪ್ರಸ್ತಾವನೆಯನ್ನು ವಾಚಿಸಿದರು. ಬೌದ್ಧ ಮಹಾಸಭಾ ಅಧ್ಯಕ್ಷರಾದ ಯಮನಪ್ಪ ಗಡಿನಾಯಕ ಅವರು ಬೌದ್ಧ ಮಹಾಸಭಾದ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ವಿಧ್ಯಾರ್ಥಿಯಾದ ಧನರಾಜ ತಳವಾರ ಡಾ.ಬಿ.ಆರ್.ಅಂಬೇಡ್ಕರ ಅವರ ಕುರಿತು ಮಾತನಾಡಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕಾರಿಗೆ ಸನ್ಮಾನ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ಗಳನ್ನು ಹಾಗೂ ಪೌರಕಾರ್ಮಿಕರಿಗೆ ಸುರಕ್ಷಾ ಕಿಟ್ ಗಳನ್ನು ಗಣ್ಯರುಗಳಿಂದ ವಿತರಿಸಲಾಯಿತು.

> ಬಾಬಾಸಾಹೇಬ ಅವರು ಈ ದೇಶದ ಹೃದಯವಿದ್ದಂತೆ. ಅಂಬೇಡ್ಕರ ಅವರನ್ನು ಅಸ್ಪೃಶ್ಯರ ರೀತಿ ಕಾಣಲಾಗುತ್ತಿತ್ತು. ಆದರೆ ಇಡೀ ಜಗತ್ತಿನಲ್ಲಿ ಅವರಲ್ಲಿನ ಜ್ಞಾನವನ್ನು ಮುಟ್ಟಲು ಯಾರಿಂದಲೂ ಸಾಧ್ಯವಾಗಿಲ್ಲ. ಬಾಬಾ ಸಾಹೇಬರನ್ನು ಆಚರಿಸದೆ ಅವರನ್ನು ಅನುಸರಿಸಬೇಕು ಇದರಿಂದಾಗಿ ಸಮಾಜವನ್ನು ಸಮ ಸಮಾಜ ಮಾಡಲು ಸಾಧ್ಯವಾಗುತ್ತದೆ. ಶತ್ರುಗಳು ಓದಿಗೆ ಮಾತ್ರ ಹೆದರುತ್ತಾರೆ. ಸಮಾಜದಲ್ಲಿ ಪ್ರತಿಯೊಬ್ಬರು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೇ ನೀಡಬೇಕು.
>
> ಮೊಹಮ್ಮದ್ ರೋಷನ್, ಜಿಲ್ಲಾಧಿಕಾರಿ

## ಮಹನೀಯರನ್ನು ಒಂದೇ ಜಾತಿಗೆ ಸಿಮೀತಗೊಳಿಸಬೇಡಿ

ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಶಾಸಕ ರಾಜು ಕಾಗೆ ಅವರು ಪುಷ್ಪ ನಮನ ಸಲ್ಲಿಸಿದರು.

**ಕಾಗವಾಡ:** ವಿಶಾಲವಾದ ಭಾರತ ದೇಶದಲ್ಲಿಯ ಮಹನೀಯರನ್ನು ಅವರವರ ಸಮುದಾಯಗಳಿಗೆ ಸಿಮೀತಗೊಳಿಸಿ ನಾವು ಅವರನ್ನು ಅಗೌರವಿಸುತ್ತಿದ್ದೇವೆ. ಮಹಾವೀರ, ಬುದ್ಧ, ಬಸವ, ಅಂಬೇಡ್ಕರ್ ಅವರಂತಹ ಮಹಾನಾಯಕರು ದೇಶದ ಪ್ರತಿಯೊಬ್ಬರಿಗಾಗಿ ಶ್ರಮಿಸಿದ್ದು, ಪ್ರತಿಯೊಬ್ಬರು ಅವರನ್ನು ಸ್ಮರಿಸುವಂತಾಗಬೇಕೆಂದು ಶಾಸಕ ರಾಜು ಕಾಗೆ ತಿಳಿಸಿದ್ದಾರೆ.

ಅವರು, ಸೋಮವಾರ ದಿ. 14 ರಂದು ಪಟ್ಟಣದಲ್ಲಿ ತಾಲೂಕಾಡಳಿತ, ತಾಲೂಕಾ ಪಂಚಾಯಿತಿ ಮತ್ತು ಸಮಾಜ ಕಲ್ಯಾಣ ಇಲಾಖೆ ಅಥಣಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರ್ 135 ನೇ ಜಯಂತಿ ನಿಮಿತ್ಯ ನಡೆದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಮಹಾನ ಪುರುಷರು ತಾವು ಹುಟ್ಟಿರುವ ಜಾತಿಗೆ ಸೀಮತವಾಗದೇ ಸಮಾಜದ ಪ್ರಗತಿಗೆ ಶ್ರಮಿದ್ದಾರೆ. ಆದರೇ ನಾವು ಇಂದು ಅವರನ್ನು ನಮ್ಮ ಸ್ವಾರ್ಥಕ್ಕಾಗಿ ತಮ್ಮತಮ್ಮ ಸಮಾಜಕ್ಕೆ ಸೀಮಿತಗೊಳಿಸಿ, ಅವರ ಮಹಾತ್ಮೆ ಇನ್ನಷ್ಟು ಕುಸಿಯುತ್ತಿದೆ. ಇದು ನನಗೆ ವೈಯಕ್ತಿವಾಗಿ ಬೇಸರ ಮೂಡಿಸಿದೆ.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಆಗಮಿಸಿದ್ದ ಜಮಖಂಡಿಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಮಾಜ ಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಅರುಣ ಕಾಂಬಳೆ ಮಾತನಾಡಿದರು. ತಹಸೀಲ್ದಾರ ರಾಜೇಶ ಬುರ್ಲಿ, ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ, ಡಾ. ಬಾಬಾಸಾಹೇಬ ಅಂಬೇಡ್ಕರರ ಧ್ಯೇಯ, ಧೋರಣೆಯ ಬಗ್ಗೆ ವಿವರಿಸಿದರು.

ಕಾರ್ಯಕ್ರಮಕ್ಕೂ ಮೊದಲು ಡಾ. ಬಾಬಾಸಾಹೇಬ ಅಂಬೇಡ್ಕರರ ಪುತ್ತಳಿಗೆ ಮಾಲಾರ್ಪಣೆ ಮಾಡಿ, ಭಗವಾನ ಬುದ್ಧ, ಮಹಾತ್ಮಾ ಜ್ಯೋತಿಬಾ ಫೂಲೆ ಮತ್ತು ಡಾ. ಅಂಬೇಡ್ಕರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಕಳೆದ ಎರಡು ದಿನಗಳಿಂದ ಡಾ. ಬಾಬಾಸಾಹೇಬ ಅಂಬೇಡ್ಕರ್ ಜಯಂತಿ ಉತ್ಸವ ಕಮಿಟಿಯವರು ಹಮ್ಮಿಕೊಂಡಿದ್ದ ಲಿಂಬು ಚಮಚೆ, ಸ್ಲೋ ಸೈಕ್ಲಿಂಗ್, ಡ್ಯಾನ್ಸ್, ಸಂಗೀತ ಕುರ್ಚಿ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಈ ಸಮಯದಲ್ಲಿ ತಾ.ಪಂ. ಇಒ ವೀರಣ್ಣಾ ವಾಲಿ, ಸಿಡಿಪಿಒ ಸಂಜೀವಕುಮಾರ ಸದಲಗಿ, ಬಿಇಒ ಎಂ.ಆರ್. ಮುಂಜೆ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಪುಷ್ಪಲತಾ ಸುನ್ನದಕಲ್ಲ ಉಪಸ್ಥಿತರಿದ್ದರು.

## ಅಂಬೇಡ್ಕರ್ ಮಾನವ ಕುಲಕ್ಕೆ ದಾರಿದೀಪ

ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಶಾಸಕ ರಮೇಶ್ ಅವರು ಪುಷ್ಪ ನಮನ ಸಲ್ಲಿಸಿದರು.

**ಗೋಕಾಕ:** ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ತತ್ವ ಮತ್ತು ಸಂದೇಶಗಳು ಒಂದು ವರ್ಗ, ಸಮುದಾಯಕ್ಕೆ ಸೀಮಿತವಾಗದೆ ಇಡಿ ಮಾನವ ಕುಲಕ್ಕೆ ದಾರಿದೀಪವಾಗಿವೆ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಸೋಮವಾರದಂದು ನಗರದ ಅವರ ಗೃಹ ಕಛೇರಿಯಲ್ಲಿ ಹಮ್ಮಿಕೊಂಡ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜನ್ಮ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ವಿಶ್ವದಲ್ಲೇ ಶ್ರೇಷ್ಠ ಸಂವಿಧಾನವನ್ನು ರಚಿಸಿ ಹೊರ ರಾಷ್ಟ್ರಗಳಿಗೆ ನಮ್ಮ ಸಂವಿಧಾನ ಮಾದರಿಯಾಗುವಂತೆ ಮಾಡಿದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆ, ಆದರ್ಶ ನಡೆ ನಿತ್ಯ ಬದುಕಿನಲ್ಲಿ ಎಲ್ಲರೂ ಆಚರಣೆಗೆ ತರಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಪ್ರಕಾಶ ಮುರಾರಿ, ಮಾಜಿ ಜಿಪಂ ಸದಸ್ಯರಾದ ಟಿ ಆರ್ ಕಾಗಲ, ಎಮ್ ಎಲ್ ತೋಳಿನವರ, ನಗರ ಮಂಡಳ ಅಧ್ಯಕ್ಷ ಭೀಮಶಿ ಭರಮನ್ನವರ, ಪ್ರಮೋದ ಜೋಶಿ, ಹರೀಶ್ ಬೂದಿಹಾಳ, ಲಕ್ಕಪ್ಪ ತಹಸೀಲ್ದಾರ್, ಲಕ್ಷ್ಮಣ ತಳ್ಳಿ, ಬಸವರಾಜ ಹಿರೇಮಠ, ಮಂಜುನಾಥ್ ಮಾವರಕರ, ಅಬ್ದುಲ್ ವಹಾಬ ಜಮಾದಾರ, ಅಬ್ದುಲ್ ಸತ್ತಾರ ಶಾಬಾಶಖಾನ, ಗುಣಸಿಂಗ ರಜಪೂತ್, ಅಮೃತ ದಪ್ಪಿನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಅಂಬೇಡ್ಕರ್ ಆಶಯದಂತೆ ಸರಕಾರ ಕಾರ್ಯ ನಿರ್ವಹಿಸುತ್ತಿದೆ: ಪಟ್ಟಣ

**ರಾಮದುರ್ಗ:** ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ ಡಾ.ಬಿ.ಆರ್. ಅಂಬೇಡ್ಕರ ಅವರ ಆಶಯದಂತೆ ನಡೆದುಕೊಂಡು ಬಂದಿದೆ. ಬಿಜೆಪಿಗರು ಅವರ ಸಂವಿಧಾನವನ್ನೇ ಬದಲಿಸುವ ಹೇಳಿಕೆ ನೀಡಿದ ಪರಿಣಾಮ ಅವರನ್ನು ಕಳೆದ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ ಜನತೆ ಮನೆಗೆ ಕಳಿಸಿದ್ದಾರೆ ಎಂದು ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಆರೋಪಿಸಿದರು. ಪಟ್ಟಣದ ಪುರಸಭೆ ಸಾಂಸ್ಕೃತಿಕ ಭವನದಲ್ಲಿ ತಾಲೂಕಾಡಳಿತ, ಸಮಾಜ ಕಲ್ಯಾಣ ಇಲಾಖೆ ಹಾಗೂ ವಿವಿಧ ದಲಿತ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಸೋಮವಾರ ಏರ್ಪಡಿಸಿದ ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ ಅಂಬೇಡ್ಕರ ಅವರ 134ನೇ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಶ್ರೀಮತಿ ಇಂದಿರಾ ಗಾಂಧಿಜೀಯವರ ಕಾಲದಿಂದಲೂ ಪರಿಶಿಷ್ಟ ಜಾತಿ ಹಾಗೂ ಪಂಗಡಗಳನ್ನು ಕಾಂಗ್ರೆಸ್ ಪಕ್ಷ ಪ್ರೋತ್ಸಾಹಿಸುತ್ತಲೇ ಬಂದಿದೆ. ಸಿದ್ದರಾಮಯ್ಯ ನೇತೃತ್ವದ ಸರಕಾರ ಮಹಿಳೆಯರಿಗೆ ವಿಶೇಷ ಗ್ಯಾರಂಟಿ ಯೋಜನೆಗನ್ನು ಜಾರಿಗೊಳಿಸಿ, ಸಮ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದರು. ತಹಶೀಲ್ದಾರ ಪ್ರಕಾಶ ಹೊಳೆಪ್ಪಗೋಳ ಮಾತನಾಡಿ, ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನಾಂಗದ ಬಗೆಗೆ ಹೋರಾಟ ಮಾಡಿದ ಡಾ. ಬಿ.ಆರ್. ಅಂಬೇಡ್ಕರ ಅವರ ಸ್ಮರಣೆಯ ಜೊತೆಗೆ ಅವರ ಜೀವನದ ಆದರ್ಶಗಳನ್ನು ಯುವ ಪೀಳಿಗೆ ಪಾಲಿಸಬೇಕು ಎಂದರು. ಜಮಖಂಡಿದಯ ಸಾಮಾಜಿಕ ಕಾರ್ಯಕರ್ತ ಮಹಾಲಿಂಗಪ್ಪ ಅಲಬಾಳ ಮಾತನಾಡಿ, ಹಿಂದುಳಿದ ವರ್ಗದ ಜನತೆ, ಸ್ತ್ರೀಯರಿಗೆ ಸಮಾನತೆ ಒದಗಿಸಲು ಹಾಗೂ ಮನುಕುಲದ ಉದ್ಧಾರಕ್ಕಾಗಿ ಹೋರಾಟ ಮಾಡಿದ ಅಂಬೇಡ್ಕರ ಅವರನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸಿರುವುದು ದುರಂತವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು. ತಾ.ಪಂ ಇಒ ಬಸವರಾಜ ಐನಾಪೂರ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಟಿ ಬಳಿಗಾರ, ಡಿವೈಎಸ್‌ಪಿ ಚಿದಂಬರ ಮಡಿವಾಳರ, ವಿವಿಧ ಇಲಾಖೆ ಅಧಿಕಾರಿಗಳು, ದಲಿತ ಸಂಘಟನೆಗಳ ಮುಖಂಡರು ಸೇರಿದಂತೆ ಇತರರಿದ್ದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಪರಶುರಾಮ ಪತ್ತಾರ ಸ್ವಾಗತಿಸಿ, ಸಂವಿಧಾನದ ಪೀಠಿಕೆ ಓದಿದರು. ವಿ.ಎಸ್. ಹಿರೇಮಠ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

## ಸಮಾನತೆಯ ಪ್ರತಿಪಾದಕ ಡಾ.ಅಂಬೇಡ್ಕರ್

ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಅವರು ಪುಷ್ಪನಮನ ಸಲ್ಲಿಸಿದರು

**ಮೂಡಲಗಿ:** ಡಾ. ಬಿ.ಆರ್ ಅಂಬೇಡ್ಕರ ಅವರು ಕರ್ನಾಟಕಕ್ಕೆ ಭೇಟಿ ಕೊಟ್ಟು 100 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕದ ಜನತೆ ಪ್ರತಿ ವರ್ಷಕ್ಕಿಂತ ಈ ವರ್ಷ ತುಂಬಾ ವಿಭಿನ್ನವಾಗಿ ಡಾ. ಬಿ.ಆರ್ ಅಂಬೇಡ್ಕರ ಅವರ ಜಯಂತಿಯನ್ನು ಹಬ್ಬದ ರೀತಿಯಲ್ಲಿ ಆಚರಣೆ ಮಾಡುತ್ತಿದ್ದೇವೆ. ಈ ಸಮಯದಲ್ಲಿ ಅವರ ಉದಾತ ಧ್ಯೇಯಗಳನ್ನು ಸ್ಮರಣೆ ಮಾಡಿಕೊಂಡು ಮುಂದುವರೆಯುವುದು ಅಗತ್ಯತೆ ಇದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ಕಲ್ಲೋಳಿ ಪಟ್ಟಣದ ರಾಜ್ಯಸಭಾ ಸಂಸದರ ಜನ ಸಂಪರ್ಕ ಕಾರ್ಯಾಲಯದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ 134ನೇ ಜಯಂತಿ ಕಾರ್ಯಕ್ರಮದ ನಿಮಿತ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಡಾ.ಬಿ.ಆರ್. ಅಂಬೇಡ್ಕರ್ ಅವರು 1925 ರಲ್ಲಿ ಬಹಿಷ್ಕೃತ ಹಿತಕಾರಿಣಿ ಸಮಾವೇಶಕ್ಕಾಗಿ ಅವರು ನಿಪ್ಪಾಣಿಗೆ ಭೇಟಿ ನೀಡಿ 100 ವರ್ಷಗಳು ತುಂಬಿವೆ. ಆ ಐತಿಹಾಸಿಕ ಸವಿನೆನಪಿಗಾಗಿ ರಾಜ್ಯ ಬಿಜೆಪಿಯಿಂದ ಅಂಬೇಡ್ಕರ್ ನೂರು ಹೆಜ್ಜೆ ಕಾರ್ಯಕ್ರಮವನ್ನು ಬೆಂಗಳೂರಿನಿಂದ ನಿಪ್ಪಾಣಿವರೆಗೆ ರಥಯಾತ್ರೆಯ ಮೂಲಕ ಸಂಚರಿಸಿ ಜನಜಾಗೃತಿ ಮೂಡಿಸುತ್ತಿದೆ ಎಂದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ತಾವು ಜನಿಸಿದ ಕುಟುಂಬದಲ್ಲಿನ ಕೀಳರಿಮೆಯ ಮನಸ್ಥಿತಿ ಮತ್ತು ಬಡತನವನ್ನು ಮೆಟ್ಟಿನಿಂತು ಅಗಾಧ ಅಧ್ಯಯನದ ಮೂಲಕ ದೇಶದ ಪ್ರತಿಯೊಬ್ಬ ನಾಗರಿಕನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾನ ಅವಕಾಶಗಳನ್ನು ಪಡೆದುಕೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬೆಳೆದು ದೇಶದ ಅಭಿವೃದ್ಧಿಗಾಗಿ ಸರ್ವರೂ ಕೊಡುಗೆ ನೀಡಬಲ್ಲ ವ್ಯವಸ್ಥೆಯನ್ನು ಜಾರಿಗೆ ತರಲು ಶ್ರಮಿಸಿದ ಧೀಮಂತ ನಾಯಕ ಎಂದರು.

ಶೋಷಿತ ಸಮಾಜದ ಹೆಸರಿನಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವಂತಹ ಮತ್ತು ಶೋಷಿತ ಸಮುದಾಯದ ಪರವಾಗಿ ಅಂತ ಹೇಳಿ ಆ ಸಮಾಜದ ಓಟ ಬ್ಯಾಂಕ್ ಮಾತ್ರ ಉಪಯೋಗ ಮಾಡಿಕೊಳ್ಳುತ್ತಿರುವ ನಕಲಿ ಅಂಬೇಡ್ಕರ ಅನುಯಾಯಿಗಳ ಬಗ್ಗೆ ಜನರು ಜಾಗೃತಿಯಿಂದ ಇರಬೇಕೆಂದು ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಬಿ.ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಸತೀಶ ಕಡಾಡಿ, ಶಾಖಾ ವ್ಯವಸ್ಥಾಪಕರುಗಳಾದ ಹಣಮಂತ ಕಲಕುಟ್ರಿ, ಪರಪ್ಪ ಗಿರೆಣ್ಣವರ, ಶಂಕರ ಕೌಜಲಗಿ, ಪ್ರಶಾಂತ ಪಟ್ಟಣಶೆಟ್ಟಿ, ಶಿವಾನಂದ ಬಡಿಗೇರ ಸೇರಿದಂತೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಬಿ.ಆರ್.ಅಂಬೇಡ್ಕರ್ ಪ್ರಶ್ನಾತೀತ ನಾಯಕ

**ಹುಕ್ಕೇರಿ:** ಡಾ. ಬಿ.ಆರ್. ಅಂಬೇಡ್ಕರ್ ಅವರು ಸರ್ವಜನಾಂಗದ ಪ್ರಶ್ನಾತೀತ ನಾಯಕ ಸಮಾಜದ ಕಟ್ಟಡೆಯ ಶೋಷಿತರಿಂದ ಹಿಡಿದು ಮೇಲ್ವರ್ಗ ಎಂದು ಕರೆಯಲ್ಪಡುವ ಪ್ರತಿಯೊಬ್ಬರು ಇವರು ರಚಿಸಿದ ಸಂವಿಧಾನದಿಂದ ಒಂದಲ್ಲ. ಒಂದು ರೀತಿಯಿಂದ ಉಪುಯೋಗ ಪಡೆದುಕೊಂಡಿದ್ದಾರೆ. ಅವರ ಆದರ್ಶ ತತ್ವ ಸಿದ್ದಾಂತಗಳು ಸರ್ವಕಾಲಿಕವಾಗಿ ನಮ್ಮೆಲ್ಲರಿಗೆ ದಾರಿದೀಪವಾಗಿದೆ ಎಂದು ಸಾಹಿತಿ ಸುಬ್ರಾವ್ ಎಂಟೆತ್ತಿನವರ ಹೇಳಿದರು. ಪಟ್ಟಣದಲ್ಲಿ ಹಳೇ ತಹಸೀಲ್ದಾರ ಕಚೇರಿ ಆವರಣದಲ್ಲಿ ಡಾ. ಬಿಆರ್. ಅಂಬೇಡ್ಕರ ಉದ್ಯಾನವದಲ್ಲಿ ಸಮಾಜ ಕಲ್ಯಾಣ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡ ಅಂಬೇಡ್ಕರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ನಿಡಸೋಸಿ ಸಿದ್ದಸಂಸ್ಥಾನ ಮಠದ ನಿಜಲಿಂಗೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ತಹಶೀಲ್ದಾರ ಮಂಜುಳಾ ನಾಯಕ ಅಧ್ಯಕ್ಷತೆ ವಹಿಸಿದ್ದರು. ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಎಚ್.ಎ.ಮಾಹುತ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಡವಿಸಿದ್ದೇಶ್ವರ ಮಠದಿಂದ ಆರಂಭವಾದ ಅಂಬೇಡ್ಕರ ಭಾವಚಿತ್ರದ ಮೆರವಣಿಗೆಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಮೆರವಣಿಗೆ ಕೋರ್ಟ್ ಸರ್ಕಲ್‌ನಲ್ಲಿ ಸಮಾವೇಶಗೊಂಡಿತು. ವಿವಿಧ ಸಾಧಕರು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮುಖಂಡರಾದ ಉದಯ ಹುಕ್ಕೇರಿ, ಮಲ್ಲಿಕಾರ್ಜುನ ರಾಶಿಂಗೆ, ರಮೇಶ ಹುಂಜಿ, ಬಸವರಾಜ ತಳವಾರ, ಕೆಂಪಣ್ಣಾ ಶಿರಹಟ್ಟಿ, ಸುನೀಲ ಬೈರಣ್ಣವರ ಉಪಸ್ಥಿತರಿದ್ದರು.

ಬಿಜೆಪಿ ಬೆಳಗಾವಿ ಗ್ರಾಮಾಂತರ ಜಿಲ್ಲಾ ಕಚೇರಿಯಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಜಯಂತಿ ಹಿನ್ನಲೆಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಸಿಎಂ ಜಗದೀಶ್ ಶೆಟ್ಟರ್, ಬಿಜೆಪಿ ಜಿಲ್ಲಾಧ್ಯಕ್ಷರಾದ ಸುಭಾಷ್ ಪಾಟೀಲ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಮಾಜಿ ಶಾಸಕರಾದ ಸಂಜಯ್ ಪಾಟೀಲ್, ಮಹಿಳಾ ಮೋರ್ಚಾ ರಾಜ್ಯ ಕಾರ್ಯದರ್ಶಿ ಡಾ. ಸೋನಾಲಿ ಸರ್ನೋಬತ್ ಉಪಸ್ಥಿತರಿದ್ದರು.

## ಅಂಬೇಡ್ಕರ್ ಮೌಲ್ಯಗಳು ನಮಗೆಲ್ಲರಿಗೂ ಆದರ್ಶ

**ಗೋಕಾಕ:** ಅಂಬೇಡ್ಕರ್ ಅವರು ಕೇವಲ ದಲಿತರ ನಾಯಕರಾಗಿರದೇ ಸಮಾಜದಲ್ಲಿ ಶೋಷಿತರು, ಅನ್ಯಾಯ ಹಾಗೂ ದೌರ್ಜನ್ಯಕ್ಕೆ ಒಳಗಾದವರ ಪರವಾಗಿ ನ್ಯಾಯಕ್ಕಾಗಿ ಹೋರಾಡಿದ ಧೀಮಂತ ವ್ಯಕ್ತಿ. ಅವರು ತಮ್ಮ ಬದುಕನ್ನೇ ಇಂತಹ ಹೋರಾಟಕ್ಕೆ ಮುಡಿಪಾಗಿಟ್ಟಿದ್ದರು ಎಂದು ಬೆಮ್ಯುಲ್ ಅಧ್ಯಕ್ಷ, ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು. ಸೋಮವಾರದಂದು ನಗರದ ಎನ್ ಎಸ್ ಎಫ್ ಕಚೇರಿಯಲ್ಲಿ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಅಂಬೇಡ್ಕರ್ ಎಲ್ಲರಿಗೂ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯ ದೊರಕಿಸಲು ಶ್ರಮಿಸಿದವರು. ಅಂತಹ ಮಹಾತ್ಮರ ಸ್ಮರಣೆ ಮಾಡುವುದು ಇಂದು ನಮಗೆಲ್ಲರಿಗೂ ಸಂಭ್ರಮದ ವಿಚಾರೆ. ಅವರು ನೀಡಿದ ಕೊಡುಗೆ ಇಂದಿಗೂ ಸ್ಮರಣೀಯವಾಗಿವೆ ಎಂದರು. ಡಾ.ಬಿ.ಆರ್.ಅಂಬೇಡ್ಕರ್ ಅವರ ಬದುಕು, ಜೀವನಶೈಲಿ, ಅವರ ಕೊಡುಗೆಗಳು ಎಲ್ಲರಿಗೂ ಸ್ಫೂರ್ತಿಯಾಗಿವೆ ಎಂದರು. ಈ ಸಂದರ್ಭದಲ್ಲಿ ಅರಭಾವಿ ಬಿಜೆಪಿ ಮಂಡಲ ಪ್ರ.ಕಾರ್ಯದರ್ಶಿ ಮಹಾಂತೇಶ ಕುಡಚಿ, ಗೋಕಾಕ ಗ್ರಾಮೀಣ ಬಿಜೆಪಿ ಅಧ್ಯಕ್ಷ ರಾಜೇಂದ್ರ ಗೌಡಪ್ಪಗೊಳ, ಆನಂದ ಅತ್ಯಾಗೋಳ, ಪ್ರಮುಖರಾದ ಲಕ್ಷ್ಮಣ್ ಕತ್ತಿ, ಬಸು ಭುಜನ್ನವರ, ಅಮೃತ ದಪ್ಪಿನ್ನವರ, ಅವ್ವಣ್ಣ ಗೌಡಿ, ಪ್ರಮೋದ ನುಗ್ಗಾನಟ್ಟಿ, ನಾಗರಾಜ ಕುದರಿ, ಅಡಿವೆಪ್ಪ ಗೌಳಿ ಕಂಕಾಳಿ, ಹಣಮಂತ ಕೆಂಡಾರಿ, ಬಿಜೆಪಿ ಪದಾಧಿಕಾರಿಗಳು, ದಲಿತ ಮುಖಂಡರು ಉಪಸ್ಥಿತರಿದ್ದರು.

## ಸಮಾಚಾರ ಸಣ್ಣದಲ್ಲ

### ಸಚಿವರ ಪುತ್ರ ಈಗ ಪಾಲುದಾರರಲ್ಲ

**ಬಾಗಲಕೋಟೆ:** ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಕುಡಚಿಯ ರತ್ನಾ ಎಂಟರ್‌ಪ್ರೈಸಸ್‌ನಲ್ಲಿ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರ ಪುತ್ರ ವಿನಯ ಈಗ ಪಾಲುದಾರರಾಗಿಲ್ಲ ಎಂದು ರತ್ನಾ ಎಂಟರ್‌ಪ್ರೈಸಸ್‌ನ ಸುಧಾಕರ ಸಾಲಿಯಾನ ಹಾಗೂ ರಂಜಿತ್‌ಕುಮಾರ್ ಶೆಟ್ಟಿ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಾಡ್ಜ್ ಮತ್ತು ರೆಸ್ಟೋರೆಂಟ್ ಇದ್ದಾಗ ವಿನಯ ತಿಮ್ಮಾಪುರ ಶೇ.23 ರಷ್ಟು ಪಾಲುದಾರರಾಗಿದ್ದರು. ಬಾರ್ ಆ್ಯಂಡ್ ರೆಸ್ಟೋರೆಂಟ್ ಮಾಡಲಾಗುವುದು ಎಂದು ಹೇಳಿದ ಮೇಲೆ ಅವರು ಪಾಲುದಾರಿಕೆಯಿಂದ ಹಿಂದೆ ಸರಿದಿದ್ದು, ಅವರ ಜಾಗಕ್ಕೆ ಬೇರೆಯವರನ್ನು ಹಾಕಿಕೊಳ್ಳಲಾಗಿದೆ ಎಂದು ತಿಳಿಸಿದರು. ವಿನಯ್ ಹಾಗೂ ನಾನು ಯಾವುದೇ ಹೂಡಿಕೆ ಮಾಡಿಲ್ಲ. ರೆಸ್ಟೋರೆಂಟ್ ನಡೆಸಿಕೊಂಡು ಹೋಗುವುದಾಗಿ ಹೇಳಿದ್ದರಿಂದ ಪಾಲುದಾರಿಕೆ ನೀಡಲಾಗಿತ್ತು ಎಂದು ರಂಜಿತ್‌ಕುಮಾರ್ ಶೆಟ್ಟಿ ಹೇಳಿದರು.

### ಸಮಾಜದ ಟ್ರಸ್ಟಿಗಳನ್ನು ಹೊರಹಾಕುವ ಸಮಯ

**ಬಾಗಲಕೋಟೆ:** ಕೂಡಲಸಂಗಮದ ಪಂಚಮಸಾಲಿ ಪೀಠದ ಜಗದ್ಗುರುಗಳಾದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರನ್ನು ಸಮಾಜದ, ಜನರ ಮನಸ್ಸಿನಿಂದ ಹೊರಹಾಕಲು ಸಾಧ್ಯವಿಲ್ಲ. ಸಮಾಜದ ಟ್ರಸ್ಟಿಗಳನ್ನೇ ಹೊರಹಾಕುವ ಸಮಯ ಬಂದಿದೆ ಎಂದು ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಧರೆಪ್ಪ ಸಾಂಗ್ಲಿಕರ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್ ಕೆಲ ಕುಟುಂಬಗಳಿಗೆ ಸೀಮಿತವಾಗಿದೆ. ಅದು ಲೆಕ್ಕಪತ್ರ ನೀಡಬೇಕು. ಎಷ್ಟು ಅನುದಾನ ಬಂದಿದೆ? ಯಾವುದಕ್ಕೆ ಬಳಕೆ ಮಾಡಲಾಗಿದೆ? ಎಷ್ಟು ಹಣ ಠೇವಣಿ ಇಡಲಾಗಿದೆ ಎಂದು ಬಹಿರಂಗ ಪಡಿಸಬೇಕು ಎಂದು ಆಗ್ರಹಿಸಿದರು. ಸಮಾಜದ ಸಂಘಟನೆ, ಪೀಠಕ್ಕೆ ಪ್ರಭಣ್ಣ ಹುಣಸಿಕಟ್ಟಿ, ನೀಲಕಂಠ ಅಸೂಟಿ ಅವರ ಕೊಡುಗೆ ಏನು? ಮೀಸಲು ಹೋರಾಟದಲ್ಲಿ ಏನು ಮಾಡಿದ್ದಾರೆ. ಸಮಾಜದ ಆಸ್ತಿಯನ್ನು ತಮ್ಮ ಹೆಸರಿಗೆ ಬರೆಯಿಸಿಕೊಂಡಿದ್ದಾರೆ. ಸಮಾಜದ ಯಾವುದೇ ವ್ಯಕ್ತಿಗೆ ಅನ್ಯಾಯವಾದಾಗ ಸ್ವಾಮೀಜಿ ಧ್ವನಿ ಎತ್ತಿದ್ದಾರೆ. ಯುಬಿ ಸಿಟಿ ಗಲಾಟೆ, ಕುಟುಂಬದಲ್ಲಿ ರಾದ್ಧಾಂತವಾದಾಗೂ ವಿಜಯಾನಂದ ಕಾಶಪ್ಪನವರ ಜತೆಗೆ ಶ್ರೀಗಳು ನಿಂತಿದ್ದರು. ಇದನ್ನು ಮರೆಯಬಾರದು ಎಂದರು. ಈಗಿನ ಸರಕಾರ ಸೇರಿದಂತೆ ಅಧಿಕಾರದಲ್ಲಿರುವಾಗ ಹೋರಾಟ ಹತ್ತಿಕ್ಕುವ ಕೆಲಸವನ್ನು ಎಲ್ಲರೂ ಮಾಡಿಕೊಂಡು ಬಂದಿದ್ದಾರೆ. ಸಮಾಜ ಒಡೆಯುವ ಸರಕಾರ ಹುನ್ನಾರಕ್ಕೆ ಬಲಿಯಾಗುತ್ತಿದ್ದೇವೆ. ಜಾತಿ ಜನಗಣತಿ ಸರಿಯಾಗಿ ಮಾಡಿಲ್ಲ. ಅದಕ್ಕೆ ಸಮಾಜದ ವಿರೋಧವಿದೆ. ಜಾತಿ ಗಣತಿಯ ವರದಿಯನ್ನು ಅಂಗೀಕರಿಸಬಾರದು ಎಂದು ಒತ್ತಾಯಿಸಿದರು.

### ಚಿಮ್ಮನಕಟ್ಟಿ ಜನ್ಮದಿನ ಅಭಿಮಾನಿಗಳಿಂದ ಪೂಜೆ

**ಬಾದಾಮಿ:** ಕಾಂಗ್ರೆಸ್ ಹಿರಿಯ ಮುಖಂಡ ಬಾದಾಮಿ ಮತಕ್ಷೇತ್ರದ ಮಾಜಿ ಸಚಿವರಾದ ಬಿ.ಬಿ.ಚಿಮ್ಮನಕಟ್ಟಿ ಅವರ ಹುಟ್ಟು ಹಬ್ಬದ ಪ್ರಯುಕ್ತ ಅವರ ಅಭಿಮಾನಿಗಳು ಬಾದಾಮಿ ಸಮೀಪದ ಬನಶಂಕರಿ ದೇವಸ್ಥಾನಕ್ಕೆ ತೆರಳಿ ಚಿಮ್ಮನಕಟ್ಟಿಯವರಿಗೆ ಆಯುರ್ ಆರೋಗ್ಯ ಆಶ್ವರ್ಯ ಕರುಣಿಸಲೆಂದು ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಪಾಂಡಪ್ಪ ಕಟ್ಟಿಮನಿ, ಮಂಜು ಹೊಸಮನಿ, ಫಾರೂಖ ದೊಡಮನಿ ಮಾತನಾಡಿದ ಬಿ.ಬಿ ಚಿಮ್ಮನಕಟ್ಟಿ ಅವರು ಮತ್ಸದ್ದಿ ರಾಜಕಾರಣಿಗಳು 6 ಬಾರಿ ಬಾದಾಮಿ ಮತಕ್ಷೇತ್ರದ ಶಾಸಕರಾಗಿ ಮೊದಲ ಪ್ರಯತ್ನದಲ್ಲಿಯೇ ಸಚಿವರಾಗಿದ್ದು ಒಟ್ಟು ಎರಡು ಬಾರಿ ಸಚಿವರಾಗಿ ಮತಕ್ಷೇತ್ರದಲ್ಲಿ ಅಬಿವೃದ್ದಿ ಕಾರ್ಯಗಳನ್ನು ಮಾಡಿದ್ದು ಸಧ್ಯ ಅವರ ಸುಪುತ್ರ ಭೀಮಸೇನ ಚಿಮ್ಮನಕಟ್ಟಿಯವರು ಶಾಸಕರಾಗಿದ್ದು ಬಾದಾಮಿ ಅಭಿವೃದ್ದಿಗಾಗಿ ಶ್ರಮಿಸುತ್ತಿದ್ದಾರೆಂದರು, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವು ಹಿರೇಮಠ, ಹನಮಂತ ಅಪ್ಪಣ್ಣವರ, ಶಿವಪ್ಪ ವಡ್ಡರ, ಉಮೇಶ ಕಮಾಟ ಸೇರಿದಂತೆ ಅಭಿಮಾನಿಗಳು ಇದ್ದರು.

# ಡಾ.ಅಂಬೇಡ್ಕರ್‌ರ ಜೀವನ ಸ್ಫೂರ್ತಿದಾಯಕ

## ಜಿಲ್ಲಾಡಳಿತದಿಂದ ಹಮ್ಮಿಕೊಂಡಿದ್ದ ಡಾ.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಸಂಸದ ಪಿ.ಸಿ.ಗದ್ದಿಗೌಡರ ಅಭಿಮತ

**ಬಾಗಲಕೋಟೆ:** ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬಾಲ್ಯದಲ್ಲಿಯೇ ಜಾತಿ ವ್ಯವಸ್ಥೆಯ ನೋವನ್ನು ಅನುಭವಿಸಿ, ಅದನ್ನು ಮೆಟ್ಟಿ ನಿಂತು ಉನ್ನತ ಶಿಕ್ಷಣವನ್ನು ಪಡೆದಿದ್ದು, ನಿಜಕ್ಕೂ ಸ್ಫೂರ್ತಿದಾಯಕ ಎಂದು ಸಂಸದ ಪಿ.ಸಿ.ಗದ್ದಿಗೌಡರ ತಿಳಿಸಿದರು.

ನವನಗರದ ಡಾ. ಅಂಬೇಡ್ಕರ್ ಭವನದಲ್ಲಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ. ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡಾ. ಅಂಬೇಡ್ಕರ್ ಅವರು ತಮ್ಮ ಜೀವನದ ಅನುಭವದ ಆಧಾರದಲ್ಲಿ ಎಲ್ಲರೂ ಸಮಾನತೆಯಿಂದ ಬದುಕಬೇಕೆಂಬ ಧ್ಯೇಯದೊಂದಿಗೆ ಭಾರತೀಯ ಸಂವಿಧಾನ ರಚನೆಯಲ್ಲಿ ಅನೇಕ ಸುಧಾರಣೆಗಳನ್ನು ತಂದರು. ಅವರು ಸಮಾನತೆ, ನ್ಯಾಯ ಮತ್ತು ಸ್ವಾತಂತ್ರ್ಯಕ್ಕೆ ಬಲ ನೀಡುವ ಅಂಶಗಳನ್ನು ಸಂವಿಧಾನದಲ್ಲಿ ಸೇರಿಸಿದ್ದು, ಈ ತತ್ವಗಳೇ ಸಮಸಮಾಜದ ನಿರ್ಮಾಣಕ್ಕೆ ದಾರಿ ಎಂದು ಹೇಳಿದರು.

ಅಂಬೇಡ್ಕರ್ ಅವರ ಕನಸು ಎಲ್ಲರಿಗೂ ಸಮಾನ ಹಕ್ಕುಗಳು ದೊರಕುವ ಸಮಾಜ ನಿರ್ಮಾಣವಾಗಬೇಕು ಎಂಬುದಾಗಿತ್ತು. ಮಹಿಳೆಯರಿಗೂ ಸಮಾನ ಗೌರವ, ಶಿಕ್ಷಣ ಹಾಗೂ ಅವಕಾಶಗಳು ಸಿಗಬೇಕು ಎಂಬ ಅವರ ದೃಷ್ಟಿಕೋನವನ್ನು ಈಗಿನ ಸರಕಾರ ಹಂತ ಹಂತವಾಗಿ ಸಾಕಾರಗೊಳಿಸುತ್ತಿದೆ. ಮಹಿಳೆಯರು ಈಗ ಎಲ್ಲ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಪಾಲ್ಗೊಳ್ಳುತ್ತಿದ್ದಾರೆ, ಇದು ಅಂಬೇಡ್ಕರ್ ಅವರ ಬಹುದೊಡ್ಡ ಕೊಡುಗೆ ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ಅಂಬೇಡ್ಕರ್ ಅವರು ತಾವು ಅನುಭವಿಸಿದ ಅಸಮಾನತೆಗಳನ್ನು ನಿಭಾಯಿಸಿ, ಎಲ್ಲರ ಸಮಾನತೆಯಿಗಾಗಿ ತಮ್ಮ ಜೀವನವನ್ನು ಅರ್ಪಿಸಿದ ಮಹಾನ್ ವ್ಯಕ್ತಿ. ಅವರ ಓದಿಗೆ ಯಾವುದೇ ಜಾತಿ ಧರ್ಮದ ಮಿತಿಯಿರಲಿಲ್ಲ. ಕುರಾನ್, ಬೈಬಲ್, ಭಗವದ್ಗೀತೆ ಎಲ್ಲವನ್ನು ಅಧ್ಯಯನ ಮಾಡಿದ ಅವರ ಪುಸ್ತಕ ಓದುವ ಅಭ್ಯಾಸ ಎಷ್ಟರ ಮಟ್ಟಿಗೆ ಇತ್ತು ಎಂದರೆ, ತಮ್ಮ ಮನೆಯಲ್ಲಿಯೇ 50,000ಕ್ಕೂ ಅಧಿಕ ಗ್ರಂಥಗಳ ಹೊಂದಿದ ಗ್ರಂಥಾಲಯವಿತ್ತು ಎಂದು ಹೇಳಿದರು.

ಬಾಗಲಕೋಟೆಯ ಡಾ. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

### ಭವ್ಯ ಮೆರವಣಿಗೆ

**ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ನವನಗರದ ಸೆಕ್ಟರ್ ನಂಬರ್ 45 ರಲ್ಲಿನ ಸಮುದಾಯ ಭವನದಿಂದ ಡಾ. ಬಿ.ಆರ್.ಅಂಬೇಡ್ಕರ್ ಭವನದ ವರೆಗೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಅಂಬೇಡ್ಕರ್ ಅವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಜಿಲ್ಲಾಡಳಿತ ಭವನ ಆವರಣದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಅವರ ಬೃಹತ್ ಪ್ರತಿಮೆಗೆ ಸಂಸದರು ಸೇರಿ ಗಣ್ಯರು ಮಾಲಾರ್ಪಣೆ ಮಾಡಿದರು.**

ಹಂಪಿ ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ. ಚಿನ್ನಸ್ವಾಮಿ ಸೋಸಲೆ ಮಾತನಾಡಿ, ಇಂದಿನ ಜನರು ಅಂಬೇಡ್ಕರ್ ವಾದಿಗಳೆಂದು ಹೇಳಿಕೊಳ್ಳುವುದಕ್ಕಿಂತ ಅವರ ತತ್ವಗಳನ್ನು ಪಾಲಿಸುವುದು ಮುಖ್ಯ. ಮೀಸಲಾತಿಯ ಹಕ್ಕು ಮತ್ತು ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶ ಸಿಕ್ಕಿರುವುದಕ್ಕೆ ಅಂಬೇಡ್ಕರ್ ಕಾರಣ ಎಂದರು.

ಈ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಮಟ್ಟದಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಮತ್ತು ಉತ್ತಮ ಫಲಿತಾಂಶ ಸಾಧನೆಯ ವಿದ್ಯಾರ್ಥಿ ನಿಲಯದ ಅಧಿಕಾರಿಗಳಿಗೂ ಸನ್ಮಾನಿಸಲಾಯಿತು.

ಹೊಳೆನರಸೀಪುರ ಸರಕಾರಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜ ವಿಜ್ಞಾನ ವಿಭಾಗದ ಮುಖ್ಯಸ್ಥರು ಮತ್ತು ಸಾಹಿತಿಗಳಾದ ಪ್ರೊ. ಎನ್.ಆರ್.ಶಿವರಾಂ ಮಾತನಾಡಿದರು. ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿಲ್ಲಾ ಪಂಚಾಯತ್ ಸಿಇಒ ಶಶಿಧರ್ ಕುರೇರ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ನಗರಸಭೆ ಅಧ್ಯಕ್ಷೆ ಕವಿತಾ ಲೆಂಕನ್ನವರ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ ಸೇರಿ ಇತರರಿದ್ದರು.

# ಕೈಗಾರಿಕೆಗಳ ಅಧ್ಯಯನ: ರಾಜ್ಯಪಾಲರ ಮೆಚ್ಚುಗೆ

**ಬೀಳಗಿ:** ಕೈಗಾರಿಕೆಗಳು,ಕೈಗಾರಿಕೋದ್ಯಮಿಗಳು, ಆಧುನಿಕ ಕೈಗಾರಿಕಾ ತಂತ್ರಜ್ಞಾನದ ಬಗ್ಗೆ ವಿಸ್ತೃತ ಅಧ್ಯಯನ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಹಿರಿಯ ಕೈಗಾರಿಕೋದ್ಯಮಿ ಮುರುಗೇಶ ನಿರಾಣಿ ಅವರ ಕೈಗಾರಿಕೆ ಸಾಧನೆ ಕುರಿತು ಸಂಶೋಧನಾ ಮಹಾ ಪ್ರಬಂಧ ಮಂಡಿಸಿ ಪಿಎಚ್.ಡಿ.ಪದವಿ ಪಡೆದಿರುವುದು ಸಂತೋಷ ತಂದಿದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹೇಳಿದರು. ಬೆಳಗಾವಿಯಲ್ಲಿ ನಡೆದ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವ ಸಮಾರಂಭದ ನಂತರ ಪಿ.ಎಚ್. ಡಿ ಪದವಿ ಪಡೆದ ವಿದ್ಯಾರ್ಥಿ ಪುಂಡಲಿಕ ಬಾಡಗಿ ಅವರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದ ಸಂಶೋಧನಾ ಮಹಾಪ್ರಬಂಧದ ಪ್ರತಿ ರಾಜ್ಯಪಾಲರಿಗೆ ನೀಡಿದರು. ಪ್ರತಿ ಸ್ವೀಕರಿಸಿದ ರಾಜ್ಯಪಾಲರು ಮೆಚ್ಚುಗೆಯ ಮಾತುಗಳನ್ನು ಹೇಳಿದರು. ಈ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಕೈಗಾರಿಕೋದ್ಯಮಿ ಮಾಜಿ ಸಚಿವ ಮುರುಗೇಶ ನಿರಾಣಿ, ವಿಧಾನ ಪರಿಷತ್ ಮಾಜಿ ಸದಸ್ಯ ಕವಟಗಿಮಠ, ಪತ್ರಕರ್ತ ಮಲ್ಲಿಕಾರ್ಜುನ ಹೆಗ್ಗಳಗಿ ಮತ್ತುವಿಶ್ವವಿದ್ಯಾಲಯದ ಅಧ್ಯಾಪಕರು ಉಪಸ್ಥಿತರಿದ್ದರು.

ಸಂದರ್ಭದಲ್ಲಿ ನಿರಾಣಿ ಅವರು ರಾಜ್ಯಪಾಲ ಗೆಹಲೋತ್ ಮತ್ತು ಸಚಿವಡಾ. ಸುಧಾಕರ ಅವರನ್ನು ಸನ್ಮಾನಿಸಿದರು.

# ಡಾ.ಅಂಬೇಡ್ಕರ್ ವಿಚಾರ ಯಾತ್ರೆ 25ರ ವರೆಗೆ

**ಬಾಗಲಕೋಟೆ:** ಕಾಂಗ್ರೆಸ್ ಒಂದು ಸುಡುವ ಮನೆ, ಎಚ್ಚರ ಎಂದು ಡಾ. ಬಾಬಾಸಾಹೇಬ್ ಅಂಬೇಡ್ಕರರು ಏಕೆ ಹೇಳಿದ್ದರು ಹಾಗೂ ಅವರ ವಿಚಾರಧಾರೆಗಳ ಕುರಿತಂತೆ ಏ.14 ರಿಂದ 25ರ ವರೆಗೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ವಿಚಾರ ಯಾತ್ರೆ ಜರುಗಲಿದೆ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ ಹೇಳಿದರು.

ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಡಾ. ಅಂಬೇಡ್ಕರ್ ಅವರ 134ನೇ ಜಯಂತಿ ಆಚರಣೆ ಹಾಗೂ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

ಡಾ.ಅಂಬೇಡ್ಕರ್ ಅವರ ಸಂವಿಧಾನದ ಮೂಲಕ ಭಾರತ ಆಧುನಿಕತೆಯನ್ನು ಪಡೆದುಕೊಂಡಿದೆ. ಭಾರತೀಯ ಜನತಾ ಪಾರ್ಟಿ ಡಾ. ಅಂಬೇಡ್ಕರ್ ಅವರ ವಿಚಾರ ಹಾಗೂ ಹೋರಾಟ ಕ್ಕೆ ಮಣ್ಣನೆ ಕೊಟ್ಟು ಅವರ ವಿಚಾರಧಾರೆಯನ್ನು ಅನುಭವಿಸಿದ ಕಷ್ಟಗಳನ್ನು ಅವರಿಗೆ ಆದಂತಹ ಅವಮಾನ ಹಾಗೂ ಸನ್ಮಾನಗಳನ್ನು ಇವೆಲ್ಲವನ್ನು ದೇಶಾದ್ಯಂತ ಈ ವಿಚಾರಗಳನ್ನು ಬಿಜೆಪಿ ಕೊಂಡೊಯ್ಯುತ್ತಿದೆ ಎಂದು ತಿಳಿಸಿದರು.

ಮಾಜಿ ಶಾಸಕ ವೀರಣ್ಣ ಚರಂತಿಮಠ ಮಾತನಾಡಿ, ಡಾ. ಅಂಬೇಡ್ಕರ್ ಅವರ ಸಾಮಾಜಿಕ, ಆರ್ಥಿಕ ಮತ್ತು ಕಾನೂನಿಗೆ ಸಂಬಂಧಿಸಿದ ದೃಷ್ಟಿಕೋನವು ಎಲ್ಲರನ್ನೊಳಗೊಂಡ ಸಮಾಜ ನಿರ್ಮಾಣ ಮತ್ತು ರಾಷ್ಟ್ರದ ಉತ್ತಮ ಆಡಳಿತದ ದಿಕ್ಕಿನೆಡೆಗೆ ನಮಗೆ ಯಾವಾಗಲೂ ಮಾರ್ಗದರ್ಶನ ನೀಡುತ್ತದೆ. 370ನೇ ವಿಧಿ ನಿರ್ಮೂಲನೆಯಾದ ಬಳಿಕ ಒಂದು ರಾಷ್ಟ್ರ ಒಂದು ಸಂವಿಧಾನವನ್ನು ಜಾರಿಗೊಳಿಸಲಾಗಿದೆ ಎಂದು ತಿಳಿಸಿದರು.

2015ರ ನವೆಂಬರ್ 26ನ್ನು ಸಂವಿಧಾನ ದಿನವಾಗಿ ಆಚರಿಸಲಾಗುತ್ತಿದೆ. ಹಳೆಯ ಸಂಸತ್ ಕಟ್ಟಡಕ್ಕೆ ಸಂವಿಧಾನ ಸದನ ಎಂದು ಹೆಸರಿಸಲಾಗಿದೆ. ಡಾ. ಅಂಬೇಡ್ಕರ್ ಅವರಿಗೆ ಅತಿ ಹೆಚ್ಚು ಗೌರವ ಕೊಟ್ಟು ಅವರ ದೃಷ್ಟಿಕೋನದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಸಾಗುವ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಹಾಗೂ ಮುಖಂಡ ಜಗದೀಶ ಹಿರೇಮನಿ ಮಾತನಾಡಿದರು. ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮುತ್ತಣ್ಣ ಬೆಣ್ಣೂರ, ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ಸಿ.ಟಿ.ಉಪಾಧ್ಯ, ರಾಜು ರೇವಣಕರ್, ಶಿವಾನಂದ ಟವಳಿ, ಡಾ. ಎಂ.ಎಸ್.ದಡ್ಡೆನ್ನವರ, ಹೂವಪ್ಪ ರಾಠೋಡ, ಸಾಬು ದೊಡಮನಿ, ನಗರಸಭೆ ಅಧ್ಯಕ್ಷೆ ಸವಿತಾ ಲಂಕೆನ್ನವರ, ಉಪಾಧ್ಯಕ್ಷೆ ಶೋಭಾ ರಾವ್, ಯಲ್ಲಪ್ಪ ನಾರಾಯಣಿ ಸೇರಿದಂತೆ ಇತರರಿದ್ದರು.

ಬಾಗಲಕೋಟೆಯ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಡಾ. ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಜರುಗಿತು.

# ಪಿಯುಸಿ: ತಾಲೂಕಿನ ಕೀರ್ತಿ ಹೆಚ್ಚಿಸಿದ ಅರುಂಧತಿ

**ಬಾದಾಮಿ:** ಬಡ ಕುಟುಂಬದಲ್ಲಿ ಜನಿಸಿ ಪಿಯೂ ವಾರ್ಷಿಕ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಅರುಂಧತಿ ಹನಮಂತ ಕಬ್ಬರಗಿ ಪ್ರತಿಶತ 97 ಅಂಕ ಪಡೆದು ಬಾಗಲಕೋಟ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದು ಹೆಮ್ಮೆಯ ವಿಷಯ ಎಂದು ಸಂಸ್ಥೆಯ ಅಧ್ಯಕ್ಷ ಮಹೇಶ ಹೊಸಗೌಡ್ರ ಹೇಳಿದರು

ಅವರು ಇಂದು ಸಂವಿದಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ ಅವರ ಜನ್ಮ ದಿನಾಚರಣೆಯ ನಿಮಿತ್ಯ ಪಟ್ಟಣದ ಜಯನಗರ ಎಸ್.ಎಫ್ ಹೊಸಗೌಡ್ರ ವರ್ಡ್ಲ ಸ್ಕೂಲನಲ್ಲಿ ಡಾ. ಬಿ.ಆರ್. ಅಂಬೇಡ್ಕರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಕಲಾ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಬಂದ ವಿದ್ಯಾರ್ಥಿ ಅರುಂಧತಿ ಕಬ್ಬರಗಿ ಹಾಗೂ ತಾಲೂಕಿಗೆ ಪ್ರಥಮ ಬಂದವರನ್ನು ಸನ್ಮಾನಿಸಿ ಮಾತನಾಡಿ ತಾಲೂಕಿಗೆ ವಾಣಿಜ್ಯ ವಿಭಾಗದಲ್ಲಿ ಸುಕನ್ಯಾ ವಿಠ್ಠಲ ಮೇಟಿ ಈ ವಿದ್ಯಾರ್ಥಿ 98% ಅಂಕ ಪಡೆದುಕೊಂಡಿದ್ದು ವಿಜ್ಞಾನ ವಿಭಾಗದಲ್ಲಿ ವಿನಾಯಕ ಗಾಣಿಗೇರ 97% ಅಂಕ ಪಡೆದು ಬಾದಾಮಿ ತಾಲೂಕಿನ ಕೀರ್ತಿ ಹೆಚ್ಚಿಸಿದ್ದಾರೆ ಈವಿದ್ಯಾರ್ಥಿಗಳ ಮುಂದಿನ ಹಂತ ಉತ್ತಮವಾಗಿರಲಿ ನನ್ನ ಕೈಲಾದ ಸಹಾಯ ಮಾಡುತ್ತೇನೆ ಎಂದರು. ಎಂ.ಎಸ್. ಗಾಣಿಗೇರ ಮಾತನಾಡಿದರು, ಕಾರ್ಯಕ್ರಮದಲ್ಲಿ ಪತ್ರಕರ್ತರಾದ ಬಸವರಾಜ ಉಳ್ಳಾಗಡ್ಡಿ, ರವಿ ರಡ್ಡಿ, ಆನಂದ ಕೋಟಿ, ಕಲ್ಲಪ್ಪ ಹೊಸಗೌಡ್ರ, ನೀಲಪ್ಪ ಗಾಣಿಗೇರ, ವಿಠ್ಠಲ ಮೇಟಿ, ಶ್ರೀಶೈಲಪ್ಪ ಮೇಟಿ, ವಿ.ಎಸ್.ಬೆನಕಟ್ಟಿ ಸೇರಿದಂತೆ ಶಾಲಾ ಸಿಬ್ಬಂದಿ ಇದ್ದರು.

ಪಟ್ಟಣದ ಜಯನಗರ ಎಸ್.ಎಫ್ ಹೊಸಗೌಡ್ರ ವರ್ಡ್ಲ ಸ್ಕೂಲನಲ್ಲಿ ಜಿಲ್ಲೆಗೆ ಪ್ರಥಮ ಬಂದ ವಿದ್ಯಾರ್ಥಿ ಅರುಂಧತಿ ಕಬ್ಬರಗಿ ಅವರನ್ನು ಮಹೇಶ ಹೊಸಗೌಡ್ರ ಸನ್ಮಾನಿಸುತ್ತಿರುವುದು.

# ಬೆಲೆ ಏರಿಕೆ ವಿರುದ್ಧ ಜನಾಂದೋಲನ ಅಭಿಯಾನ

**ಇಳಕಲ್ಲ:** ಕರ್ನಾಟಕದಲ್ಲಿ ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೆ ಏರುತ್ತಿದ್ದು, ಸಮಾನ್ಯ ಜನರು ಜೀವನ ನಡೆಸುವುದು ಅತ್ಯಂತ ಕಷ್ಟಕರವಾಗಿದೆ ಇದಕ್ಕೆ ನಮ್ಮ ಕರ್ನಾಟಕದಲ್ಲಿ ತುಗಲಕ್ಕ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯನವರ ಕಾಂಗ್ರೆಸ್‌ನ ದುರಾಡಳಿತವೇ ಕಾರಣ ಎಂದು ಹುನಗುಂದ ಮತಕ್ಷೇತ್ರದ ಮಾಜಿ ಶಾಸಕ ದೊಡ್ಡನಗೌಡ ಜಿ ಪಾಟೀಲ ಹೇಳಿದರು.

ನಗರದ ತಮ್ಮ ನಿವಾಸದ ಪಕ್ಷದ ಕಚೇರಿಯಲ್ಲಿ ಕರೆದ ಕರೆ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು. ಭ್ರಷ್ಟ ಸಿದ್ದರಾಮಯ್ಯನವರ ಕಾಂಗ್ರೆಸ್ ಸರಕಾರದ ವಿರುದ್ದ ಭಾರತೀಯ ಜನತಾಪಕ್ಷವು ಬಿಜೆಪಿಯ ರಾಜ್ಯಾಧ್ಯಕ್ಷ ಬಿ ವೈ. ವಿಜಯೇಂದ್ರ ಹಾಗೂ ಪಕ್ಷದ ಮುಖಂಡರ ನೇತೃತ್ವದಲ್ಲಿ ಬೆಲೆ ಏರಿಕೆ ವಿರುದ್ದ ಜನಾಂದೋಲನ ಅಭಿಯಾನವನ್ನು ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಇದೇ ಎ.17ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಎ.17 ಬೆಳಗ್ಗೆ 10-30ಕ್ಕೆ ಎಲ್ಲ ತಾಲೂಕಿನ ಜನರನ್ನು ಒಗ್ಗೂಡಿಸಿ ಈ ಆಂದೋಲನವನ್ನು ಯಶಸ್ವಿಗೊಳಿಸಲಾಗುವುದು. ಅದರಂತೆ ಇಳಕಲ್ಲ ಹಾಗೂ ಹುನಗುಂದ ತಾಲೂಕಿನ ನಗರ ಹಾಗೂ ಗ್ರಾಮೀಣ ಭಾಗದ ಬಿಜೆಪಿ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಂಡು ರಾಜ್ಯ ಸರಕಾರವನ್ನು ಬಡಿದೇಚ್ಚರಿಸುವ ಕೆಲಸ ಮಾಡೋಣ. ಈ ಜನಾದೋಲನ ಮಾಡುತ್ತಿರುವುದು ಕೇವಲ ಭಾರತೀಯ ಜನತಾ ಪಕ್ಷಕ್ಕೋಸ್ಕರವಲ್ಲ ಬೆಲೆ ಏರಿಕೆಯಿಂದ ಸಂಕಷ್ಟಕ್ಕೊಳಗಾದ ರಾಜ್ಯದ ಜನತೆಗಾಗಿ ಈ ಹೋರಾಟ ಎಂದು ಹೇಳಿದರು.

ಪತ್ರಿಕಾ ಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಲಕ್ಷ್ಮಣ ಗುರಂ, ಮಹಾಂತಗೌಡ ಪಾಟೀಲ ತೊಂಡಿಹಾಳ, ಡಾ. ಮಹಾಂತೇಶ ಕಡಪಟ್ಟಿ, ಮಹಾಂತಪ್ಪ ಚನ್ನಿ, ಮಲ್ಲಯ್ಯ ಮುಗನೂರಮಠ, ಸುಗುರೇಶ ನಾಗಲೋಟಿ, ಚಂದ್ರಶೇಖರ ನಾಗಲೋಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇಳಕಲ್ಲ ನಗರದ ಬಿಜೆಪಿ ಪಕ್ಷದ ಕಚೇರಿಯಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಮಾಜಿ ಶಾಸಕ ದೊಡ್ಡನಗೌಡ ಜಿ. ಪಾಟೀಲ ಮಾತನಾಡಿದರು.

# ಸಮಾನ ಬದುಕುವ ಹಕ್ಕು ಕಲ್ಪಿಸಿದ ಅಂಬೇಡ್ಕರ್

ಗುಳೇದಗುಡ್ಡದ ಪುರಸಭೆಯಲ್ಲಿ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರ ಜನ್ಮದಿನ ಅಂಗವಾಗಿ ತಾಲೂಕು ಆಡಳಿತ, ಸಮಾಜಕಲ್ಯಾಣ ಇಲಾಖೆಯಿಂದ ಹಮ್ಮಿಕೊಂಡ ಡಾ. ಅಂಬೇಡ್ಕರ್ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ 2023-2024 ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಧಿಕ ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

**ಗುಳೇದಗುಡ್ಡ:** ಡಾ. ಅಂಬೇಡ್ಕರ್ ಅವರು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸಂವಿಧಾನಾತ್ಮಕ ಹಕ್ಕುಗಳನ್ನು ಜಾತಿ, ಧರ್ಮ, ಲಿಂಗಭೇಧವಿಲ್ಲದೇ ಎಲ್ಲರಿಗೂ ದೊರಕಿಸಿಕೊಟ್ಟಿದ್ದಕ್ಕಾಗಿ ಭಾರತದ ಪ್ರತಿಯೊಬ್ಬ ಪ್ರಜೆಯೂ ಡಾ. ಅಂಬೇಡ್ಕರ್ ಅವರಿಗೆ ಋಣಿಯಾಗಿರಬೇಕು ಎಂದು ತಹಶೀಲ್ದಾರ ಮಂಗಳಾ ಎಂ ಹೇಳಿದರು.

ಅವರು ಭಾನುವಾರ ಡಾ. ಬಿ.ಆರ್. ಅಂಬೇಡ್ಕರ ಜನ್ಮದಿನದ ಅಂಗವಾಗಿ ಪಟ್ಟಣದ ಶಿವಕೃಪಾ ರಂಗಮಂದಿರಲ್ಲಿ ತಾಲೂಕು ಆಡಳಿತ, ತಾಪಂ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ 134ನೇ ಜನ್ಮದಿನೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಬೇಡ್ಕರ್ ಅವರು ಅಸ್ಪೃಶ್ಯತೆ ವಿರುದ್ಧ ಹೋರಾಡಿ, ಶೋಷಿತರಿಗೆ, ತುಳಿತಕ್ಕೊಳಗಾದವರಿಗೆ, ಹಿಂದುಳಿದವರಿಗೆ ನ್ಯಾಯ ಒದಗಿಸಿ, ಸಮಾಜದಲ್ಲಿ ಎಲ್ಲರೂ ಸಮಾನವಾಗಿ ಬದುಕಬೇಕು ಎಂದು ಕನಸು ಕಂಡವರು. ದೇಶಕ್ಕೆ ಅತ್ಯಂತ ಶ್ರೇಷ್ಠವಾದ ಸಂವಿಧಾನ ನೀಡುವಲ್ಲಿ ಪ್ರಮುಖಪಾತ್ರ ವಹಿಸಿದ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವೆಲ್ಲ ನಡೆಯಬೇಕು ಎಂದರು.

ಪ್ರೊ. ಸಣ್ಣವೀರಣ್ಣ ದೊಡಮನಿ ಉಪನ್ಯಾಸ ನೀಡಿ, ಸಂವಿಧಾನ ಉಳಿದರೆ ಪ್ರಜಾಪ್ರಭುತ್ವ ಉಳಿಯುತ್ತದೆ. ಪ್ರಜಾಪ್ರಭುತ್ವ ಈ ದೇಶದ ಶಕ್ತಿ, ವ್ಯವಸ್ಥೆ ಸುಧಾರಣೆಯಾಗಲು ಪ್ರಜೆಗಳು ಪ್ರಭುಗಳ ಹಿಂದೆ ಬೀಳಬೇಡಿ, ಸಾಮಾನ್ಯ ಸಮುದಾಯದವರಿಗೆ ಸಾಮಾಜಿಕ ನ್ಯಾಯದ ದೃಷ್ಟಿಯಲ್ಲಿ ಪ್ರೋತ್ಸಾಹಿಸಿದಾಗ ಮಾತ್ರ ನಮ್ಮ ಭಾರತ ಸಂವಿಧಾನಕ್ಕೆ ಗೌರವ ದೊರೆಯುತ್ತದೆ. ಬಡವ ಅಸ್ತ್ರ ಎಂದರೆ ಶಿಕ್ಷಣ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷ ರಾಜಶೇಖರ ಹೆಬ್ಬಳ್ಳಿ, ತಾಪಂ ಇಓ ಮಲ್ಲಿಕಾರ್ಜುನ ಬಡಿಗೇರ, ಪುರಸಭೆ ಮಾಜಿ ಅಧ್ಯಕ್ಷ ವೈ.ಆರ್. ಹೆಬ್ಬಳ್ಳಿ, ಸದಸ್ಯರಾರದ ಯಲ್ಲಪ್ಪ ಮನ್ನಿಕಟ್ಟಿ, ವಿನೋದ ಮದ್ದಾನಿ, ಪುರಸಭೆ ಮುಖ್ಯಾಧಿಕಾರಿ ಎ.ಎಚ್. ಮುಜಾವರ, ಕ್ರೈಂ ಪಿಎಸ್ಐ ಕೆ.ಪಿ. ಸಾದರಿ, ಸಮಾಜಕಲ್ಯಾಣ ಇಲಾಖೆ ಅಧೀಕ್ಷಕ ಸಂಜೀವ ಮಬ್ರುಮಕರ, ಯಮನಪ್ಪ ದಳಪತಿ, ಫಕೀರಪ್ಪ ತಳವಾರ, ಹಿರಿಯಪ್ಪ ಮಾದರ, ಪರಶುರಾಮ ಮಾದರ, ಶಂಕ್ರಪ್ಪ ಹುಲಮನಿ, ರಾಮಣ್ಣ ಚಂದರಗಿ, ಪಿ.ಆರ್. ಚವ್ಹಾಣ, ಬಸವರಾಜ ಬಂಡಿವಡ್ಡರ, ರಮೇಶ ಗಚ್ಚಿನಮನಿ, ಬಸವರಾಜ ಕಳ್ಳಿಗುಡ್ಡ, ಶ್ರೀಕಾಂತ ಹುನಗುಂದ, ಎಂ.ಎಸ್. ಮದರಂಗಿ ಮತ್ತಿತರರು ಇದ್ದರು.

# ಮಾನವೀಯ ಸೇವಾ ಮನೋಭಾವ ಬೆಳೆಸಿಕೊಳ್ಳಿ

**ಬಾಗಲಕೋಟೆ:** ವೈದ್ಯಕೀಯ ಜ್ಞಾನದ ಜತೆಗೆ ಮಾನವೀಯ ಸೇವಾ ಮನೋಭಾವ ಬೆಳೆಸಿಕೊಳ್ಳಿ ಎಂದು ಬೆಂಗಳೂರಿನ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಭಗವಾನ ಬಿ.ಸಿ ಹೇಳಿದರು.

ನಗರದ ಬಿವಿವಿ ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಕಾಲೇಜಿನ ಶತಾಬ್ದಿ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಕಾಲೇಜಿ 16ನೇ ಪದವಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

ಪದವಿ ಪಡೆದ ವಿದ್ಯಾರ್ಥಿಗಳಿಗೆ ವೃತ್ತಿಪರ ಬದುಕಿನಲ್ಲಿ ನೈತಿಕ ಸವಾಲುಗಳನ್ನು ಎದರಿಸಲು ಪ್ರಮಾಣಿಕತೆ ಬಹಳ ಮುಖ್ಯವಾಗಿರುತ್ತದೆ. ನಿರಂತರ ಕಲಿಕಾ ಕೌಶಲ, ಸಂಶೋಧನಾ ಕೌಶಲ ಹಾಗೂ ವಿವಿಧ ವೃತ್ತಿಪರ ಕೌಶಲಗಳನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಜತೆಗೆ ಇವು ವೈದ್ಯಕೀಯ ಜ್ಞಾನಕ್ಕಿಂತ ಮಿಗಿಲಾದ ಸಹಾನುಭೂತಿ ಹಾಗೂ ಮಾನವಿಯ ಮೌಲ್ಯಗಳ ಬಗ್ಗೆ ಅರಿವು ಕೂಡ ಮುಖ್ಯ. ಉತ್ತಮ ಸೇವೆ ಸಲ್ಲಿಸುವರಿಗೆ ಸಮಾಜ ಗೌರವಿಸುತ್ತದೆ ಎಂದ ಅವರು, 24 ವರ್ಷಗಳಿಂದ ಈ ಮಹಾವಿದ್ಯಾಲಯ ಬಹಳಷ್ಟು ಬೆಳೆದಿದೆ. ಜತೆಗೆ ಎಲ್ಲ ಅತ್ಯಾಧುನಿಕ ಸೌಕರ್ಯಗಳನ್ನು ಹೊಂದುವ ಮೂಲಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಮಾತನಾಡಿ, 400 ಹಾಸಿಗೆಯ ಸುಸಜ್ಜಿತ ಅತ್ಯಾಧುನಿಕ ಸೂಪರ ಸ್ಪೇಶಾಲಿಟಿ ಆಸ್ಪತ್ರೆಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು. ಅಲೋಪತಿಕ್ ಮೆಡಿಕಲ್ ಬಿಟ್ಟು ಹೋಮಿಯೋ ಪಥಿ ಹಾಗೂ ಆಯುರ್ವೇದ್ ಮಹಾವಿದ್ಯಾ ಲಯಕ್ಕೆ ಸೇರಬಯಸುವ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆ ತೆಗೆಯುವ ಬಗ್ಗೆ ಸರಕಾರಕ್ಕೆ ಗಮನ ಸೆಳೆಯುವಂತೆ ಉಪಕುಲಪತಿಗಳಿಗೆ ವಿನಂತಿಸಿದರು. ವೈದ್ಯಕೀಯ ಮಹಾವಿದ್ಯಾಲಯದ ಪರವಾಗಿ ಡಾ.ಭಗವಾನ ಬಿ.ಸಿ ಅವರನ್ನು ಸನ್ಮಾನಿಸಲಾಯಿತು. ಡಾ.ಸಂಜೀವ ಕೊಳಗಿ ವೈದ್ಯಕೀಯ ಪದವೀಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ (ಬೇವೂರ), ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ. ಶ್ರೀರಾಮ ಕೋರಾ, ಡಾ.ಮಂಜುಳಾ ಪಾಟೀಲ, ಡಾ.ಮಹಾಂತೇಶ ಭೂತಾಳ, ಡಾ.ಶಿಫಾ ಮತ್ತು ಡಾ.ಕೃಪಾಕರ ಸೇರಿದಂತೆ ಇತರರಿದ್ದರು.

ಬಾಗಲಕೋಟೆಯ ಬಿವಿವಿ ಸಂಘದ ಎಸ್.ಎನ್ ಮೆಡಿಕಲ್ ಕಾಲೇಜಿನಿಂದ ಪದವಿ ಹಾಗೂ ಸ್ನಾತಕೋತ್ತರ ಪಡೆದ ವಿದ್ಯಾರ್ಥಿಗಳು.

### 131 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

**ಪದವಿ ಪ್ರದಾನ ಸಮಾರಂಭದಲ್ಲಿ 131 ಸ್ನಾತಕ ಮತ್ತು 32 ಸ್ನಾತಕೋತ್ತರ ಪದವಿಧರರಿಗೆ ಪದವಿ ಪ್ರದಾನ ಮಾಡಲಾಯಿತು. ಸ್ನಾತಕೋತ್ತರ ಕೋರ್ಸಿನ ಪರೀಕ್ಷೆಯಲ್ಲಿ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಅರಿವಳಿಕೆ ವಿಭಾಗದಲ್ಲಿ 8ನೇ ರ‍್ಯಾಂಕ್ ಪಡೆದ ಡಾ.ಅನುಷಾ ಎಸ್. ಆರ್ ಹಾಗೂ ಎಂಬಿಬಿಎಸ್ ಪರೀಕ್ಷೆಯಲ್ಲಿ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಮುದಾಯ ಆರೋಗ್ಯ ವಿಭಾಗದಲ್ಲಿ 8ನೇ ರ‍್ಯಾಂಕ್ ಪಡೆದ ಡಾ.ಇರಾಮ್ತುಹೂರ್.ಎಂ ಮತ್ತು ಅಂಗರಚನಾಶಾಸ್ತ್ರ ವಿಭಾದಲ್ಲಿ ಡಾ. ಆರ್.ಬಸವರಾಜೇಶ್ವರಿ, ಬಯೋಕೆಮೆಸ್ಟ್ರಿ ವಿಭಾಗದಲ್ಲಿ 7ನೇ ರ‍್ಯಾಂಕ್ ಪಡೆದ ಡಾ.ನಿಶಿತಾ ಮಾಲು, ಫಾರೆನ್ಸಿಕ್ ಮೆಡಿಸಿನ್ ವಿಭಾಗದಲ್ಲಿ 10ನೇ ರ‍್ಯಾಂಕ್ ಪಡೆದ ಡಾ.ಮಾಧವಿ ಸೋನಿ ಹಾಗೂ ಅತ್ಯುತ್ತಮ ಅಂಕಗಳನ್ನು ಪಡೆದು ಕಾಲೇಜಿನ ಫಲಿತಾಂಶದಲ್ಲಿ ಅಗ್ರಸ್ಥಾನ ಪಡೆದ ಚಿಕ್ಕಮಕ್ಕಳ ಅಂಗರಚನಾಶಾಸ್ತ್ರ ವಿಭಾಗದ ಡಾ.ನಂದನ್ ಭಾರದ್ವಾಜ, ಮತ್ತು ಜನರಲ್ ಮೆಡಿಸಿನ್ ಜನರಲ್ ಸರ್ಜರಿ ವಿಭಾಗದ ಡಾ.ಅಲಿನವಾಜ್ ಖಾನ್, ಅವರನ್ನು ವಿವಿಧ ದಾನಿಗಳು ಸ್ಥಾಪಿಸಿದ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಯಿತು.**

# ಜಾತಿ ಗಣತಿ ವಿರೋಧಿಸಲು ಸಚಿವರಿಗೆ ಹೆಚ್ಚಿದ ಒತ್ತಡ

## ಇಕ್ಕಟ್ಟಿಗೆ ಸಿಲುಕಿರುವ ಒಕ್ಕಲಿಗ-ಲಿಂಗಾಯತ ಸಚಿವರು | ಹೈಕಮಾಂಡ್ ಒಪ್ಪಿಗೆ ಪಡೆದಿರುವುದರಿಂದ ಡಿಕೆಗೆ ಸಂಕಷ್ಟ

**ಬೆಂಗಳೂರು:** ರಾಜ್ಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿರುವ ಜಾತಿ ಗಣತಿಯ ವಿಷಯಕ್ಕೆ ಸಂಬಂಧಿಸಿದಂತೆ ಇದೀಗ ಒಕ್ಕಲಿಗ ಹಾಗೂ ಲಿಂಗಾಯತ ಸಚಿವರು ಇದೀಗ 'ಇಕ್ಕಟ್ಟಿ'ಗೆ ಸಿಲುಕಿದ್ದು, ಯಾವ ರೀತಿಯಲ್ಲಿ ಈ ವಿಷಯವನ್ನು ಮುಂದುವರಿಸಬೇಕು ಎನ್ನುವ ಗೊಂದಲಕ್ಕೆ ಸಿಲುಕಿದ್ದಾರೆ.

ಒಂದೆಡೆ ಸಮುದಾಯದಿಂದ ವಿವಿಧ ಸಂಘಟನೆಗಳು, ಹಿರಿಯ ಮಠಾಧೀಶರಿಂದ ಜಾತಿ ಗಣತಿಯನ್ನು ವಿರೋಧಿಸಬೇಕು ಎನ್ನುವ ಒತ್ತಡ ಹೆಚ್ಚಾಗುತ್ತಿದೆ. ಆದರೆ ಜಾತಿ ಗಣತಿಯನ್ನು ಸಚಿವ ಸಂಪುಟದಲ್ಲಿ ಮಂಡಿಸುವ ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೈಕಮಾಂಡ್‌ನಿಂದ ಒಪ್ಪಿಗೆ ಪಡೆದುಕೊಂಡಿದ್ದಾರೆ. ಇದರಿಂದಾಗಿ, ಬಹಿರಂಗವಾಗಿ ಈ ವರದಿಯನ್ನು ವಿರೋಧಿಸದರೆ ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ ಎನ್ನುವ ಆತಂಕವಿದೆ. ಒಂದು ವೇಳೆ ವಿರೋಧಿಸದಿದ್ದರೆ, ಭವಿಷ್ಯದಲ್ಲಿ ಸಮುದಾಯದ ವಿರೋಧ ಕಟ್ಟಿಕೊಳ್ಳಬೇಕು ಎನ್ನುವ ಆತಂಕದಲ್ಲಿ ನಾಯಕರಿದ್ದಾರೆ. ಈ ನಡುವೆ ಗುರುವಾರ ಕರೆದಿರುವ ವಿಶೇಷ ಸಚಿವ ಸಂಪುಟದಲ್ಲಿ ಯಾವ ರೀತಿಯಲ್ಲಿ ಚರ್ಚಿಸಬೇಕು ಎನ್ನುವ ಬಗ್ಗೆ ಈಗಾಗಲೇ ಒಕ್ಕಲಿಗ ಹಾಗೂ ವೀರಶೈವ ಲಿಂಗಾಯತ ಜಾತಿಗಳಿಂದ ತಮ್ಮ ಸಮುದಾಯದ ಸಚಿವರಿಗೆ 'ಮಾಹಿತಿ' ಒದಗಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಆದ್ದರಿಂದ ಸಂಪುಟದಲ್ಲಿ ಏನೆಲ್ಲ ಚರ್ಚೆಯಾಗಬಹುದು ಎನ್ನುವ ಕುತೂಹಲ ಹಲವರಲ್ಲಿದೆ.

**ವರದಿ ಸಿದ್ಧಪಡಿಸಲು ಸಿದ್ಧತೆ:** ಈಗಾಗಲೇ ಅಖಿಲ ಭಾರತ ವೀರಶೈವ ಮಹಾಸಭಾ ಈಗಾಗಲೇ ಅನೌಪಚಾರಿಕ ಸಭೆ ನಡೆಸಿದ್ದು, ರಾಜ್ಯ ಸಚಿವ ಸಂಪುಟದ ಪ್ರಭಾವಿ ಸಚಿವರೊಬ್ಬರನ್ನು ಕರೆಸಿಕೊಂಡು ಜಾತಿಗಣತಿಯ ಪರಿಣಾಮಗಳ ಕುರಿತು ಚರ್ಚಿಸಿದೆ. ಇದರೊಂದಿಗೆ ನಿವೃತ್ತ ಐಎಎಸ್ ಅಧಿಕಾರಿ ಡಾ.ಜಿ.ಎನ್.ಶಿವಮೂರ್ತಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿಯು ಜಾತಿಗಣತಿಯಿಂದ ಸೋರಿಕೆ ಆಗಿರುವ ವಿಷಯಗಳನ್ನು ಸಂಗ್ರಹಿಸಿ, ಜಾತಿಗಣತಿಯಲ್ಲಿರುವ ವಿಷಯಗಳು, ಅವುಗಳ ಸತ್ಯಾಸತ್ಯತೆ, ಭವಿಷ್ಯದಲ್ಲಿ ಇದರಿಂದ ಆಗಬಹುದಾದ ಪರಿಣಾಮ ಸೇರಿದಂತೆ ಎಲ್ಲ ಆಯಾಮಗಳಿಂದ ಅಧ್ಯಯನ ನಡೆಸಲು ತಿಳಿಸಿದೆ. ತುರ್ತಾಗಿ ಏಪ್ರಿಲ್ 17ರೊಳಗಾಗಿ ಪ್ರಾಥಮಿಕವಾಗಿ ಒಂದು ವರದಿಯನ್ನು ತಯಾರಿಸಿ, ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಸಚಿವರಿಗೆ ಇದರ ಬಗ್ಗೆ ಮನವರಿಕೆ ಮಾಡಿಕೊಡಲು ನಿರ್ಧರಿಸಿದೆ.

ಒಕ್ಕಲಿಗರ ಸಂಘದಲ್ಲೂ ಜಾತಿಗಣತಿ ಕುರಿತಂತೆ ಭಾರಿ ಚರ್ಚೆ ನಡೆಯುತ್ತಿದೆ. ಏಕಾಏಕಿ ಜಾತಿಗಣತಿ ಸಚಿವ ಸಂಪುಟದ ಮುಂದೆ ಮಂಡನೆ ಮಾಡಿರುವುದು ಸರಿಯಲ್ಲ ಎನ್ನುವ ಅಭಿಪ್ರಾಯ ವ್ಯಕ್ತವಾಗಿದ್ದು, ಈ ಸಂಬಂಧ ಚರ್ಚಿಸಲು ಸಮುದಾಯದ ಮುಖಂಡರು ಮಾಜಿ ಪ್ರಧಾನಿ ದೇವೇಗೌಡ ಮತ್ತು ಕುಮಾರಸ್ವಾಮಿ ಅವರ ಮೊರೆ ಹೋಗಿದ್ದರೆ. ಇದರ ಬೆನ್ನಲ್ಲೇ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್‌ನ ಒಕ್ಕಲಿಗ ಶಾಸಕರ ಸಭೆಯನ್ನು ಕರೆದಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಈ ಎಲ್ಲದರ ನಡುವೆ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯದ ನಾಯಕರು, ಸಮುದಾಯದಲ್ಲಿ ಯಾವುದೇ ಸಮಸ್ಯೆಯಿದ್ದರು ಈ ವಿಷಯದಲ್ಲಿ ಎಲ್ಲರೂ ಒಂದಾಗಬೇಕಿದೆ. ಸಮುದಾಯದ ಹಿತ ಕಾಪಾಡುವ ಸಲುವಾಗಿ ಜಾತಿಗಣತಿ ಅನುಷ್ಠಾನದ ವಿರುದ್ಧ ಹೋರಾಟ ನಡೆಸುವಂತೆ ಸಮುದಾಯದ ಹಿರಿಯ ಮಠಾಧೀಶರು ನಾಯಕರಿಗೆ ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಒಕ್ಕಲಿಗ ಮತ್ತು ಲಿಂಗಾಯತ ಮಾತ್ರವಲ್ಲದೇ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಈ ಹಿಂದೆಯೇ ರಾಜ್ಯ ಸರಕಾರಕ್ಕೆ ಜಾತಿಗಣತಿ ಮರುಸಮೀಕ್ಷೆ ಆಗಬೇಕೆಂದು ಆಗ್ರಹಿಸಿದೆ. ಹೀಗಾಗಿ ಬ್ರಾಹ್ಮಣ ಮಹಾಸಭಾ ಕೂಡ ಹೋರಾಟದ ಬಗ್ಗೆ ಚರ್ಚೆಗೆ ಚಾಲನೆ ನೀಡಿದೆ ಎನ್ನಲಾಗಿದೆ.

### ರಾಜಕೀಯದ ಲೆಕ್ಕಾಚಾರದಲ್ಲಿ ದಲಿತ ಸಮುದಾಯ

**ಮೇಲ್ಜಾತಿಗಳಿಂದ ಜಾತಿ ಗಣತಿಗೆ ವಿರೋಧ ವ್ಯಕ್ತವಾಗುತ್ತಿದ್ದರೂ, ದಲಿತ ಸಮುದಾಯಗಳು ಈ ಗಣತಿಯ ಅಂಕಿ-ಅಂಶವನ್ನು ಮುಂದಿಟ್ಟುಕೊಂಡು ರಾಜಕೀಯ ಲಾಭದ ಲೆಕ್ಕಾಚಾರದಲ್ಲಿವೆ. ಅದರಲ್ಲಿಯೂ ಪರಿಶಿಷ್ಟ ಜಾತಿಯಲ್ಲಿ ಎಡಗೈ ಹಾಗೂ ಬಲಗೈ ಸಮುದಾಯದ ಜನಸಂಖ್ಯೆ ಸಿಕ್ಕಿದೆ. ಆದ್ದರಿಂದ ಇದೀಗ ಈ ಅಂಕಿ-ಅಂಶವನ್ನು ಮುಂದಿಟ್ಟುಕೊಂಡು ರಾಜಕೀಯ ಪಾರಮ್ಯ ಸಾಧಿಸಲು ಸಿದ್ಧತೆ ನಡೆಸಿಕೊಂಡಿದ್ದಾರೆ ಎನ್ನಲಾಗಿದೆ. ಅಲ್ಲದೇ ಪರಿಶಿಷ್ಟ ಜಾತಿಯ ಬಲಗೈ ಮತಗಳು ಬಿಜೆಪಿಗೆ ಹಾಗೂ ಎಡಗೈ ಮತಗಳು ಕಾಂಗ್ರೆಸ್‌ಗೆ ಎಂಬ ಸಾಂಪ್ರದಾಯಿಕ ಲೆಕ್ಕಾಚಾರಗಳು ಏರುಪೇರಾಗುವ ಸಾಧ್ಯತೆಯಿದೆ. ಆದ್ದರಿಂದ ಜಾತಿ ಗಣತಿಯಲ್ಲಿರುವ ಜನಸಂಖ್ಯೆಯ ಲೆಕ್ಕಾಚಾರದಲ್ಲಿ ರಾಜಕೀಯ ಅವಕಾಶ ನೀಡುವಂತೆ ಮುಂದಿನ ದಿನದಲ್ಲಿ ಹೋರಾಟಕ್ಕೆ ಸಿದ್ಧತೆ ಆರಂಭಿಸಿಕೊಂಡಿದ್ದಾರೆ ಎನ್ನಲಾಗಿದೆ.**

### ಇಕ್ಕಟ್ಟಿನಲ್ಲಿ ಡಿಕೆಶಿ

**ಜಾತಿ ಗಣತಿಗೆ ಹೈಕಮಾಂಡ್‌ನಿಂದ ಒಪ್ಪಿಗೆ ಪಡೆದು ಏಕಾಏಕಿ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ್ದಾರೆ. ಇದರಿಂದ ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಸಚಿವರಿಗೆ ಆಘಾತ ಉಂಟು ಮಾಡಿದೆ ಎನ್ನಲಾಗಿದೆ. ಆದರೆ ರಾಹುಲ್ ಗಾಂಧಿ ಅವರೇ ಒಪ್ಪಿಗೆ ನೀಡಿರುವುದರಿಂದ ಈ ವಿಷಯದಲ್ಲಿ ಯಾವ ರೀತಿಯ ತೀರ್ಮಾನ ಕೈಗೊಳ್ಳಬೇಕು ಎನ್ನುವ ಗೊಂದಲಕ್ಕೆ ಡಿಕೆ ಸಿಲುಕಿದ್ದಾರೆ ಎನ್ನಲಾಗಿದೆ. ಈಗಾಗಲೇ ಹಲವಾರು ಮಠಾಧೀಶರು ಸತತ ಚರ್ಚೆಯಲ್ಲಿ ತೊಡಗಿದ್ದು, ಸದ್ಯಕ್ಕೆ ಎದುರಾಗಿರುವ ಪರಿಸ್ಥಿತಿಯನ್ನು ಹೇಗಾದರೂ ಮಾಡಿ ತಡೆಯಬೇಕು ಎಂಬ ಪ್ರಯತ್ನ ನಡೆದಿದೆ ಎನ್ನಲಾಗಿದೆ.**

# ಸಮಾಚಾರ ಸಣ್ಣದಲ್ಲ

## ಕಾಡುಪ್ರಾಣಿಗಳ ಬೇಟೆ: 18 ಆರೋಪಿಗಳು ವಶಕ್ಕೆ

**ಶಿರಾ:** ಬುಕ್ಕಾಪಟ್ಟಣ ವಲಯದ ಚಿಂಕಾರ ವನ್ಯಜೀವಿಧಾಮದಲ್ಲಿ ಕಾಡುಪ್ರಾಣಿಗಳನ್ನು ಬೇಟೆಯಾಡುತ್ತಿದ್ದ 18 ಮಂದಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ವಶಕ್ಕೆ ತೆಗೆದುಕೊಂಡಿದ್ದಾರೆ. ಮಧುಗಿರಿ ತಾಲ್ಲೂಕಿನ ತಿಪ್ಪನಹಳ್ಳಿ, ಬಡವನಹಳ್ಳಿ, ಶಿರಾ ತಾಲೂಕಿನ ಕಳ್ಳಿಪಾಳ್ಯ ಹಾಗೂ ತುಮಕೂರು ತಾಲ್ಲೂಕಿನ ಕೆಂಚಯ್ಯನಪಾಳ್ಯ ಗ್ರಾಮಕ್ಕೆ ಸೇರಿದ 18 ಮಂದಿ ಬೇಟೆಯಾಡಲು ತಂದಿದ್ದ ವಾಹನ, ಬಲೆ, ಮರದ ದೊಣ್ಣೆ, ಭರ್ಜಿಗಳನ್ನು ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿದ್ದಾರೆ. ಕೆಲವು ದಿನಗಳಿಂದ ಬೇಟೆಗಾರರ ಚಟುವಟಿಕೆ ಹೆಚ್ಚಾಗಿತ್ತು. ಇದರ ಮಾಹಿತಿ ಪಡೆದಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದರು. ವಲಯ ಅರಣ್ಯಾಧಿಕಾರಿ ಚಂದನ್ ಕುಮಾರ್ ಮಾರ್ಗದರ್ಶನದಲ್ಲಿ ಉಪ ವಲಯಾಧಿಕಾರಿ ಕಿರಣ್ ನೇತೃತ್ವದ ತಂಡದಲ್ಲಿ ರೇವಣಸಿದ್ದಪ್ಪ ಕಾಳಗಿ, ಪರಶುರಾಮ, ನವೀನ್ ಕುಮಾರ್, ಪುಟ್ಟಸ್ವಾಮಿ, ಗುರುವಯ್ಯ, ನಾಗರಾಜ್ ಭಾಗವಹಿಸಿದ್ದರು.

## ಬೋನಿಗೆ ಬಿದ್ದ ಚಿರತೆ

**ಹುಣಸೂರು:** ಸಾಕು ಪ್ರಾಣಿಗಳಿಗೆ ಕಂಟಕವಾಗಿದ್ದ ಚಿರತೆಯನ್ನು ಬೋನಿನಲ್ಲಿ ಬಂಧಿಯಾಗಿಸುವಲ್ಲಿ

ಅರಣ್ಯ ಇಲಾಖೆ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಹುಣಸೂರು ತಾಲೂಕಿನ ಗಾವಡಗೆರೆ ಸುತ್ತಮುತ್ತಲಿನ ತೋಟದ ಮನೆಗಳಲ್ಲಿ ಸಾಕಿದ್ದ ನಾಯಿಗಳನ್ನು ಕೊಂದು ಹಾಕುತ್ತಲ್ಲದೆ ಜಾನುವಾರುಗಳನ್ನು ಕಾಡಿತ್ತು. ರೈತರು ಜಮೀನಿಗೆ ತೆರಳದಂತಾಗಿದ್ದರಿಂದ ಚಿರತೆಯನ್ನು ಸೆರೆ ಹಿಡಿಯುವಂತೆ ರೈತರು ಮನವಿ ಮಾಡಿದ್ದರು. ಗ್ರಾಮದ ವಿನೋದ್ ಕುಮಾರ್ ಎಂಬುವವರ ಜಮೀನಿನಲ್ಲಿ ಸಿಬ್ಬಂದಿಗಳು ಇರಿಸಿದ್ದ ಬೋನಿಗೆ ಸೋಮವಾರ ಆಹಾರಕ್ಕಾಗಿ ಒಳ ಹೊಕ್ಕಿದ್ದ ಸುಮಾರು ಮೂರುವರೆ ವರ್ಷದ ಚಿರತೆಯು ಬಂಧಿಯಾಗಿದೆ.

## ಇಬ್ಬರು ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ

**ಚಾಮರಾಜನಗರ:** ಕೌಟುಂಬಿಕ ಕಲಹದಿಂದ ಬೇಸತ್ತು ಎರಡು ಮಕ್ಕಳೊಂದಿಗೆ ತಾಯಿ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಮಹದೇಶ್ವರಬೆಟ್ಟ ಸಮೀಪದ ಕಾಡುಹೊಲ ಗ್ರಾಮದಲ್ಲಿ ನಡೆದಿದೆ. ಸುಶೀಲ (30), ಆಕೆಯ ಮಕ್ಕಳಾದ ಚಂದ್ರು (8), ದಿವ್ಯ (11) ಬಾವಿಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಬಾವಿಯ ದಡದಲ್ಲಿ ಚಪ್ಪಲಿ ಹಾಗೂ ತಾಳಿ ಇಟ್ಟು ತಾಯಿ ತನ್ನ ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜಮೀನಿನ ಮಾಲೀಕ ನೀರು ತರಲು ಬಾವಿಯ ಬಳಿ ಹೋದಾಗ ಪ್ರಕರಣ ಬೆಳಕಿಗೆ ಬಂದಿದೆ. ಸ್ಥಳಕ್ಕೆ ಮಲೆ ಮಹದೇಶ್ವರ ಬೆಟ್ಟ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮಲೆ ಮಹದೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಬಾಲಕಿ ಅಪಹರಣಕ್ಕೆ ಯತ್ನಿಸಿದ ಯುವಕ

**ಬೀದರ್:** ಹುಬ್ಬಳ್ಳಿಯಲ್ಲಿ 5 ವರ್ಷದ ಬಾಲಕಿ ಕೊಲೆ ಪ್ರಕರಣ ಮಾಸುವ ಮುನ್ನವೇ ಬೀದರ್‌ನಲ್ಲಿ ಮತ್ತೊಂದು ಘಟನೆ ಬೆಳಕಿಗೆ ಬಂದಿದ್ದು, ಗೇಟ್ ಬಳಿ ಆಡುತ್ತಿದ್ದ ಬಾಲಕಿಯನ್ನು ಯುವಕನೊಬ್ಬ ಅಪಹರಿಸಲು ಯತ್ನಿಸಿದ್ದಾನೆ. ಈ ದೃಶ್ಯ ಸಿಸಿಟಿವಿಯಲ್ಲಿ ಲಭ್ಯವಾಗಿದೆ. ಬೀದರ್‌ನ ವಿದ್ಯಾನಗರ ಬಡಾವಣೆಯ 11ನೇ ಕ್ರಾಸ್‌ನಲ್ಲಿರುವ ಸತೀಶ್ ಬಕ್ಕಾಚೌಡೇಕರ ಎಂಬುವವರ ಮನೆಯಲ್ಲಿ ಈ ಘಟನೆ ನಡೆದಿದೆ. ಮನೆಯಂಗಳಲ್ಲಿ ಬಾಲಕಿಯರಿಬ್ಬರು ಆಟವಾಡುತ್ತಿದ್ದರು. ಈ ವೇಳೆ ಯುವಕನೊಬ್ಬ ಮನೆ ಮುಂದೆ ಬೈಕ್ ನಿಲ್ಲಿಸಿ, ಸ್ವಲ್ಪ ಹೊತ್ತು ನೋಡಿಕೊಂಡು ನಿಂತಿದ್ದಾನೆ. ಬಳಿಕ ಗೇಟ್ ಒಳಗೆ ಹೋಗಿ ಅಲ್ಲೇ ಆಟ ಆಡುತ್ತಿದ್ದ ಇಬ್ಬರು ಬಾಲಕಿಯರ ಪೈಕಿ ಒಬ್ಬಳನ್ನ ಅಪಹರಿಸಲು ಯತ್ನಿಸಿದ್ದಾನೆ. ಅಷ್ಟರಲ್ಲಿ ಪೋಷಕರು ಹೊರಬರುತ್ತಿದ್ದಂತೆ ಬೈಕ್ ಸಮೇತ ಯುವಕ ಪರಾರಿಯಾಗಿದ್ದಾನೆ. ಅಪಹರಿಸಲು ಯತ್ನಿಸಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಯುವಕನ ಅಸಭ್ಯ ವರ್ತನೆಯ ಬಗ್ಗೆ ಬಾಲಕಿಯರು ಪೋಷಕರಿಗೆ ತಿಳಿಸಿದ್ದಾರೆ.

{ ಬಸವರಾಜ ರಾಯರೆಡ್ಡಿ } ಸಿಎಂ ಆರ್ಥಿಕ ಸಲಹೆಗಾರ

**ರಾಜ್ಯ ಸರಕಾರ ಏಪ್ರಿಲ್ 17ರಂದು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಬೇಕೆಂದಿರುವುದು ಜಾತಿ ಗಣತಿಯ ಕುರಿತಲ್ಲ. ಇದು ಜಾತಿಗಣತಿ ಅಲ್ಲ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ವಿಚಾರ ತಿಳಿಯಲು ಮಾಡಿದ ಸಮೀಕ್ಷೆ. ಅದರಲ್ಲಿ ಜಾತಿ ಕಾಲಂ ಸೇರಿಸಲಾಗಿದೆ ಅಷ್ಟೇ. ಇದು ಕೂಡ ಸ್ವಾಗತಾರ್ಹ.**

## 4 ಮರಿಗಳೊಂದಿಗೆ ಹುಲಿ ವಾಕಿಂಗ್

ನಾಲ್ಕು ಮರಿಗಳೊಂದಿಗೆ ಕಾಣಿಸಿಕೊಂಡ ಹುಲಿ.

**ಚಾಮರಾಜನಗರ:** ದೇಶದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬಂಡೀಪುರದಲ್ಲಿ ತನ್ನ ಮರಿಗಳೊಂದಿಗೆ ಹುಲಿಯೊಂದು ದರ್ಶನ ನೀಡಿದೆ.

ನಾಲ್ಕು ಮುದ್ದಾದ ಮರಿಗಳ ಜೊತೆ ಹುಲಿಯನ್ನು ಕಂಡಿರುವ ಪ್ರವಾಸಿಗರು ರೋಮಾಂಚನಗೊಂಡಿದ್ದಾರೆ. ಬಂಡೀಪುರದ ಸೆಂಟರ್ ಆಫ್ ಅಟ್ರಾಕ್ಷನ್ ರೀತಿ ಈಗ ಹುಲಿ ದರ್ಶನ ನೀಡಿದ್ದು, ಸಾಮಾಜಿಕ ಜಾಲತಾಣದಲ್ಲಿ ಇದರ ವಿಡಿಯೊ ವೈರಲ್ ಆಗುತ್ತಿದೆ.

ಬಂಡೀಪುರ ಅಭಯಾರಣ್ಯದಲ್ಲಿ ಈಚೆಗೆ ಉತ್ತಮ ಮಳೆಯಾಗಿದ್ದು ಒಣಗಿದ ಗಿಡಮರಗಳು ಹಸಿರಾಗುತ್ತಿವೆ. ಸಫಾರಿಗೆ ತೆರಳಿದ ಪ್ರವಾಸಿಗರಿಗೆ ಆನೆ, ಹುಲಿ, ಚಿರತೆ, ನವಿಲು, ಜಿಂಕೆ, ಕಾಡು ಕೋಣ ಸೇರಿದಂತೆ ಇನ್ನಿತರ ವನ್ಯಪ್ರಾಣಿಗಳು ಕಾಣಿಸಿಕೊಳ್ಳುತ್ತಿವೆ. ಇದರಿಂದಾಗಿ ಪ್ರವಾಸಿಗರ ಸಂಖ್ಯೆಯೂ ಕೂಡ ಗಣನೀಯ ಪ್ರಮಾಣದಲ್ಲಿ ಏರಿಕೆ ಕಾಣುತ್ತಿದೆ. ಜತೆಗೆ, ಅಭಯಾರಣ್ಯಕ್ಕೆ ಕಾಡ್ಗಿಚ್ಚಿನ ಆತಂಕವೂ ದೂರವಾಗಿದೆ.

## ಜಾತಿಗಣತಿಗೆ ಮಹತ್ವ ಇಲ್ಲ

**ರಾಮನಗರ:** ಇದು ಜಾತ್ಯಾತೀತ ರಾಷ್ಟ್ರ, ಹಾಗಾಗಿ ಜಾತಿಗಣತಿಗೆ ಯಾವುದೇ ಮಹತ್ವ ಇಲ್ಲ ಎಂದು ಸಂಸದ ಡಾ. ಮಂಜುನಾಥ್ ಹೇಳಿದ್ದಾರೆ.

ಸರಕಾರ ಜಾತಿಗಣತಿ ವರದಿ ಸ್ವೀಕಾರಕ್ಕೆ ಮುಂದಾಗಿರುವ ವಿಚಾರದ ಕುರಿತು ಮಾತನಾಡಿದ ಅವರು, ಅಂಬೇಡ್ಕರ್ ಜಯಂತಿ ಆಚರಣೆ ಮಾಡಲಾಗುತ್ತಿದೆ. ನಮ್ಮ ಸಂವಿಧಾನವೇ ಜಾತಿ ವ್ಯವಸ್ಥೆ ಬೇಡ ಎಂದು ಹೇಳುತ್ತದೆ. ಇಂತಹ



ಸಂದರ್ಭದಲ್ಲಿ ಜಾತಿಗಣತಿ ಯಾಕೆ ಬೇಕು ಎಂದು ಗೊತ್ತಾಗುತ್ತಿಲ್ಲ ಎಂದರು. ಸಾಮಾಜಿಕ ಹಾಗೂ ಶೈಕ್ಷಣಿಕ ಮಟ್ಟದ ಬಗ್ಗೆ ಸಮೀಕ್ಷೆ ಮಾಡಿ. ಆದರೆ ಜಾತಿ ಜಾತಿಗಳ ನಡುವೆ ಕಂದಕ ಸೃಷ್ಟಿಸುವ ಕೆಲಸ ಮಾಡಬೇಡಿ. ಎಲ್ಲಾ ಜಾತಿಯಲ್ಲೂ ಬಡವರಿದ್ದಾರೆ. ಎಲ್ಲರನ್ನೂ ಮೇಲೆತ್ತುವ ಕೆಲಸ ಆಗಬೇಕು. ಏಕಾಏಕಿ ಜಾತಿಗಣತಿ ಸ್ವೀಕಾರ ಮಾಡುವುದಕ್ಕಿಂತ ಮೊದಲು ಚರ್ಚೆ ಆಗಬೇಕು. ವಿಧಾನಸಭೆ, ವಿಧಾನ ಪರಿಷತ್ ನಲ್ಲಿ ಚರ್ಚೆ ಮಾಡಬೇಕು. ತಜ್ಞರು, ಚಿಂತಕರು ಹಾಗೂ ಸಾರ್ವಜನಿಕರ ಅಭಿಪ್ರಾಯ ಪಡೆಯಬೇಕು. ಶಾಸಕಾಂಗ ಸಮಿತಿ ರಚನೆ ಮಾಡಿ ಈ ಬಗ್ಗೆ ಪರಿಶೀಲನೆ ಮಾಡಬೇಕು. ಸರಕಾರದ ಆತುರದ ನಿರ್ಧಾರ ಸರಿಯಲ್ಲ ಎಂದು ತಿಳಿಸಿದರು.

## ಆನ್‌ಲೈನ್ ವಂಚಕರಿಂದ ಒಂದೂವರೆ ಕೋಟಿ ಗುಳುಂ

**ಮೈಸೂರು:** ಆನ್‌ಲೈನ್ ವಂಚಕರ ಹಾವಳಿ ಮುಂದುವರಿದಿದ್ದು, ಹೆಚ್ಚಿನ ಹಣದಾಸೆ ತೋರಿದ ವಂಚಕರು ಒಂದೂವರೆ ಕೋಟಿ ರೂಪಾಯಿ ಲಪಟಾಯಿಸಿದ್ದಾರೆ.

ಒಬ್ಬ ನಿವೃತ್ತ ಅಧಿಕಾರಿ ಹಾಗೂ ಒಬ್ಬ ಇಂಜಿನಿಯರ್‌ಗೆ ಆನ್ ಲೈನ್ ಮೂಲಕ 1.52 ಕೋಟಿ ರುಪಾಯಿ ವಂಚಿಸಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಎಂದು ಹೇಳಿದ ಖದೀಮರ ಮಾತು ನಂಬಿ ಹೆಚ್ಚಿನ ಹಣದ ಆಸೆಗೆ ಬಿದ್ದ ನಿವೃತ್ತ ಅಧಿಕಾರಿ ಹಾಗೂ ಎಂಜಿನಿಯರ್ ಮೋಸದ ಜಾಲಕ್ಕೆ ಸಿಲುಕಿ ಹಣ ಕಳೆದುಕೊಂಡಿದ್ದಾರೆ.

ವಂಚಕರು ಇನ್ ಸ್ಟಾಗ್ರಾಂ ಮೂಲಕ ಷೇರು ಮಾರುಕಟ್ಟೆಯ ವಿಡಿಯೋ ಪ್ರದರ್ಶನ ಮಾಡಿದ್ದು, ನಿವೃತ್ತ ಅಧಿಕಾರಿ ಹಾಗೂ ಇಂಜಿನಿಯರ್ ವಿಡಿಯೊ ನಂಬಿ ಮೆಸೇಜ್ ಮಾಡಿದಾಗ ಆಪ್ಸ್ ಟಾಕ್ಸ್ ವ್ಯಾಲ್ಯೂ ವಾಟ್ಸಾಪ್ ಗ್ರೂಪಿಗೆ ಜಾಯಿನ್ ಮಾಡಿದ್ದಾರೆ. ಆರಂಭದಲ್ಲಿ ಲಾಭ ತೋರಿಸಿದ ವಂಚಕರು ನಂತರ ಹಂತ-ಹಂತವಾಗಿ ಹಣ ಪಡೆದು ವಂಚನೆ ಮಾಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಪೊಲೀಸ್ ಅಂತ ಹೇಳಿ 11.80 ಲಕ್ಷ ರು. ಹಣ ಖಾತೆಗೆ ಹಾಕಿಸಿಕೊಂಡು ವಂಚನೆ ಮಾಡಲಾಗಿದೆ. ಮುಂಬೈ ಪೊಲೀಸ್ ಎಂದು ತಿಳಿಸಿ ನಿವೃತ್ತ ಅಧಿಕಾರಿಗೆ ಕರೆ ಮಾಡಿದ ವಂಚಕರು ಕೆಲವು ಅಪರಾಧ ಕೃತ್ಯದಲ್ಲಿ ನೀವು ಭಾಗಿಯಾಗಿದ್ದೀರಿ. ನಿಮ್ಮ ಖಾತೆಗಳನ್ನ ಸೀಜ್ ಮಾಡಲಾಗುವುದು ಎಂದು ಬೆದರಿಕೆ ಹಾಕಿ ಹಣ ಹಾಕಿಸಿಕೊಂಡು ವಂಚಿಸಿದ್ದಾರೆ. ಈ ಕುರಿತು ಸೈಬರ್ ಕ್ರೈಂ ಠಾಣೆಯಲ್ಲಿ ಪ್ರತ್ಯೇಕ ದೂರು ದಾಖಲಾಗಿವೆ.

## ರಾಜ್ಯದಲ್ಲೂ ಹೆಚ್ಚಿದ ಒತ್ತಡ

← ಮೊದಲಪುಟದಿಂದ

ಸೋಮವಾರ ಈ ಸಂಬಂಧ ರಾಜ್ಯಪತ್ರ ಹೊರಡಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಆಯೋಗದ ವರದಿಯ ಪ್ರಕಾರ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಸಮುದಾಯಗಳನ್ನು ಒಳಗೊಂಡಿರುವ ಗುಂಪು-1ಕ್ಕೆ ಶೇ.1ರಷ್ಟು ಮೀಸಲು ನೀಡಲಾಗುತ್ತಿದೆ. ಮಧ್ಯಮ ಪ್ರಯೋಜನ ಪಡೆದ 18 ಉಪಜಾತಿಗಳ ಗುಂಪು-2ಗೆ ಶೇ.9ರಷ್ಟು ಮೀಸಲು ನೀಡಲಾಗುತ್ತಿದೆ. ಮತ್ತು ಗಮನಾರ್ಹವಾಗಿ ಪ್ರಯೋಜನ ಪಡೆದ 26 ಉಪಜಾತಿಗಳನ್ನು ಒಳಗೊಂಡಿರುವ ಗುಂಪು 3ಕ್ಕೆ ಶೇ.5ರಷ್ಟು ಮೀಸಲಾತಿ ಪಡೆಯುತ್ತದೆ ಎಂದು ವಿವರಿಸಿದ್ದಾರೆ.

**ಕೈ ನಾಯಕರಿಂದಲೇ ವಿರೋಧ:** ಆರಂಭದಲ್ಲಿ ಜಾತಿ ಗಣತಿಗೆ ಸಂಬಂಧಿಸಿದಂತೆ ಮೌನವಾಗಿದ್ದ ಕಾಂಗ್ರೆಸ್ ನಾಯಕರು ಇದೀಗ ಪರೋಕ್ಷವಾಗಿ ತಮ್ಮ ಅಸಮಧಾನ ಹೊರಹಾಕುತ್ತಿದ್ದಾರೆ. ಪ್ರಮುಖವಾಗಿ ಪ್ರತ್ಯೇಕ ಒಕ್ಕಲಿಗ ಸಭೆಯ ಮೂಲಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ತಮ್ಮ ವಿರೋಧವನ್ನು ಹೊರಹಾಕಿದ್ದರೆ, ಇನ್ನೊಂದೆಡೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಲಿಂಗಾಯತ-ವೀರಶೈವ ಪ್ರತ್ಯೇಕಿಸಿರುವ ಮಾಡಿರುವ ಈ ಗಣತಿಯ ಬದಲಿಗೆ ಮತ್ತೊಮ್ಮೆ ಗಣತಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಕಾಂಗ್ರೆಸ್‌ನ ಹಲವು ಲಿಂಗಾಯತ ಶಾಸಕರು, ಈ ಜಾತಿ ಗಣತಿಯನ್ನು ಮರುಪರಿಶೀಲಿಸಬೇಕು ಎಂದು ಆಗ್ರಹಿಸಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜಾತಿ ಗಣತಿಗೆ ನಮ್ಮ ವಿರೋಧವಿಲ್ಲ. ಆದರೆ ವೀರಶೈವ-ಲಿಂಗಾಯತರನ್ನು ಪ್ರತ್ಯೇಕ ಮಾಡಿ ಗಣತಿ ಮಾಡಲಾಗಿದೆ. ಅದನ್ನು ಸರಿಪಡಿಸಿ ಇನ್ನೊಮ್ಮೆ ಗಣತಿ ಮಾಡಬೇಕು ಎನ್ನುವುದು ನಮ್ಮ ಬೇಡಿಕೆ. ಎಲ್ಲ ಜಾತಿಯಲ್ಲಿ ಜನರು ಹೆಚ್ಚಾಗಿದ್ದಾರೆ. ಅದರಂತೆ ನಮ್ಮ ವೀರಶೈವ, ಲಿಂಗಾಯತರಲ್ಲಿಯೂ ಜನ ಹೆಚ್ಚಾಗಿದ್ದಾರೆ. ಹೀಗಾಗಿ ವೀರಶೈವ-ಲಿಂಗಾಯತರು ಒಡೆದು ಹೋಗಿದ್ದು ಅಂಕಿ ಅಂಶ ಕಡಿಮೆ ಕಾಣಿಸುತ್ತಿದೆ.

**- ಲಕ್ಷ್ಮೀ ಹೆಬ್ಬಾಳ್ಕರ್** ಸಚಿವೆ

**ಜಾತಿ ಗಣತಿಯ ಅಂಕಿ ಅಂಶಗಳನ್ನು ಒಮ್ಮೆ ನೋಡಿದರೆ ಈ ವರದಿ ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಕ್ಷೇಮಕ್ಕಾಗಿ ತಯಾರು ಮಾಡಿಸಿಕೊಂಡಿರುವ ವರದಿಯಂತಿದೆ. ರಾಜ್ಯದಲ್ಲಿ ಏಳು ಕೋಟಿ ಕನ್ನಡಿಗರ ಎಷ್ಟು ಮನೆಗೆ ಹೋಗಿ ಸಮೀಕ್ಷೆ ನಡೆಸಿದ್ದಾರೆ? ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು ಆಗಿರುವ ನಮ್ಮ ತಂದೆಯ ಮನೆಗೆ ಯಾರೂ ಬಂದಿಲ್ಲ. ನಮ್ಮ ಅಜ್ಜ ಮಾಜಿ ಪ್ರಧಾನಿಗಳು. ಅವರ ಮನೆಗೂ ಯಾರೂ ಭೇಟಿ ಕೊಟ್ಟು ಸಮೀಕ್ಷೆ ಮಾಡಿಲ್ಲ. ಪ್ರತಿಯೊಂದು ಕುಟುಂಬದ ಮನೆ ಬಾಗಿಲಿಗೆ ಹೋಗಿ ವೈಜ್ಞಾನಿಕವಾಗಿ ಗಣತಿ ಮಾಡಬೇಕಿತ್ತು. ಆ ರೀತಿ ಆಗಿಲ್ಲ.**

**- ನಿಖಿಲ್ ಕುಮಾರಸ್ವಾಮಿ** ಜೆಡಿಎಸ್ ಯುವ ಘಟಕದ ಅಧ್ಯಕ್ಷ

## ..ಮೆಚ್ಚುಗೆಗಳ ಮಹಾಪೂರ

← ಮೊದಲಪುಟದಿಂದ

ಅನ್ನಪೂರ್ಣ ಅವರು ಈ ಮೊದಲು ಹುಬ್ಬಳ್ಳಿ ಶಹರ ಠಾಣೆ, ಸಿಇಎನ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿ ಸೈ ಎನಿಸಿಕೊಂಡಿದ್ದರು. ಅದಾದ ಬಳಿಕ ಅಶೋಕ ನಗರ ಠಾಣೆಗೆ ವರ್ಗಾವಣೆಗೊಂಡು ಅಲ್ಲಿಯೇ ಕೆಲಸವನ್ನು ಮುಂದುವರಿ ಸಿದ್ದರು. ಈಗ ಐದು ವರ್ಷದ ಬಾಲಕಿಯ ಕೊಲೆ ಕೇಸ್‌ನ ಆರೋಪಿಯ ಎನ್‌ಕೌಂಟರ್ ಮೂಲಕ ರಾಜ್ಯದ ಜನರ ಗಮನ ಸೆಳೆದಿದ್ದಾರೆ.

ಆರೋಪಿ ಹಲ್ಲೆಯಿಂದ ಗಾಯಗೊಂಡಿರುವ ಲೇಡಿ ಸಿಂಗಂ ಅನ್ನಪೂರ್ಣ ಸೇರಿ ಇನ್ನಿಬ್ಬರು ಸಿಬ್ಬಂದಿ ಕೆಎಂಸಿಆರ್‌ಐನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹುಬ್ಬಳ್ಳಿ ಧಾರವಾಡ ಮಹಾನಗರ ಪೊಲೀಸ್ ಘಟಕದಲ್ಲಿ ಇದು ಮೊದಲನೇ ಎನ್‌ಕೌಂಟರ್ ಆಗಿದ್ದು, ಇಂಥ ಕೃತ್ಯ ಎಸಗುವವರಿಗೆ ತಕ್ಕ ಸಂದೇಶ ರವಾನೆಯಾಗಿದೆ ಎಂದು ಸಾರ್ವಜನಿಕರು ಸಂಭ್ರಮಿಸಿದ್ದಾರೆ.

## ಲಾರಿ ಮುಷ್ಕರ ಬಹುತೇಕ ಡೌಟ್

← ಮೊದಲಪುಟದಿಂದ

ಸೋಮವಾರ ಸಂಜೆಯವರೆಗೆ ಸರಕಾರಕ್ಕೆ ರಾಜ್ಯ ಲಾರಿ ಮಾಲೀಕರ ಸಂಘವು ಸಮಯ ನೀಡಿದ್ದವು. ಈ ವೇಳೆ ಸಮಸ್ಯೆ ಬಗೆಹರಿಸುವ ಮಾತಾಡಿದ್ದರೂ ಸ್ಪಷ್ಟ ತೀರ್ಮಾನಕ್ಕೆ ಬಾರದಿರುವುದರಿಂದ ಷಣ್ಮುಗಪ್ಪ ಬೆಂಬಲಿತ ಲಾರಿ ಮಾಲೀಕರ ಸಂಘ ಮುಷ್ಕರ ಮುಂದುವರಿಸಲು ತೀರ್ಮಾನಿಸಿದೆ. ಆದರೆ ಇದಕ್ಕೆ ಕೆಲವರ ವಿರೋಧ ಇರುವುದರಿಂದ ಪೂರ್ಣ ಯಶಸ್ವಿಯಾಗುವುದೇ ಎನ್ನುವ ಗೊಂದಲವಿದೆ.

**ಏರ್‌ಪೋರ್ಟ್ ಟ್ಯಾಕ್ಸಿಗಳು ಬಂದ್:** ಏ.15ರಂದು ಒಂದು ದಿನ ಏರ್‌ಪೋರ್ಟ್ ಟ್ಯಾಕ್ಸಿ ರಸ್ತೆಗಿಳಿಸ ದಿರಲು ಏರ್‌ಪೋರ್ಟ್ ಟ್ಯಾಕ್ಸಿ ಡ್ರೈವರ್ಸ್ ಯೂನಿಯನ್ ನಿರ್ಧರಿಸಿದ್ದು, ಅನಿರ್ದಿಷ್ಟಾವಧಿ ಮುಷ್ಕರದ ಬಗ್ಗೆ ಮುಂದಿನ ದಿನಗಳಲ್ಲಿ ನಿರ್ಧರಿಸಲಿದ್ದಾರೆ. ಒಟ್ಟಾರೆಯಾಗಿ, ಸರಕು ಸಾಗಾಟ ಬಂದ್ ಆದರೆ ದಿನಬಳಕೆ ವಸ್ತುಗಳ ಮೇಲೆ ಬಿಸಿ ತಟ್ಟಲಿದೆ.

## ಡಿಸಿಗೆ ಪತ್ರ ಬರೆದಿರುವುದಕ್ಕೆ ಜನರು ಆತಂಕಪಡಬೇಡಿ

### ನಮ್ಮಿಂದ ಜನರಿಗೆ ಅನಾನುಕೂಲ ಆಗುವುದಿಲ್ಲ: ಪ್ರಮೋದಾದೇವಿ

**ಮೈಸೂರು:** ನಮ್ಮಿಂದ ಜನರಿಗೆ ಯಾವುದೇ ರೀತಿಯ ಅನಾನುಕೂಲ ಆಗುವುದಿಲ್ಲ, ಹಾಗಾಗಿ ಆ ಭಾಗದ ಜನರು ಆತಂಕ ಪಡುವ ಅಗತ್ಯವಿಲ್ಲ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಮಗೆ ಸೇರಿದ ಜಾಗ ಕುರಿತು ಪತ್ರ ಬರೆದ ಕಾರಣಕ್ಕೆ ಆತಂಕ ಪಡಬೇಕಿಲ್ಲ. ಅಲ್ಲಿನ ಜನರಿಗೆ ನಾವು ಯಾವುದೇ ತೊಂದರೆ ಕೊಡಲ್ಲ. ಡಿಸಿ ಅವರು ವರದಿ ಕೊಡಲಿ. ಅದನ್ನು ಬಿಟ್ಟು ಕೆಲವರು ಆತಂಕ ಸೃಷ್ಟಿಸುವ ಕೆಲಸ ಮಾಡಲು ಹೊರಟಿದ್ದಾರೆ. ನಮ್ಮಿಂದ ಅಲ್ಲಿನ ಜನಕ್ಕೆ ತೊಂದರೆ ಆಗಲ್ಲ ಎಂದು ಸ್ಪಷ್ಟಪಡಿಸಿದರು.

5 ಸಾವಿರ ಎಕರೆ ಜಾಗ ವಿಚಾರಕ್ಕೆ ಚಾಮರಾಜನಗರ ಡಿಸಿಗೆ ಪತ್ರ ಬರೆದ ವಿಚಾರ ಕುರಿತು ಸ್ಪಷ್ಟನೆ ನೀಡಿದ ಅವರು, ನಮ್ಮ ಆಸ್ತಿ ಬಗ್ಗೆ ಡಿಸಿ ಅವರಿಗೆ ತಿಳಿಸಿದ್ದೇವೆ. ಡಿಸಿ ಅವರಿಂದ ವರದಿ ಬರಲಿ. ಅಲ್ಲಿನ ಜನರು ಯಾವುದೇ ಕಾರಣಕ್ಕೂ ಆತಂಕ ಪಡುವ ಅಗತ್ಯವಿಲ್ಲ ಎಂದರು.

ಚಾಮರಾಜನಗರ 5 ಸಾವಿರ ಎಕರೆ ಜಾಗದ ವಿಚಾರ ಸಂಬಂಧ ನಮಗೆ ಸೇರಿದ ಜಾಗಕ್ಕೆ ಎಲ್ಲಾ ದಾಖಲೆಗಳಿವೆ. ಜನರಲ್ಲಿ ಯಾಕೆ ಆತಂಕ ಸೃಷ್ಟಿ ಆಯಿತು ಗೊತ್ತಿಲ್ಲ. ನಮ್ಮ ಕಡೆಯಿಂದ ಎಲ್ಲಾ ದಾಖಲೆಗಳನ್ನು 2014ರಲ್ಲೇ ಕೊಟ್ಟಿದ್ದೇವೆ. ಡಿಸಿ ಏನು ಗೊತ್ತಿಲ್ಲ ದಾಖಲೆ ಇಲ್ಲ ಅನ್ನೋಕೆ ಆಗಲ್ಲ. ನಾವು ಮೊನ್ನೆ ಕೂಡ ಜಾಗಕ್ಕೆ ಸಂಬಂಧಪಟ್ಟ ದಾಖಲೆ ಕೊಟ್ಟಿದ್ದೇವೆ. ನಮಗೆ ಸೇರಿದ ಜಾಗಕ್ಕೆ ಎಲ್ಲಾ ದಾಖಲೆಗಳಿವೆ. ಅದನ್ನು ಕಂದಾಯ ಭೂಮಿ ಮಾಡಬೇಡಿ ಎಂದು ಮನವಿ ಮಾಡಿದ್ದೇವೆ. ಗ್ರಾಮಸ್ಥರು ಆತಂಕಪಡಬಾರದು. ಏನೇ ಸಮಸ್ಯೆ ಇದ್ದರೂ ನಮ್ಮನ್ನು ಭೇಟಿ ಮಾಡಿ. ನಮ್ಮ ಕಚೇರಿಗೆ ಬನ್ನಿ ಎಂದು ತಿಳಿಸಿದರು.

ರಾಜರಿಂದ ಗಿಫ್ಟ್ ಕೊಟ್ಟಿರೋ ದಾಖಲೆ ಇದ್ದರೆ ತೊಂದರೆ ಇಲ್ಲ. ಇಲ್ಲದಿದ್ದರೂ ಅಂತವರಿಗೆ ತೊಂದರೆ ಇಲ್ಲ. ಕಂದಾಯ ಗ್ರಾಮಕ್ಕೆ ನಮ್ಮ ವಿರೋಧವಿದೆ. ಅದರಲ್ಲಿ ನಮ್ಮ ಜಮೀನು ಇದೆ ಅಂತ ಅರ್ಜಿ ಹಾಕಿದ್ದೇವೆ. ನಮ್ಮ ಗಮನಕ್ಕೆ ಕಂದಾಯ ಗ್ರಾಮದ ಬಗ್ಗೆ ಯಾರೂ ಮಾಹಿತಿ ನೀಡಿಲ್ಲ, ಅದಕ್ಕಾಗಿ ತಕರಾರು ಅರ್ಜಿ ಹಾಕಿದ್ದೇವೆ ಎಂದರು.

**ಚಾಮರಾಜನಗರದ ಜನರು ದಾಖಲೆಗಳಿದ್ದರೆ ಅರಮನೆಗೆ ಬಂದು ಕೊಡಲಿ. ಎಲ್ಲರನ್ನೂ ಮುಕ್ತವಾಗಿ ನೋಡುತ್ತೇವೆ. ಜನರಿಗೆ ಯಾವುದೇ ತೊಂದರೆ ಆಗದಂತೆ ನಾವು ನೋಡಿಕೊಳ್ಳುತ್ತೇವೆ. ಕಂದಾಯ ವ್ಯಾಪ್ತಿಗೆ ಯಾವ ಯಾವ ಜಮೀನು ಬರುತ್ತದೆ ಎಂದು ಗೊತ್ತಿಲ್ಲ. ಜಿಲ್ಲಾಡಳಿತದಿಂದ ಯಾರೂ ಕೂಡ ಈ ಬಗ್ಗೆ ಮಾಹಿತಿ ನೀಡಿಲ್ಲ. ಈ ಬಗ್ಗೆ ನಾವೇ ಡಿಸಿಗೆ ಒಂದು ಮೆಸೇಜ್ ಹಾಕಿದ್ದೇವೆ. ನನ್ನ ಮೆಸೇಜ್ ಗೆ ಡಿಸಿ ರಿಪ್ಲೇ ಕೂಡ ಮಾಡಿಲ್ಲ.**

**-ಪ್ರಮೋದಾದೇವಿ ಒಡೆಯರ್**
ಮೈಸೂರು ರಾಜವಂಶಸ್ಥೆ

# ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ 16, 17ರಂದು ಸಿಇಟಿ

## ಬೆಂಗಳೂರು, ಮಂಗಳೂರು, ವಿಜಯಪುರ, ಬೆಳಗಾವಿ ನಗರ ಸೇರಿ ಒಟ್ಟು ಐದು ಕೇಂದ್ರಗಳಲ್ಲಿ ಆಯೋಜನೆ

**ಬೆಂಗಳೂರು:** ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸುವ ಸಿಇಟಿ 2025ನೇ ಸಾಲಿನ ಪರೀಕ್ಷೆಯು ಏ.16 ಹಾಗೂ 17ರಂದು ನಡೆಯಲಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದರು.

ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ ಏ.15 ರಂದು ಕನ್ನಡ ಭಾಷಾ ಪರೀಕ್ಷೆಯು ಬೆಂಗಳೂರು ಮಂಗಳೂರು, ವಿಜಯಪುರ ಮತ್ತು ಬೆಳಗಾವಿ ನಗರಗಳ ಒಟ್ಟು ಐದು ಕೇಂದ್ರಗಳಲ್ಲಿ ನಡೆಯಲಿದೆ. ಏ.16ರಂದು ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ಹಾಗೂ ಏ.17ರಂದು ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪರೀಕ್ಷೆಗಳು ನಡೆಯಲಿದ್ದು, ಹಿಂದೆಂದಿಗಿಂತ ಹೆಚ್ಚು ಬಿಗಿ ಬಂದೋಬಸ್ತ್ ಮಾಡಲಾಗಿದೆ ಎಂದರು.

ಪರೀಕ್ಷಾ ಅಕ್ರಮಗಳನ್ನು ತಡೆಯುವ ಉದ್ದೇಶದಿಂದ ನೇಮಕಾತಿ ಪರೀಕ್ಷೆಗಳಿಗೆ ಮಾಡುವ ಹಾಗೆ ಈ ಪರೀಕ್ಷೆಗೂ ಕ್ಯಾಮರಾ ಕಣ್ಗಾವಲು ಇರಲಿದೆ. ವೆಬ್ ಕಾಸ್ಟಿಂಗ್ ಮೂಲಕ ಎಲ್ಲ 775 ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಿದ್ದು, ಹೆಚ್ಚು ಕಟ್ಟೆಚ್ಚರ ವಹಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪರೀಕ್ಷೆಗಳ ಮೇಲುಸ್ತುವಾರಿ ನಡೆಸಲಿದ್ದಾರೆ.

**ಎಲ್ಲರೂ ಸಿಇಟಿ ಬರೆಯಲು ಅರ್ಹ:** ನಕಲಿ ಅಭ್ಯರ್ಥಿಗಳಿಗೆ ಸಂಪೂರ್ಣ ಕಡಿವಾಣ ಹಾಕಲಾಗಿದ್ದು, ಕಷ್ಟಪಟ್ಟು ಓದಿದ ಅಭ್ಯರ್ಥಿಗಳಿಗೆ ಯಾವುದೇ ಮೋಸ ಆಗಲು ಬಿಡುವುದಿಲ್ಲ. ಅತ್ಯಂತ ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಎಲ್ಲ ರೀತಿಯ ತಯಾರಿ ಮಾಡಿಕೊಂಡಿದ್ದು, ನಿಶ್ಚಿಂತೆಯಿಂದ ಪರೀಕ್ಷೆ ಬರೆಯಬಹುದಾಗಿದೆ. ದ್ವಿತೀಯ ಪಿಯುಸಿ ಮೊದಲ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದಿರುವ ಅಥವಾ ಅನುತ್ತೀರ್ಣರಾಗಿರುವವರಿಗೆ ಇನ್ನೂ ಫಲಿತಾಂಶವನ್ನು ಉತ್ತಮ ಮಾಡಿಕೊಳ್ಳಲು ಅವಕಾಶ ಇರುವ ಕಾರಣ ಯಾರೂ ಸಿಇಟಿಬರೆಯುವುದನ್ನು ತಪ್ಪಿಸಿಕೊಳ್ಳಬಾರದು. ಹೀಗಾಗಿ ಯಾರೆಲ್ಲ ಶುಲ್ಕ ಪಾವತಿಸಿದ್ದೀರೊ ಅವರೆಲ್ಲರೂ ಪ್ರವೇಶ ಪತ್ರ ಡೌನ್ ಲೋಡ್ ಮಾಡಿಕೊಂಡು ಪರೀಕ್ಷೆ ಬರೆಯಬೇಕು. ದ್ವಿತೀಯ ಪಿಯುಸಿಯ 3ನೇ ಪರೀಕ್ಷೆಯ ಅಂಕಗಳನ್ನು ಪಡೆದು ರಾಂಕ್ ಕೊಡುವವ್ಯವಸ್ಥೆ ಕೂಡ ಇದ್ದು, ಯಾರೂ ಇದರಿಂದ ಅವಕಾಶ ವಂಚಿತರಾಗಬಾರದು ಎಂದು ಎಚ್.ಪ್ರಸನ್ನ ಸಲಹೆ ನೀಡಿದ್ದಾರೆ.

### ಒಂದೂವರೆ ಗಂಟೆ ಮುಂಚೆ ತಪಾಸಣೆ

**ಪೊಲೀಸ್/ ಗೃಹ ರಕ್ಷಕ ದಳದ ಸಿಬ್ಬಂದಿ ಅಭ್ಯರ್ಥಿಗಳನ್ನು ತೀವ್ರ ತಪಾಸಣೆ ಮಾಡಿಯೇ ಪರೀಕ್ಷಾ ಕೇಂದ್ರದೊಳಗೆ ಬಿಡಲಿದ್ದು, ಕನಿಷ್ಠ ಒಂದೂವರೆ ಗಂಟೆ ಮುಂಚೆಯೇ ಪರೀಕ್ಷಾ ಕೇಂದ್ರಕ್ಕೆ ಅಭ್ಯರ್ಥಿಗಳು ಬಂದು ತಪಾಸಣೆಗೆ ಒಳಗಾಗಬೇಕಿದೆ. ಅಭ್ಯರ್ಥಿಯ ಮುಖ ಚಹರೆ ಮತ್ತು ಕ್ಯೂಆರ್ ಕೋಡ್ ವ್ಯವಸ್ಥೆ ಮೂಲಕ ಅಭ್ಯರ್ಥಿಯ ನೈಜತೆ ಪರಿಶೀಲನೆ ಮಾಡಲಾಗಲಿದೆ. ಸೀಟು ಹಂಚಿಕೆಯಾಗಿ ಕಾಲೇಜುಗಳಿಗೆ ಪ್ರವೇಶ ಆಗುವ ಸಂದರ್ಭದಲ್ಲಿ ಕೂಡ ಅಭ್ಯರ್ಥಿಯ ಭಾವಚಿತ್ರವನ್ನು ಹೋಲಿಕೆ ಮಾಡಿಯೇ ಪ್ರವೇಶ ನೀಡುವ ವ್ಯವಸ್ಥೆ ಜಾರಿಯಲ್ಲಿರಲಿದೆ ಎಂದು ಎಚ್ .ಪ್ರಸನ್ನ ತಿಳಿಸಿದರು.**

### ಅಭ್ಯರ್ಥಿಗಳಿಗೆ ವಸ್ತ್ರ ಸಂಹಿತೆ

**ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಪ್ರತ್ಯೇಕ ವಸ್ತ್ರ ಸಂಹಿತೆ ಮಾಡಿದ್ದು, ಕಡ್ಡಾಯವಾಗಿ ಎಲ್ಲರೂ ಪಾಲಿಸಬೇಕು. ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಅರ್ಧ ತೋಳಿನಬಟ್ಟೆ ಧರಿಸಬೇಕು. ಸಾಧ್ಯವಾದಷ್ಟು ಕಾಲರ್ ಇಲ್ಲದಿರುವುದನ್ನು ಹಾಕಿಕೊಂಡು ಬಂದರೆ ಉತ್ತಮ. ಪುರುಷರು, ಜೇಬು ಇಲ್ಲದ ಅಥವಾ ಕಡಿಮೆ ಜೇಬುಗಳಿರುವ ಸರಳ ಪ್ಯಾಂಟ್ ಧರಿಸಬೇಕು. ಕುರ್ತಾ ಪೈಜಾಮ, ಜೀನ್ಸ್ ಪ್ಯಾಂಟ್ ಗೆ ಅವಕಾಶ ಇರುವುದಿಲ್ಲ. ಶೂ ಕೂಡ ನಿಷೇಧಿಸಲಾಗಿದೆ. ಮೊಬೈಲ್, ಪೆನ್ ಡ್ರೈವ್, ಇಯರ್ ಫೋನ್, ಮೈಕ್ರೋ ಫೋನ್ ಇತ್ಯಾದಿ ಎಲೆಕ್ಟ್ರಾನಿಕ್ ವಸ್ತುಗಳನ್ನು ಸಂಪೂರ್ಣ ನಿಷೇಧಿಸಲಾಗಿದೆ. ಒಮ್ಮೆ ಕೆಇಎ ವೆಬ್ ಸೈಟ್ ನಲ್ಲಿ ಇರುವ ವಸ್ತ್ರ ಸಂಹಿತೆಯ ವಿವರಗಳನ್ನು ಓದಿಕೊಂಡು, ಆ ಪ್ರಕಾರ ಪರೀಕ್ಷೆಗೆ ಬರಬೇಕು ಎಂದು ಎಚ್.ಪ್ರಸನ್ನ ಹೇಳಿದ್ದಾರೆ.**

## ಟ್ವೀಟೂ-ಖಾರಾ

**ಕಾಂಗ್ರೆಸ್, ಕರ್ನಾಟಕ**

ಸರಕಾರ ಪ್ರತಿ ಬಡ ಕುಟುಂಬದ ಆರ್ಥಿಕ ಅಭಿವೃದ್ಧಿಗೆ ಗ್ಯಾರಂಟಿ ಯೋಜನೆಗಳ ಮೂಲಕ ವರ್ಷಕ್ಕೆ 52 ಸಾವಿರ ಕೋಟಿ ವ್ಯಯಿಸುತ್ತಿದೆ. ಯಾರು ಏನೇ ಕೂಗಾಡಲಿ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ.

**ಆನಂದ ಬಿ.ಟಿ.,**

ಇದೇ ರೀತಿಯಲ್ಲಿ ದೇಶಾದ್ಯಂತ ಭಜನೆ ಮಾಡಿ ಮಾಡಿ ಎಲ್ಲಾ ರಾಜ್ಯಗಳಲ್ಲಿ ಸೋತು ಸುಣ್ಣವಾಗಿದೆ. ದೆಹಲಿಯಲ್ಲಿ ಒಂದು ಸ್ಥಾನ ಗೆಲ್ಲದೆ ಕಾಂಗ್ರೆಸ್ ಪಕ್ಷ ಮುಕ್ತ ರಾಜ್ಯ ವಾಗಿದೆ. ದೇಶಾದ್ಯಂತ ಕಾಂಗ್ರೆಸ್ ಪಕ್ಷದ ಆಡಳಿತ ಇರುವುದು ಕೇವಲ 3 ರಾಜ್ಯಗಳು.. ಹೀಗೆ ಹೇಳಲು ನಾಚಿಕೆಯಾಗ ಬೇಕು.

ವಿಶ್ವವಾಣಿ ಕ್ಲಬ್ ಹೌಸ್
15.04.2025
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಶ್ರೀ ರಾಜ್ ಆಚಾರ್ಯ
ವಿಷಯ
ಮಾತಿನ ಮನೆಯಲ್ಲಿ ಮೌಖಿಕ ಕಾವ್ಯ ಮೈಲಾರಲಿಂಗನ ಕಾವ್ಯ..

vishwavani.news

## ಸಮಾಚಾರ ಸಣ್ಣದಲ್ಲ

### ಜಾತಿಗಣತಿ: ಅಗತ್ಯ ಬಿದ್ದರೆ ಮರುಪರಿಶೀಲನೆ

**ಹಾಸನ:** ಜಾತಿಗಣತಿ ವರದಿ ಬಗ್ಗೆ ಯಾರಾದರೂ ಆಕ್ಷೇಪ ವ್ಯಕ್ತಪಡಿಸಿದರೆ ಆ ಅಂಶಗಳನ್ನು ಪರಿಶೀಲಿಸ ಲಾಗುವುದು. ಮರುಪರಿಶೀಲನೆಯ ಅಗತ್ಯವಿದ್ದರೆ, ಆ ಬಗ್ಗೆಯೂ ಚಿಂತನೆ ನಡೆಸಬಹುದು ಎಂದು ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸ್ವಾಮೀಜಿಗಳ ಬಳಿ ಇಲ್ಲಿಯವರೆಗೆ ಅಂಕಿ- ಸಂಖ್ಯೆ ಲಭ್ಯವಿತ್ತೇ? ಈಗ ಸ್ವಾಮೀಜಿಗಳು ಮಾತ್ರವಲ್ಲ, ಪ್ರತಿಯೊಬ್ಬರೂ ಈ ವರದಿಯನ್ನು ಪರಾಮರ್ಶಿಸಬಹುದು ಎಂದರು. ಇನ್ನೂ ಏನನ್ನೂ ತೀರ್ಮಾನಿಸಿಲ್ಲ, ಸಚಿವ ಸಂಪುಟದ ಚರ್ಚೆಯ ನಂತರ ಬರುವ ಅಭಿಪ್ರಾಯ ಗಳನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುವುದು. ಬಿಜೆಪಿ ಯವರಿಗೆ ಏನು ಗೊತ್ತಿದೆ? ವಿರೋಧ ಪಕ್ಷದವರು ನಾವು ಮಾಡಿದ್ದೆಲ್ಲವೂ ಸರಿ ಎಂದು ಒಪ್ಪಿಕೊಳ್ಳುತ್ತಾರೆ ಎಂದು ನಾವು ನಿರೀಕ್ಷಿಸುವುದಿಲ್ಲ ಎಂದರು.

### ಜಾತಿಗಣತಿ ಅವೈಜ್ಞಾನಿಕ ಪಾರದರ್ಶಕವಾಗಿಲ್ಲ

**ದಾವಣಗೆರೆ:** ಯಾರ ಮನೆಗೆ ಬಂದು ಜಾತಿ ಗಣತಿ ನಡೆಸಿದ್ದಾರೆ? ರಾಜ್ಯ ಸರಕಾರ ನಡೆಸಿರುವ ಜಾತಿ ಗಣತಿಯು ಪಾರದರ್ಶಕವಾಗಿಲ್ಲ, ಅದು ಅವೈಜ್ಞಾನಿಕ ವಾಗಿದೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಆರೋಪಿಸಿದ್ದಾರೆ. ಸುದ್ದಿಗಾರ ರೊಂದಿಗೆ ಮಾತನಾಡಿ, ಈ ಅವೈಜ್ಞಾನಿಕ ಜಾತಿ ಗಣತಿಯಿಂದ ಮುಸ್ಲಿಮರ ಸಂಖ್ಯೆ ರಾಜ್ಯದಲ್ಲಿ ಹೆಚ್ಚಾಗಿದೆ. ಅವರಿಗಿದ್ದ ಶೇ.4 ರಷ್ಟು ಮೀಸಲಾತಿ ಯನ್ನು ಶೇ.8ಕ್ಕೆ ಸರಕಾರ ಹೆಚ್ಚಿಸುತ್ತಿದೆ. ಬಹು ಸಂಖ್ಯಾತರಾದ ಅವರಿಗೆ ಮೀಸಲಾತಿ ಯಾಕೆ ಬೇಕು ಎಂದು ಪ್ರಶ್ನಿಸಿದರು. ಸರಕಾರ ವೀರಶೈವ- ಲಿಂಗಾಯತರನ್ನ ಒಡೆಯುವ ಕೆಲಸ ಮಾಡುತ್ತಿದೆ. ಕಾಂಗ್ರೆಸ್ ಸರಕಾರದ ಭಾಗವಾಗಿಯೇ ಇರುವ ಶಾಮನೂರು ಶಿವಶಂಕರಪ್ಪ, ಎಂ.ಬಿ. ಪಾಟೀಲ್, ಡಿ.ಕೆ. ಶಿವಕುಮಾರ್ ಅವರೇ ಜಾತಿ ಗಣತಿಗೆ ವಿರೋಧ ಮಾಡುತ್ತಿದ್ದಾರೆ. ಯಾವಾಗ ಜಾತಿ ಜನಗಣತಿ ಬಿಡುಗಡೆ ಮಾಡುತ್ತೋ ಅವಾಗ್ಲೆ ಸರಕಾರವೂ ಪತನವಾಗುತ್ತೆ ಎಂದು ಭವಿಷ್ಯ ನುಡಿದರು. ಸೂರ್ಯ, ಚಂದ್ರ ಇರುವುದು ಎಷ್ಟು ಸತ್ಯವೋ ಪವರ್ ಶೇರಿಂಗ್ ಆಗಿರೋದು ಅಷ್ಟೇ ಸತ್ಯ. ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಸಿದ್ದರಾಮಯ್ಯ ಅಧಿಕಾರ ಹಸ್ತಾಂತರ ಮಾಡ್ತಾರೆ. ಜಾತಿ ಜನಗಣತಿ ಬಿಡುಗಡೆ ಮಾಡಿದರೆ ಕಾಂಗ್ರೆಸ್ ಸರಕಾರ ನೂರಕ್ಕೆ ನೂರರಷ್ಟು ಪತನ ಆಗುತ್ತೆ ಎಂದು ಹೇಳಿದರು.

### ತಂದೆ ಎದೆಗೆ ಚೂರಿ ಹಾಕಿ ಕೊಂದ ಮಗ

**ಮೈಸೂರು:** ಮೊಬೈಲ್ ವಿಚಾರಕ್ಕೆ ನಡೆದ ಗಲಾಟೆ ಯೊಂದು ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. 2ನೇ ಹೆಂಡತಿಯ ಮಗ ತಂದೆ ಎದೆಗೆ ಚೂರಿ ಹಾಕಿ ಕೊಂದು ಪರಾರಿಯಾ ಗಿದ್ದಾನೆ. ಭಾನುವಾರ ತಡರಾತ್ರಿ ಮೈಸೂರಿನ ಶಾಂತಿನಗ ರದಲ್ಲಿ ಘಟನೆ ನಡೆದಿದೆ. ಸೈಯದ್ ಮುತ್ತಿಫ್ (35) ಕೊಲೆಯಾದ ತಂದೆ, ಮತೀನ್ (21) ಕೊಲೆ ಮಾಡಿದ ಮಗ. 2ನೇ ಹೆಂಡತಿ ಪುತ್ರನಾದ ಮತೀನ್ ಮನೆಗೆ ಬರುವಂತೆ ಕರೆ ಮಾಡಿದ್ದಾನೆ. ಆದರೆ ತಂದೆ ಮನೆಗೆ ಬರುತಿದ್ದಂತೆ ಎದೆಗೆ ಚೂರಿಯಿಂದ ಚುಚ್ಚಿ ಕೊಲೆ ಮಾಡಿ, ಅಲ್ಲಿಂದ ಪರಾರಿಯಾಗಿದ್ದಾನೆ. ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

---

ದೇಶಾದ್ಯಂತ ಜಾರಿಯಾದರೆ ಮೋದಿಯನ್ನು ನಾನೇ ಅಭಿನಂದಿಸುವೆ ; ಸಿಎಂ | ಬಿಜೆಪಿ ಅವಧಿಯಲ್ಲಿಯೇ ಎಸ್‌ಸಿಪಿ-ಟಿಎಸ್‌ಪಿ ಅನುದಾನ ದುರ್ಬಳಕೆ | ಅವಕಾಶ ವಂಚಿತರ ಪರ ಹೋರಾಟಕ್ಕೆ ಜೀವನ ಮುಡಿಪಾಗಿಡಬೇಕು

# ದೇಶಾದ್ಯಂತ ಎಸ್‌ಸಿಪಿ ಟಿಎಸ್‌ಪಿ ಜಾರಿಗೊಳಿಸಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಲಿತರ ಅಭಿವೃದ್ಧಿಗೆ ಕೇಂದ್ರ ಸರಕಾರ ಎಸ್‌ಸಿಪಿ-ಟಿಎಸ್‌ಪಿ ಅನುದಾನವನ್ನು ದೇಶಾದ್ಯಂತ ಜಾರಿಗೊಳಿಸಬೇಕು ಎನ್ನುವ ಒತ್ತಡವನ್ನು ಮತ್ತೊಮ್ಮೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರಕಾರ ಮೇಲೆ ಹಾಕಿದ್ದಾರೆ. ಒಂದು ವೇಳೆ ಈ ಕಾಯಿದೆಯನ್ನು ದೇಶಾದ್ಯಂತ ಜಾರಿಗೊಳಿಸಿದರೆ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾನೇ ಮೊದಲಿಗೆ ಅಭಿನಂದಿಸುವೆ ಎಂದಿದ್ದಾರೆ.

ವಿಧಾನಸೌಧದಲ್ಲಿ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶಾದ್ಯಂತ ಎಸ್‌ಸಿಪಿ, ಟಿಎಸ್‌ಪಿ ಕಾನೂನುಗಳನ್ನು ಜಾರಿಗೆ ಮಾಡಿದರೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಮೊದಲಿಗನಾಗಿ ನಾನು ಧನ್ಯವಾದ ಹೇಳುತ್ತೇನೆ. ದೇಶದಲ್ಲಿ ಆಂಧ್ರಪ್ರದೇಶ ಹೊರತುಪಡಿಸಿದರೆ ಕರ್ನಾಟಕ ಸರಕಾರ ಎರಡನೆಯದಾಗಿ ಎಸ್ ಸಿಪಿ, ಟಿಎಸ್ ಪಿ ಜಾರಿಗೆ ತಂದಿದೆ. ಜನಸಂಖ್ಯೆಗನುಗುಣವಾಗಿ ಹಣ ಬಳಕೆ ಮಾಡುತ್ತಿದ್ದೇವೆ. ಇದನ್ನು ಮರೆಮಾಚಲು ಬಿಜೆಪಿಯವರು ಪರಿಶಿಷ್ಟರ ಅಭಿವೃದ್ಧಿಗೆ ಹಣವನ್ನು ಬೇರೆ ರೀತಿ ವರ್ಗಾವಣೆ ಮಾಡಲಾಗಿದೆ ಎಂದು ಟೀಕೆ ಮಾಡುತ್ತಿದ್ದಾರೆ. ಇಂತಹ ಹೇಳಿಕೆಗಳನ್ನು ನೀಡಲು ಬಿಜೆಪಿಯವರಿಗೆ ನಾಚಿಕೆಯಾಗಬೇಕು ಎಂದು ವಾಗ್ದಾಳಿ ನಡೆಸಿದರು.

**ಸಮಾನತೆ ನೀಡುವುದು ನಮ್ಮ ಆಶಯ:** ಮಹಿಳೆಯರಿಗೆ, ಪರಿಶಿಷ್ಟರಿಗೆ, ಶೋಷಿತರಿಗೆ ಸಮಾನತೆ ನೀಡುವ ಆಶಯವನ್ನು ಸಂವಿಧಾನ ಹೊಂದಿದೆ. ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವದ ಉದ್ದೇಶ ಕೂಡ ಸಮಾನತೆಯಾಗಿದೆ. ಈ ನಿಟ್ಟಿನಲ್ಲಿ ನಮ್ಮ ಸರಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಿವೆ. ಜನರಿಗೆ ಖರೀದಿಸುವ ಶಕ್ತಿ ಇಲ್ಲದೇ ಹೋದರೆ ಆರ್ಥಿಕ ಚಟುವಟಿಕೆಗಳು ಕುಸಿಯುತ್ತದೆ. ಜಾತಿ ವ್ಯವಸ್ಥೆಗೆ ಚಲನಶೀಲತೆ ಇಲ್ಲ, ವಿದ್ಯಾವಂತರೇ ಜಾತಿ ಮಾಡುತ್ತಿದ್ದಾರೆ. ಅಂಬೇಡ್ಕರ್‌ರವರು ತಮ್ಮ ಜ್ಞಾನದಿಂದ ಶೋಷಣೆ ಮುಕ್ತ ಸಮಾಜ ನಿರ್ಮಿಸಲು ಬಳಕೆ ಮಾಡಿದ್ದರು. ಅಂಬೇಡ್ಕರವರ ಮೂಲಮಂತ್ರ ಹಾಗೂ ಆಶಯಗಳನ್ನು ಎಲ್ಲರೂ ಪಾಲನೆ ಮಾಡಬೇಕು. ಪ್ರತಿಯೊಬ್ಬರೂ ವಿದ್ಯಾವಂತರಾಗಬೇಕು. ಸಂಘಟಿತರಾಗಬೇಕು. ಅಂಬೇಡ್ಕರ್ ಇಲ್ಲದಿದ್ದರೆ ಶೋಷಿತರಿಗೆ ನ್ಯಾಯ ಸಿಗುತ್ತಿರಲಿಲ್ಲ ಎಂದರು.

**ಸಂವಿಧಾನ ಪೀಠ ಸ್ಥಾಪನೆ:** ಮುಂದಿನ ದಿನದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂವಿಧಾನ ಪೀಠ ಸ್ಥಾಪಿಸಲಾಗುವುದು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಂಬೇಡ್ಕರ್ ವಸ್ತುಪ್ರದರ್ಶನ ಆರಂಭಿಸಿ, ಎಲ್ಲಿಯೂ ಇಲ್ಲದಷ್ಟು ದೊಡ್ಡ ಪ್ರತಿಮೆಯನ್ನು ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು. ಶಿಕ್ಷಣಕ್ಕೆ ಒತ್ತು ನೀಡಬೇಕೆಂಬ ಸಲುವಾಗಿ ಪ್ರತಿ ಹೋಬಳಿಗೊಂದು ವಸತಿ ಶಾಲೆ ಆರಂಭಿಸಲು ನಿರ್ಧರಿಸಲಾಗಿದೆ. ಈ ವರ್ಷ 26 ವಸತಿ ಶಾಲೆಗಳನ್ನು ಮಂಜೂರು ಮಾಡಿದ್ದೇವೆ. ಬಡವರ ಮಕ್ಕಳು ಕೂಡ ವೈದ್ಯರು, ಎಂಜಿನಿಯರುಗಳಾಗಬೇಕು. ಇದೇ ನಮ್ಮ ಸರಕಾರದ ಆಶಯ. ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣ ಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆಯಿತ್ತು. ಈ ಹಿನ್ನೆಲೆಯಲ್ಲಿ 13 ಡಿಸಿಆಇರ್ ಪೊಲೀಸ್ ಠಾಣೆಗಳನ್ನು ಸೋಮವಾರ ಮಧ್ಯರಾತ್ರಿಯಿಂದಲೇ ಆರಂಭಿಸಲಾಗಿದೆ ಎಂದರು.

ಇದಕ್ಕೂ ಮೊದಲು ಮುಖ್ಯಮಂತ್ರಿಯವರು ವಿಧಾನಸೌಧದ ಮುಂದಿನ ಅಂಬೇಡ್ಕರ್‌ರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಮಾಹಿತಿ ಸೌಧದ ಸಮೀಪ ಅಂಬೇಡ್ಕರ್ ಸ್ಫೂರ್ತಿ ಸೌಧಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಎಚ್.ಸಿ.ಮಹದೇವಪ್ಪ, ಕೆ.ಎಚ್. ಮುನಿಯಪ್ಪ, ಶಾಸಕರಾದ ರಿಜ್ವಾನ್ ಅರ್ಷದ್, ಪಿ. ಎಂ.ನರೇಂದ್ರಸ್ವಾಮಿ ಮತ್ತಿತರರಿದ್ದರು.



ವಿಧಾನಸೌಧದಲ್ಲಿ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗಿಡಕ್ಕೆ ನೀರೆರೆದು ಉದ್ಘಾಟಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಎಚ್.ಸಿ.ಮಹದೇವಪ್ಪ, ಕೆ.ಎಚ್.ಮುನಿಯಪ್ಪ, ಶಾಸಕರಾದ ರಿಜ್ವಾನ್ ಅರ್ಷದ್, ಪಿ. ಎಂ.ನರೇಂದ್ರಸ್ವಾಮಿ ಮತ್ತಿತರರಿದ್ದರು.

> ಬಿಜೆಪಿ ಆಡಳಿತದಲ್ಲಿರುವ ಯಾವ ರಾಜ್ಯದಲ್ಲಿ ಎಸ್‌ಸಿಪಿ, ಟಿಎಸ್‌ಪಿ ಕಾಯಿದೆ ಜಾರಿಗೊಳಿಸಿಲ್ಲ. ಟೀಕೆ ಮಾಡುವ ಬಿಜೆಪಿಯು ಕೇಂದ್ರದಲ್ಲಿ ಕೇಂದ್ರದಲ್ಲಿ ಎಸ್ ಸಿಪಿ, ಟಿಎಸ್ ಪಿಯನ್ನು ಜಾರಿಗೊಳಿಸಲಿ. ನಮ್ಮ ಸರಕಾರ ಕಾಯಿದೆ ತಂದ ಪರಿಣಾಮ ಈ ವರ್ಷ 32 ಸಾವಿರ ಕೋಟಿ ರು.ಗಳನ್ನು ನಿಗದಿ ಮಾಡಲಾಗಿದೆ. ಆದರೆ ಬಿಜೆಪಿಯವರು ಎಸ್‌ಸಿಪಿ, ಟಿಎಸ್‌ಪಿ ಅನುದಾನ 8300 ಕೋಟಿ ರು. ದುರುಪಯೋಗಪಡಿಸಿಕೊಂಡಿದ್ದಾರೆ. ಬಿಜೆಪಿಯವರು ಸಾಮಾಜಿಕ ನ್ಯಾಯ ಹಾಗೂ ಸಂವಿಧಾನಕ್ಕೆ ವಿರುದ್ಧವಾಗಿದ್ದಾರೆ.
>
> ಸಿದ್ದರಾಮಯ್ಯ, ಮುಖ್ಯಮಂತ್ರಿ

### ನೆಹರು ವಿರೋಧಿಸಲಿಲ್ಲ

ಬಿಜೆಪಿಯವರು ಜವಾಹರಲಾಲ್ ನೆಹರೂ ಅವರನ್ನು ವಿರೋಧಿಸುತ್ತಾರೆ. ಅಂಬೇಡ್ಕರ್ ಅವರನ್ನು ನೆಹರೂ ವಿರೋಧಿಸಲಿಲ್ಲ. ಹಾಗಿದ್ದರೆ, ಅಂಬೇಡ್ಕರ್ ಅವರನ್ನು ಸಂವಿಧಾನ ಬರೆಯಲು ಆಯ್ಕೆ ಮಾಡುತ್ತಿರಲಿಲ್ಲ. ಹಿಂದೂ ಕೋಡ್ ಬಿಲ್ ತಂದಾಗ ನೆಹರೂ ಅದರ ಪರವಾಗಿಯೇ ಇದ್ದರು. ನಮ್ಮಲ್ಲಿರುವ ಕೆಲವು ಶಕ್ತಿಗಳು ನೆಹರೂ ಅವರು ಅದನ್ನು ಜಾರಿ ಮಾಡಲು ಬಿಡಲಿಲ್ಲ. ಆದರೆ ಹಿಂದೂ ಕೋಡ್ ಬಿಲ್‌ನಲ್ಲಿರುವ ಅಂಶಗಳನ್ನು ನೆಹರೂ ಅವರು ಅವರ ಅಧಿಕಾರದ ಅವಧಿಯಲ್ಲಿ ಜಾರಿ ಮಾಡುವ ಪ್ರಯತ್ನ ಮಾಡಿದ್ದರು ಎಂದು ಸಿದ್ದರಾಮಯ್ಯ ಹೇಳಿದರು.

---

ಇಡೀ ಕರ್ನಾಟಕದ ಹಿಂದುಗಳು ನನ್ನ ಜತೆ ಇದ್ದಾರೆ: ಯತ್ನಾಳ

# ನನ್ನನ್ನು ಮುಗಿಸಲು ಯಾರಿಂದಲೂ ಆಗಲ್ಲ

**ವಿಜಯಪುರ:** ನನ್ನನ್ನು ಮುಗಿಸಲು ಯಾರಿಗೂ ಆಗಲ್ಲ, ಇಡೀ ಕರ್ನಾಟಕದ ಹಿಂದುಗಳು ನನ್ನ ಜತೆ ಇದ್ದಾರೆ. ನನ್ನಲ್ಲಿ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಂಬೇಡ್ಕರ್ ರಕ್ತ ಹರಿಯುತ್ತಿದೆ. ನನ್ನನ್ನು ಮುಗಿಸಲು ಹೋದರೆ ಕರ್ನಾಟಕದಲ್ಲಿ ಬೆಂಕಿ ಹೊತ್ತಿಕೊಳ್ಳುತ್ತದೆ ಎಂದು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಏಪ್ರಿಲ್ 15 ಯತ್ನಾಳಗೆ ಅಂತಿಮ ದಿನ ಎಂಬ ಕಿಡಿಗೇಡಿಗಳ ಆಡಿಯೊ ಹರಿದಾಡುತ್ತಿರುವ ಕುರಿತು ನಗರದಲ್ಲಿ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ನನ್ನನ್ನು ಮುಗಿಸುವುದಾಗಿ ಬೆದರಿಕೆ ಒಡ್ಡಿರುವ ಆಡಿಯೊ ಬಗ್ಗೆ ಪೊಲೀಸರು ತನಿಖೆ ಮಾಡುತ್ತಿದ್ದಾರೆ, ಇದರ ಹಿಂದೆ ಯಾರಿದ್ದಾರೆ ಎನ್ನುವುದು ಶೀಘ್ರ ಬಯಲಾಗಲಿದೆ. ರಾಜ್ಯ ಸರಕಾರಕ್ಕೆ ನಿಷ್ಪಕ್ಷಪಾತವಾಗಿ ತನಿಖೆ ಮಾಡಲು ಆಗದಿದ್ದರೆ ಎನ್‌ಐಎಗೆ ಕೊಡಲಿ ಎಂದು ಆಗ್ರಹಿಸಿದರು.

ಹುಬ್ಬಳ್ಳಿಯಲ್ಲಿ ನಡೆದ ರಾಮನವಮಿ ಕಾರ್ಯಕ್ರಮದಲ್ಲಿ ಪ್ರವಾದಿ ಮಹಮ್ಮದ್ ಪೈಗಂಬರ್ ಹೆಸರನ್ನು ನಾನು ಎಲ್ಲಿಯೂ ತೆಗೆದುಕೊಂಡಿಲ್ಲ, ಮಹಮ್ಮದ್ ಅಲಿ ಜಿನ್ನಾ ಎನ್ನಲು ಹೋಗಿ ಮಾತಿನ ವೇಗದಲ್ಲಿ ಮಹಮ್ಮದ್ ಪೈಗಂಬರ್ ಎಂದು ಹೇಳಿದ್ದೇನೆ. ಇಸ್ಲಾಂ ಧರ್ಮ ಸಂಸ್ಥಾಪಕರ ಹೆಸರನ್ನು ತೆಗೆದುಕೊಂಡಿಲ್ಲ ಎಂದು ಸ್ಪಷ್ಟಪಡಿಸಿದರು.

ಜಾತಿ ಗಣತಿ ವರದಿ ವಿಚಾರವಾಗಿ ಯತ್ನಾಳ ಮಾತನಾಡಿದ ಅವರು, ಜಾತಿ ಗಣತಿ ಸಮೀಕ್ಷೆ ಸರಿ ಇಲ್ಲ. ದಲಿತರು ರಾಜ್ಯದ ನಂಬರ್ 1. ಮುಸ್ಲಿಂ ನಂಬರ್ 1 ಆದ್ರೆ ಅವರನ್ನ ಅಲ್ಪ ಸಂಖ್ಯಾತ ಸ್ಥಾನದಿಂದ ಇಳಿಸಿ. ಹಾಲುಮತ ದೊಡ್ಡ ಸಮಾಜ, ಲಿಂಗಾಯತರು, ಕ್ಷತ್ರಿಯ, ಬ್ರಾಹ್ಮಣ ಸಮುದಾಯ ಇವೆ. ಬ್ರಾಹ್ಮಣರು 2% ಇದ್ದಾರೆ ಅವರಿಗೆ ಅಲ್ಪಸಂಖ್ಯಾತ ಸ್ಥಾನ ಸಿಗಬೇಕು ಎಂದು ಹೇಳಿದರು.

> ಬಿಜೆಪಿಗೆ ಮರು ಸೇರ್ಪಡೆ ಯಾಗಲು ನಾನು ಯಾರನ್ನೂ ಸಂಪರ್ಕ ಮಾಡಿಲ್ಲ, ನನ್ನನ್ನೂ ಯಾರು ಸಂಪರ್ಕಿಸಿಲ್ಲ. ಬಿಜೆಪಿ ಯಾವ ನಾಯಕರ ಜತೆಗೆ ಸಂಪರ್ಕ ಇಲ್ಲ. ಕಾಲ ಬರಲಿ, ನಾನೂ ರಾಜ್ಯದಲ್ಲಿ ಹಿಂದೂಗಳ ಸಂಘಟನೆ ಮಾಡುತ್ತೇನೆ. ಹಿಂದೂ ಸಂಘಟನೆಗಳು ಕೈ ಮೇಲೆ ಎತ್ತಿ ಹಿಂದೂಪರ ಇರುವವರಿಗೆ ಓಟು ಹಾಕುತ್ತೇವೆ ಎಂದಿದ್ದಾರೆ. ಇಂಥ ವಾತಾವರಣ ನಿರ್ಮಾಣ ಮಾಡುತ್ತಿದ್ದೇವೆ. ಯೋಗಿ ಆದಿತ್ಯನಾಥ, ಅಸ್ಸಾಂ ಬಿಸ್ವಾಸ್ ರೀತಿಯ ಸರಕಾರ ನೀಡಲು ಪ್ರಯತ್ನ ಮಾಡುತ್ತೇವೆ.
>
> -ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಜಾತಿ ಗಣತಿ ವರದಿ ವಿಚಾರವಾಗಿ ಮಾತನಾಡಿ, ಜಾತಿ ಗಣತಿ ಸಮೀಕ್ಷೆ ಸರಿ ಇಲ್ಲ. ದಲಿತರು ರಾಜ್ಯದ ನಂಬರ್ 1. ಮುಸ್ಲಿಂ ನಂಬರ್ 1 ಆದರೆ ಅವರನ್ನ ಅಲ್ಪಸಂಖ್ಯಾತ ಸ್ಥಾನದಿಂದ ಇಳಿಸಿ. ಹಾಲುಮತ ದೊಡ್ಡ ಸಮಾಜ, ಲಿಂಗಾಯತರು, ಕ್ಷತ್ರಿಯ, ಬ್ರಾಹ್ಮಣ ಸಮುದಾಯ ಇವೆ. ಬ್ರಾಹ್ಮಣರು 2% ಇದ್ದಾರೆ ಅವರಿಗೆ ಅಲ್ಪಸಂಖ್ಯಾತ ಸ್ಥಾನ ಸಿಗಬೇಕು. ಮರಾಠ, ಬೌದ್ಧರು, ಕ್ರಿಶ್ಚಿಯನ್ ರಿಗೆ ಅಲ್ಪ ಸಂಖ್ಯಾತ ಸ್ಥಾನ ಸಿಗಬೇಕು. ಲಿಂಗಾಯತರನ್ನು ಒಡೆದಂತೆ ಮುಸ್ಲಿಂ ಜಾತಿ ಒಡೆಯಲಿ. ಮುಸ್ಲಿಂ ಒಳಜಾತಿಗಳ ಸರ್ವೇ ಆಗಲಿ ಎಂದರು.

### ಸಿಎಂ ಸಿದ್ದರಾಮಯ್ಯ ಇಳಿಸಲು ಪ್ಲಾನ್ ನಡೆದಿದೆ

ರಾಜ್ಯದಲ್ಲಿ ಸಿಎಂ ಸಿದ್ದರಾಮಯ್ಯ ಇಳಿಸಲು ಪ್ಲಾನ್ ನಡೆದಿದೆ. ಹಾಗೇ ನನ್ನ ಉಚ್ಚಾಟನೆ ಹಿಂದೆಯೂ ಷಡ್ಯಂತ್ರ ಇದೆ. ನನ್ನ ಉಚ್ಚಾಟನೆ ಹಿಂದೆ ಕಾಂಗ್ರೆಸ್ ಮಹಾನಾಯಕ ಕಾಂಗ್ರೆಸ್ ಒಡೆದು ಬರ್ತೀವಿ ಎಂದು ಭರವಸೆ ಕೊಟ್ಟ ಬಳಿಕ ನನ್ನ ಉಚ್ಚಾಟನೆ ಆಗಿದೆ. ಸಿದ್ದರಾಮಯ್ಯ ಟಚ್ ಮಾಡುವುದು ಸುಲಭವಲ್ಲ. ಸಿದ್ದರಾಮಯ್ಯ ಇಳಿಸ್ತೀನಿ ಅನ್ನುವುದು ಆಗಲ್ಲ. ಕಾಂಗ್ರೆಸ್ ಪಕ್ಷದ ಕೊನೆಯ ಮೊಳೆ ಸಿದ್ದರಾಮಯ್ಯ. ಸಿದ್ದರಾಮಯ್ಯ ಹಿಂದೆ ಎಲ್ಲ ಶಾಸಕರು ಇದ್ದಾರೆ ಎಂದು ಸಿದ್ದರಾಮಯ್ಯ ಪರ ಶಾಸಕ ಬಸನಗೌಡ ಪಾಟೀಲ ಅಚ್ಚರಿಯ ಮಾತುಗಳಾಡಿದರು.

---

ಅನ್ನಪೂರ್ಣ ಅವರ ಕಾರ್ಯ ಇತರ ಅಧಿಕಾರಿಗಳಿಗೆ ದಾರಿದೀಪ

# ಅನ್ನಪೂರ್ಣಗೆ ಅತ್ಯುನ್ನತ ಪದಕ ನೀಡಬೇಕು

**ಬೆಳಗಾವಿ:** ಹುಬ್ಬಳ್ಳಿಯಲ್ಲಿ ಬಾಲಕಿಯ ಕೊಲೆ ಪ್ರಕರಣದ ಆರೋಪಿಯನ್ನು ಎನ್‌ಕೌಂಟರ್ ಮಾಡಿದ ಪಿಎಸ್‌ಐ ಅನ್ನಪೂರ್ಣ ಅವರಿಗೆ ಅತ್ಯುನ್ನತ ಪದಕ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಪರಮೇಶ್ವರ್ ಅವರಿಗೆ ಶಿಫಾರಸ್ಸು ಮಾಡುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪಿಎಸ್‌ಐ ಅನ್ನಪೂರ್ಣ ಅವರ ಕಾರ್ಯಕ್ಕೆ ಶ್ಲಾಘನೆ ವ್ಯಕ್ತಪಡಿಸುತ್ತೇನೆ. ನಾನು ಒಬ್ಬ ಸಚಿವೆಯಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕು ಎಂದು ನಾನು ಹಿಂದಿನಿಂದಲೂ ಪ್ರತಿಪಾದಿಸುತ್ತಾ ಬಂದಿದ್ದೇನೆ. ಇಂಥ ಪ್ರಕರಣದ ಆರೋಪಿಗಳಿಗೆ ಗಲ್ಲುಶಿಕ್ಷೆ ಆಗಬೇಕು, ದೌರ್ಜನ್ಯಕ್ಕೆ ಒಳಗಾದವರಿಗೆ ತ್ವರಿತವಾಗಿ ನ್ಯಾಯ ಸಿಗಬೇಕು. ಅನ್ನಪೂರ್ಣ ಅವರ ಕಾರ್ಯ ಇತರ ಅಧಿಕಾರಿಗಳಿಗೆ ದಾರಿ ದೀಪವಾಗಬೇಕು ಎಂದು ಸಚಿವರು ಹೇಳಿದರು.



> ಇಂಥ ಘಟನೆ ನಡೆದಾಗ ಸರಕಾರ ಸಮರ್ಥವಾಗಿ ನಿಭಾಯಿಸಿದೆ. ಕರ್ನಾಟಕವನ್ನು ಬೇರೆ ರಾಜ್ಯಗಳಿಗೆ ಹೋಲಿಸಲು ನಾನು ಇಷ್ಟಪಡುವುದಿಲ್ಲ. ನಮ್ಮಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿಲ್ಲ. ನಮ್ಮನ್ನು ಟೀಕಿಸುವ ಬದಲಿಗೆ ಬಿಜೆಪಿಗರು ಮಣಿಪುರಕ್ಕೆ ಒಮ್ಮೆ ಭೇಟಿ ನೀಡಲಿ, ಪ್ರಧಾನಿ ನರೇಂದ್ರ ಮೋದಿ ಒಮ್ಮೆಯೂ ಅಲ್ಲಿಗೆ ಭೇಟಿ ಕೊಟ್ಟಿಲ್ಲ.
>
> ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

---

ಬಿಜೆಪಿ ನಾಯಕರ ವಿರುದ್ಧ ಸಚಿವ ಬೈರತಿ ಸುರೇಶ್ ಕಿಡಿ

# ಜಾತಿಗಣತಿ ಬಗ್ಗೆ ಮಾತನಾಡುವ ಯೋಗ್ಯತೆ ಇಲ್ಲ

**ಕೋಲಾರ:** ಜಾತಿಗಣತಿ ಬಗ್ಗೆ ಕ್ಷುಲ್ಲಕ ಕಾರಣಕ್ಕೆ ರಾಜಕೀಯ ಮಾಡುವ ಬಿಜೆಪಿಗೆ ಮಾನ ಮರ್ಯಾದೆ ಇಲ್ಲ, ಅವರಿಗೆ ಮಾತನಾಡುವ ಯೋಗ್ಯತೆ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಕಿಡಿ ಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಷ್ಟು ದಿನ ಜಾತಿಗಣತಿ ಫ್ರೀಜರ್ ನಲ್ಲಿದೆ ಎಂದು ಮಾತನಾಡುತ್ತಿದ್ದರು. ಆದರೆ ಈಗ ಜಾತಿ ಗಣತಿಗೆ ವಿರೋಧವಾಗಿ ಮಾತನಾಡುವುದು ಸರಿಯಲ್ಲ. ರಾಜ್ಯದಲ್ಲಿ ಲಿಂಗಾಯತರು ಮೊದಲ ಸ್ಥಾನದಲ್ಲಿದ್ದಾರೆ. ಒಕ್ಕಲಿಗರು ಎರಡನೆ ಸ್ಥಾನದಲ್ಲಿದ್ದಾರೆ. ಜಾತಿ ಗಣತಿಯಲ್ಲಿ 2 ಲಕ್ಷ ಜನ ಭಾಗಿಯಾಗಿ ತಯಾರಿಸಿರುವ ವರದಿ ಇದಾಗಿದೆ. ಜಾತಿ ಗಣತಿಯಲ್ಲಿ ಶಿಕ್ಷಕರನ್ನು ಬಳಸಿಕೊಳ್ಳಲಾಗಿದೆ. ಇದರಲ್ಲಿ ಒಂದೇ ಸಮುದಾಯದವರೆ ಇದ್ದಾರ, ಅವರು ಕೊಟ್ಟ ವರದಿ ಸುಳ್ಳಾ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಯಾವ ಜನ ಎಷ್ಟು ಇದ್ದಾರೆ ಅನ್ನೋದು ಇದರಿಂದ ತಿಳಿಯಲಿದೆ. ಇನ್ನೂ 95% ರಷ್ಟು ಜನರಿಗೆ ಜಾತಿಗಣತಿಯಿಂದ ಖುಷಿ ಆಗಿದೆ. ಆದರೆ ಬಿಜೆಪಿಯವರಿಗೆ ಮಾಡುವ ಯೋಗ್ಯತೆ ಇಲ್ಲ, ಏನಾದರೂ ಮಾಡಿದ್ರೆ ಸಹಿಸಿಕೊಳ್ಳಲ್ಲ. ಈ ಹಿಂದೆ ಗ್ಯಾರಂಟಿಗಳನ್ನು ಕೊಟ್ಟಾಗ ಹೀಗೆಯೇ ಮಾತನಾಡಿದ್ದರು. ಲೋಕಸಭೆ ಚುನಾವಣೆಗೆ ನಿಲ್ಲುತ್ತದೆ ಎಂದು ಹೇಳಿದ್ದರು. ಆದರೆ ಈಗ ಎಲ್ಲರಿಗೂ ಗ್ಯಾರಂಟಿ ಸಿಗುತ್ತಿದೆ. ರಾಜ್ಯದ ಜನರೆಲ್ಲರೂ ಖುಷಿಯಾಗಿದ್ದಾರೆ, ನನ್ನ ವೈಯುಕ್ತಿಕವಾಗಿ ಇದು ಸರಿಯಿದೆ ಎಂದರು.

> ನನ್ನ ವೈಯಕ್ತಿಕ ವಿಚಾರ ಹೇಳುವುದಾದರೇ, ಜಾತಿಗಣತಿಗೆ ನನ್ನ ಒಪ್ಪಿಗೆ ಇದೆ. ಇದೇ 17ರಂದು ಎಲ್ಲಾ ಸಚಿವರ ಅಭಿಪ್ರಾಯ ಸಂಗ್ರಹ ಮಾಡಲಾಗುವುದು. ಇದರಲ್ಲಿ ನನ್ನ ಒಪ್ಪಿಗೆ ಇದೆ. ಅಲ್ಲದೇ ಇದೇ ತಿಂಗಳ 17ರಂದು ವಿಶೇಷ ಸಚಿವ ಸಂಪುಟ ಸಭೆಯನ್ನ ಕರೆಯಲಾಗಿದೆ. ಇದರಲ್ಲಿ ಎಲ್ಲಾ ಸಚಿವರು ಜಾತಿಗಣತಿಗೆ ಒಪ್ಪಿಗೆ ಸೂಚಿಸುವ ನಿರೀಕ್ಷೆ ಇದೆ. ನನ್ನ ಸಮುದಾಯ 55 ಲಕ್ಷ ಇರಬಹುದೆಂಬ ನಿರೀಕ್ಷೆ ಇತ್ತು. ಆದರೆ ವರದಿಯಲ್ಲಿ 45 ಲಕ್ಷ ಇದೆ. ಆದರೂ ಅದನ್ನು ಒಪ್ಪಿಕೊಂಡಿದ್ದೇನೆ.
>
> -ಬೈರತಿ ಸುರೇಶ್, ಸಚಿವ

---

ಪಂಚಮಸಾಲಿ ಪೀಠದ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿಕೆ

# ಪಂಚಮಸಾಲಿ ಸಮಾಜದ ರಾಜ್ಯಮಟ್ಟದ ಸಭೆ 20ರಂದು

**ಬಾಗಲಕೋಟೆ:** ಜಿಲ್ಲೆಯ ಕೂಡಲಸಂಗಮದಲ್ಲಿ ಏ.20 ರಂದು ಮಧ್ಯಾಹ್ನ 3ಕ್ಕೆ ಪಂಚಮಸಾಲಿ ಸಮಾಜದ ರಾಜ್ಯ ಮಟ್ಟದ ಭಕ್ತರ ಸಭೆಯನ್ನು ಕರೆಯಲಾಗಿದೆ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಸಭೆಗೆ ಪಕ್ಷಾತೀತವಾಗಿ ಹಾಲಿ, ಮಾಜಿ ಶಾಸಕರು, ಸಚಿವರು, ಸಂಸದರು ಸೇರಿದಂತೆ ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನು ಕೂಡ ಆಹ್ವಾನಿಸಿದ್ದೇವೆ. ಈಗ ಉಂಟಾಗಿರುವ ಗೊಂದಲ ಹಾಗೂ 2ಎ ಮೀಸಲಾತಿ ಹೋರಾಟದ ಮುಂದಿನ ರೂಪರೇಷಗಳ ಬಗ್ಗೆ ಚರ್ಚಿಸಿ ಭಕ್ತರ ಸಲಹೆಯಂತೆ ನಿರ್ಧಾರ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ನಾನು ಯಾವುದೇ ಒಬ್ಬ ವ್ಯಕ್ತಿಯ ಪರವಾಗಿ ಹೋರಾಟ ಮಾಡಿಲ್ಲ. ಸಮಾಜದ ಪರವಾಗಿ ಹೋರಾಟ ಮಾಡಿದ್ದೇನೆ. ನಮ್ಮ ಸಮಾಜಕ್ಕೆ ಹಾಗೂ 2ಎ ಮೀಸಲಾತಿ ಹೋರಾಟಕ್ಕೆ ಯಾರೆಲ್ಲ ಶ್ರಮಿಸಿದ್ದಾರೋ ಅಂತವರಿಗೆ ಅನ್ಯಾಯವಾದಾಗ ಅವರ ಪರ ಧ್ವನಿ ಎತ್ತಿದ್ದೇನೆ ಎಂದು ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.

ನಮ್ಮದು ದೊಡ್ಡ ಸಮಾಜ, ಹೀಗಾಗಿ ಕೆಲ ಗೊಂದಲಗಳು ಉಂಟಾಗುವುದು ಸಹಜ. ನಮ್ಮಲ್ಲಿ ಕೆಲವರು ಅಜ್ಞಾನ, ಆಸೆ-ಆಮಿಷಗಳಿಗೆ ಒಳಪಟ್ಟು ತಮ್ಮ ವಿರುದ್ಧ ಟೀಕೆ, ಟಿಪ್ಪಣಿ ಮಾಡುತ್ತಿದ್ದಾರೆ. ನಮ್ಮ ಶ್ರೀಪೀಠ ಇರುವುದು ಯಾರನ್ನೋ ಶಾಸಕರನ್ನು, ಮಂತ್ರಿ ಮಾಡಲು ಕಟ್ಟಿಲ್ಲ. ಸಮಾಜದ ಕಣ್ಣೀರು ಒರೆಸಲು ಕಟ್ಟಿದ್ದು. ಆ ಕೆಲಸವನ್ನು ನಾನು ಪ್ರಮಾಣಿಕವಾಗಿ ಮಾಡುತ್ತಾ ಬಂದಿದ್ದೇನೆ ಎಂದರು.

ತಮ್ಮನ್ನು ಪೀಠದಿಂದ ಕೆಳಗಿಳಿಸುವ ಪ್ರಯತ್ನ ನಡೆದಿದೆಯಾ ಎಂಬ ಪ್ರಶ್ನೆಗೆ ನಾನು ಪಂಚಮಸಾಲಿ ಪೀಠ ಆರಂಭಿಸಿದ್ದ ಕೂಡಲಸಂಗಮದ ಬಯಲಿನಲ್ಲಿ, ಅಗತ್ಯತೆ ಬಿದ್ದರೆ ನನ್ನ ಅಂತ್ಯವೂ ಸಹ ಅದೇ ಕೂಡಲಸಂಗಮದಲ್ಲಿ ಆಗಲಿ ಎಂದರು.

> ಈ ಸಭೆಗೆ ಯಾರಿಗೂ ಪ್ರತ್ಯೇಕವಾಗಿ ಕರೆಯದೇ ಮಾಧ್ಯಮಗಳ ಮೂಲಕವೇ ಆಹ್ವಾನ ನೀಡುತ್ತೇವೆ. ಅಂದಿನ ಸಭೆಯಲ್ಲಿ ತಮ್ಮ ವಿರುದ್ಧದ ಎಲ್ಲ ಟೀಕೆ, ಟಿಪ್ಪಣಿಗಳಿಗೆ ಉತ್ತರ ಕೊಡಲಾಗುತ್ತದೆ.
>
> -ಬಸವ ಜಯಮೃತ್ಯುಂಜಯ ಸ್ವಾಮೀಜಿ, ಕೂಡಲಸಂಗಮದ ಪಂಚಮಸಾಲಿ ಪೀಠದ ಜಗದ್ಗುರು

### ಗುರುಗಳೇ ಜನಪ್ರತಿನಿಧಿ ಆಗಲ್ಲ

ಸ್ವಾಮೀಜಿಗಳು ಖಾವಿ ತೊರೆದು ಖಾಕಿ ತೊಟ್ಟರೆ ಉತ್ತಮ ಎಂಬ ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಗುರುಗಳು ಭಕ್ತರನ್ನು ಜನಪ್ರತಿನಿಧಿಗಳನ್ನಾಗಿ ಮಾಡುತ್ತಾರೆ ಹೊರತು, ಗುರುಗಳೇ ಜನಪ್ರತಿನಿಧಿ ಆಗಲ್ಲ. ನಾನು ಸೈದ್ಧಾಂತಿಕವಾಗಿ ರಾಜೀ ಆಗಿಲ್ಲ. ಮೀಸಲು ಹೋರಾಟ ಆರಂಭವಾದ ಬಳಿಕ ನಮಗೆ ಕೋಟ್ಯಂತರ ಭಕ್ತರು ಬೆಂಬಲಿಸಿದರು. ಅದರಲ್ಲಿ ಸಾವಿರಾರು ಧಾರ್ಮಿಕ ಆಚರಣೆ ಹಾಗೂ ಪರಂಪರೆ ಹೊಂದಿದವರು ಇದ್ದಾರೆ. ಧಾರ್ಮಿಕ ಆಚರಣೆ ಬೇರೆ, ಸೈದ್ಧಾಂತಿಕ ಭಿನ್ನಾಭಿಪ್ರಾಯ ಬೇರೆ ಎಂದರು.

---

ಯತ್ನಾಳ್ ಹೇಳಿಕೆಗೆ ಸಂತೋಷ್ ಲಾಡ್ ತಿರುಗೇಟು

# ಮೋದಿ ಇನ್ನೊಂದು ವರ್ಷವಷ್ಟೇ ಪಿಎಂ

**ಧಾರವಾಡ:** ನನಗಿರುವ ಮಾಹಿತಿ ಪ್ರಕಾರ ನರೇಂದ್ರ ಮೋದಿ ಅವರು ಇನ್ನೊಂದು ವರ್ಷ ಮಾತ್ರ ಪ್ರಧಾನಿಯಾಗಿರುತ್ತಾರೆ. ಅವರನ್ನು ಪ್ರಧಾನಿ ಹುದ್ದೆಯಿಂದ ಕೆಳಗಿಳಿಸುತ್ತಾರೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿರುಗೇಟು ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಲು ಸ್ವಪಕ್ಷದವರೇ ಪ್ರಯತ್ನ ನಡೆಸುತ್ತಿದ್ದಾರೆ ಎಂಬ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆಗೆ ಕೌಂಟರ್ ನೀಡಿದರು.

ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಲು ಯಾರೂ ಪ್ರಯತ್ನ ನಡೆಸುತ್ತಿಲ್ಲ. ಯತ್ನಾಳ್ ಅವರು ಯಾಕೆ ಆ ರೀತಿ ಹೇಳಿದ್ದಾರೋ ಗೊತ್ತಿಲ್ಲ. ಆ ಬಗ್ಗೆ ಅವರನ್ನೇ ಕೇಳಬೇಕು. ಆದರೂ ಯತ್ನಾಳ್ ಅವರು ನಮ್ಮ ಸಿಎಂ ಬಗ್ಗೆ ಗೌರವ ಪೂರ್ವಕವಾಗಿ ಮಾತನಾಡಿದ್ದಾರೆ. ಅದು ನನಗೆ ಖುಷಿ ತಂದಿದೆ ಎಂದರು.

ಮೊನ್ನೆಯಷ್ಟೇ ಪಿಯೂಷ್ ಗೋಯಲ್ ಮಾತನಾಡಿ, ಸ್ಕಿಲ್ ಇಂಡಿಯಾ, ಸ್ಕಿಲ್ ಡೆವಲಪ್ ಆಗಿಲ್ಲ ಎಂದಿದ್ದಾರೆ. ಮೋದಿ ಅವರ ವಿರುದ್ಧ ನನಗೆ ವೈಯಕ್ತಿಕ ದ್ವೇಷ ಇಲ್ಲ. ಮೋದಿ ಅವರು 11 ವರ್ಷದಿಂದ ಪ್ರಧಾನಿಯಾಗಿದ್ದಾರೆ. ದೇಶದಲ್ಲಿ ಏನೂ ಬೆಳವಣಿಗೆ ಆಗಿಲ್ಲ. ಹೀಗಾಗಿ ನಿತಿನ್ ಗಡ್ಕರಿ ಪಿಎಂ ಆಗಲಿ ಎಂದು ಅವರ ಪಕ್ಷದವರೇ ಅಪೇಕ್ಷಿಸುತ್ತಿದ್ದಾರೆ. ಅವರಿಗೂ ಒಂದು ಅವಕಾಶ ಸಿಗಬೇಕು ಎಂದರು.

> ಮೋದಿ ಅವರು ಮುಂದಿನ ವರ್ಷ ಪಿಎಂ ಆಗಿ ಇರುವುದಿಲ್ಲ. ಇದನ್ನು ಬಿಜೆಪಿಯವರು ಯಾರೂ ಹೇಳಿಕೊಳ್ಳುತ್ತಿಲ್ಲ. ಆದರೆ, ಅಲ್ಲಲ್ಲಿ ಸ್ವಲ್ಪ ಬಾಯಿ ಬಿಡುತ್ತಿದ್ದಾರೆ.
>
> - ಸಂತೋಷ್ ಲಾಡ್ ಕಾರ್ಮಿಕ ಸಚಿವ

---

ಸಂವಿಧಾನ ಭಾರತ ದೇಶದ ಹೃದಯವಿದ್ದಂತೆ: ಎಂಬಿಪಾ

# ಯಾರಿಂದಲೂ ಸಂವಿಧಾನ ಬದಲಾವಣೆ ಸಾಧ್ಯವಿಲ್ಲ

**ವಿಜಯಪುರ:** ಯಾರಿಂದಲೂ ಸಂವಿಧಾನ ಬದಲಾವಣೆ ಮಾಡಲು ಸಾಧ್ಯವಿಲ್ಲ. ಸಂವಿಧಾನ ಭಾರತ ದೇಶದ ಹೃದಯವಿದ್ದಂತೆ. ಈ ಹೃದಯವನ್ನು ಕಿತ್ತುಕೊಂಡರೆ ಭಾರತ ಜೀವಂತವಾಗಿ ಉಳಿಯಲ್ಲ. ಸಂವಿಧಾನ ಬದಲಾಯಿಸುವ ದುಸ್ಸಾಹಸಕ್ಕೆ ಯಾರೂ ಕೈ ಹಾಕಲ್ಲ, ಹಾಕಿದರೆ ಪರಿಣಾಮ ಗಂಭೀರವಾಗುತ್ತದೆ ಎಂದು ಬೃಹತ್ ಕೈಗಾರಿಕೆ ಸಚಿವ ಡಾ.ಎಂ.ಬಿ.ಪಾಟೀಲ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಎಲ್ಲರಿಗೂ ಮತದಾನದ ಹಕ್ಕು ಕೊಟ್ಟವರು ಅಂಬೇಡ್ಕರ್. ಹಿಂದೆ ಮಾಜಿ ಸಂಸದ ಅನಂತ್ ಕುಮಾರ್ ಹೆಗಡೆ ನಾವು ಅಧಿಕಾರಕ್ಕೆ ಬಂದಿದ್ದೆ ಸಂವಿಧಾನ ಬದಲಾಯಿಸಲು ಎಂದಿದ್ದರು. ಈಗ ಬಿಜೆಪಿಯವರು ಬೇರೆ ಮಾತನಾಡುತ್ತಿದ್ದಾರೆ. ಬಿಜೆಪಿಯವರಿಗೆ ಒಮ್ಮಿಂದೊಮ್ಮೆಲೆ ಸಂವಿಧಾನದ ಮೇಲೆ ಗೌರವ ಬಂದಿದೆ. ಅವರು ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದಾರೆ. ಅದು ಒಳ್ಳೆಯ ಬೆಳವಣಿಗೆ, ತಡವಾಗಿಯಾದರೂ ಸಂವಿಧಾನದ ಬಗ್ಗೆ ಬಿಜೆಪಿ ಗೌರವ ಶ್ರದ್ಧೆ ಬಂದಿದೆ. ಎಲ್ಲ ಪಕ್ಷದವರು ಸಂವಿಧಾನ ಗೌರವಿಸಬೇಕೆಂದು ಎಂ.ಬಿ. ಪಾಟೀಲ್ ಹೇಳಿದರು.

---

ಜಾತಿಗಣತಿ ಅವೈಜ್ಞಾನಿಕವೆನ್ನುವುದು ಸಮಾಜದ್ರೋಹ

# ವರದಿ ಓದದೇ ಅವೈಜ್ಞಾನಿಕ ಅಂದ್ರೆ ಹೇಗೆ?

**ಗದಗ:** ಜಾತಿ ಜನಗಣತಿ ಅವೈಜ್ಞಾನಿಕ ಹೇಗೆ ಆಗುತ್ತದೆ? ಅವೈಜ್ಞಾನಿಕ, ತಪ್ಪು ವರದಿ, ಯಾರೋ ಹೇಳಿ ಬರೆಸಿದ್ದಾರೆ ಎಂಬ ಮಾತುಗಳು ಸಮಾಜವನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ. ಇವೆಲ್ಲಾ ಸಮಾಜ ದ್ರೋಹಿ ಮಾತುಗಳು ಎಂದು ಕಾನೂನು ಸಚಿವ ಎಚ್. ಕೆ.ಪಾಟೀಲ್ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಜಾತಿಗಣತಿ ವಿವರಗಳು ಬಹುತೇಕ ಬಹಿರಂಗಗೊಂಡಿವೆ. ನಮಗೂ ಅದರ ಪ್ರತಿಗಳು ದೊರೆತಿವೆ. ಏ.17ರಂದು ವಿಶೇಷ ಕ್ಯಾಬಿನೆಟ್ ಸಭೆ ಕರೆಯಲಾಗಿದೆ. ಇದರಲ್ಲಿ ರಾಜಕಾರಣ ಮಾಡಲು ಹೋಗಬಾರದು. ಸಮೀಕ್ಷೆಗಳು ಏನಿವೆ ಎಂಬುದು ಗೊತ್ತಿಲ್ಲದೆ ತಮ್ಮ ಅಭಿಪ್ರಾಯಗಳನ್ನು ಕೊಡುತ್ತಿದ್ದಾರೆ ಎಂದು ಕಿಡಿಕಾರಿದರು.

ಸರಕಾರ ಇನ್ನೂ ಏನು ನಿರ್ಣಯ ಮಾಡಿಲ್ಲ. ಏನು ಸಮೀಕ್ಷೆ ಆಗಿದೆ ಅದನ್ನು ನಾವು ಮಂಡನೆ ಮಾಡಿದ್ದೇವೆ. ಸಿದ್ದರಾಮಯ್ಯ ಅವರ ಮನೆಯಲ್ಲಿ ಜಾತಿ ಗಣತಿ ಬರೆದಿದ್ದಾರೆ ಎಂದು ಆರ್. ಅಶೋಕ್‌ಹೇಳಿದ್ದಾರೆ. ಯಾವುದಾದರೂ ವರದಿ ಮುಖ್ಯಮಂತ್ರಿ ಮನೆಯಲ್ಲಿ ಬರೆಯಲು ಸಾಧ್ಯನಾ? ಎಂದು ಪ್ರಶ್ನಿಸಿದರು.

> ಸರಕಾರ ಇಷ್ಟೆಲ್ಲಾ ಅವಕಾಶ ಕೊಟ್ಟಾಗಲೂ ರಾಜಕೀಯ ಮಾಡುವುದು ಸರಿಯಾದ ಕ್ರಮವಲ್ಲ. ಅವೈಜ್ಞಾನಿಕ ಯಾವುದು ಇದೆ. ವರದಿ ಓದದೇ ಅವೈಜ್ಞಾನಿಕ ಅಂದ್ರೆ, ಹೇಗೆ? ನಿಮ್ಮ ಮನೆಗಳಲ್ಲಿ ಗಣತಿ ಮಾಡಿದ್ದರೆ ನಮ್ಮದು ಈ ಜಾತಿ ಅಂತ ಅದಕ್ಕೆ ನಿಮ್ಮ ಸಹಿ ಇದೆ. ಹೀಗಾಗಿ ಅದು ಹೇಗೆ ಅವೈಜ್ಞಾನಿಕ ಆಗುತ್ತದೆ?.
>
> -ಎಚ್.ಕೆ.ಪಾಟೀಲ್, ಸಚಿವ

---

ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಹೇಳಿಕೆ

# ಜಾತಿಗಣತಿ ವರದಿ ನಾವು ಒಪ್ಪಲ್ಲ

**ದಾವಣಗೆರೆ:** ಜಾತಿ ಜನಗಣತಿ ವರದಿ ಬಿಡುಗಡೆಗೆ ಚನ್ನಗಿರಿಯಕಾಂಗ್ರೆಸ್ ಶಾಸಕ ಬಸವರಾಜು ವಿ. ಶಿವಗಂಗಾ ವಿರೋಧಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪನವರು ಹೇಳಿರುವುದು ಸರಿಯಾಗಿದೆ. ನಾವೂ ಅವರ ಬೆನ್ನಿಗೆ ನಿಲ್ತೀವಿ ಎಂದು ಹೇಳಿದರು.

ಜಾತಿ ಗಣತಿ ವರದಿ ಬಿಡುಗಡೆ ಸಂಬಂಧ ಕ್ಯಾಬಿನೆಟ್‌ನಲ್ಲಿ ಚರ್ಚಿಸುವುದಾಗಿ ಎಂದಿದ್ದಾರೆ. ಸಚಿವ ಸಂಪುಟದಲ್ಲಿನ ಏಳು ಲಿಂಗಾಯತ ಸಚಿವರು ಜಾತಿಗಣತಿ ವರದಿ ಬಿಡುಗಡೆಯನ್ನು ವಿರೋಸಬೇಕು. ಇದಕ್ಕೂ ಮೊದಲು ಸಚಿವರು ಎಲ್ಲ ಲಿಂಗಾಯತ ಶಾಸಕರ-ಸಚಿವರ ಸಭೆ ಕರೆದು ಚರ್ಚೆ ನಡೆಸಬೇಕು ಎಂದು ಆಗ್ರಹಿಸಿದರು.

ಯಾವ ರೀತಿ ಜಾತಿ ಗಣತಿ ಮಾಡಿದ್ದಾರೆ ಅನ್ನೋದು ಗೊತ್ತಿಲ್ಲ. ಈ ವರದಿಯಲ್ಲಿ ಸಾದರ ಲಿಂಗಾಯತರನ್ನು 67 ಸಾವಿರ ಜನರಿದ್ದಾರೆಂದು ತೋರಿಸಲಾಗಿದೆ ಎಂಬುದು ತಿಳಿದು ಬಂದಿದೆ. ನನ್ನ ಕ್ಷೇತ್ರದಲ್ಲಿಯೇ 67 ಸಾವಿರ ಸಾಧರ ಲಿಂಗಾಯತರಿದ್ದಾರೆ. ವೀರಶೈವ-ಲಿಂಗಾಯತರ ಸಮುದಾಯದ ಸಂಖ್ಯೆ ರಾಜ್ಯದಲ್ಲಿ ಒಂದೂವರೆ ಕೋಟಿ ಇದೆ ಎಂದರು.

ಕುರುಬ ಸಮುದಾಯದ ಜನಸಂಖ್ಯೆ ಸಹ ಜಾಸ್ತಿ ಇದೆ. ಅದನ್ನು ಕಡಿಮೆ ಮಾಡಿದ್ದಾರೆ. ಒಟ್ಟಾರೆ ಜಾತಿ ಗಣತಿಯ ವರದಿಯೇ ಸರಿಯಾಗಿಲ್ಲಎಲ್ಲ ಜಾತಿಯಲ್ಲಿ ಒಳ ಪಂಗಡಗಳಿವೆ. ಆದರೆ, ಬೇರೆ ಸಮುದಾಯದಲ್ಲಿ ಒಳ ಪಂಗಡ ತೋರಿಸಿಲ್ಲ. ನಮ್ಮ ಮನೆಗೂ ಜಾತಿ ಗಣತಿ ಮಾಡೋಕೆ ಬಂದಿಲ್ಲ ಎಂದು ಹೇಳಿದರು.

ವಿಶ್ವವಾಣಿ

## ಸಂಪಾದಕೀಯ

### ಇದು ಇಂದ್ರನ ಅಮರಾವತಿಯೇ?

ಆಂಧ್ರಪ್ರದೇಶ ಸರಕಾರವು ರಾಜ್ಯದ ರಾಜಧಾನಿಯಾಗಿ ಅಮರಾವತಿಯನ್ನು ರೂಪಿಸಲು 65 ಸಾವಿರ ಕೋಟಿ ರುಪಾಯಿ ಮೊತ್ತದ ಯೋಜನೆಯನ್ನು ಮರಳಿ ಆರಂಭಿಸಿದೆ. ಕೃಷ್ಣಾ ನದಿಯ ದಂಡೆಯ ಮೇಲೆ ಆಕರ್ಷಕ ಶೈಲಿಯಲ್ಲಿ ಈ ಭವ್ಯನಗರಿ ರೂಪುಗೊಳ್ಳಲಿದೆಯಂತೆ. ನಿರ್ಮಾಣದ ತರುವಾಯ ಇದು ವಿಶ್ವದೆಲ್ಲೆಡೆಯ ವೃತ್ತಿಪ್ರವೀಣರು, ಉದ್ಯಮಿಗಳು, ಹೂಡಿಕೆದಾರರನ್ನು ಆಕರ್ಷಿಸಲಿದೆಯಂತೆ. ಟೋಕಿಯೋ, ಸಿಂಗಾಪುರದಂಥ ವಿಶ್ವದರ್ಜೆಯ ನಗರವಾಗಿ ಅಮರಾವತಿ ರೂಪುಗೊಳ್ಳಬೇಕು ಎಂಬ ಕನಸಿನ ಸಾಕಾರದ ಭಾಗವಾಗಲಿದೆಯಂತೆ ಈ ನಿರ್ಮಾಣ ಕಾಮಗಾರಿ. ಸರಕಾರವೊಂದರ ಆಡಳಿತ ಚಟುವಟಿಕೆಗಳು ಸುಸೂತ್ರವಾಗಿ ನಡೆಯಲು ಮೂಲಭೂತ ಸೌಕರ್ಯಗಳ ರೂಪಣೆಯಾಗಬೇಕು, ರಾಜ್ಯದ ರಾಜಧಾನಿ ಬಹುಜನರ ನಿರೀಕ್ಷೆಗೆ ತಕ್ಕಂತೆ ಸುಸಜ್ಜಿತವಾಗಿರಬೇಕು ಎಂಬ ಆಶಯಗಳನ್ನು ಇಟ್ಟುಕೊಳ್ಳುವುದರಲ್ಲಿ ತಪ್ಪೇನಿಲ್ಲ. ಆದರೆ, ಆಶಯದ ಈಡೇರಿಕೆಯ ಭರದಲ್ಲಿ ಅದಕ್ಕೆ ಭವ್ಯತೆಯ ಲೇಪ ಕೊಡಬೇಕು, ಅದರ ಸೌಂದರ್ಯ ಕಣ್ಣು ಕುಕ್ಕುವಂತಿರಬೇಕು ಎಂದು ಆಶಿಸುವುದು ಸ್ವಾಗತಾರ್ಹವಲ್ಲ. ರಾಜಧಾನಿ ಅಮರಾವತಿ 'ಇಂದ್ರನ ಅಮರಾವತಿ'ಯಂತೆ ಕಂಗೊಳಿಸಬೇಕು ಎಂದು ಹಪಹಪಿಸುವುದು ವರ್ಣಚಿತ್ರದ ಹೂರಣಕ್ಕಿಂತ ಚಿತ್ರದ ಚೌಕಟ್ಟಿಗೇ ಹೆಚ್ಚು ಒತ್ತುನೀಡುವ ಕಸರತ್ತಾಗುವುದಿಲ್ಲವೇ? ಅಮರಾವತಿಯ ರೂಪಣೆಗೆ ತೆಗೆದಿರಿಸಲಾದ 65 ಸಾವಿರ ಕೋಟಿ ರುಪಾಯಿ ಹಣ ಸಣ್ಣ ಮೊತ್ತವೇನಲ್ಲ. ಕೆಲ ಜನಕಲ್ಯಾಣ ಯೋಜನೆಗಳಿಗೂ ದಕ್ಕದಷ್ಟು ಮೊತ್ತ ಇದಾಗಿರಲಿಕ್ಕೂ ಸಾಕು. ಅನ್ನ-ಬಟ್ಟೆ-ವಸತಿ ಮನುಷ್ಯನ ಮೂಲಭೂತ ಅವಶ್ಯಕತೆಗಳು; ಇವಕ್ಕೆ ಯಥೋಚಿತ ಮಾನ್ಯತೆ ಇದ್ದರೇನೇ ಚೆಂದ. ಈ ಬಾಬತ್ತುಗಳಲ್ಲಿ ಅತಿರೇಕವಾದರೆ ಅದು ಸಹ್ಯವಾಗದು. ನಿರ್ದಿಷ್ಟ ಯೋಜನೆಯೊಂದಕ್ಕೆ ಜನರ ಹಣವನ್ನು ಬಳಸುವಾಗ, ಸಂಬಂಧಪಟ್ಟವರು ಇಂಥ ಆಯಾಮದಲ್ಲೂ ಸಾಕಷ್ಟು ಸಲ ಯೋಚಿಸಬೇಕಾಗುತ್ತದೆ, ಅಲ್ಲವೇ?

## ಸೊಂಪಾದಕೀಯ

### ಪೆಟ್ರೋಲ್‌ಗೆ 'ಬಂಕ್'

ದೇಶದಲ್ಲಿ ಬೆಲೆ ಏರಿಕೆ ವಿಷಯ ಬಂದ್ರೆ, ಮೊದಲು ಚರ್ಚೆ ಆಗೋದು ಅಂದ್ರೆ, ಅದು ಪೆಟ್ರೋಲ್ ದರ. ಜನಸಾಮಾನ್ಯರಿಂದ ಹಿಡಿದು ಪೊಲೀಸ್ ಪ್ಯಾಟ್ರೋಲ್‌ನವರಿಗೂ ಬೇಕಾಗಿರೋ ಅಗತ್ಯ ವಸ್ತು ಅಂದ್ರೆ ಪೆಟ್ರೋಲ್. ಹಾಗಾಗಿ ಅದು ಎಷ್ಟೇ ದುಬಾರಿ ಆದ್ರೂ ಹೊಟ್ಟೆಗೆ ಅನ್ನ ತಿನ್ನೋ ಥರ ಗಾಡಿಯ ಹೊಟ್ಟೆಗೆ ಎಣ್ಣೆ ಹಾಕಿಸಲೇಬೇಕು. ಇದೇ ಕಾರಣಕ್ಕೆ ಪೆಟ್ರೋಲ್ ದರ ಜಾಸ್ತಿ ಆದಾಗಲೆಲ್ಲಾ ಸರಕಾರಗಳು ಟ್ರೋಲ್ ಆಗುತ್ತಲೇ ಇರುತ್ತವೆ. ಆದರೆ ಈ ಸುದ್ದಿ ಪೆಟ್ರೋಲ್ ದರದ್ದಲ್ಲ, ಬದಲಾಗಿ ನಿಮ್ಮ ಗಾಡಿಯ ಹೊಟ್ಟೆಗೆ ಪೆಟ್ರೋಲ್ ಹಾಕಿಸಲು ನೀವು ಜುಟ್ಟಿಗೆ ಅಲ್ಲದಿದ್ರೂ, ಜುಟ್ಟು ಇರೋ ತಲೆಗೆ ಹೆಲ್ಮೆಟ್ ಹಾಕಲೇಬೇಕು ಅನ್ನೋ ಸುದ್ದಿ ಈಗ ಜಾರಿ ಆಗಿದೆ. ಈ ನಿಯಮದ ಬಗೆಗೆ ಅನಧಿಕೃತವಾಗಿ ಚರ್ಚೆಗಳು ಒತ್ತಾಯಗಳು ಕೇಳಿಬಂದಿದ್ದರೂ ಈಗ ಅಧಿಕೃತವಾಗಿ ಉತ್ತರಪ್ರದೇಶ ಸರಕಾರ ಈ ನಿಯಮವನ್ನು ಜಾರಿಗೆ ತಂದಿದೆ. ನೀವು ಸಾರ್ವಜನಿಕ ಸಾರಿಗೆ ಬಿಟ್ಟು ಸ್ವಂತ ದ್ವಿಚಕ್ರ ವಾಹನದಲ್ಲಿ ಓಡಾಡುವವರಾಗಿದ್ದರೆ ಇನ್ನು ಮುಂದೆ ಪೆಟ್ರೋಲ್ ಬಂಕಿಗೆ ಹೋಗುವ ಮುನ್ನ ಜೇಬಿನಲ್ಲಿ ದುಡ್ಡಿದೆಯಾ ಅಂತ ಚೆಕ್ ಮಾಡಿಕೊಳ್ಳೋ ಮುನ್ನ ತಲೆಯಲ್ಲಿ ಹೆಲ್ಮೆಟ್ ಇದೆಯಾ ಅಂತ ಚೆಕ್ ಮಾಡಿಕೊಳ್ಳಬೇಕು. ಹೆಲ್ಮೆಟ್ ಅನ್ನು ಸುರಕ್ಷತೆಗಾಗಿ ಹಾಕುವ ಜನರಿಗಿಂತ ನಮ್ಮ ದೇಶದಲ್ಲಿ ಪೊಲೀಸರ ಭಯಕ್ಕೆ ಹಾಕುವವರೇ ಹೆಚ್ಚು. ಅನಕ್ಷರಸ್ಥರಾಗಲೀ ಷೇಕ್ಸ್‌ಪಿಯರ್‌ನ ಹ್ಯಾಮ್ಲೆಟ್ ಅನ್ನು ಓದಿಕೊಂಡವರಾಗಲೀ ಹೆಲ್ಮೆಟ್ ಅನ್ನು ನೆಗ್ಲೆಕ್ಟ್ ಮಾಡೋದೇ ಜಾಸ್ತಿ. ಇನ್ನು ರಸ್ತೆ ಅಪಘಾತದಲ್ಲಿ ತಲೆಗೆ ಪೆಟ್ಟು ಬಿದ್ದು ತಲೆಯಲ್ಲಿನ ಮಿದುಳು ಆಮ್ಲೆಟ್ ಆಗಿದ್ದನ್ನು ನೋಡಿದವರೂ ತಮ್ಮ ತಲೆಗೆ ಹೆಲ್ಮೆಟ್ ಹಾಕೋ ವಿಷಯದಲ್ಲಿ ಹಿಂದೆ ಬೀಳುತ್ತಾರೆ. ಗಾಡಿ ಚಲಾಯಿಸುವ ಸವಾರರೇ ಹೆಲ್ಮೆಟ್ ಹಾಕಲು ಹಿಂದೆ ಮುಂದೆ ನೋಡುವಾಗ ಇನ್ನು ಹಿಂದೆ ಕೂತವರು ಹೆಲ್ಮೆಟ್ ಹಾಕುತ್ತಾರೆಯೇ? ಹಾಗಾಗಿ ಹೆಲ್ಮೆಟ್ ಅನ್ನೋದು ಕೇವಲ ಪೊಲೀಸರಿಂದ ತಪ್ಪಿಸಿಕೊಳ್ಳುವ ಆಯುಧವಾಗಿ ಕಾಣುತ್ತಿರುವ ಈ ಸಂದರ್ಭದಲ್ಲಿ ಉತ್ತರಪ್ರದೇಶ ಸರಕಾರ ಈ ನಿರ್ಧಾರ ತೆಗೆದುಕೊಂಡಿದೆ. ಆದರೆ, ಉತ್ತರ ಪ್ರದೇಶ ಸರಕಾರದ ಈ ನಿಯಮದ ನಂತರ ಬಂಕಿನವರು ಹೆಲ್ಮೆಟ್ ಹಾಕದವರಿಗೆ ಪೆಟ್ರೋಲ್ ಇಲ್ಲ ಅಂದಾಗ ಸಾರ್ವಜನಿಕರ ಉತ್ತರ ಏನಿರುತ್ತದೆ ಅನ್ನೋದು ಕುತೂಹಲದ ವಿಷಯ.

## ಸಂಪಾದಕರ ಸದ್ಯಶೋಧನೆ

### ವಿಶ್ವದ ಅತ್ಯಂತ ಪುರಾತನ ಹೋಟೆಲ್

ಜಪಾನಿಗೆ ಹೋದರೆ 'ನಿಶಿಯಾಮಾ ಓನ್ಸೆನ್ ಕೆಯುನ್ಕನ್' ಎಂಬ ಹೆಸರಿನ ಹೋಟೆಲಿಗೆ ಹೋಗಿ ಬನ್ನಿ ಎಂದು ಸ್ನೇಹಿತರೊಬ್ಬರು ಹೇಳಿದ್ದರು. ಆದರೆ ಅಲ್ಲಿಗೆ ಹೋಗಲು ನನಗೆ ಸಾಧ್ಯವಾಗಲಿಲ್ಲ, ಕಾರಣ ಆ ಹೋಟೆಲ್ ಇರುವ ನಗರಕ್ಕೆ ಹೋಗುವುದು ನನ್ನ ಪ್ರವಾಸದಲ್ಲಿ ಸೇರಿರಲಿಲ್ಲ. "ಜಪಾನಿನಲ್ಲಿ ಹಲವು ವರ್ಷಗಳಿಂದ ಇದ್ದವರೂ ಆ ಹೋಟೆಲಿಗೆ ಹೋಗುವುದು ಅಪರೂಪ. ಹೀಗಾಗಿ ನೀವು ಅಲ್ಲಿಗೆ ಹೋದರೆ, ಖಂಡಿತವಾಗಿಯೂ ಖುಷಿಪಡುತ್ತೀರಿ" ಎಂದು ಅವರು ಹೇಳಿದ್ದರು. ನನಗೆ ಅಲ್ಲಿಗೆ ಹೋಗಲು ಸಾಧ್ಯವಾಗದ್ದಕ್ಕೆ ಬೇಸರವಾಯಿತು. ನಂತರ ಅವರೇ ಆ ಹೋಟೆಲಿನ ವೈಶಿಷ್ಟ್ಯದ ಬಗ್ಗೆ ಹೇಳಿದ್ದನ್ನು ಕೇಳಿ ನಾನು ಕೆಲವು ಟಿಪ್ಪಣಿ ಮಾಡಿಕೊಂಡಿದ್ದೆ. ಅದು ಹೀಗಿದೆ: ಜಪಾನಿನ ಯಮಾನಾಶಿ ಪ್ರಿಫೆಕ್ಚರ್‌ನ ಹಯಾಕಾವಾ ಪಟ್ಟಣದಲ್ಲಿ 'ವಿಶ್ವದ ಅತ್ಯಂತ ಹಳೆಯ ಹೋಟೆಲ್' ಇದೆ. ಈ ಹೋಟೆಲ್ ಕ್ರಿಸ್ತಶಕ 705ರಲ್ಲಿ ಸ್ಥಾಪನೆಯಾಗಿ, 1300 ವರ್ಷಗಳಿಗೂ ಹೆಚ್ಚು ಕಾಲದಿಂದ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಗಿನ್ನೆಸ್ ವಿಶ್ವದಾಖಲೆಯಲ್ಲಿ 'ವಿಶ್ವದ ಅತ್ಯಂತ ಹಳೆಯ ಮತ್ತು ನಿರಂತರವಾಗಿ ಕಾರ್ಯನಿರ್ವಹಿಸುತ್ತಿರುವ ಹೋಟೆಲ್' ಎಂಬ ಮಾನ್ಯತೆಯನ್ನು ಪಡೆದಿದೆ. ಈ ಹೋಟೆಲ್‌ನ ಸ್ಥಾಪನೆಯು ಫುಜಿವಾರಾ ಮಹಿತೋ ಎಂಬ ಸಮುರಾಯಿ ಯೋಧನಿಂದ ಆಯಿತು. ಆತ ಜಪಾನಿನ ಅತ್ಯಂತ ಪ್ರಭಾವಿ ಮಿಲಿಟರಿ ನಾಯಕರುಗಳಾದ ಟಾಕೆಡಾ ಶೋಗುನ್‌ಗಳಿಗೆ ಸೇವೆ ಸಲ್ಲಿಸುತ್ತಿದ್ದ. ಆತ ಈ ಪ್ರದೇಶದ ಬಿಸಿನೀರಿನ ಬುಗ್ಗೆ (ಹಾಟ್ ಸ್ಪ್ರಿಂಗ್) ಗಳನ್ನು ಕಂಡು, ಯೋಧರ ವಿಶ್ರಾಂತಿ ಮತ್ತು ಪುನಶ್ಚೇತನಕ್ಕಾಗಿ ಈ ಹೋಟೆಲ್ ಅನ್ನು ಸ್ಥಾಪಿಸಿದ. 'ನಿಶಿಯಾಮಾ ಓನ್ಸೆನ್ ಕೆಯುನ್ಕನ್ ಹೋಟೆಲ್' ತನ್ನ ಸ್ಥಾಪನೆಯಿಂದ ಇಂದಿನವರೆಗೆ, ಸುಮಾರು 52 ತಲೆಮಾರುಗಳ ಕಾಲ ಒಂದೇ ಕುಟುಂಬದವರಿಂದ ನಿರ್ವಹಿಸಲ್ಪಡುತ್ತಿರುವುದು ವಿಶೇಷ. ಈ ಹೋಟೆಲ್ ತನ್ನ ಪರಂಪರೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡು, ಆಧುನಿಕ ಸೌಲಭ್ಯಗಳನ್ನು ಕೂಡ ಒದಗಿಸುತ್ತಿದೆ. ಇಲ್ಲಿ 37 ಅತಿಥಿ ಕೊಠಡಿಗಳಿದ್ದು, ಪ್ರತಿಯೊಂದು ಕೊಠಡಿಗೂ ಖಾಸಗಿ ಬಿಸಿನೀರು ಸ್ನಾನಗೃಹ (ಒನ್ಸೆನ್) ಸೌಲಭ್ಯವನ್ನು ಕಲ್ಪಿಸಲಾಗಿದೆ. ಹೋಟೆಲ್‌ನ ವಿನ್ಯಾಸವು ಪಾರಂಪರಿಕ ಜಪಾನಿ ಶೈಲಿಯಲ್ಲಿ ನಿರ್ಮಿತವಾಗಿದ್ದು, ಟಾಟಾಮಿ ಚಾಪೆ, ಶೋಜಿ ಬಾಗಿಲುಗಳು ಮತ್ತು ನೈಸರ್ಗಿಕ ವಸ್ತುಗಳನ್ನು ಬಳಸಲಾಗಿದೆ. ಅತಿಥಿಗಳಿಗೆ ಶಾಂತಿಯುತ ಮತ್ತು ಆರಾಮದಾಯಕ ವಾತಾವರಣವನ್ನು ಒದಗಿಸಲು, ಹೋಟೆಲ್ ತನ್ನ ಸುತ್ತಲಿನ ನೈಸರ್ಗಿಕ ಸೌಂದರ್ಯವನ್ನು ಉಳಿಸಿಕೊಂಡಿದೆ. 'ನಿಶಿಯಾಮಾ ಓನ್ಸೆನ್ ಕೆಯುನ್ಕನ್ ಹೋಟೆಲ್' ಜಪಾನಿನ ಸಂಸ್ಕೃತಿ, ಪರಂಪರೆ ಮತ್ತು ಆತಿಥ್ಯದ ಪ್ರತಿಬಿಂಬ ಎಂದೇ ಪ್ರಸಿದ್ಧ. ಇದು ಆ ದೇಶದ ಪಾರಂಪರಿಕ ಹೋಟೆಲ್‌ಗಳ (ರಿಯೋಕಾನ್) ಶ್ರೇಷ್ಠ ಉದಾಹರಣೆ ಎಂಬುದರಲ್ಲಿ ಎರಡು ಮಾತಿಲ್ಲ. ಇಲ್ಲಿ ವಾಸ್ತವ್ಯ ಹೂಡುವ ಮೂಲಕ, ಅತಿಥಿಗಳು ಜಪಾನಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಖುದ್ದಾಗಿ ಅನುಭವಿಸಬಹುದು. ಆ ಹೋಟೆಲಿನಲ್ಲಿ ತಂಗಲೆಂದೇ ವಿಶ್ವದ ಮೂಲೆಮೂಲೆಗಳಿಂದ ಪ್ರವಾಸಿಗರು ಆಗಮಿಸುತ್ತಾರೆ. ಹಲವು ದೇಶಗಳ ರಾಷ್ಟ್ರಾಧ್ಯಕ್ಷರು, ಪ್ರಧಾನಿಗಳು, ಗಣ್ಯರು ಈ ಹೋಟೆಲಿನಲ್ಲಿ ವಾಸ್ತವ್ಯ ಹೂಡಿದ್ದು ಅದರ ಅಗ್ಗಳಿಕೆ. 'ವಿಶ್ವದ ಅತ್ಯಂತ ಪುರಾತನ' ಎಂಬ ಭಾವನೆಯೇ ಎಂಥವರಲ್ಲಾದರೂ ಪುಳಕ ಮೂಡಿಸುತ್ತದೆ. ಈ ಹೋಟೆಲ್‌ನ ನಿರಂತರ ಕಾರ್ಯನಿರ್ವಹಣೆ, ಅದರ ಕುಟುಂಬದ ಸಮರ್ಪಣೆ, ಜಪಾನಿನ ಆತಿಥ್ಯ ಮತ್ತು ಅನನ್ಯ ಪರಂಪರೆಯ ಪ್ರತೀಕವಾಗಿರುವ ಈ ಹೋಟೆಲ್, ಆ ದೇಶದ ಪ್ರಮುಖ ಹೆಗ್ಗುರುತಾಗಿರುವುದು ಗಮನಾರ್ಹ. ಬೆಟ್ಟಗಳ ಮಧ್ಯೆ, ನದಿಯ ದಡದಲ್ಲಿ, ನಿಸರ್ಗದ ತುಂಬು ಮಡಿಲಿನಲ್ಲಿರುವ ಈ ಹೋಟೆಲ್‌ನಲ್ಲಿ ಹಿಮಪಾತದ ಸಂದರ್ಭದಲ್ಲಿ ತಂಗುವುದು ಒಂದು ಅಪರೂಪದ ಅನುಭವ. ಕೆಲವು ಸಲ ಆ ಹೋಟೆಲಿನಲ್ಲಿ ಉಳಿಯಲು 7-8 ತಿಂಗಳು ಕಾಯಬೇಕಾಗುತ್ತದೆ. ಹಾಗಂತ ಆ ಹೋಟೆಲಿನ ರೂಮ್ ಬಾಡಿಗೆ ತೀರಾ ದುಬಾರಿಯೇನಲ್ಲ. ಒಂದು ದಿನಕ್ಕೆ ಮೂವತ್ತು ಸಾವಿರದಿಂದ ಐವತ್ತು ಸಾವಿರದವರೆಗಿನ ರೂಮುಗಳು ಲಭ್ಯ. ಇದು ಪುರಾತನ, ಐತಿಹಾಸಿಕ ಎಂದ ಮಾತ್ರಕ್ಕೆ ಎಲ್ಲವೂ ಹಳೆಯದು ಎಂದು ಭಾವಿಸಬೇಕಿಲ್ಲ. ಈ ಹೋಟೆಲ್ ಕಾಲಕಾಲಕ್ಕೆ ಮೇಲ್ದರ್ಜೆಗೆ ಏರುತ್ತಾ ಆಧುನಿಕತೆಯ ಸ್ಪರ್ಶವನ್ನೂ ಪಡೆದುಕೊಂಡಿದೆ. ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಈ ಹೋಟೆಲ್‌ನಲ್ಲಿ ವೈಫೈ, ಖಾಸಗಿ ಒನ್ಸೆನ್ ಬಾತ್‌ಗಳು, ಕ್ಲಾಸಿಕ್ ಡೈನಿಂಗ್ ಹಾಲ್, ಬಿಜಿನೆಸ್ ಸೆಂಟರ್, ಹೈ-ಕ್ವಾಲಿಟಿ ಜಪಾನಿ ಊಟಗಳು ಎಲ್ಲವೂ ಲಭ್ಯ. ಅಲ್ಲಿ ಉಳಿಯುವುದೆಂದರೆ, ಕಾಲನ ಜತೆ ಪಯಣಿಸಿದಂತೆ ಎಂಬ ಮಾತು ಸುಳ್ಳಲ್ಲ.

# ಜಾತಿಗಣತಿ ಎಂಬ ಜೇನುಗೂಡು

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ಕರ್ನಾಟಕದಲ್ಲಿ ಬಹುನಿರೀಕ್ಷಿತ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯು ಸಾಕಷ್ಟು ವರ್ಷಗಳ ಬಳಿಕ ಕೊನೆಗೂ ಬಹಿರಂಗವಾಗಿದೆ. ಕಳೆದ ಬಾರಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಸಿದ್ಧವಾಗಿದ್ದ ಈ ಜಾತಿಗಣತಿಯ ಅಂಕಿ-ಅಂಶ 'ಅಧಿಕೃತ'ವಾಗಿ ಬಹಿರಂಗವಾಗಲು, ಸಂಪುಟದಲ್ಲಿ ಮಂಡನೆ ಮಾಡಿ ಚರ್ಚೆ ನಡೆಸಲು ಮತ್ತೊಮ್ಮೆ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಬರಬೇಕಾಯಿತು. 2018ರ ಬಳಿಕ ಬಂದ ಎರಡು ಸರಕಾರಗಳೂ, ಜೇನುಗೂಡಿನಂಥ ಅತಿಸೂಕ್ಷ್ಮ ವಿಷಯವಾಗಿದ್ದ 'ಜಾತಿ ಗಣತಿ'ಯನ್ನು ಸುಭದ್ರವಾಗಿ ಕಾಪಾಡಿಕೊಂಡಿದ್ದವೇ ಹೊರತು, ತೆರೆಯುವ 'ಪ್ರಯತ್ನ'ವನ್ನು ಮಾಡಲಿಲ್ಲ. ಇದೀಗ ಸ್ವಪಕ್ಷೀಯರ ವಿರೋಧದ ನಡುವೆಯೂ ಸಿದ್ದರಾಮಯ್ಯ ಅವರು ಸಂಪುಟ ಸಭೆಯಲ್ಲಿ ಇದನ್ನು ಮಂಡಿಸಲು ಅವಕಾಶ ನೀಡಿದ್ದು, ಬರುವ ಗುರುವಾರ ಈ ವಿಷಯದ ಚರ್ಚೆಗೆ 'ವಿಶೇಷ' ಸಂಪುಟ ಸಭೆಯನ್ನೂ ಕರೆದಿದ್ದಾರೆ. ಆದರೆ ಈ ಎಲ್ಲದರ ನಡುವೆಯೇ 'ಮುಂದೇನು?' ಎನ್ನುವ ಪ್ರಶ್ನೆಗೆ ಈವರೆಗೆ ಸ್ಪಷ್ಟ ಉತ್ತರ ಸಿಕ್ಕಿಲ್ಲ.

ಹೌದು, 150 ಕೋಟಿ ರು. ವೆಚ್ಚದಲ್ಲಿ ಸಿದ್ಧವಾಗಿರುವ ಈ ಜಾತಿಗಣತಿಗೆ ಮೊದಲಿನಿಂದಲೂ ಪಕ್ಷಾತೀತ ಪರ-ವಿರೋಧ ಚರ್ಚೆಗಳಿವೆ. ಅಹಿಂದ ಸಮುದಾಯದ ಬಹುಪಾಲು ಮಂದಿ ಜಾತಿಗಣತಿ ಬಹಿರಂಗವಾಗಬೇಕು ಎಂದಿದ್ದರೆ, ಸಮೀಕ್ಷೆ ನಡೆಸಿರುವುದನ್ನೇ ಮೇಲ್ಜಾತಿಗಳು ಅನುಮಾನಿಸಿ ಮರುಸಮೀಕ್ಷೆಗೆ ಆಗ್ರಹಿಸಿದ್ದವು. ಈ ವಿಷಯದಲ್ಲಿ ಕಾಂಗ್ರೆಸ್‌ನಲ್ಲಿಯೇ ಎರಡು ಪ್ರತ್ಯೇಕ ಗುಂಪುಗಳು ಕಾಣಿಸಿಕೊಳ್ಳುತ್ತಿರುವುದು ಸ್ಪಷ್ಟ. ಅದರಲ್ಲಿಯೂ ರಾಜ್ಯ ರಾಜಕೀಯದಲ್ಲಿ ಪ್ರಬಲ ಎನಿಸಿರುವ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯದಿಂದ ಈ ಗಣತಿಗೆ ವಿರೋಧವಿದೆ. ಆದರೆ ಈ ವರದಿಗೆ ಮುಸ್ಲಿಮರು, ದಲಿತ ಸಮುದಾಯ ಸಂಪೂರ್ಣ ಸಮ್ಮತಿಸಿದ್ದರೆ, ಹಿಂದುಳಿದ ವರ್ಗಗಳಿಂದ 50-50 ಅನುಪಾತದಲ್ಲಿ ಒಪ್ಪಿಗೆಯಿದೆ.

ಹಾಗೆ ನೋಡಿದರೆ, ಕಾಂತರಾಜು ಅವರು 2015ರಲ್ಲಿ ಸಲ್ಲಿಸಿರುವ ಜಾತಿಗಣತಿಯ ಪ್ರಕಾರ ಕರ್ನಾಟಕವು 5.98 ಕೋಟಿ ಜನರನ್ನು ಒಳಗೊಂಡಿದೆ. ಇದರಲ್ಲಿ 1.09 ಕೋಟಿ ಪರಿಶಿಷ್ಟ ಜಾತಿಯ ಜನಸಂಖ್ಯೆಯಿದ್ದರೆ, ಮುಸ್ಲಿಮರದ್ದು 75 ಲಕ್ಷದ ಆಜುಬಾಜಿನಲ್ಲಿದೆ. ಇನ್ನುಳಿದಂತೆ ರಾಜ್ಯದಲ್ಲಿ ರಾಜಕೀಯವಾಗಿ ಪ್ರಬಲ ಎನಿಸಿದ್ದ ಲಿಂಗಾಯತ ಸಮುದಾಯವನ್ನು ಲಿಂಗಾಯತ, ಪಂಚಮಸಾಲಿ, ಹಿಂದೂ ಸಾದರ, ಹಿಂದೂ ರೆಡ್ಡಿ ಲಿಂಗಾಯತ ಸೇರಿದಂತೆ ವಿವಿಧ ಉಪಜಾತಿಯ ಲೆಕ್ಕದಲ್ಲಿ ವಿಭಜನೆ ಮಾಡುವ ಮೂಲಕ 'ಲಿಂಗಾಯತ' ಸಮುದಾಯದ ಜನಸಂಖ್ಯೆಯನ್ನು 66 ಲಕ್ಷ ತೋರಿಸಿದ್ದಾರೆ. ಒಕ್ಕಲಿಗ ಸಮುದಾಯದಲ್ಲಿ ಸುಮಾರು 61 ಲಕ್ಷ ಜನಸಂಖ್ಯೆಯಿದೆ ಎಂದು ತೋರಿಸಲಾಗಿದೆ. ಈ ಸಂಖ್ಯೆಯನ್ನು ಈಗಾಗಲೇ ಬಹುತೇಕ ಸಮುದಾಯಗಳು ವಿರೋಧಿಸಿದ್ದು, ಲಿಂಗಾಯತರು ಸುಮಾರು ಒಂದುವರೆ ಕೋಟಿ ಇದ್ದೇವೆ ಎಂದು 'ಕ್ಲೇಮ್' ಮಾಡುತ್ತಿದ್ದಾರೆ. ರಾಜಕೀಯ ಕೆಸರೆರಚಾಟ, ಸಮುದಾಯಗಳ ವಿರೋಧಗಳೆಲ್ಲವನ್ನು ಮೀರಿ ಈಗಿರುವ ಪ್ರಶ್ನೆ, ಕಾಂತರಾಜು ಹಾಗೂ ಜಯಪ್ರಕಾಶ್ ಹೆಗ್ಡೆ ಅವರಿಂದ ಸಲ್ಲಿಕೆಯಾಗಿರುವ ಈ ಜಾತಿಗಣತಿಗೆ ಕಾನೂನಿನ ಮಾನ್ಯತೆ ಸಿಗುವುದೇ? ಎನ್ನುವುದಾಗಿದೆ.

ರಾಜಕೀಯ ಮೇಲಾಟಗಳ ಹೊರತಾಗಿ ಬಹುತೇಕರು ಈಗ ಈ ವರದಿಯು ಕಾನೂನಿನ ವ್ಯಾಪ್ತಿಯಲ್ಲಿ ಊರ್ಜಿತವಾಗುವುದೇ? ಎನ್ನುವ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ. ಪ್ರಮುಖವಾಗಿ ರಾಜ್ಯ ಸರಕಾರಗಳಿಗೆ ಗಣತಿಯನ್ನು ಮಾಡುವ ಅಧಿಕಾರವಿಲ್ಲ. ಹೀಗಿರುವಾಗ ಈ ರೀತಿ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯ ಹೆಸರಲ್ಲಿ ನಡೆದಿರುವ 'ಹೆಡ್ ಕೌಂಟ್' ಅನ್ನು ಒಪ್ಪಲು ಸಾಧ್ಯವೇ? ಎನ್ನುವುದು ಪ್ರಶ್ನೆಯಾಗಿದೆ. ಇದರೊಂದಿಗೆ ಈ ಸಮೀಕ್ಷೆಯಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯಗಳನ್ನು ಜಾತಿ ಎಂದು ತೋರಿಸಲಾಗಿದೆ. ಆದರೆ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಧರ್ಮಗಳಾಗಿವೆ. ಹೀಗಿರುವಾಗ ಈ ಎರಡು ಸಮುದಾಯಗಳನ್ನು ಜಾತಿಯ ಪಾಕೆಟ್‌ನಲ್ಲಿ ಸೇರಿಸಲು ಸಾಧ್ಯವೇ? ಒಂದೊಮ್ಮೆ ಹಾಗೆ ಬಂದರೂ, ಮುಸ್ಲಿಂ ಧರ್ಮದಲ್ಲಿರುವ ಒಳಪಂಗಡಗಳನ್ನು ಪ್ರಸ್ತಾಪಿಸಿಲ್ಲ. ಹೀಗಿರುವಾಗ, ಅದನ್ನು ಒಪ್ಪಲು ಸಾಧ್ಯವೇ? ಹಾಗಾದರೆ ಹಿಂದೂ ಧರ್ಮದ ಹೆಡ್ ಕೌಂಟ್ ಅನ್ನು ಮಾತ್ರ ಏಕೆ ಜಾತಿ, ಉಪಜಾತಿಗಳ ಆಧಾರದಲ್ಲಿ ಮಾಡಲಾಗಿದೆ ಎನ್ನುವ ಪ್ರಶ್ನೆ ಸಹಜವಾಗಿಯೇ ಏಳುತ್ತಿದೆ.

ಇನ್ನು ಜಯಪ್ರಕಾಶ್ ಹೆಗ್ಡೆ ಅವರು ಮೀಸಲನ್ನು ಶೇ.61ಕ್ಕೆ ಹೆಚ್ಚಿಸಬೇಕು ಎನ್ನುವ ಶಿಫಾರಸನ್ನು ಮಾಡಿ, ಅದರಲ್ಲಿ ಕುರುಬ ಜಾತಿಯನ್ನು ಪ್ರವರ್ಗ 1ಬಿ ಎಂದು ಗುರುತಿಸಿ ಮೀಸಲು ಪ್ರಮಾಣವನ್ನು ಶೇ.12ಕ್ಕೆ ಹೆಚ್ಚಿಸಲು ಹಾಗೂ ರಾಜಕೀಯವಾಗಿ ಶಕ್ತಿ ಹೊಂದಿರುವ ಲಿಂಗಾಯತ ಮತ್ತು ಒಕ್ಕಲಿಗ ಜಾತಿಗಳ ಮೀಸಲು ಪ್ರಮಾಣವನ್ನೂ ತಲಾ ಶೇ.3ರಷ್ಟು ಹೆಚ್ಚಿಸಲು ಶಿಫಾರಸು ಮಾಡಿದ್ದಾರೆ. ಈಗಾಗಲೇ ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮೀಸಲು ಪ್ರಮಾಣವನ್ನು ಶೇ.50ಕ್ಕೆ ಮಿತಿಗೊಳಿಸಿದೆ. ಈ ಮಿತಿಯನ್ನು ಯಾವುದೇ ಕಾರಣಕ್ಕೂ ಏರಿಸಬಾರದು ಎನ್ನುವ ಸ್ಪಷ್ಟ ಆದೇಶವನ್ನು ನೀಡಲಾಗಿದೆ. ಆದರೆ ಕರ್ನಾಟಕದಲ್ಲಿ ಈಗಾಗಲೇ ಪರಿಶಿಷ್ಟ ಜಾತಿ, ಪಂಗಡದ ಮೀಸಲನ್ನು ಶೇ.18ರಿಂದ 24ಕ್ಕೆ ಹೆಚ್ಚಿಸಲಾಗಿದೆ ಹಾಗೂ ಕೇಂದ್ರ ಸರಕಾರದ ಆರ್ಥಿಕವಾಗಿ ಹಿಂದುಳಿದವರ ಮೀಸಲು ಪ್ರಮಾಣ ಶೇ.10ರಷ್ಟು ಜಾರಿಯಲ್ಲಿದೆ. ಈ ಮೂಲಕ ಕರ್ನಾಟಕದಲ್ಲಿ ಮೀಸಲು ಈಗಾಗಲೇ ಶೇ.66ರಷ್ಟಿದೆ ಎನ್ನುವ ವಾದವನ್ನು ಮಂಡಿಸಿ, ಒಬಿಸಿ ಮೀಸಲನ್ನು ಹೆಚ್ಚಿಸಬಹುದು ಎನ್ನುವ ಶಿಫಾರಸನ್ನು ಶಾಶ್ವತ ಹಿಂದುಳಿದ ಆಯೋಗ ಮಾಡಿದೆ. ಆದರೆ ಸುಪ್ರೀಂ ಕೋರ್ಟ್‌ನಲ್ಲಿ ಈ ವಾದ ಊರ್ಜಿತವಾಗುವುದೇ ಎನ್ನುವುದು ಈಗಿರುವ ಬಹುದೊಡ್ಡ ಪ್ರಶ್ನೆಯಾಗಿದೆ.

ಈ ಎಲ್ಲವೂ ಕಾನೂನಾತ್ಮಕವಾಗಿರುವ ಸವಾಲುಗಳಾಗಿದ್ದರೂ, ಜಾತಿಗಣತಿಯ ಮಂಡನೆಯಿಂದ ರಾಜಕೀಯವಾಗಿ ಕಾಂಗ್ರೆಸ್ ಲಾಭ ಹೆಚ್ಚಿದೆ ಎನ್ನುವುದು ಈ ಸಮೀಕ್ಷೆಯ ಪರವಾಗಿರುವವರ ವಾದವಾಗಿದೆ. ಕಳೆದ ಚುನಾವಣೆಯ ಸಮಯದಲ್ಲಿಯೇ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು ಜಾತಿಗಣತಿಗೆ ಉತ್ಸುಕತೆಯನ್ನು ತೋರಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಿಂದುಳಿದ ಹಾಗೂ ದಲಿತ ನಾಯಕರಿಗೂ ಈ ಗಣತಿಯ 'ಬಹಿರಂಗ' ಅವಶ್ಯಕ ಎನಿಸಿತ್ತು.

ರಾಜಕೀಯವಾಗಿ ಈ ಗಣತಿಯನ್ನು ಮಂಡಿಸುವುದು ಅಷ್ಟು ಸುಲಭದ ಕಾರ್ಯವೇನಾಗಿರಲಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಮೂರು ಬಾರಿ ಜಾತಿ ಗಣತಿಯನ್ನು ಮಂಡಿಸಲು ಸಿದ್ದರಾಮಯ್ಯ ಅವರು ಪ್ರಯತ್ನಿಸಿದ್ದರು. ಆದರೆ ಸಂಪುಟದಲ್ಲಿಯೇ ಇದ್ದ 'ವಿರೋಧ'ದ ಕಾರಣಕ್ಕೆ ಮುಂದೂಡುತ್ತಲೇ ಬಂದರು. ಆದರೀಗ ತೆಲಂಗಾಣದಲ್ಲಿ ಮಂಡನೆಯಾಗುತ್ತಿದ್ದಂತೆ ಅದನ್ನೇ ಮುಂದಿಟ್ಟುಕೊಂಡು ಸಿದ್ದರಾಮಯ್ಯರು ರಾಹುಲ್ ಕಡೆಯಿಂದಲೇ ಗ್ರೀನ್ ಸಿಗ್ನಲ್ ಪಡೆದಿದ್ದರಿಂದ ಬಹಿರಂಗ ಪ್ರತಿರೋಧವಿಲ್ಲದೇ ಕಳೆದ ಸಂಪುಟ ಸಭೆಯಲ್ಲಿ ಮಂಡನೆಯಾಗಿದೆ. ಆದರೆ ಮುಂದೆ ಈ ವರದಿಯನ್ನು ಅಧ್ಯಯನ ಮಾಡಲು ಮತ್ತೊಂದು ಸಂಪುಟ ಉಪಸಮಿತಿಯನ್ನು ರಚಿಸಿ ಕೈತೊಳೆದುಕೊಂಡರೂ ಅಚ್ಚರಿಯಿಲ್ಲ ಎನ್ನುವುದು ಈಗಿನ ರಾಜಕೀಯ ಮೊಗಸಾಲೆಯ ಮಾತಾಗಿದೆ.

ಹಾಗೆ ನೋಡಿದರೆ, ಈಗ ಬಹಿರಂಗವಾಗಿರುವ ಜಾತಿಗಣತಿಯು ನ್ಯಾಯಾಲಯದ ವ್ಯಾಪ್ತಿಯಲ್ಲಿ ಊರ್ಜಿತವಾಗುವುದೇ? ಕಾನೂನು ವ್ಯಾಪ್ತಿಯಲ್ಲಿ ರಾಜ್ಯ ಸರಕಾರಗಳಿಗೆ ಈ ರೀತಿಯ ಗಣತಿ ನಡೆಸಲು ಸಾಧ್ಯವೇ ಎನ್ನುವ ಚರ್ಚೆಗೆ ಅಂತಿಮ ಉತ್ತರವು ನ್ಯಾಯಾಲಯದಲ್ಲಿಯೇ ಸಿಗಬೇಕಿದೆ. ಆದರೆ ಸದ್ಯದ ಮಟ್ಟಿಗೆ ಈ ಗಣತಿಯಿಂದ ಯಾರಿಗಾದರೂ ಲಾಭ ಎನ್ನುವುದಿದ್ದರೆ, ಅದು ರಾಜಕೀಯ ಲಾಭ ಮಾತ್ರ ಎನ್ನುವುದು ಸ್ಪಷ್ಟ. ಈ ವರದಿ ಬಹಿರಂಗವಾಗುವ ತನಕ ಲಿಂಗಾಯತ, ಒಕ್ಕಲಿಗ ಸಮುದಾಯವೇ ರಾಜ್ಯ ರಾಜಕೀಯದ 'ದಿಕ್ಕ'ನ್ನು ತೀರ್ಮಾನಿಸುತ್ತದೆ. ಉತ್ತರ ಹಾಗೂ ಮಧ್ಯ ಕರ್ನಾಟಕದಲ್ಲಿ ಲಿಂಗಾಯತ ಮತ್ತು ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗ ಸಮುದಾಯದೊಂದಿಗೆ ಪರಿಶಿಷ್ಟ ಜಾತಿ ಅಥವಾ ಪಂಗಡದ ಮತಗಳಲ್ಲಿ ಯಾವುದಾದರೂ ಒಂದು ಸಮುದಾಯ ಯಾವ ಪಕ್ಷದ ಪರ ನಿಲ್ಲುವುದೋ ಆ ಪಕ್ಷ ಅಧಿಕಾರ ಗದ್ದುಗೆ ಹಿಡಿಯುತ್ತದೆ ಎನ್ನುವ ಮಾತಿತ್ತು. ಆದರೆ ಮುಂದಿನ ದಿನದಲ್ಲಿ ಇದೇ 'ಬಲ' ಉಳಿಯುವುದೇ ಅಥವಾ ಹಿಂದುಳಿದ ವರ್ಗಗಳ ಪ್ರಮುಖ ಸಮುದಾಯಗಳು ಈ ಸ್ಥಾನವನ್ನು ಪಡೆಯುವುದೋ ಎನ್ನುವುದು ಈಗಿರುವ ಕುತೂಹಲ. ಸುಮಾರು 75 ಲಕ್ಷದಷ್ಟು ಮುಸ್ಲಿಮರ ಸಂಖ್ಯೆಯಿದ್ದರೂ ಆ ಸಮುದಾಯ ಬಿಜೆಪಿಯೊಂದಿಗೆ ಹೋಗುವುದಿಲ್ಲ ಎನ್ನುವ ಖಾತ್ರಿಯಿರುವುದರಿಂದ ರಾಜಕೀಯವಾಗಿ ಮುಸ್ಲಿಮರಿಗೆ ಇದು ಲಾಭ ಕೊಡುವುದಿಲ್ಲ ಎನ್ನುವುದು ರಾಜಕೀಯ ಲೆಕ್ಕಾಚಾರ. ಆದರೆ ಪ್ರವರ್ಗ 1ಎ, 1ಬಿ, 2ಬಿಯಲ್ಲಿ ಬರುವ ಸಮುದಾಯಗಳು ತಾವೂ 'ನಿರ್ಣಾಯಕ' ಎನ್ನುವ ನಿಟ್ಟಿನಲ್ಲಿ ಒಗ್ಗಟ್ಟಿನ ಮಂತ್ರ ಪಠಿಸುತ್ತವೆಯೇ ಎನ್ನುವುದು ಈಗಿರುವ ಪ್ರಶ್ನೆಯಾಗಿದೆ. ಮೇಲ್ನೋಟಕ್ಕೆ ಜಾತಿ-ಜಾತಿಗಳ ಲೆಕ್ಕಾಚಾರ ಸಿಕ್ಕರೂ ಇದು ಜನಮಾನಸಕ್ಕೆ ಹೋಗಿ, ಅರಿವು ಮೂಡಲು ಸಮಯ ಬೇಕಾಗುತ್ತದೆ. ಈ ಜೇನುಗೂಡಿಗೆ ಕೈಹಾಕುತ್ತಿದ್ದಂತೆ ರಾಜಕೀಯ ಕ್ರಾಂತಿಯಾಗಲಿದೆ ಎನ್ನುವುದು ಕಷ್ಟ. ಆದರೆ ಪ್ರಬಲ ಸಮುದಾಯದ ನಾಯಕರು ಆಯಕಟ್ಟಿನ ಸ್ಥಾನವನ್ನು ಉಳಿಸಿಕೊಳ್ಳಲು ಕೆನೆಪದರದ ಸಮುದಾಯಗಳಿಗೆ 'ರೋಸ್ಟರ್' ಪದ್ಧತಿಯಲ್ಲಿ ಇಷ್ಟು ದಿನ ನೀಡುತ್ತಿದ್ದ ಅಧಿಕಾರದ ಮೀಸಲು ಭವಿಷ್ಯದಲ್ಲಿ ಬದಲಾಗುವ ಸಾಧ್ಯತೆಯಿದೆ. ಅದರಲ್ಲಿಯೂ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ, ಮಹಾನಗರ ಪಾಲಿಕೆಗಳಲ್ಲಿನ ಮೇಯರ್ ಸ್ಥಾನಗಳಿಗೆ ಇಷ್ಟು ದಿನ ನೀಡುತ್ತಿದ್ದ 'ಮೀಸಲು' ಕ್ರಮ ಭವಿಷ್ಯದಲ್ಲಿ ಬದಲಾಗುವುದು ನಿಶ್ಚಿತ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದ 'ಪ್ರಬಲ' ಸಚಿವರ ಕೊಸರಾಟದ ಹೊರತಾಗಿಯೂ, ರಾಹುಲ್ ಗಾಂಧಿ ಅವರನ್ನು ವಿಶ್ವಾಸಕ್ಕೆ ಪಡೆದುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತಿಗಣತಿಯ ವರದಿಯನ್ನು ಮಂಡಿಸಿದ್ದಾರೆ. ಕಾಂತರಾಜು ಅವರು ಸಿದ್ಧಪಡಿಸಿ ಸಾಕಷ್ಟು ವರ್ಷ ಕಳೆದು, ಬಳಿಕ ಜಯಪ್ರಕಾಶ್ ಹೆಗ್ಡೆ ಅವರಿಂದ 'ಲೇಪನ'ಗೊಂಡಿರುವ ಈ ಜಾತಿಗಣತಿ ವರದಿಗೆ ಕಾನೂನಿನ ಮಾನ್ಯತೆ ದಕ್ಕುವ ಬಗ್ಗೆ ಈಗಲೂ ಹಲವು ಗೊಂದಲಗಳಿರುವುದು ಸ್ಪಷ್ಟ. ರಾಜ್ಯ ಸರಕಾರದ ಲೆಕ್ಕಾಚಾರವೂ, ಇದನ್ನು ಯಥಾವತ್ತಾಗಿ ಜಾರಿಗೊಳಿಸುವುದಕ್ಕಿಂತ ಹೆಚ್ಚಾಗಿ 'ನುಡಿದಂತೆ' ಜಾತಿಗಣತಿಯನ್ನು ಪರಿಗಣಿಸಿದ್ದೇವೆ ಎನ್ನುವ ಸಂದೇಶವನ್ನು ರಾಜ್ಯದ ಜನರಿಗೆ ಅದರಲ್ಲಿಯೂ ಅಹಿಂದ ಸಮುದಾಯಕ್ಕೆ ರವಾನಿಸುವುದೇ ಆಗಿದೆ. ಆ ಕೆಲಸವನ್ನು ಅದು ಅಚ್ಚುಕಟ್ಟಾಗಿ ಮಾಡಿದೆ. ಈ ನಡೆಯಿಂದ ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ಕಾನೂನಾತ್ಮಕವಾಗಿ ಯಾವೆಲ್ಲ 'ಸೈಡ್ ಎಫೆಕ್ಟ್'ಗಳಾಗಲಿವೆ ಎನ್ನುವುದನ್ನು ಕಾದು ನೋಡಬೇಕಿದೆ.

## ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಪುಣ್ಯಾಶ್ರಮದ ಪ್ರಭೆ

ವಿನಾಯಕ ವೆಂ. ಭಟ್ಟ ಅವರು ಪಂ.ವೆಂಕಟೇಶ ಕುಮಾರ್ ಅವರ ಬಗ್ಗೆ ಬರೆದ 'ಪುಣ್ಯಾಶ್ರಮದ ಪ್ರಭೆಗೆ ಸಂದ ನಾಡೋಜ ಪದವಿ' ಶೀರ್ಷಿಕೆಯ ಅಂಕಣ ಬರಹ (ಏ.13) ಚೆನ್ನಾಗಿ ಮೂಡಿಬಂದಿದೆ. ಆದರೆ, ಸಂಗೀತ ಕಲೆಯನ್ನು ದೇವರಿಂದ ಕೊಡುಗೆಯಾಗಿ ಪಡೆದುಕೊಂಡು ಬಂದ ಗಾಯಕರಲ್ಲಿ ವೆಂಕಟೇಶ ಕುಮಾರ್ ಒಬ್ಬರು ಅಂದರೂ ಅದೇಕೋ ಅಷ್ಟು ಸಮಾಧಾನವಾಗುತ್ತಿಲ್ಲ. ಸಾಂಪ್ರದಾಯಿಕ ಗಾಯನ ಶೈಲಿಯಿಂದಾಗಿ ಸಂಗೀತ ಪ್ರೇಮಿಗಳ ನೆಚ್ಚಿನ ಕಲಾವಿದರಾಗಿರುವ ಇವರು, ಗಾನಗಂಗೋತ್ರಿಯನ್ನು ಆಧುನಿಕ ಆಘಾತಗಳಿಂದ ತಪ್ಪಿಸಿ, ಅದು ಒಂಚೂರೂ ಮಲಿನವಾಗಲು ಬಿಡದೆ ಶುದ್ಧತೆಯನ್ನು ಕಾಪಾಡಿಕೊಂಡು ಬರುತ್ತಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಇದು ಅವರ ವಿಶೇಷತೆಯೂ ಹೌದು.

ಯಾವುದೋ ಒಂದು ಸಂದರ್ಶನದಲ್ಲಿ ಅವರೇ ಹೇಳಿಕೊಂಡಂತೆ, ಪಂಡಿತ ಪಂಚಾಕ್ಷರಿ ಗವಾಯಿ ಅವರ 'ಪುಣ್ಯಾಶ್ರಮ'ದಲ್ಲಿ ಸಂಗೀತಾಭ್ಯಾಸ ಮಾಡಲು ಇರುವ ಸಂಪ್ರದಾಯದಂತೆ ಕನಿಷ್ಠ ನೂರು ರುಪಾಯಿ ನೀಡಲೂ ಅಶಕ್ತರಾದಾಗ, ವೆಂಕಟೇಶರ ಸಂಗೀತ ಪ್ರೇಮವನ್ನು ಅರಿತ ಅವರ ತಂದೆ ಇರುವ ಹೊಲವನ್ನೇ ಮಾರಾಟ ಮಾಡಿ ಹಣವನ್ನು ವ್ಯವಸ್ಥೆ ಮಾಡಿದರಂತೆ. ಈ ಪ್ರಸಂಗವನ್ನು ಕೇಳಿದಾಗ ಯಾರ ಕಣ್ಣಲ್ಲೂ ನೀರು ಬಾರದೇ ಇರದು. ಬೆಳಗ್ಗೆ ನಾಲ್ಕು ಗಂಟೆಗೇ ಎದ್ದು, ದನದ ಕೊಟ್ಟಿಗೆಯಲ್ಲಿನ ಸಗಣಿ ತೆಗೆಯುವುದು ಸೇರಿದಂತೆ ಆಶ್ರಮದ ಇತರೆ ಕೆಲಸಗಳನ್ನೂ ಮಾಡಿ ತರುವಾಯದಲ್ಲಿ ಸಂಗೀತಾಭ್ಯಾಸಕ್ಕೆ ಕೂತರೆ ವೆಂಕಟೇಶರಿಗೆ ಸಮಯದ ಪ್ರಜ್ಞೆಯೂ ಇರುತ್ತಿರಲಿಲ್ಲವಂತೆ. ಒಂದೊಂದು ರಾಗವನ್ನೂ ಅದೆಷ್ಟು ಆಳವಾಗಿ ಕಲಿಯಬೇಕಿತ್ತು ಎಂದರೆ, ಅದರ ಮೇಲೆ ಹಿಡಿತ ಸಿಗುವವರೆಗೂ ಅಭ್ಯಾಸವನ್ನು ನಡೆಸುತ್ತಲೇ ಇರಬೇಕಿತ್ತಂತೆ. ಈ ವಿಷಯದಲ್ಲಿ ಯಾರಿಗೂ ರಿಯಾಯಿತಿ ಇರುತ್ತಿರಲಿಲ್ಲವಂತೆ! 'ಇದಕ್ಕೆ ಯಾವುದೇ ಷಾರ್ಟ್‌ಕಟ್ ಇರುತ್ತಿರಲಿಲ್ಲ, ಇಂಥ ಕಠಿಣ ಅಭ್ಯಾಸವನ್ನು ಮಾಡಲಾಗದ ಅನೇಕರು ಗುರುಕುಲವನ್ನೇ ಬಿಟ್ಟಿದ್ದೂ ಇದೆ' ಎಂಬುದನ್ನೂ ವೆಂಕಟೇಶರು ಹೇಳಿದ್ದುಂಟು.

ಆದರೆ, ಇಂಥದೊಂದು ಕಠಿಣ ಪದ್ಧತಿಯಿಂದಾಗಿ ವೆಂಕಟೇಶ ಕುಮಾರ್ ಅವರು ದಿನಗಳೆದಂತೆ ಹೆಚ್ಚೆಚ್ಚು ಗಟ್ಟಿಯಾಗುತ್ತಲೇ ನಡೆದರು. ಸಂಗೀತಕ್ಕೆ ಬೇಕಿರುವುದು ಸಾಧನೆ, ಮತ್ತೂ ಸಾಧನೆ, ಇನ್ನೂ ಸಾಧನೆ ಎಂಬಂತೆ, ನಿರಂತರ ಅಭ್ಯಾಸದಿಂದಾಗಿ ಅವರ ಕಂಠಸಿರಿ ಸಮೃದ್ಧವಾಗಿ, ಅದು ಸಂಗೀತದ ಸಿರಿಯನ್ನೇ ಹೆಚ್ಚಿಸುತ್ತ ಸಾಗಿತು. ಪಂ.ಭೀಮಸೇನ ಜೋಶಿಯವರು ಒಮ್ಮೆ ಅವರಿಗೆ ಪುಣೆಯ ಪ್ರತಿಷ್ಠಿತ ಸವಾಯಿ ಗಂಧರ್ವ ಸಂಗೀತ ಕಾರ್ಯಕ್ರಮದಲ್ಲಿ ಹಾಡಲು ಅವಕಾಶ ಕೊಟ್ಟಿದ್ದು ಅವರ ಆತ್ಮಬಲವನ್ನೇ ಹೆಚ್ಚಿಸಿ, ಸಂಗೀತದಲ್ಲಿ ಇನ್ನೂ ಹೆಚ್ಚೆಚ್ಚು ಸಾಧಿಸಬೇಕೆಂದು ಸಂಕಲ್ಪಿಸುವಂತೆ ಮಾಡಿತು ಎಂಬುದೂ ಸಂಗೀತದ ಮೇಲಿನ ವೆಂಕಟೇಶರ ಶ್ರದ್ಧೆ ಮತ್ತು ತುಡಿತದ ಪ್ರತೀಕ. ಕಿತ್ತು ತಿನ್ನುವ ಬಡತನದ ಕಾರಣದಿಂದಾಗಿ ಒಂದೊಮ್ಮೆ ಅವರು ಸಂಗೀತವನ್ನು ಆಯ್ಕೆ ಮಾಡಿಕೊಳ್ಳದೇ ಇದ್ದಿದ್ದರೆ, ಇಂದು ಸಂಗೀತ ಕ್ಷೇತ್ರವೇ ಆ ಮಟ್ಟಿಗೆ ಬಡವಾಗಿಬಿಡುತ್ತಿತ್ತು ಅಂದರೂ ಅತಿಶಯೋಕ್ತಿಯಲ್ಲ. ವೆಂಕಟೇಶರಿಗೆ ಇದುವರೆಗೆ ಸಾಕಷ್ಟು ಸನ್ಮಾನಗಳಾಗಿ ಪ್ರಶಸ್ತಿ-ಪುರಸ್ಕಾರಗಳು ದಕ್ಕಿದ್ದರೂ ಅವರು ಅದೆಷ್ಟು ಸರಳ ವ್ಯಕ್ತಿತ್ವವನ್ನು ಹೊಂದಿದವರು ಎಂಬುದು ಅವರ ಪ್ರತಿಯೊಂದು ಸಂಗೀತ ಕಛೇರಿಯಲ್ಲೂ ಸ್ಪಷ್ಟವಾಗುತ್ತದೆ. ಅಲ್ಲೆಲ್ಲ ತಮ್ಮ ಗುರುಗಳನ್ನು ನೆನೆಯದೆ ಅವರ ಕಾರ್ಯಕ್ರಮ ಮುಗಿಯುವುದಿಲ್ಲ. ಇದು ಗುರುವಿನ ಮೇಲೆ ಅವರಿಗಿರುವ ಗೌರವ, ಆದರ ಮತ್ತು ಪ್ರೀತಿಯ ಸಂಕೇತ. ಇಂಥವರ ಸಂಖ್ಯೆ ಸಾವಿರವಾಗಲಿ.

- ಶಂಕರನಾರಾಯಣ ಭಟ್, ಮಾಡಗೇರಿ

**ಓದುಗರ ಒಣಿಗೆ ಭೇಟಿ ಕೊಡಿ**

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

# ಅನುಕೂಲಸಿಂಧು ಹೊಂದಾಣಿಕೆ ದಡ ಸೇರಬಹುದೇ?

**ತೀರಾ ಇತ್ತೀಚಿನವರೆಗೆ ಕೇವಲ ವದಂತಿಯಾಗಿದ್ದ ಬಿಜೆಪಿ-ಎಐಎಡಿಎಂಕೆ ಮೈತ್ರಿಗೆ ಈಗ ಅಧಿಕೃತ ಠಸ್ಸೆ ಬಿದ್ದಂತಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸ್ವತಃ ಮುತುವರ್ಜಿ ವಹಿಸಿ, ಚೆನ್ನೈಗೆ ತೆರಳಿ, ಆರಂಭಿಕ ಅಡೆತಡೆಗಳನ್ನು ನಿವಾರಿಸಿ ಹಾದಿಯನ್ನು ಸುಸೂತ್ರಗೊಳಿಸಿದ್ದು, ಗೆಲುವಿನ ಬಗ್ಗೆ ಭಾರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಎಐಎಡಿಎಂಕೆ ಸಂಗಡ ಮೈತ್ರಿಗೆ ಒಲವು ತೋರಿಸದ ಅಣ್ಣಾಮಲೈ ಅವರಿಗೆ ದೆಹಲಿಯಲ್ಲಿ ಇನ್ನೂ ಉತ್ತಮ ಹುದ್ದೆಯನ್ನು ತೋರಿಸಿ ಮೈತ್ರಿ ಒಪ್ಪಂದವನ್ನು ಅವರು ಸಾಧಿಸಿದ್ದಾರೆ ಎನ್ನಲಾಗುತ್ತದೆ.**

ವಿಶ್ಲೇಷಣೆ

ರಮಾನಂದ ಶರ್ಮಾ
vveditoped@gmail.com

ತಮಿಳುನಾಡಿನಲ್ಲಿ 2026ರಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು, ಈ ನಿಟ್ಟಿನಲ್ಲಿ ಬಿರುಸಿನ ತಯಾರಿ, ತಂತ್ರಗಾರಿಕೆ, ಹೊಂದಾಣಿಕೆ ಮಾತುಕತೆ ನಡೆಯುತ್ತಿವೆ. ಈ ಚುನಾವಣೆಯು ಹಿಂದಿನ ಎಲ್ಲ ಚುನಾವಣೆಗಳಿಗಿಂತ ವಿಭಿನ್ನವಾಗಲಿದ್ದು, ಹಲವು ಪಕ್ಷಗಳಿಗೆ, ರಂಗಗಳಿಗೆ, ಸಿದ್ಧಾಂತಗಳಿಗೆ, ವೈಯಕ್ತಿಕ ಪ್ರತಿಷ್ಠೆಗಳಿಗೆ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಡಿಎಂಕೆ ಪಕ್ಷಕ್ಕೆ ಅಸ್ತಿತ್ವದ ಚಿಂತೆಯಾದರೆ, ಬಿಜೆಪಿಗೆ ತಾನು ಕೇವಲ ಹಿಂದಿ, ಹಿಂದೂ, ಹಿಂದೂಸ್ತಾನಿ ಪಕ್ಷವಲ್ಲ, ದಕ್ಷಿಣದಲ್ಲಿ ಕರ್ನಾಟಕದ ಆಚೆಗೂ ತಾನು ಪ್ರಸ್ತುತ ಎಂದು ತೋರಿಸುವ ಅನಿವಾರ್ಯತೆಯಿದೆ. ತಮಿಳರ ಮತ್ತು ತಮಿಳುನಾಡಿನ ರಾಜಕೀಯದ ನಾಡಿಮಿಡಿತವನ್ನು ಚೆನ್ನಾಗಿ ಅರಿತಿರುವ ಕಾಂಗ್ರೆಸ್ ಪಕ್ಷವು, ಆ ರಾಜ್ಯದಲ್ಲಿ ರಾಷ್ಟ್ರೀಯ ಪಕ್ಷಗಳಿಗಿರುವ ಇತಿಮಿತಿಗಳನ್ನು ಗ್ರಹಿಸಿ ಅದಕ್ಕೆ ತಕ್ಕಂತೆ ಹೊಂದಿಕೊಂಡಿದೆ.

ತಮಿಳುನಾಡಿನಲ್ಲಿ ನೆಲೆಯೂರಲು ಭಾರಿ ಕನಸು ಕಾಣುತ್ತಿರುವ ಬಿಜೆಪಿ, ಇದಕ್ಕೆ ಅಲ್ಲಿನ ಪ್ರಾದೇಶಿಕ ಪಕ್ಷದೊಡನೆ ಹೊಂದಾಣಿಕೆ ಅನಿವಾರ್ಯ ಎಂಬ ವಾಸ್ತವವನ್ನು ಮನಗಂಡು, ಸ್ವಲ್ಪ ಮುಜುಗರವಾದರೂ ಎಐಎಡಿಎಂಕೆ ಸಂಗಡ ಕೂಡಿಕೆ ಮಾಡಿಕೊಂಡಿದೆ. ಡಿಎಂಕೆ ಮತ್ತು ಎಐಎಡಿಎಂಕೆಗಳು ಪರಸ್ಪರ ಕಟ್ಟಾವಿರೋಧಿಗಳಾಗಿರುವುದರಿಂದ 'ಶತ್ರುವಿನ ಶತ್ರು ಮಿತ್ರ' ಎಂಬ ಸೂತ್ರವನ್ನು ಬಿಜೆಪಿ ಪಾಲಿಸಿದೆ. ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ಪಕ್ಷಗಳಿಗೆ ತಮಿಳರು ಸಾಮಾನ್ಯವಾಗಿ ಮತ ಹಾಕುವುದಿಲ್ಲ ಎಂಬ ಸತ್ಯವನ್ನು ತಿಳಿದೂ ಎಐಎಡಿಎಂಕೆಯು ಬಿಜೆಪಿಯೊಂದಿಗೆ ಕೈಜೋಡಿಸಿರುವುದು ರಾಜಕೀಯ ವಲಯದಲ್ಲಿ ಅಚ್ಚರಿ ಮೂಡಿಸಿದೆ.

ತೀರಾ ಇತ್ತೀಚಿನವರೆಗೆ ಕೇವಲ ವದಂತಿಯಾಗಿದ್ದ ಬಿಜೆಪಿ-ಎಐಎಡಿಎಂಕೆ ಮೈತ್ರಿಗೆ ಈಗ ಅಧಿಕೃತ ಠಸ್ಸೆ ಬಿದ್ದಂತಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸ್ವತಃ ಮುತುವರ್ಜಿ ವಹಿಸಿ, ಚೆನ್ನೈಗೆ ತೆರಳಿ, ಆರಂಭಿಕ ಅಡೆತಡೆಗಳನ್ನು ನಿವಾರಿಸಿ ಹಾದಿಯನ್ನು ಸುಸೂತ್ರಗೊಳಿಸಿದ್ದು, ಗೆಲುವಿನ ಬಗ್ಗೆ ಭಾರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಎಐಎಡಿಎಂಕೆ ಸಂಗಡ ಮೈತ್ರಿಗೆ ಒಲವು ತೋರಿಸದ ಅಣ್ಣಾಮಲೈ ಅವರಿಗೆ ದೆಹಲಿಯಲ್ಲಿ ಇನ್ನೂ ಉತ್ತಮ ಹುದ್ದೆಯನ್ನು ತೋರಿಸಿ ಮೈತ್ರಿ ಒಪ್ಪಂದವನ್ನು ಅವರು ಸಾಧಿಸಿದ್ದಾರೆ ಎನ್ನಲಾಗುತ್ತದೆ. ತಮಿಳುನಾಡಿನಲ್ಲಿ ರಾಷ್ಟ್ರೀಯ ಪಕ್ಷಗಳು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕೇ ವಿನಾ, ಪ್ರಾದೇಶಿಕ ಪಕ್ಷಗಳೆಂಬ ಊರುಗೋಲುಗಳನ್ನು ಆಶ್ರಯಿಸಿ ತಮ್ಮ ಅಸ್ಮಿತೆ-ಅಸ್ತಿತ್ವವನ್ನು ಕಳೆದುಕೊಳ್ಳಬಾರದು ಎಂಬ ಧ್ಯೇಯವನ್ನು ಇಟ್ಟುಕೊಂಡಿದ್ದರು ಅಣ್ಣಾಮಲೈ. ಈ ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಈ ಧ್ಯೇಯವು ವಿಫಲಗೊಂಡರೂ, 'ಮರಳಿ ಯತ್ನವ ಮಾಡು' ಎನ್ನುವಂತೆ 2026ರ ವಿಧಾನಸಭಾ ಚುನಾವಣೆಯಲ್ಲಿ ಮಗದೊಮ್ಮೆ ಯತ್ನಿಸಲು ಅವರು ತಯಾರಿ ನಡೆಸಿದ್ದರು. ಸ್ವಲ್ಪ ವಿಳಂಬವಾದರೂ ಪರವಾಗಿಲ್ಲ, ಹಂಗಿನ ಅರಮನೆಯಲ್ಲಿರದೆ ತಮ್ಮ ಕಾಲ ಮೇಲೆ ತಾವು ನಿಲ್ಲಬೇಕು ಎನ್ನುವ ತತ್ವವನ್ನು ಅವರು ಬಲವಾಗಿ ನಂಬಿದ್ದರು ಹಾಗೂ ಆ ನಿಟ್ಟಿನಲ್ಲಿ ಬಹುವಾಗಿ ಶ್ರಮಿಸಿದ್ದರು. ಆದರೆ, ರಾಷ್ಟ್ರೀಯ ಪಕ್ಷಗಳಲ್ಲಿ ಮುಜುಗರವಾದರೂ ಕಡ್ಡಾಯವಾಗಿ ಪಾಲಿಸಬೇಕಾದ ಹೈಕಮಾಂಡ್ ನಿರ್ದೇಶನವು ಕೈಯನ್ನು ಕಟ್ಟಿಹಾಕಿರುವುದರಿಂದ ಅವರು ಪಕ್ಷದ ವರಿಷ್ಠರ ಆಶಯಕ್ಕೆ ತಲೆಬಾಗಿದ್ದಾರೆ ಮತ್ತು ಈ ನಿಟ್ಟಿನಲ್ಲಿ ಏನನ್ನೂ ಪ್ರತಿಕ್ರಿಯಿಸದೆ ಆದೇಶವನ್ನು ಶಿಸ್ತಿನ ಸಿಪಾಯಿಯಂತೆ ಪಾಲಿಸಿದ್ದಾರೆ.

ಅಣ್ಣಾಮಲೈ ಅವರು ಎಐಎಡಿಎಂಕೆ ಕಾರ್ಯದರ್ಶಿ ಎ.ಪಳನಿಸ್ವಾಮಿಯವರಂತೆ ಗೌಂಡರ್ ಸಮುದಾಯಕ್ಕೆ ಸೇರಿದವರಾಗಿರುವುದರಿಂದ, ಇಬ್ಬರು ಧುರೀಣರು ಒಂದೇ ಸಮುದಾಯದವರು ಎಂಬ ತಪ್ಪು ಸಂದೇಶ ಹೊಮ್ಮದಿರಲಿ ಎಂಬ ಕಾರಣಕ್ಕೆ ಅಣ್ಣಾಮಲೈ ಅವರನ್ನು ದೂರ ಸರಿಸಲಾಗಿದೆ ಎನ್ನುವ ಮಾತು ಕೇಳಿಬರುತ್ತಿದ್ದರೂ, ಯಾರೂ ಅದನ್ನು 'ಮುಖಬೆಲೆ'ಯಲ್ಲಿ ಸ್ವೀಕರಿಸುತ್ತಿಲ್ಲ. ಒಂದು ಕಾಲಕ್ಕೆ ದಕ್ಷ ಪೊಲೀಸ್ ಅಧಿಕಾರಿಯಾಗಿದ್ದ ಅವರು, ಪಕ್ಷದ ಶಿಸ್ತಿನ ಚೌಕಟ್ಟಿನಲ್ಲೇ ತಮಿಳುನಾಡಿನಲ್ಲಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲು ಬಹುವಾಗಿ ಬೆವರು ಸುರಿಸಿದ್ದರು. ಚುನಾವಣೆಯಲ್ಲಿ ಗಮನಾರ್ಹ ಯಶಸ್ಸನ್ನು ಕಾಣದಿದ್ದರೂ, ಆ ರಾಜ್ಯದಲ್ಲಿ ಬಿಜೆಪಿಯ ಬೀಜ ಬಿತ್ತುವಲ್ಲಿ, ಅದರ ಸಿದ್ಧಾಂತಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸಫಲರಾಗಿದ್ದರು. ಮುಂದಿನ ದಿನಗಳಲ್ಲಿ ಬಿಜೆಪಿಯು ತಮಿಳುನಾಡಿನಲ್ಲಿ ದೊಡ್ಡ ಮಟ್ಟದ ಸದ್ದು-ಸುದ್ದಿ ಮಾಡಿದರೆ, ಅದರ ಶ್ರೇಯಸ್ಸು ಅಣ್ಣಾಮಲೈ ಅವರಿಗೆ ಸಲ್ಲಬೇಕು. ಆದರೆ, ಪ್ರಾದೇಶಿಕ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ನಿರಾಕರಿಸಿದ ಕಾರಣ ಅವರನ್ನು ಬದಿಗೆ ಸರಿಸಿರುವುದು ದುರ್ದೈವ ಎನ್ನಲಾಗುತ್ತಿದೆ. ಹೆಚ್ಚು ಸೀಟುಗಳನ್ನು ಪಡೆದು, ತನ್ಮೂಲಕ ಆಡಳಿತದ ಚುಕ್ಕಾಣಿ ಹಿಡಿಯುವ ಧಾವಂತದಲ್ಲಿ ಬಿಜೆಪಿಯು ತನ್ನ ತತ್ವಾದರ್ಶಗಳನ್ನು ಬದಿಗೊತ್ತಿತೇ? ತಾನು ಇತರ ಪಕ್ಷಗಳಿಗಿಂತ ಭಿನ್ನ ಎಂಬ ಇಮೇಜನ್ನು ಕಳಚಿಕೊಂಡಿತೇ? ಎಂಬ ಮಾತುಗಳು ರಾಜಕೀಯ ಪಡಸಾಲೆಯಲ್ಲಿ ಕೇಳಿಬರುತ್ತಿವೆ.

2026ರ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಪಂದ್ಯ ಹೇಗಿರಬಹುದೆಂಬ ಚಿತ್ರಣ ಸ್ಪಷ್ಟವಾಗುತ್ತಿದೆ. ಕಾಂಗ್ರೆಸ್ ಬೆಂಬಲಿತ ಡಿಎಂಕೆ ನೇತೃತ್ವದ ರಂಗ, ಎಐಎಡಿಎಂಕೆ ಬೆಂಬಲಿತ ಬಿಜೆಪಿಯ ಕೂಟ ಮತ್ತು ಜನಪ್ರಿಯ ನಟ 'ದಳಪತಿ' ವಿಜಯ್ ನೇತೃತ್ವದ 'ತಮಿಳು ವೇಟ್ರಿ ಕಳಗಂ' ಈ ಮೂರು ಪಾಳಯಗಳು ಪರಸ್ಪರ ತೊಡೆತಟ್ಟುವುದು ಬಹುತೇಕ ನಿಶ್ಚಿತ. ಉಳಿದ ಪಕ್ಷಗಳು ಸ್ವಲ್ಪ ಸೀಟುಗಳ ಹೊಂದಾಣಿಕೆ ಮಾಡಿಕೊಂಡು, ಈ ಮೂರು ಕೂಟಗಳ ಪೈಕಿ ಒಂದರಿಂದ ಸ್ಪರ್ಧಿಸಬಹುದು ಅಥವಾ ಹಠಮಾರಿತನದಿಂದ ಪ್ರತ್ಯೇಕವಾಗಿ ಸ್ಪರ್ಧಿಸಿ ಅಸ್ತಿತ್ವಕ್ಕೆ ಪರದಾಡಬಹುದು. ವಿಜಯ್ ತೀವ್ರ ಸ್ಪರ್ಧೆ ನೀಡುವ ಸಾಧ್ಯತೆಯಿದ್ದು, ಜನರು ಬದಲಾವಣೆ ಬಯಸಿದರೆ ಅಥವಾ ಚಿತ್ರರಂಗದವರನ್ನು ಚುನಾಯಿಸುವ ತಮ್ಮ ಹಳೆಯ ಪರಂಪರೆಯನ್ನು ಮುಂದುವರಿಸಿದರೆ, ಸನಾತನ ಧರ್ಮವನ್ನು ಮತ್ತು ಹಿಂದೂಗಳನ್ನು ದ್ವೇಷಿಸುವವರಿಗೆ ಪಾಠ ಕಲಿಸಬೇಕು ಎಂದು ಮನಸ್ಸು ಮಾಡಿದರೆ, ಡಿಎಂಕೆ ಈ ಸಲ ಭಾರಿ ಬೆವರು ಸುರಿಸಬೇಕಾಗುತ್ತದೆ. ರಜನಿಕಾಂತ್ ಅವರಿಗೆ ಅಪಾರ ಅಭಿಮಾನಿಗಳ ಬಳಗವಿತ್ತು; ಆದರೂ ತಮ್ಮ ಧಾರ್ಮಿಕ ಭಾವನೆಗಳು ಮತ್ತು ಬದುಕಿನ ಶೈಲಿಯು ಮತದಾರರ ಭಾವನೆಗಳಿಗೆ ಸ್ಪಂದಿಸಲಾರದು ಎಂಬುದನ್ನು ಗ್ರಹಿಸಿದ ಅವರು ಹೆಜ್ಜೆಯನ್ನು ಮುಂದಿಡಲಿಲ್ಲ. ತಮಿಳುನಾಡಿನಲ್ಲಿ ದಶಕಗಳ ಕಾಲದಿಂದ ಬಾಳಿರುವ ಮತ್ತು ಅಧ್ಯಾತ್ಮದತ್ತ ಹೆಚ್ಚು ವಾಲಿರುವ ಅವರು, ಅಲ್ಲಿನ ಜನರ ನಾಡಿಮಿಡಿತವನ್ನು ಚೆನ್ನಾಗಿ ಅರಿತು ಪ್ರಜ್ಞಾವಂತ ನಿರ್ಣಯವನ್ನೇ ತಳೆದಿದ್ದಾರೆ, ರಾಜಕೀಯದಿಂದ ವಿಮುಖರಾಗಿದ್ದಾರೆ ಎನ್ನಲಾಗುತ್ತದೆ. ಆದರೆ ವಿಜಯ್ ಇನ್ನೂ ಯುವಕ, ಉತ್ಸಾಹದ ಚಿಲುಮೆ. ಏನೋ ಮಾಡಬೇಕು ಎನ್ನುವ ಹುಮ್ಮಸ್ಸಿನಲ್ಲಿರುವ ಅವರು, ದಡ ಸೇರುವ ಕಾತುರದಲ್ಲಿದ್ದಾರೆ. ಅದಕ್ಕೆ ಜನರು ನೀಡಿರುವ ಆರಂಭಿಕ ಪ್ರತಿಕ್ರಿಯೆಯನ್ನು ನೋಡಿದರೆ ಅವರ ಯಶಸ್ಸಿನ ಬಗ್ಗೆ ಸ್ವಲ್ಪ ಆಶಾಭಾವನೆ ಮೂಡುತ್ತದೆ. ಆದರೆ, 'ಅವಸರದ ಹೊಸಬರಿಗಿಂತ ಅನುಭವಿ ಹಳಬರು ವಾಸಿ' ಎಂದು ಮತದಾರ ನಿರ್ಧರಿಸಿದರೆ ವಿಜಯ್‌ಗೆ ಸ್ವಲ್ಪ ಕಷ್ಟವಾಗಬಹುದು.

ಬಿಜೆಪಿಯ ಧುರೀಣರು ಎಐಎಡಿಎಂಕೆ ನಾಯಕಿ ಜಯಲಲಿತಾರನ್ನು ಹಿಂದೆ ಟೀಕಿಸಿದ್ದು ಈ ಮೈತ್ರಿಗೆ ಮುಳ್ಳಾಗಬಹುದು ಎಂದು ಕೆಲವರು ಮಾತಾಡಿಕೊಳ್ಳುತ್ತಿದ್ದರೆ, ಹೊಸ ಪಕ್ಷವನ್ನು ಕಟ್ಟಿ ಕೈಸುಟ್ಟುಕೊಂಡಿರುವ ಕಮಲಹಾಸನ್ ಇತ್ತೀಚೆಗೆ ಡಿಎಂಕೆಯತ್ತ ವಾಲುತ್ತಿದ್ದು ಅದರ ವತಿಯಿಂದಲೇ ರಾಜ್ಯಸಭೆಯನ್ನು ಪ್ರವೇಶಿಸಬಹುದು ಎಂಬ ಗುಸುಗುಸು ಕೇಳಿಬರುತ್ತಿದೆ ಮತ್ತು ಅವರು ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆಯನ್ನು ಬೆಂಬಲಿಸುವುದು ಖಚಿತ ಎನ್ನಲಾಗುತ್ತಿದೆ.

ರಾಜಕೀಯದ ಸ್ವರೂಪ, ಹೊಂದಾಣಿಕೆಗಳು, ತಂತ್ರಗಾರಿಕೆಗಳು ರಾಜ್ಯದಿಂದ ರಾಜ್ಯಕ್ಕೆ ಬೇರೆ ಬೇರೆಯಾಗಿರುತ್ತವೆ. ಆದರೆ, ತಮಿಳುನಾಡಿನ ರಾಜಕೀಯವು 'ಊರಿಗೊಂದು ದಾರಿಯಾದರೆ, ಪೋರನಿಗೆ ಮತ್ತೊಂದು ದಾರಿ' ಎನ್ನುವಂತೆ ಸಂಪೂರ್ಣವಾಗಿ ಬೇರೆಯದೇ ಆಗಿರುತ್ತದೆ. ಇಲ್ಲಿ ಅಭಿವೃದ್ಧಿಯ ಅಜೆಂಡಾಗಳಿಗಿಂತ, ನಾಡು-ನುಡಿ-ಸಂಸ್ಕೃತಿಯಂಥ ಭಾವನಾತ್ಮಕ ವಿಷಯಗಳೇ ಮುಖ್ಯ. ಇಲ್ಲಿ ರಾಷ್ಟ್ರೀಯ ಪಕ್ಷಗಳು ನೆಪಮಾತ್ರಕ್ಕೆ ಇವೆ; ಅವು ಅಧಿಕಾರದ ಗದ್ದುಗೆ ಹಿಡಿಯುವ ಮಾತಿರಲಿ, ತಮ್ಮ ಅಸ್ತಿತ್ವಕ್ಕೆ ಅಲ್ಲಿನ ಪ್ರಾದೇಶಿಕ ಪಕ್ಷಗಳ ಬಾಲಂಗೋಚಿಗಳಾಗಿ ಇರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಅಹಂ ತೋರಿಸಿದರೆ ಅಥವಾ ಮಿತಿಗಿಂತ ಹೆಚ್ಚು ಚೌಕಾಸಿ ಮಾಡಿದರೆ, ಅವು ತಮಿಳುನಾಡಿನ ರಾಜಕೀಯ ಭೂಪಟದಿಂದಲೇ ಕಾಣೆಯಾಗುತ್ತವೆ. ಈ ಸತ್ಯವನ್ನು ಮನಗಂಡೇ ಕಾಂಗ್ರೆಸ್ ಪಕ್ಷವು ದಶಕಗಳಿಂದ 'ಹಿರಿಯಣ್ಣ ಕೊಟ್ಟಿದ್ದೇ ಪ್ರಸಾದ' ಎಂದು ಸ್ವೀಕರಿಸಿ ರಾಜಕೀಯ ಅಖಾಡದಲ್ಲಿ ಇನ್ನೂ ಉಸಿರಾಡುತ್ತಿದೆ. 1967ರಲ್ಲಿ ಎಂ.ಭಕ್ತವತ್ಸಲಂ ಅವರು ಕಾಂಗ್ರೆಸ್ ಪಕ್ಷದಿಂದ ಕೊನೆಯ ಮುಖ್ಯಮಂತ್ರಿಯಾಗಿದ್ದು ಬಿಟ್ಟರೆ ಈವರೆಗೆ ಪುನಃ ರಾಷ್ಟ್ರೀಯ ಪಕ್ಷಗಳಿಗೆ ಈ ಹುದ್ದೆ ಮರೀಚಿಕೆಯಾಗಿದೆ. ಬಿಜೆಪಿ ಕೂಡ ಈ ಬಾರಿ ದಾರಿಯನ್ನು ಬದಲಿಸಿದಂತೆ ಕಾಣುತ್ತಿದ್ದು, 'ಅಧಿಕಾರ ದೊರಕದಿದ್ದರೂ ಪರವಾಗಿಲ್ಲ, ಕನಿಷ್ಠಪಕ್ಷ ಅಸ್ತಿತ್ವವಾದರೂ ಉಳಿಯಲಿ' ಎಂದು ಅದು ಆಲೋಚಿಸಿದಂತೆ ಕಾಣುತ್ತದೆ.

ಈ ಬಾರಿಯ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ, ಉತ್ತರ-ದಕ್ಷಿಣ, ಹಿಂದಿ-ಹಿಂದಿಯೇತರ ಚರ್ಚಾ ವಿಷಯಗಳು, ಕೇಂದ್ರ-ರಾಜ್ಯ ಸಂಬಂಧಗಳು, ರಾಷ್ಟ್ರೀಯ ಶಿಕ್ಷಣ ನೀತಿ, ನೀಟ್ ಪರೀಕ್ಷೆ, ತಮಿಳುನಾಡಿನ ರಾಜ್ಯಪಾಲರ ವಿರುದ್ಧದ ಸುಪ್ರೀಂಕೋರ್ಟ್ ತೀರ್ಪು, ಹಿಂದಿ ಹೇರಿಕೆಗಳು ದೊಡ್ಡ ಪ್ರಮಾಣದಲ್ಲಿ ಧೂಳೆಬ್ಬಿಸಲಿವೆ ಎಂದು ಭಾಷ್ಯ ಬರೆಯುತ್ತಿದ್ದಾರೆ ವಿಶ್ಲೇಷಕರು. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ತ್ರಿಭಾಷಾ ಸೂತ್ರದ ಅನುಷ್ಠಾನ, ಈ ನಿಟ್ಟಿನಲ್ಲಿ ಸಮಗ್ರ ಶಿಕ್ಷಣ ನೀತಿಯ ಅಡಿಯಲ್ಲಿ ಕೇಂದ್ರ ಸರಕಾರ ನೀಡುವ 2,152 ಕೋಟಿ ರು.ಗಳ ಅನುದಾನ ನಿಲ್ಲಿಸುವ ಕೇಂದ್ರ ಮಂತ್ರಿ ಧರ್ಮೇಂದ್ರ ಪ್ರಧಾನ್‌ರ ಎಚ್ಚರಿಕೆ, 10,000 ಕೋಟಿ ನೀಡಿದರೂ ತ್ರಿಭಾಷಾ ಸೂತ್ರ ಅಳವಡಿಸದಿರುವ ಚಾಲೆಂಜ್, ದೇವನಾಗರಿ ಲಿಪಿ ಹೋಲುವ ರುಪಾಯಿ ಚಿಹ್ನೆ ಬದಲಿಗೆ ತಮಿಳು ಚಿಹ್ನೆ ಬಳಕೆ, ತಮಿಳು ಮಾಧ್ಯಮದಲ್ಲಿ ವೈದ್ಯಕೀಯ-ಎಂಜಿನಿಯರಿಂಗ್ ಶಿಕ್ಷಣ ಮುಂತಾದ ವಿಷಯಗಳು ಭಾರಿ ಸದ್ದು ಮಾಡುವ ಸಾಧ್ಯತೆಯಿದೆ ಮತ್ತು ಇವು ಚುನಾವಣಾ ಫಲಿತಾಂಶದಲ್ಲಿ ಅಚ್ಚರಿ ಉಂಟುಮಾಡುವುದನ್ನು ಅಲ್ಲಗಳೆಯಲಾಗದು. ಡಿಎಂಕೆ ಮತ್ತು ಬಿಜೆಪಿ ಈ ಎರಡೂ ರಂಗಗಳು ಈ ವಿಷಯಗಳನ್ನು ತಂತಮ್ಮ ಮೂಗಿನ ನೇರಕ್ಕೆ ಬಳಸಿಕೊಳ್ಳುವುದು ನಿಶ್ಚಿತ. ನಾಡು, ನುಡಿ, ಸಂಸ್ಕೃತಿ ವಿಷಯದಲ್ಲಿ ತನ್ನದೇ ಚಿಂತನೆಯನ್ನು ಮೈಗೂಡಿಸಿಕೊಂಡು ಪಾಲಿಸುವ ತಮಿಳುನಾಡು ರಾಜ್ಯವು, ಒಕ್ಕೂಟ ವ್ಯವಸ್ಥೆಗೆ ಹೊಸರೂಪ ಕೊಡಬಹುದೇ ಎಂಬ ಪ್ರಶ್ನೆಯು ರಾಜಕೀಯ ಪಡಸಾಲೆಯಲ್ಲಿ ಬಿಸಿಬಿಸಿಯಾಗಿ ಚರ್ಚೆಯಾಗುತ್ತಿದೆ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

## ಭಟ್ಟರ್ ಸ್ಕಾಚ್

- **ವಿನಯ್ ದೊಡ್ಡಮನಿ, ಬೆಳಗಾವಿ**
ಭಟ್ರೇ, ಇಬ್ಬರು ವ್ಯಕ್ತಿಗಳ ನಡುವಿನ ಅತ್ಯಂತ ಕಡಿಮೆ ಅಂತರಕ್ಕೆ ನೀವು ಏನಂತ ಕರೆಯುತ್ತೀರಿ?
– **ನಗು!**

- **ಮೋಹನ್ ಚಂದನ, ಬೆಂಗಳೂರು**
ಭಟ್ರೇ, ಜೀವನದಲ್ಲಿ ಫರ್ನಿಚರ್ ಮಾರಾಟ ದಂಧೆಯನ್ನು ಮಾಡಬಹುದಾ?
– **ಖಂಡಿತ ಮಾಡಬಹುದು, ಆದರೆ ಆ ಫರ್ನಿಚರ್ ನಮ್ಮ ಮನೆಯದ್ದಾಗಿರಬಾರದು!**

- **ಟಿ.ವಿ.ರುದ್ರಮನಿ, ಬಳ್ಳಾರಿ**
ಭಟ್ರೇ, ಕಾಮನ್ ಸೆನ್ಸ್ ಅಂದರೆ ಪರ್ಫ್ಯೂಮ್ ಅಂತಾರಲ್ಲ?
– **ಹೂಂ.. ಯಾರಿಗೆ ಅದರ ಅಗತ್ಯವಿದೆಯೋ ಅವರು ಎಂದೆಂದೂ ಅದನ್ನು ಬಳಸುವುದಿಲ್ಲ!**

- **ಸೌಮ್ಯ, ಬೆಂಗಳೂರು**
ಭಟ್ರೇ, ಐದು ನಿಮಿಷದಲ್ಲಿ ಬರ್ತೀನಿ ಅಂತ ಹೇಳಿ ಒಂದು ತಾಸಾದರೂ ಬರುವುದಿಲ್ಲವಲ್ಲ?
– **ಹಾಗಂದ್ರೆ, ನನಗಾಗಿ ಇನ್ನೂ ಕಾಯ್ತಾ ಇರಿ ಅಂತ ಅರ್ಥ!**

- **ಕಾಗನೂರು ರಮೇಶ, ಶಿವಮೊಗ್ಗ**
ಭಟ್ರೇ, ನಿಮ್ಮನ್ನು ಮೂರ್ಖ ಎಂದು ಕರೆಯಬಹುದೇ?
– **ಬೇಡ ಗುರು, ಶತಮೂರ್ಖರಿಗೆ ಬೇಸರವಾದೀತು!**

- **ರಾಜೇಶ ಪನಗಳಿ, ಬೆಂಗಳೂರು**
ಭಟ್ರೇ, ಹೆಚ್ಚು ಜನರಿರುವ ಮನೆಯಲ್ಲಿ ಇರುವ ಲಾಭವೇನು?
– **ಟಾಯ್ಲೆಟ್‌ಗೆ ಹೋಗಲು ಕಾಯಬೇಕಾಗಿರುವುದರಿಂದ ಹೆಚ್ಚು ಸಂಯಮವನ್ನು ರೂಡಿಸಿಕೊಳ್ಳಬಹುದು!**

- **ಕೇಸರಿ ರಘುನಾಥ, ಸಾಗರ**
ಭಟ್ರೇ, ಎಲ್ಲ ಪ್ರಶ್ನೆಗಳಿಗೂ ನಮಗೆ ಉತ್ತರ ಗೊತ್ತಿರುವಂತಿದ್ದರೆ?
– **ಕನಿಷ್ಠ ನಮ್ಮಲ್ಲಿ ಮೂಡುವ ಪ್ರಶ್ನೆಗಳಿಗೆ ಉತ್ತರಗಳು ಗೊತ್ತಿರುತ್ತಿದ್ದವು!**

- **ಮಂಜುನಾಥ್ ಕೆರಿಮತ, ಬಾಗಲಕೋಟೆ**
ಭಟ್ರೇ, ಎಲೆಕ್ಟ್ರಿಷಿಯನ್ ತಪ್ಪು ಮಾಡಿದರೆ ಏನಾಗುತ್ತದೆ?
– **ಶಾಕ್ ಆಗುತ್ತದೆ!**

- **ವಿನೋದ್ ಪ್ರಭು, ತುಮಕೂರು**
ಭಟ್ರೇ, ನನ್ನ ಸ್ನೇಹಿತನಿಗೆ ಯಾವುದೂ ನೆನಪಿನಲ್ಲಿ ಇರುವುದೇ ಇಲ್ಲ, ಇಂಥವನ ಜತೆ ಹೇಗೆ ಫ್ರೆಂಡ್‌ಶಿಪ್ ಮಾಡುವುದು?
– **ಅವನಿಂದ ಸಾಲ ತೆಗೆದುಕೊಂಡು ಗೆಳೆತನವನ್ನು ಮುಂದುವರಿಸಬಹುದು, ಎಷ್ಟಾದರೂ ಆತನಿಗೆ ನೆನಪಿರುವುದಿಲ್ಲ!?**

# ನೆದರ್ಲ್ಯಾಂಡಿನಲ್ಲೂ ತಪ್ಪಿದ್ದಲ್ಲ ಇಲಿಕಾಟ!

**ವಿಶ್ವರಂಗ**

**ರಂಗಸ್ವಾಮಿ ಮೂಕನಹಳ್ಳಿ**

vveditoped@gmail.com

ವರ್ಷದಲ್ಲಿ ಕನಿಷ್ಠಪಕ್ಷ ಮೂರರಿಂದ ನಾಲ್ಕು ಹೊಸ ದೇಶಗಳಿಗೆ ಹೋಗುವುದು ನನಗೆ ವಾಡಿಕೆಯಾಗಿಬಿಟ್ಟಿದೆ. ಈ ವರ್ಷ ಕೂಡ ಮಾರ್ಚ್ ತಿಂಗಳಲ್ಲಿ ಡೆನ್ಮಾರ್ಕ್, ನೆದರ್ಲ್ಯಾಂಡ್ ಮತ್ತು ಸ್ಪೇನ್ ದೇಶಗಳಿಗೆ ಭೇಟಿ ನೀಡುವ ಅವಕಾಶ ನನ್ನದಾಗಿತ್ತು. ಯಾವುದೇ ದೇಶಕ್ಕೆ ಭೇಟಿಕೊಟ್ಟರೂ ಅಲ್ಲಿ ಬಂಧು ಅಥವಾ ಮಿತ್ರರು ಮತ್ತು ಕಳೆದ ಹತ್ತು ವರ್ಷದಿಂದ ನಲ್ಮೆಯ ಓದುಗರು ಸಿಗುತ್ತಾರೆ. ತಮ್ಮ ಮನೆಯಲ್ಲಿ ಉಳಿದುಕೊಳ್ಳಬೇಕು ಎನ್ನುವ ಅವರ ಸಪ್ರೇಮ ಒತ್ತಾಯಕ್ಕೆ ಮಾತ್ರ ನಾನೆಂದೂ ಕಟ್ಟುಬೀಳುವುದಿಲ್ಲ. ಈ ವಿಚಾರದಲ್ಲಿ ನಾನು ನನ್ನ ನೆಚ್ಚಿನ ಸಂಪಾದಕರಾದ ವಿಶ್ವೇಶ್ವರ ಭಟ್ಟರನ್ನು ಫಾಲೋ ಮಾಡುತ್ತೇನೆ. ಭಟ್ಟರಿಗೂ ಯಾರೊಬ್ಬರ ಮನೆಯಲ್ಲಿ ಉಳಿದುಕೊಳ್ಳುವುದು ಆಗಿಬರುವುದಿಲ್ಲ ಎನ್ನುವುದನ್ನು ಅವರ ಬರಹಗಳನ್ನು ಓದಿ ಬಲ್ಲೆ. ಅದೇ ನಮ್ಮ ಭೈರಪ್ಪನವರಿಗೆ ಯಾವುದೇ ದೇಶಕ್ಕೆ ಹೋಗಲಿ, ಯಾರಾದರೊಬ್ಬರ ಮನೆಯಲ್ಲಿ ತಂಗುವುದು ಅಭ್ಯಾಸ; ಹೋಟೆಲ್‌ನಲ್ಲಿ ತಂಗುವುದರಿಂದ ಅಲ್ಲಿನ ಸಾಮಾನ್ಯ ದಿನದ ಸಾಮಾನ್ಯ ಜೀವನ ಹೇಗೆ ಸಾಗುತ್ತದೆ ಎನ್ನುವುದು ತಿಳಿಯುವುದಿಲ್ಲ ಎನ್ನುವುದು ಭೈರಪ್ಪನವರ ಅಭಿಮತ. ಈ ಮಾತುಗಳನ್ನು ಹೇಳಲು ಒಂದು ಕಾರಣವಿದೆ. ಈ ಬಾರಿ ಡೆನ್ಮಾರ್ಕ್‌ಗೆ ಹೋದಾಗ, ಅಲ್ಲಿರುವ ನನ್ನ ದೊಡ್ಡಮ್ಮನ ಮಗ ಅವರ ಮನೆಯಲ್ಲಿ ಇರುವಂತೆ ಒತ್ತಾಯಿಸಿದ್ದ. ಅಲ್ಲಿಗೆ ಬರುತ್ತಿದ್ದೇನೆ ಎಂದು ಅವನಿಗೆ ಹೇಳುವುದಕ್ಕೆ ಮುಂಚೆಯೇ ಮಾರಿಯೆಟ್ ಹೋಟೆಲ್ ಬುಕ್ ಮಾಡಿಬಿಟ್ಟಿದ್ದೆ. ಆದರೆ ನೆದರ್ಲ್ಯಾಂಡ್‌ನ ಹೇಗ್ ನಗರದಲ್ಲಿ ವಾಸಿಸುತ್ತಿರುವ ನನ್ನ ತಮ್ಮ ಲಕ್ಷ್ಮೀಕಾಂತನಿಂದ ಬಚಾವ್ ಆಗಲು ಸಾಧ್ಯವಾಗಲಿಲ್ಲ. 'ಮೈಸೂರಿಗೆ ಬಂದಾಗ ನಾನೂ ಹೋಟೆಲ್ ಬುಕ್ ಮಾಡುವೆ' ಎಂದು ಆತ ಧಮಕಿ ಹಾಕಿದ ಕಾರಣ ವಿಧಿಯಿಲ್ಲದೆ ನಾಲ್ಕು ರಾತ್ರಿ ಅವನ ಮನೆಯಲ್ಲಿ ತಂಗುವ ಸನ್ನಿವೇಶ ಒದಗಿಬಂತು. ಭೈರಪ್ಪನವರ ಮಾತು ಸತ್ಯ ಎನ್ನುವ ಅನುಭವ ಕೂಡ ಆಯ್ತು. ಮಗುವನ್ನು ಅವರು ಬೆಳೆಸುವ ರೀತಿಗೂ ನಾವು ಬೆಳೆಸುವ ರೀತಿಗೂ ಇರುವ ಭಿನ್ನತೆ ತಿಳಿದುಕೊಳ್ಳಲು ಸಹಾಯವಾಯ್ತು. ಅದರ ಜತೆಗೆ, ನೆದರ್ಲ್ಯಾಂಡ್‌ನಲ್ಲಿ ಇರುವ ಇಲಿಕಾಟದ ಸಮಸ್ಯೆ ಬಗ್ಗೆ ಕೂಡ ತಿಳಿದುಕೊಂಡು ಅಚ್ಚರಿಪಡುವಂತಾಯ್ತು!

ಹೌದು, ಆಮ್‌ಸ್ಟರ್‌ಡ್ಯಾಮ್, ಹೇಗ್ ಮತ್ತಿತರ ಎಲ್ಲಾ ನಗರಗಳಲ್ಲೂ ಇಲಿಕಾಟ ಸಾಮಾನ್ಯ ಎನ್ನುವಂತಾಗಿದೆ. ಡಚ್ಚರು ಎಂದರೆ ಸ್ವಲ್ಪ ಸೀರಿಯಸ್ ಜನ, ಯಾರನ್ನೂ ಅಷ್ಟಾಗಿ ಹಚ್ಚಿಕೊಳ್ಳದ, ಬಾಯಿಬಿಟ್ಟು ನಕ್ಕು ಮಾತಾಡಿಸದ ಜನ ಎನ್ನುವ ಪ್ರತೀತಿ ಇದೆ. ಹೀಗಾಗಿ ಹೊಸದಾಗಿ ನೆದರ್ಲ್ಯಾಂಡ್‌ಗೆ ವಲಸೆ ಹೋದವರ ಕುರಿತು ಅಲ್ಲಿನ ಜನರೇ, 'ನಾವು ಯಾರದೇ ಮನೆಯ ಬಾಗಿಲು ತಟ್ಟಿ, ಹಲೋ ನಾನು ನಿಮ್ಮ ನೈಬರ್ ಎಂದು ಹೇಳಿಕೊಳ್ಳುವುದಿಲ್ಲ; ಅದಕ್ಕೇ ಬಾಗಿಲು ತಟ್ಟದೆ ನಿಮ್ಮ ಮನೆಗೆ ಪರಿಚಯ ಮಾಡಿಕೊಳ್ಳಲು ಡಚ್ ಇಲಿಗಳು ಬರುತ್ತವೆ' ಎನ್ನುವ ಜೋಕ್ ಮಾಡುತ್ತಾರೆ.

ಮ್ಯಾಡ್ರಿಡ್‌ನಲ್ಲಿದ್ದ ನನ್ನ ತಮ್ಮ ಹೇಗ್ ನಗರಕ್ಕೆ ಹೋಗಿ ಎರಡು ವರ್ಷವಾಯ್ತು. ಹೋದ ಮೊದಲ ದಿನಗಳಲ್ಲಿ ಇಲಿಗಳನ್ನು ಕಂಡು ವಿರ್ಜಿನಿಯ ಮತ್ತು ಕಾಂತ ಬೆಚ್ಚಿ ಬಿದ್ದಿದ್ದಾರೆ. ಏಕೆಂದರೆ, ಅರ್ಧ ಜಗತ್ತು ಸುತ್ತಿರುವ ಅವರಿಗೆ ಈ ರೀತಿಯ ಅನುಭವ ಎಂದಿಗೂ ಆಗಿರಲಿಲ್ಲವಂತೆ! ನಮ್ಮ ಮನೆಯಲ್ಲಿ ಇಲಿ ಇದೆ ಎಂದು ಹೇಳಿಕೊಳ್ಳುವುದು ಹೇಗೆ ಎನ್ನುವ ತುಮುಲದಲ್ಲಿ ಒಂದೆರಡು ತಿಂಗಳು ಕಳೆದಿದ್ದಾರೆ. ವಿರ್ಜಿನಿಯ ತನ್ನ ಡಚ್ ಗೆಳತಿಯ ಮನೆಗೆ ಹೋಗಿದ್ದಾಗ ಅವರ ಮನೆಯಲ್ಲಿ ಓಡಾಡುತ್ತಿದ್ದ ಇಲಿ ಕಣ್ಣಿಗೆ ಬಿದ್ದಿತಂತೆ. ಅದನ್ನು ಕಂಡು ಬೆಚ್ಚಿದ ವಿರ್ಜಿನಿಯ ಇಲಿಯ ಬಗ್ಗೆ ಪ್ರಸ್ತಾಪ ಮಾಡಿದಾಗ ಆ ಡಚ್ ಮಹಿಳೆ, 'ಇದು ಇಲ್ಲಿ ಅತ್ಯಂತ ಸಾಮಾನ್ಯ' ಎಂದಳಂತೆ! ಆಗ ವಿರ್ಜಿನಿಯಳಿಗೆ ಸ್ವಲ್ಪ ಸಮಾಧಾನವಾಯ್ತಂತೆ. ಏಕೆಂದರೆ ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳದಿದ್ದರೆ ಇಲಿ ಬರುತ್ತದೆ ಎನ್ನುವುದು ಸ್ಪೇನ್ ದೇಶದಲ್ಲಿ ಸಾಮಾನ್ಯವಾಗಿ ಹೇಳುವ ಮಾತು. ಆಕೆ ಮನೆಯನ್ನು ಸ್ವಚ್ಛವಾಗಿಟ್ಟುಕೊಂಡು ಕೂಡ ಇಲಿ ಬಂದಿತ್ತು, ಏಕೆಂದರೆ ನೆದರ್ಲ್ಯಾಂಡ್‌ನಲ್ಲಿ ಅದು ಸಾಮಾನ್ಯ. ಇದು ತಿಳಿಯದ ಕಾಂತ ಮತ್ತು ವಿರ್ಜಿನಿಯ ಯಾರಿಗೂ ಹೇಳಿಕೊಳ್ಳಲಾಗದೆ ಒಂದೆರಡು ತಿಂಗಳು ಕಷ್ಟ ಅನುಭವಿಸಿದ್ದರು.

ತೀರಾ ಸಣ್ಣದೂ ಅಲ್ಲದ ದೊಡ್ಡದೂ ಅಲ್ಲದ ಮಧ್ಯಮ ಗಾತ್ರದ ಕಂದುಬಣ್ಣದ ಇಲಿ ನೆದರ್ಲ್ಯಾಂಡ್‌ನಲ್ಲಿ ತೀರಾ ಸಾಮಾನ್ಯ. ಇಂದಿಗೆ ಈ ಇಲಿಯನ್ನು ಡಚ್ಚರು ನಮ್ಮದು ಎಂದು ಒಪ್ಪಿಕೊಂಡಿದ್ದಾರೆ. ಇದಕ್ಕೆ ಬ್ರೌನ್ ರ್ಯಾಟ್ ಅಥವಾ ಸಿಟಿ ರ್ಯಾಟ್ ಎಂದು ನಾಮಕರಣ ಕೂಡ ಮಾಡಿದ್ದಾರೆ. ಇತಿಹಾಸ ಕೆದಕಿ ನೋಡಿದರೆ ಇದರ ಉಗಮಸ್ಥಾನ ರಷ್ಯಾ ಎನ್ನುವುದು ತಿಳಿಯುತ್ತದೆ. ಎಲ್ಲಿಯ ರಷ್ಯಾ, ಎಲ್ಲಿಯ ನೆದರ್ಲ್ಯಾಂಡ್? ಇಲಿಗೆ ಯಾವ ಸರಹದ್ದು ಎಂದಿರಾ? ಒಟ್ಟಾರೆ ಇವತ್ತಿಗೆ ಈ ಇಲಿ ಡಚ್ ಇಲಿಯಾಗಿದೆ. ಕೋವಿಡ್‌ನಿಂದಾಗಿ ಜನ ಓಡಾಡದ ಕಾರಣ ಇವು ತಮ್ಮ ಸಂತತಿಯನ್ನು ಹೆಚ್ಚಿಸಿಕೊಂಡಿವೆ ಎನ್ನುವುದು ನೆದರ್ಲ್ಯಾಂಡ್ ಅಂಕಿ-ಅಂಶ ಹೇಳುವ ಕಥೆ. ಕಳೆದ 4 ವರ್ಷಗಳಲ್ಲಿ ಇವುಗಳ ಕಾಟ ಬಹಳ ಹೆಚ್ಚಾಗಿದೆ. ಇದಕ್ಕೆ ಕಾರಣ ಹುಡುಕುತ್ತಾ ಹೋದ ಡಚ್ಚರು ಹೇಳುವುದು, 'ಕೋವಿಡ್ ದೊಡ್ಡ ದೇಣಿಗೆ ನೀಡಿದೆ; ಇದರ ಜತೆಗೆ ಹೆಚ್ಚಾಗುತ್ತಿರುವ ಫುಡ್ ವೇಸ್ಟೇಜ್, ಕಡಿಮೆಯಾಗುತ್ತಿರುವ ಚಳಿ ಕೂಡ ಕಾರಣ' ಅಂತ. ಗ್ಲೋಬಲ್ ವಾರ್ಮಿಂಗ್ ಕಾರಣ ಜಗತ್ತಿನೆಲ್ಲೆಡೆ ವಾತಾವರಣ ಬದಲಾಗುತ್ತಿರುವುದು ಸತ್ಯ. ವರ್ಷಗಳಲ್ಲಿ ಯುರೋಪ್ ಬದಲಾಗುತ್ತಿರುವುದನ್ನು ಕಣ್ಣಾರೆ ಕಂಡ ಅನುಭವ ನನ್ನದು ಕೂಡ.

ಇಲಿ ಮನೆಯನ್ನು ಹೊಕ್ಕುವುದು ಸಾಮಾನ್ಯ ಎಂಬುದು ಸ್ಥಳೀಯ ಸ್ನೇಹಿತೆಯಿಂದ ತಿಳಿದ ನಂತರ ಇವುಗಳನ್ನು ನಿಯಂತ್ರಿಸಲು ಏನು ಮಾಡಬೇಕು? ಪೆಸ್ಟ್ ಕಂಟ್ರೋಲ್ ಇದೆಯೇ? ಅವಕ್ಕೆ ವಿಷವಿಟ್ಟು ಕೊಲ್ಲಬಹುದೇ? ಇತ್ಯಾದಿ ಅನ್ಯಮಾರ್ಗಗಳ ಬಗ್ಗೆ ವಿಚಾರಿಸಿದಾಗ, ಡಚ್ಚರು 'ಬದುಕು ಮತ್ತು ಬದುಕಲು ಬಿಡು' ನೀತಿಯನ್ನು ಇಲಿಗೂ ವಿಸ್ತರಿಸಿದ್ದಾರೆ ಎನ್ನುವುದು ಗೊತ್ತಾಯ್ತು ಎಂದ ನನ್ನ ತಮ್ಮ. ಈ ವಿಚಾರದಲ್ಲಿ ಸ್ಥಳೀಯ ಕಾರ್ಪೊರೇಷನ್‌ಗಳು ತೆಗೆದುಕೊಳ್ಳುವ ನಿರ್ಧಾರಕ್ಕೆ ಅಲ್ಲಿನ ನಿವಾಸಿಗಳು ಬದ್ಧರಾಗಿರಬೇಕು. ಕೆಲವೊಂದು ನಗರಗಳಲ್ಲಿ ಅವುಗಳನ್ನು ಕೊಲ್ಲುವಂತಿಲ್ಲ. ಅವುಗಳು ಎಲ್ಲಿಂದ ಬರುತ್ತವೋ, ಆ ಎಂಟ್ರಿ ಮತ್ತು ಎಕ್ಸಿಟ್ ಪಾಯಿಂಟ್‌ಗಳನ್ನು ಗುರುತಿಸಿ ಅವನ್ನು ಮುಚ್ಚಿ ಎಂದು ಹೇಳಲಾಗುತ್ತದೆ. ಮನೆಯಲ್ಲಿ ಯಾವುದೇ ಕಾರಣಕ್ಕೂ ಕಸವನ್ನು ಕಟ್ಟಿ ಇಡದೆ, ಸರಿಯಾಗಿ ತ್ಯಾಜ್ಯ ನಿರ್ವಹಣೆ ಮಾಡಿ ಎನ್ನುತ್ತವೆ ಕೆಲವೊಂದು ನಗರದ ಮುನಿಸಿಪಾಲಿಟಿಗಳು. ಕೆಲವೊಂದು ನಗರದಲ್ಲಿ ವಿಷವಿಟ್ಟು ಕೊಲ್ಲುವ ಅವಕಾಶ ಕೂಡ ಇದೆ.

ಒಟ್ಟಾರೆಯಾಗಿ, ಇಲಿಗಳ ಬಗ್ಗೆ, ಇಲಿಕಾಟದ ಬಗ್ಗೆ ಡಚ್ಚರದು ಮೃದುಧೋರಣೆ ಅಂತಲೇ ಹೇಳಬಹುದು. ಇಲಿ ರೋಗವನ್ನು ಹರಡುತ್ತದೆ ಎನ್ನುವುದು ಕೂಡ ಅದಕ್ಕೆ ತುಂಬಾ ಬ್ಯಾಡ್ ಇಮೇಜ್ ತಂದುಕೊಟ್ಟಿದೆ. ಹಾಗೆ ನೋಡಲು ಹೋದರೆ, ಅವಕ್ಕೆ ಅಪಖ್ಯಾತಿ ತರುವ ಮಟ್ಟದ ರೋಗದ ಹರಡುವಿಕೆಯೇನೂ ಅವುಗಳಿಂದ ನಡೆಯುವುದಿಲ್ಲ ಎಂದು ಅಲ್ಲಿನ ಜೀವವಿಜ್ಞಾನಿಗಳು ಉಲಿಯುತ್ತಾರೆ. ಆದರೆ ಶಾಲೆ, ಕಾಲೇಜು, ಆಸ್ಪತ್ರೆ, ಆಫೀಸ್‌ಗಳಲ್ಲಿ ವೈರುಗಳನ್ನು ಕಡಿದು, ಸಮಯ ಮತ್ತು ಹಣವನ್ನು ಖಂಡಿತ ಅಪವ್ಯಯಗೊಳಿಸಿವೆ ಈ ಇಲಿಗಳು. ಶಾಲೆ-ಕಾಲೇಜಿಗೆ ರಜೆ ಘೋಷಿಸುವ ಮಟ್ಟಕ್ಕೆ ಅವು ಆರ್ಭಟವನ್ನು ಮಾಡಿವೆ. ಈ ಕಂದುಬಣ್ಣದ ಇಲಿಗಳು ಅತಿಕಡಿಮೆ ಅವಧಿಯಲ್ಲಿ ತಮ್ಮ ಸಂತಾನವನ್ನು ಹೆಚ್ಚಿಸಿಕೊಂಡು ಹೋಗುವ ಸಾಮರ್ಥ್ಯವನ್ನು ಹೊಂದಿವೆ. ಹೀಗಾಗಿ ಇಂದಿಗೆ ನೆದರ್ಲ್ಯಾಂಡ್ ಸಿಕ್ಕಾಪಟ್ಟೆ ಇಲಿಕಾಟಕ್ಕೆ ತುತ್ತಾಗಿದೆ. ಆದರೂ ಯುರೋಪಿಯನ್ನರಿಗೆ ತಾವು ವಿಭಿನ್ನರು ಎಂದು ತೋರಿಸಿಕೊಳ್ಳುವ ಚಟ ಬಹಳವಾಗಿಬಿಟ್ಟಿದೆ. ಅದು ಇಲಿ ಇರಬಹುದು ಅಥವಾ ಅಕ್ರಮ ವಲಸಿಗ ಇರಬಹುದು, ಎಲ್ಲರನ್ನೂ ಎಲ್ಲವನ್ನೂ ಬದುಕಲು ಬಿಡು ಎನ್ನುವ ತತ್ವದಲ್ಲಿ ಹಾಕಿ, ಹಾಗೆ ಮಾಡದೆ ಸ್ವಲ್ಪ ಕಠಿಣ ಮನಸ್ಥಿತಿ ಹೊಂದಿದವರಲ್ಲಿ ಅಪರಾಧಿ ಮನೋಭಾವ ಬಿತ್ತುತ್ತಾರೆ. ಇಲಿಗಳಿಂದ ಆಗುತ್ತಿರುವ ಆಸ್ತಿಪಾಸ್ತಿ ಹಾನಿಗಳ ಲೆಕ್ಕಾಚಾರ ಗೊತ್ತಿದ್ದು ಕೂಡ ಈ ಮೃದುಧೋರಣೆ ಸ್ವಲ್ಪ ಜಾಸ್ತಿಯಾಯ್ತು ಎಂದು ಅನ್ನಿಸಿದ್ದು ಮಾತ್ರ ನಿಜ.

ನಾಲ್ಕು ರಾತ್ರಿ ತಮ್ಮನ ಮನೆಯಲ್ಲಿ ಕಳೆದೆವು. ಪ್ರಮಾಣ ಮಾಡಿ ಹೇಳುತ್ತೇನೆ, ನಮಗಂತೂ ಒಂದು ದಿನವೂ ಒಂದು ಸಣ್ಣ ಇಲಿಯೂ ಕಾಣಸಿಗಲಿಲ್ಲ. ಐದನೇ ದಿನ ಮಧ್ಯಾಹ್ನ ಒಂದು ಗಂಟೆಗೆ ಮರಳಿ ಬಾರ್ಸಿಲೋನಾಗೆ ನಮ್ಮ ಫ್ಲೈಟ್ ಇತ್ತು. ಯಾವುದೋ ಮೀಟಿಂಗ್ ಅಂತ ಕಾಂತ ಬಹಳ ಬ್ಯುಸಿ ಇದ್ದ. ಹೀಗಾಗಿ ವಿರ್ಜಿನಿಯ ನಮ್ಮನ್ನು ಏರ್‌ಪೋರ್ಟ್‌ಗೆ ಡ್ರಾಪ್ ಮಾಡಿದಳು. ನಮ್ಮನ್ನೆಲ್ಲಾ ಅಪ್ಪಿ ಮತ್ತೆ ಸಿಕ್ಕೋಣ ಎಂದು ಕೈಬೀಸಿ ಹೋದಳು. ನಾವು ಬರೋಬ್ಬರಿ ಎರಡು ಗಂಟೆ ಮುಂಚೆ ಇದ್ದೆವು. ಡೊಮೆಸ್ಟಿಕ್ ಫ್ಲೈಟ್ ಆದ ಕಾರಣ ಒಂದು ತಾಸು ಮುಂದಾಗಿ ಇದ್ದರೆ ಸಾಕಾಗಿತ್ತು. ವಿರ್ಜಿನಿಯ ಕೂಡ ಮತ್ತೆಲ್ಲಿಗೋ ಹೋಗುವ ಪ್ರೋಗ್ರಾಮ್ ಹಾಕಿಕೊಂಡಿದ್ದಳು. ಹೀಗಾಗಿ ಸ್ವಲ್ಪ ಮುಂಚೆ ಏರ್‌ಪೋರ್ಟ್ ತಲುಪಿಬಿಟ್ಟಿದ್ದೆವು. ಅದು ಒಂದು ತರಹ ಒಳ್ಳೆಯದೇ ಆಯ್ತು ಎನ್ನಿ. ರಾತ್ರಿ ಮೊಬೈಲ್ ಚಾರ್ಜ್ ಮಾಡಿರಲಿಲ್ಲ, ಹೀಗಾಗಿ ಚಾರ್ಜಿಂಗ್ ಸೆಂಟರ್ ಹತ್ತಿರ ಪ್ಲಗ್ ಮಾಡೋಣ ಎಂದು ಹೋದೆ. ಅದೆಲ್ಲಿ ಅಡಗಿತ್ತೋ ಗೊತ್ತಿಲ್ಲ, ಇಲಿಯೊಂದು ಚಂಗನೆ ಎಗರಿ ಓಡಿಹೋಯ್ತು. ನೆದರ್ಲ್ಯಾಂಡ್‌ನಲ್ಲಿನ ಇಲಿಗಳ ಕಾಟದ ಬಗ್ಗೆ ಕೇಳಿದ್ದೆಲ್ಲಾ ನಿಜ ಎನ್ನುವಂತೆ ಒಂದು ತಾಸಿನಲ್ಲಿ ಏರ್‌ಪೋರ್ಟ್ ತುಂಬೆಲ್ಲಾ ಅತ್ತಿಂದಿತ್ತ ಓಡಾಡುತ್ತಿದ್ದ ಇಲಿರಾಯರು ಸಾಕ್ಷಿ ನುಡಿಯುತ್ತಿದ್ದರು!

ಈ ಇಲಿ ಸುಮ್ಮನೆ ಎಂದುಕೊಳ್ಳಬೇಡಿ. ಇಲಿಗಳ ನಿಯಂತ್ರಣ, ಇದರ ಹಾವಳಿ ತಡೆಯುವ ವ್ಯಾಪಾರವಿದೆಯಲ್ಲಾ, ಅದು ಜಾಗತಿಕವಾಗಿ ಬರೋಬ್ಬರಿ 21 ಸಾವಿರ ಕೋಟಿ ರುಪಾಯಿ ಪ್ರಮಾಣದ್ದು ಎನ್ನುತ್ತದೆ 2019ರ ಅಂಕಿ-ಅಂಶ. 2027ರ ವೇಳೆಗೆ ಈ ವ್ಯಾಪಾರ 40 ಸಾವಿರ ಕೋಟಿ ರುಪಾಯಿಯನ್ನು ಮೀರಿಸುತ್ತದೆ ಎನ್ನುವ ಅಂದಾಜು ಸಂಖ್ಯೆಯನ್ನು ಕೂಡ ಅದು ನೀಡಿದೆ. ಲೆಕ್ಕಕ್ಕೆ ಸಿಗದ ಕೋಟಿಗಳ ಬಗ್ಗೆ ಮಾತನಾಡುವುದು ಬೇಡ ಬಿಡಿ, ಈ ಸಂಖ್ಯೆ ಬಹಳ ಸಣ್ಣದು. ಏಕೆಂದರೆ ಅಮೆರಿಕ ಒಂದರಲ್ಲೇ ಇಲಿಕಾಟದಿಂದ ಉಂಟಾಗುವ ನಷ್ಟದ ಅಂದಾಜು ಎರಡು ಲಕ್ಷ ಕೋಟಿ ರುಪಾಯಿಯನ್ನು ಮೀರಿಸುತ್ತದೆ. ಇದನ್ನು ಜಾಗತಿಕ ಲೆಕ್ಕದಲ್ಲಿ ನೋಡಿದಾಗ, ಸಣ್ಣ ಪುಟ್ಟ ದೇಶಗಳ ವರ್ಷದ ವಹಿವಾಟಿಗಿಂತಲೂ ಹೆಚ್ಚಾಗುತ್ತದೆ.

ಈ ಬಾರಿ ಸಾಮಾನ್ಯಕ್ಕಿಂತ ಸ್ವಲ್ಪ ಹೆಚ್ಚು ದಿನ ಮನೆಗೆ ಬೀಗ ಹಾಕಿ ಹೋಗಿದ್ದೆವು. ಹೀಗೆ ಬೀಗ ಹಾಕಿ, ನಂತರ ವಾಪಸ್ಸು ಬಂದು ತೆಗೆದಾಗೆಲ್ಲಾ ನನಗೊಂದು ವಿಚಿತ್ರ ರೀತಿಯ ಅನುಭವವಾಗುತ್ತದೆ. ಮನೆಯ ವಾತಾವರಣ, ವಾಸನೆ ಎಲ್ಲವೂ ಬದಲಾಗಿಬಿಟ್ಟಿರುತ್ತದೆ. ಅಲ್ಲದೆ ಮನುಷ್ಯರು ಮನೆಯಲ್ಲಿ ವಾಸಿಸುತ್ತಿಲ್ಲ ಎನ್ನುವುದು ಕ್ರಿಮಿ-ಕೀಟಗಳಿಗೆ, ಜೀವಜಂತುಗಳಿಗೆ ಬಹುಬೇಗ ಗೊತ್ತಾಗಿಬಿಡುತ್ತದೆ! 'ಇನ್ನೇಲೆ ಇದು ನಮ್ಮದೇ ಮನೆ' ಅಂತ ಅವು ಝಂಡಾ ಹೂಡಿಬಿಡುತ್ತವೆ. ನಾವು ಬೀಗ ತೆಗೆದು ಒಳಹೊಕ್ಕಾಗ ಅವಕ್ಕೆ ಇರಿಸುಮುರಿಸು! 23 ದಿನ ಮನೆಯನ್ನು ನಾವು ಬಿಟ್ಟುಹೋದ ಕಾರಣ ನಮ್ಮ ಗಣಪನ ವಾಹನ ಇಲಿರಾಯರು ಸಾಕಷ್ಟು ಆರ್ಭಟ ನಡೆಸಿದ್ದರು. ಇಲ್ಲಿಯವರೆಗೆ 50,000 ರುಪಾಯಿಗೂ ಹೆಚ್ಚು ವೆಚ್ಚ ಮಾಡಿ ಬದುಕನ್ನು ಮೊದಲಿನ ಸ್ಥಿತಿಗೆ ತಂದುಕೊಂಡಿದ್ದೇವೆ. ಮನೆಯ 'ಲ್ಯಾನ್' (ಇಂಟರ್ನೆಟ್ ಕೇಬಲ್, ಪ್ರತಿ ಕೋಣೆಗೂ ಎಳೆದಿರುವ ಲೈನ್), ಸಿಸಿಟಿವಿ, ಸೇಫ್ಟಿ ಅಲಾರ್ಮ್, ಲಿಫ್ಟ್ ವೈರುಗಳು ಹೀಗೆ ಎಲ್ಲವನ್ನೂ ಅವು ಧ್ವಂಸ ಮಾಡಿದ್ದವು. ದಿನಸಿ ಸಾಮಾನುಗಳ ಮೇಲೆ ದಾಳಿಮಾಡಿ ತಿಂದು, ಅಲ್ಲೇ ಹೇತು ಗಬ್ಬೆಬ್ಬಿಸಿದ್ದವು. ಗ್ರೌಂಡ್ ಫ್ಲೋರ್‌ನಲ್ಲಿ ಮನೆ ಕಟ್ಟಿದರೆ ಇಂಥ ಸಮಸ್ಯೆ ಎಂದುಕೊಂಡು, ಗ್ರೌಂಡ್ ಫ್ಲೋರ್ ಪೂರ್ತಿ ಪಾರ್ಕಿಂಗ್‌ಗೆ ಬಿಟ್ಟು, ಮೊದಲ ಮತ್ತು ಎರಡನೇ ಮಹಡಿಯಲ್ಲಿ ವಾಸ ಮಾಡುತ್ತಿದ್ದೇವೆ. ಹೀಗಿದ್ದೂ ಮೂಷಿಕ ರಾಜನ ಆರ್ಭಟಕ್ಕೆ ಬಲಿಯಾಗಿದ್ದೇವೆ. ಸಂಕೋಚವಿಲ್ಲದೆ ಪೆಸ್ಟ್ ಕಂಟ್ರೋಲ್‌ನವರನ್ನು ಕರೆದಿದ್ದೇವೆ.



**ನಾರದ ಸಂಚಾರ**

**ಕಲಹಪ್ರಿಯ**

naadigru@gmail.com

## ಭಗವಂತ್ ಮಾನ್, ಹ್ಯಾಪಿ ಮ್ಯಾನ್

ರಾಜಕೀಯ ಪಕ್ಷಗಳ ಆಯಕಟ್ಟಿನ ಸ್ಥಾನಗಳಲ್ಲಿ ಇರುವವರು ಅಥವಾ ಅಧಿಕಾರದ ಗದ್ದುಗೆಯಲ್ಲಿ ರಾರಾಜಿಸುತ್ತಿರುವವರು ತಮ್ಮ ವೈಯಕ್ತಿಕ ಜೀವನವನ್ನು ಸಾರ್ವಜನಿಕವಾಗಿ ತೆರೆದಿಡುವ ವಿಷಯದಲ್ಲಿ ಭಾರಿ ಜಾಗರೂಕರಾಗಿ ಇರುತ್ತಿದ್ದುದುಂಟು. ಆದರೀಗ ಕಾಲ ಬದಲಾಗಿದೆ, ಜನರ ನಿರೀಕ್ಷೆಗಳೂ ಬದಲಾಗಿವೆ. ಅದಕ್ಕೆ ತಕ್ಕಂತೆ ಅಧಿಕಾರಸ್ಥರೂ ತಮ್ಮ ಧೋರಣೆಗಳನ್ನು ಬದಲಿಸಿಕೊಳ್ಳುತ್ತಿದ್ದಾರೆ ಎಂಬುದಕ್ಕೆ ಪಂಜಾಬ್‌ನ ಮುಖ್ಯಮಂತ್ರಿ ಭಗವಂತ್ ಮಾನ್ ಅವರೇ ಸಾಕ್ಷಿ. ಕೆಲ ದಿನಗಳ ಹಿಂದೆ, ತಮ್ಮ ಮಗಳು 'ನಿಯಾಮತ್' ಅವರ ಮೊದಲ ಹುಟ್ಟುಹಬ್ಬದ ಸಂಭ್ರಮಾಚರಣೆಗೆಂದು ಭಗವಂತ್ ಮಾನ್ ಭರ್ಜರಿ ಕಾರ್ಯಕ್ರಮವೊಂದನ್ನು ಆಯೋಜಿಸಿದ್ದರು. ಜನಪ್ರಿಯ ಪಂಜಾಬಿ ಗಾಯಕರ ಗೀತಪ್ರಸ್ತುತಿ ಇದ್ದ ಈ ಕಾರ್ಯಕ್ರಮದಲ್ಲಿ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಆಮ್ ಆದ್ಮಿ ಪಕ್ಷದ ಒಂದಷ್ಟು ಉನ್ನತ ನಾಯಕರು ಕೂಡ ಪಾಲ್ಗೊಂಡಿದ್ದರು. ಈ ಸಂತಸದ ಸಂದರ್ಭದಲ್ಲಿ ಭಗವಂತ್ ಮಾನ್, ಕೇಜ್ರಿವಾಲ್ ಮತ್ತು ರಾಜ್ಯಪಾಲ ಗುಲಾಬ್‌ಚಂದ್ ಕಟಾರಿಯಾ ಅವರುಗಳು ಜತೆಗೂಡಿ ಕೇಕ್ ಕತ್ತರಿಸಿದ್ದು ಒಂದೆಡೆಯಾದರೆ, ಭಗವಂತ್ ಮಾನ್ ಅವರು ಸ್ವತಃ 'ಭಾಂಗ್ರಾ' ನೃತ್ಯ ಮಾಡಿ ನೆರೆದಿದ್ದವರನ್ನು ರಂಜಿಸಿದ್ದು ಕಾರ್ಯಕ್ರಮದ ಮತ್ತೊಂದು ಎದ್ದು ಕಾಣುವ ಅಂಶವಾಗಿತ್ತು.

ಕರ್ನಾಟಕದಲ್ಲೂ ರಾಜಕಾರಣಿಗಳು ಹೀಗೆ ಕುಟುಂಬದ ಸದಸ್ಯರ ಹುಟ್ಟುಹಬ್ಬ ವನ್ನೋ ನಾಮಕರಣ ಸಮಾರಂಭವನ್ನೋ ಹಮ್ಮಿಕೊಳ್ಳುವಂತಾದರೆ ಮತ್ತು ಆ ಸಂಭ್ರಮದಲ್ಲಿ ಕುಣಿದು ಕುಪ್ಪಳಿಸುವುದಕ್ಕೋ, ಹಾಡು ಹೇಳುವುದಕ್ಕೋ ಆಸ್ಪದ ಸಿಗುವುದಾದರೆ, ಆ ಜಾಗದಲ್ಲಿ ಯಾರನ್ನೆಲ್ಲಾ ಕಲ್ಪಿಸಿಕೊಳ್ಳಬಹುದು ಎಂಬ ವಿಷಯ ನಿಮ್ಮ ಊಹೆಗೆ ಬಿಟ್ಟದ್ದು!!

## ವಿನೂತನ ವಿಧಾನ!

ರಾಜಕೀಯ ಪಕ್ಷವೊಂದರ ಕಾರ್ಯಕರ್ತರು ಅಥವಾ ವಿವಿಧ ಸ್ತರದ ಪದಾಧಿಕಾರಿಗಳು ತಮ್ಮ ನಾಯಕರ ಬಗ್ಗೆ ನಿರಾಶೆಯನ್ನೋ ಹತಾಶೆಯನ್ನೋ ವ್ಯಕ್ತಪಡಿಸಬೇಕಾಗಿ ಬಂದಲ್ಲಿ ಯಾವ ಮಾರ್ಗವನ್ನು ಅನುಸರಿಸಬಹುದು? ಉತ್ತರ ಪ್ರದೇಶದ ಲಖನೌನ ಸಮಾಜವಾದಿ ಪಕ್ಷದ ಸದಸ್ಯ ನವೀನ್ ಧವನ್ ಅವರು ಈ ವಿಷಯದಲ್ಲಿ ಹೊರಳುದಾರಿ ತುಳಿದು ಹಲವರ ಹುಬ್ಬೇರುವಂತೆ ಮಾಡಿದ್ದಾರೆ!

ಅದು ಆದದ್ದು ಹೀಗೆ: ತಮ್ಮ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್‌ರನ್ನು ಭೇಟಿಯಾಗಲು ನವೀನ್ ಧವನ್ ಬರೋಬ್ಬರಿ 3 ತಿಂಗಳಿಂದ ಕಸರತ್ತು ಮಾಡುತ್ತಲೇ ಇದ್ದರಂತೆ; ಇಷ್ಟಾಗಿಯೂ ಅಖಿಲೇಶರ ಭೇಟಿ ಸಾಧ್ಯವಾಗದಿದ್ದುದರಿಂದ ತಮ್ಮ ಕುರ್ತಾವನ್ನು ಸುಟ್ಟು ಹಾಕಲು ಆ ಮಹಾಶಯರು ನಿರ್ಧರಿಸಿಬಿಟ್ಟರು. ಈ ಸಂಬಂಧವಾಗಿ ಧವನ್ ಮಾತನಾಡುತ್ತಾ, ''ನನ್ನ ವಿರುದ್ಧ ಸಾಕಷ್ಟು ರಾಜಕೀಯ ಪ್ರೇರಿತ ಪ್ರಕರಣಗಳು ದಾಖಲಾಗಿದ್ದರಿಂದ, ಅಖಿಲೇಶ್ ಯಾದವ್‌ರನ್ನು ಭೇಟಿ ಮಾಡಲು ಬಯಸಿದ್ದೆ ಮತ್ತು ಇದಕ್ಕೆ ಅನುವುಮಾಡಿಕೊಡುವಂತೆ ಪಕ್ಷದ ವಿವಿಧ ಸ್ತರದ ನಾಯಕರನ್ನೂ ಸಂಪರ್ಕಿಸಿದ್ದೆ. ಇಷ್ಟಾಗಿಯೂ ನನ್ನ ಯತ್ನ ಫಲ ನೀಡಲಿಲ್ಲ'' ಎಂದು ಅಳಲು ತೋಡಿಕೊಂಡರಂತೆ. ಧವನ್ ಅವರು ಕುರ್ತಾವನ್ನು ದಹಿಸುತ್ತಿರುವ ವಿಡಿಯೋ ವೈರಲ್ ಆಗುತ್ತಿದ್ದಂತೆ ಕಾರಣವನ್ನು ಸ್ಪಷ್ಟಪಡಿಸುವಂತೆ ಕೋರಿ ಪಕ್ಷದ ಅನೇಕ ಸದಸ್ಯರು ಅವರಿಗೆ ಕರೆ ಮಾಡಿದರಂತೆ; ಅದಕ್ಕೆ ಧವನ್ ಅವರು, ''ನಾನು ತಾತ್ವಿಕವಾಗಿ ಓರ್ವ ಸಮಾಜವಾದಿ ಯಾಗಿ ಉಳಿಯುತ್ತೇನೆ ಅಷ್ಟೇ, ಸಕ್ರಿಯ ರಾಜಕೀಯ ಎಂಬುದು ಇನ್ನು ಮುಂದೆ ನಮ್ಮಂಥವರ ಪಾಲಿಗೆ ಅಲ್ಲ'' ಎಂದು ಉತ್ತರಿಸಿದರಂತೆ! ಅದೂ ನಿಜವೇ! ತಮ್ಮ ಕುಂದುಕೊರತೆಗಳನ್ನು ಅರುಹಲೆಂದು ಬಯಸುವ ಕಾರ್ಯಕರ್ತರು ತಮ್ಮ ನಾಯ ಕನನ್ನೇ ಭೇಟಿಮಾಡಲು ಆಗುತ್ತಿಲ್ಲವೆಂದರೆ, ಅಂಥ 'ರಾಜಕೀಯ'ದಲ್ಲಿ ಇದ್ದರೆಷ್ಟು ಬಿಟ್ಟರೆಷ್ಟು!!

# ಮಹಾಮನೆ, ಅನುಭವ ಮಂಟಪಗಳ ಯಾವುದೇ ಕುರುಹು ಈವರೆಗೆ ಸಿಕ್ಕಿಲ್ಲವೇಕೆ?

**ಬಸವ ಮಂಟಪ**

**ರವಿ ಹಂಜ್**

vveditoped@gmail.com

**ಭಾಗ-1**

ಹನ್ನೆರಡನೇ ಶತಮಾನದಲ್ಲಿ ಬಸವಣ್ಣ, ಶರಣರ ಚಳವಳಿ, ವಚನ ಸಾಹಿತ್ಯವು ಉಲ್ಕೆಯಂತೆ ಬೆಳಗಿ ನಂತರದ ಮುನ್ನೂರು ವರ್ಷದ ಅಜ್ಞಾತವಾಸ ಇದೆಲ್ಲವೂ ಸತ್ಯವೇ? ಶರಣರು ಇದ್ದರೆ? ಎಂಬೆಲ್ಲ ತಾರ್ಕಿಕ ಜಿಜ್ಞಾಸೆ ಮೂಡುತ್ತದೆ. ಏಕೆಂದರೆ ಪ್ರಪಂಚದ ಯಾವುದೇ ಮೂಲೆಯಲ್ಲಿ ಮತ್ತು ಯಾವುದೇ ಕಾಲಘಟ್ಟದಲ್ಲಿ ಏಕಕಾಲಕ್ಕೆ ವಚನಕಾರರು ಉದ್ಭವಿಸಿದಂತೆ ಇಷ್ಟೊಂದು ಸಂಖ್ಯೆಯ ಕವಿಗಳಾಗಲಿ, ಸಾಹಿತಿಗಳಾಗಲಿ, ಧಾರ್ಮಿಕ ಚಿಂತಕರಾಗಲಿ ಉದಯಿಸಿದ ಪುರಾವೆಯಿಲ್ಲ. ಇದು ವಾಸ್ತವಿಕವಾಗಿ ಸಾಧ್ಯವೇ?

ಜಗತ್ತಿನ ಯಾವುದೇ ಚಳವಳಿ, ಕ್ರಾಂತಿಗಳ ಇತಿಹಾಸವನ್ನು ಗಮನಿಸಿದಾಗ ಪ್ರವಾಹದೋಪಾದಿಯಲ್ಲಿ ಜನರು ಸಂಘಟನೆಯಾಗಿದ್ದಾರೆಯೇ ಹೊರತು ಸಾಹಿತ್ಯಿಕವಾಗಿ ಶರಣರ ವಚನದೋಪಾದಿಯ ರೀತಿ ಎಲ್ಲಿಯೂ ಸ್ಪಂದಿಸಿಲ್ಲ. ಎಲ್ಲಿಯೂ ಸಾಧ್ಯವಾಗದ್ದು, ಮುಂದೆಯೂ ಸಾಧ್ಯವಾಗದ್ದು ಹನ್ನೆರಡನೇ ಶತಮಾನದಲ್ಲಿ ಹೇಗೆ ಏಕೆ ಸಾಧ್ಯವಾಯಿತು? ಅಂಥ ಮಹಾನ್ ಬದಲಾವಣೆಗೆ ಪ್ರಚೋದಿಸುವಂಥ ಬಲವಾದ ಸಾಮಾಜಿಕ ಪಲ್ಲಟ ಏನಾಗಿತ್ತು? ಎಂಬ ಪ್ರಶ್ನೆಗಳನ್ನು ಕೇಳಿಕೊಂಡಂಥ ಯಾವುದೇ ಸಂಶೋಧನೆಗಳನ್ನು ನಮ್ಮ ವಿಶ್ವವಿದ್ಯಾಲಯಗಳು ಮಾಡಿರುವುದನ್ನು ನಾನು ಕಂಡಿಲ್ಲ. ಬಹುಪಾಲು ಸಂಶೋಧನೆಗಳು ಅನಾದಿ ಕಾಲದಿಂದ ಇದ್ದ ಜಡ್ಡುಗಟ್ಟಿದ ವ್ಯವಸ್ಥೆಯ ವಿರುದ್ಧ ಬಸವಣ್ಣನು ಮಾಡಿದ ಕ್ರಾಂತಿ ಎಂಬ ಪೂರ್ವಾಗ್ರಹದಿಂದಲೇ ಆರಂಭವಾಗುತ್ತವೆ. ಆದರೆ ಜಗತ್ತಿನ ಎಲ್ಲಾ ಕ್ರಾಂತಿಗಳಿಗೆ ಪ್ರಮುಖ ಕಾರಣ ಆಯಾಯ ಕಾಲಘಟ್ಟದಲ್ಲಿ ಉಂಟಾದ ರಾಜಕೀಯ, ಧಾರ್ಮಿಕ, ಅಥವಾ ಸಾಮಾಜಿಕ ಪಲ್ಲಟಗಳ ಸನ್ನಿವೇಶಗಳೇ. ಹಾಗಾಗಿ ಹುಟ್ಟಿನಿಂದ ಜಾತಿ ಎಂಬ ನೀತಿಯ ಸಮಾಜೋಧಾರ್ಮಿಕ ಪಲ್ಲಟವೇ ಈ ಚಳವಳಿಗೆ ಕಾರಣ. ಆದರೆ ಇಷ್ಟೊಂದು ಸಂಖ್ಯೆಯ ವ್ಯಕ್ತಿಗಳು ಏಕಕಾಲಕ್ಕೆ ಏಕರೂಪದ ಸಾಹಿತ್ಯದಲ್ಲಿ ತೊಡಗಿಸಿಕೊಳ್ಳುವುದು ವಾಸ್ತವಿಕವಾಗಿ ಸಾಧ್ಯವೇ? ಎಂಬ ಪ್ರಶ್ನೆಯ ಹಿಂದೆ ವಚನಕಾರರು ಅಸ್ತಿತ್ವದಲ್ಲಿರದೆ ಇವರ ಹೆಸರುಗಳಲ್ಲಿ ಯಾರೋ ವಚನಗಳನ್ನು ರಚಿಸಿದರೆ ಎಂಬ ಹಿಂಜರಿಕೆಯ ಪ್ರಶ್ನೆಯಿದೆ. ಇದು ತಾರ್ಕಿಕ ಪ್ರಶ್ನೆ ಸಹ.

ಪ್ರೊ. ಕಲ್ಬುರ್ಗಿ ಮತ್ತವರ ಶಿಷ್ಯಂದಿರೇ 'ಅಸಮಾನತೆಯ, ತುಳಿತಕ್ಕೊಳಗಾದ ಸಮುದಾಯದ ವಚನಕಾರರು ಅನಕ್ಷರಸ್ಥರಾಗಿದ್ದರು' ಎನ್ನುತ್ತಾರೆ. ಹಾಗಿದ್ದಾಗ ವಚನಗಳನ್ನು ರಚಿಸುವಷ್ಟು ವಿದ್ಯೆಯನ್ನು ಈ ದಮನಿತರು ಎಲ್ಲಿಂದ ಗಳಿಸಿದರು? ಬಸವಣ್ಣನು ಯಾವುದೇ ವಿದ್ಯಾಕೇಂದ್ರಗಳನ್ನು ಸ್ಥಾಪಿಸಿದ ಉದಾಹರಣೆಗಳೂ ಇಲ್ಲದಿದ್ದಾಗ ಇವರೆಲ್ಲಾ ಹೇಗೆ ಸಾಕ್ಷರರಾದರು?

ದಮನಿತ, ಶೋಷಿತ, ತುಳಿತ ಎನ್ನುವ ಎಲ್ಲಾ ತಕಧಿಮಿ ಭಾವುಕ ಪದಗಳೂ ನಮ್ಮ ಇತಿಹಾಸದ ವಾಸ್ತವವನ್ನು ಕೊಚ್ಚಿಹಾಕಿವೆ. ಇದಕ್ಕೆ ವ್ಯಾಸ, ವಾಲ್ಮೀಕಿ, ಕಾಳಿದಾಸ ಮುಂತಾದ ಅನೇಕ 'ದಮನಿತ, ಶೋಷಿತ, ತುಳಿತ' ಪದಸೂಚಕ ವ್ಯಕ್ತಿಗಳೇ ಸಾಕ್ಷಿ! ಬೆಸ್ತ, ಬೇಡ, ಕುರಿಗಾಹಿಯಾಗಿದ್ದ ವ್ಯಕ್ತಿಗಳು ಹೇಗೆ ವಿದ್ಯೆಯನ್ನು ಕಲಿತರು ಎಂಬ ಪ್ರಶ್ನೆ ಈ ಭಾವುಕ ಪದಸಂಕಥನಗಳನ್ನು ಕೊಚ್ಚಿಹಾಕುತ್ತದೆ. ವೀರಶೈವ ಮಠಗಳು ವಿದ್ಯಾಕೇಂದ್ರಗಳಾಗಿರುವುದು ಇಪ್ಪತ್ತನೇ ಶತಮಾನದಲ್ಲಷ್ಟೇ ಅಲ್ಲ, ಅವು ಹನ್ನೆರಡನೇ ಶತಮಾನಕ್ಕೂ ಹಲವು ಶತಮಾನಗಳ ಮುಂಚಿನಿಂದಲೂ ವಿದ್ಯಾಕೇಂದ್ರಗಳೇ ಆಗಿದ್ದವು. ಅವುಗಳನ್ನು ಸಂಶೋಧನ ಪರಿಭಾಷೆಯಲ್ಲಿ 'ತತ್ವಜ್ಞಾನದ ಶಾಲೆಗಳು' ಎಂದೇ ಗುರುತಿಸುತ್ತಾರೆ. ಅಲ್ಲಮ ಪ್ರಭು ಸಹ ಬಳ್ಳಿಗಾವಿಯ ಇಂಥ ಕಾಳಾಮುಖ ವೀರಶೈವ ಮಠದಲ್ಲಿಯೇ ವಿದ್ಯಾರ್ಜನೆ ಮಾಡಿದ್ದುದು ಎಂದು ಪುರಾಣಗಳು ತಿಳಿಸುತ್ತವೆ. ಹಾಗಾಗಿ ಎಲ್ಲಾ ವಚನಕಾರರೂ ಸ್ಥಳೀಯ ಮಠಗಳ ಮೂಲಕವೇ ಸಾಕ್ಷರರಾಗಿದ್ದರು ಎನ್ನಬಹುದು. ಮೇಲಾಗಿ ಬಸವಣ್ಣ ಈ 'ದಮನಿತ, ಶೋಷಿತ, ತುಳಿತ' ವರ್ಗದ ಜನರಿಗೆ ಅಕ್ಷರ ಕಲಿಸಿದ ಯಾವುದೇ ಉದಾಹರಣೆಯಿಲ್ಲ.

ಹಾಗಾಗಿ ವೀರಶೈವ ಮಠಗಳಿಂದ ಕೇವಲ ವಿದ್ಯೆಯಲ್ಲದೆ ವೀರಶೈವ ತತ್ವದ ಕುರಿತು ಸಹ ಜ್ಞಾನವನ್ನು ಪಡೆದುಕೊಂಡಿದ್ದರು. ಇಲ್ಲದಿದ್ದರೆ ಇಂಥ ಪ್ರೌಢಿಮೆಯ ವಚನಗಳ ರಚನೆ ಸಾಧ್ಯವಿರುತ್ತಿರಲಿಲ್ಲ. ಒಂದು ವೇಳೆ ವಚನಗಳನ್ನು ಯಾರೋ ಬೇರೆಯವರು ರಚಿಸಿದ್ದರೆ ಅವುಗಳನ್ನು ಅಜ್ಞಾತವಾಗಿದ್ದವರ ಹೆಸರುಗಳಲ್ಲಿ ರಚಿಸುವ ಅನಿವಾರ್ಯತೆ ಇರಲಿಲ್ಲ. ತಮ್ಮ ಪೂರ್ವಜ ವಚನಕಾರರ ಇತಿಹಾಸವನ್ನು ಮತ್ತು ವಚನಗಳನ್ನು ವೀರಶೈವ ಮಠಗಳಲ್ಲಿ ಮೌಖಿಕವಾಗಿ ಬೋಧಿಸುತ್ತ ಕಾಪಾಡಿಕೊಂಡು ಬಂದ ಕಾರಣವೇ ಅವುಗಳನ್ನು ಹದಿನೈದನೇ ಶತಮಾನದ ಕೊನೆಯಲ್ಲಿ ನೂರೊಂದು ವಿರಕ್ತರೂ ಸೇರಿ ವೀರಶೈವ ಜಂಗಮರು, ಲಿಂಗಿ ಬ್ರಾಹ್ಮಣರು ಕ್ಷಿಪ್ರವಾಗಿ ಲಿಖಿತ ರೂಪಕ್ಕೆ ಇಳಿಸಿದರು. ವೀರಶೈವ ಗುರುವಿರಕ್ತ ಮಠಗಳಲ್ಲಿ ಇವುಗಳನ್ನು ಮೌಖಿಕವಾಗಿ ಉಳಿಸದಿದ್ದರೆ ವಚನಗಳು ಎಂದೋ ನಿರ್ನಾಮವಾಗುತ್ತಿದ್ದವು. ಇಂದಿನ ಸಂಶೋಧಕರು ಮುನ್ನೂರು ವರ್ಷಗಳ ಕಾಲ ಶರಣರು, ವಚನಗಳು ಅಜ್ಞಾತದಲ್ಲಿದ್ದವು ಎಂದು ಪ್ರತಿಪಾದಿಸುವುದೇ ಸುಳ್ಳು! ಅಲ್ಲಮ, ಚೆನ್ನಬಸವೇಶ್ವರ, ಸಿದ್ಧರಾಮರ ನಂತರದಿಂದ ಎಡೆಯೂರು ಸಿದ್ಧಲಿಂಗೇಶ್ವರರ ನಡುವೆ ಆಗಿಹೋದ ಶೂನ್ಯ ಪೀಠಾಧ್ಯಕ್ಷರು ಅನಾದಿ ಗಣನಾಥ, ಆದಿ ಗಣೇಶ್ವರ, ನಿರ್ಮಾಯ ಗಣೇಶ್ವರ, ನಿರಂಜನ ಸ್ವಾಮಿ, ಜ್ಞಾನಾನಂದ, ಆತ್ಮ ಗಣವರ, ಅಧ್ಯಾತ್ಮ ಗಣನಾಥ, ರುದ್ರಮುನಿ, ಬಸವ ಪ್ರಭು, ಆದಿಲಿಂಗ, ಚನ್ನವೀರ, ಗೋಸಲ ಸಿದ್ದೇಶ್ವರ, ಶಂಕರಾಚಾರ್ಯ, ದಿವ್ಯ ಲಿಂಗೇಶ್ವರ ಮತ್ತು ಚೆನ್ನಬಸವ ರಾಜೇಂದ್ರರು. ಈ ಎಲ್ಲಾ ಪೀಠಾಧ್ಯಕ್ಷರೂ ವಚನಗಳ ಮೌಖಿಕ ಬೋಧನೆಯನ್ನು ನಿರಂತರವಾಗಿ ವೀರಶೈವ ಮಠಗಳಲ್ಲಿ ಜೀವಂತವಿರಿಸಿದ್ದರು. ವಚನ ಎನ್ನುವ ಪದದ ಅರ್ಥವೇ ವಾಚನ ಎಂಬ ಹಿನ್ನೆಲೆಯಲ್ಲಿ ಇವುಗಳನ್ನು ಬರಹಕ್ಕಿಳಿಸದೆ ಮೌಖಿಕವಾಗಿಯೇ ಇರಿಸಿರಬಹುದು. ಆದರೆ ಯಾವಾಗ ಕಾಳಾಮುಖ ವೀರಶೈವ ಕ್ರಿಯಾಶಕ್ತಿ ಮುನಿಯ ಮಾರ್ಗದರ್ಶನದಲ್ಲಿ ಸ್ಥಾಪಿತಗೊಂಡ ಕರ್ನಾಟಕ ಸಾಮ್ರಾಜ್ಯ (ವಿಜಯ ನಗರ)ದ ಶೈವ ರಾಜರು ಅನ್ಯಪಂಥವನ್ನು ಅಪ್ಪಿಕೊಂಡರೋ ಆಗ ಅವರನ್ನು ಮತ್ತೆ ವೀರಶೈವಕ್ಕೆ ತರುವ ಉದ್ದೇಶದಿಂದಲೋ ಅಥವಾ ಇನ್ಯಾವುದೋ ಬಲವಾದ ಪ್ರೇರಣೆಯಿಂದಲೋ ಮೌಖಿಕ ವಚನಗಳು ಸಮರೋಪಾದಿಯಾಗಿ ಲಿಖಿತ ರೂಪ ಪಡೆದವು. ತಮ್ಮ ಪೂರ್ವಜ ವಚನಕಾರರ ಮೇಲಿನ ನಿಷ್ಠೆಯ ಕಾರಣವೇ ಇವೆಲ್ಲವೂ ಯಥಾವತ್ತಾಗಿ ದಾಖಲಾಗಿವೆ ಎನ್ನಬಹುದು. ಬಹುಪಾಲು ಶರಣರ ಕುರಿತು ಯಾವುದೇ ಐತಿಹಾಸಿಕ ಪುರಾವೆಗಳು ಇರದಿದ್ದರೂ ಬಸವಣ್ಣನ ಕುರಿತಿರುವ ಶಿಲಾಶಾಸನಗಳು ಮತ್ತು ವಚನಗಳ ದಾಖಲೆಯೇ ಸದ್ಯಕ್ಕೆ ಇವರಿದ್ದರು ಎನ್ನಲು ಆಧಾರವಾಗಿದೆ. ಉಳಿದಂತೆ ಶೂನ್ಯ ಸಂಪಾದನೆ ಕೇವಲ ಸೃಜನಶೀಲ ಸಂಕಥನ ಮಾತ್ರ.

ಇಂಥ ವಾಸ್ತವಿಕ ತರ್ಕವನ್ನು ಬಿಟ್ಟು ವಚನ ಚಳವಳಿ ಅಜ್ಞಾತದಲ್ಲಿತ್ತು, ಸಿದ್ಧಲಿಂಗೇಶ್ವರ ಮತ್ತು ನೂರೊಂದು ವಿರಕ್ತರು, ಲಿಂಗಿ ಬ್ರಾಹ್ಮಣರು ಸೇರಿಕೊಂಡು ವೀರಶೈವ ಪದ, ಸಂಸ್ಕೃತ ಶ್ಲೋಕ, ವೇದಾಗಮಗಳ ಉದ್ಘೋಷಗಳನ್ನು ವಚನಗಳಲ್ಲಿ ತುರುಕಿದರು ಎಂಬ ಸಂಕಥನದ ಸಂಶೋಧನೆಗಳನ್ನು ಯಾರು ಏಕೆ ತುರುಕಿದರು ಎಂಬುದು ಇಂದಿನ ಸಂಶೋಧನಾರ್ಹ ತುರ್ತು. ಹಾಗಾಗಿಯೇ ತರ್ಕದಿಂದ ಈ ಸಂಕಥನಗಳನ್ನು ಪ್ರಶ್ನಿಸಿದವರ ಮೇಲೆ ಎಲ್ಲಾ ರೀತಿಯ ತಾಲಿಬಾನಿತನವನ್ನು ಬಸವ ಭಂಜಕ ಲಿಂಗಾಹತಿಗಳು ತೋರುತ್ತಿದ್ದಾರೆ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುವ ಇವರ ಈ ನಡೆಯೇ ಅವರ ಸಂಕಥನಗಳು ಪೊಳ್ಳು ಎನ್ನುತ್ತವೆ.

ಇನ್ನು ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿಯೇ ರಾಷ್ಟ್ರವಿರೋಧಿ ಚಟುವಟಿಕೆಗಳ ಸೂಕ್ಷ್ಮ ಸಿಕ್ಕರೂ ಬಂಧಿಸುವ ಕಾನೂನುಗಳಿರುವಾಗ ರಾಜಪ್ರಭುತ್ವದ ಕಲ್ಯಾಣದಲ್ಲಿ ಬಸವಣ್ಣನು ಇಷ್ಟೆಲ್ಲಾ ಜನರನ್ನು ಕ್ರೋಡೀಕರಿಸಿ ಕ್ರಾಂತಿಗೆ ಅನುವಾದದ್ದು ನಿಜವೇ? ನಿಜವಾದರೆ ಅವನ ಉದ್ದೇಶ ಏನಾಗಿತ್ತು? ಖುದ್ದು ಅಧಿಕಾರಕ್ಕೇರುವ ಮಹತ್ವಾಕಾಂಕ್ಷೆ ಇದ್ದೀತೆ?

ಬಸವಣ್ಣನು ಜನರನ್ನು ಕ್ರೋಡೀಕರಿಸುತ್ತಿದ್ದುದರ ಪರಿಣಾಮವಾಗಿಯೇ ಬಿಜ್ಜಳ-ಬಸವ ಸಂಘರ್ಷ ಏರ್ಪಟ್ಟು, ಬಿಜ್ಜಳನು ಕೊಲೆಯಾಗಿ ಬಸವಣ್ಣ ಆತ್ಮಹತ್ಯೆ ಮಾಡಿಕೊಂಡದ್ದು ಎನ್ನಬಹುದು. ಮೇಲ್ನೋಟಕ್ಕೆ ಧಾರ್ಮಿಕ ಸಂಘರ್ಷ ಬಿಟ್ಟರೆ ಇನ್ಯಾವ ರಾಜಕೀಯ ಸಂಘರ್ಷವೂ ಕಲ್ಯಾಣ ಕ್ರಾಂತಿಯಲ್ಲಿ ಕಾಣಬರುವುದಿಲ್ಲ. ಆದರೆ ಕೇವಲ ಪಂಥೀಯ ಧಾರ್ಮಿಕ ಸಂಘರ್ಷವು ಓರ್ವ ರಾಜನನ್ನು ಕೊಲ್ಲುವ ಅಥವಾ ಶರಣರನ್ನು ನಿರ್ನಾಮ ಮಾಡುವ ಹಂತಕ್ಕೆ ಹೋಗುತ್ತದೆ ಎನ್ನುವುದು ಚಿಂತನಾರ್ಹ. ಸಾಮಾನ್ಯವಾಗಿ ಈ ಧರ್ಮ ಸಂಘರ್ಷಗಳು ಪರಸ್ಪರ ಅನ್ಯಪಂಥೀಯರ ನಡುವೆ ನಡೆದಿವೆಯೇ ಹೊರತು ಪ್ರಭುತ್ವದ ನಡುವೆ ಇಲ್ಲ. ಹಾಗಾಗಿ ' What if ಹೀಗಿದ್ದರೆ ಹೇಗೆ' ಎಂಬ ಸಂಶೋಧನಾ ನೆಲೆಯಲ್ಲಿ ತರ್ಕಕ್ಕೊಡ್ಡಿದಾಗ- ಬಸವಣ್ಣ ಒಬ್ಬ ಮಹತ್ವಾಕಾಂಕ್ಷಿ. ಬಿಜ್ಜಳನನ್ನು ಮಂತ್ರಪರವಶನನ್ನಾಗಿಸಿ ಆಯಕಟ್ಟಿನ ಜಾಗಗಳಲ್ಲಿ ತನ್ನವರನ್ನು ಕೂರಿಸಿದ್ದ ಬಸವಣ್ಣನು ಬಿಜ್ಜಳನು ಯಾವಾಗ ವಾಸ್ತವವನ್ನು ಗ್ರಹಿಸಲಾರಂಭಿಸಿದನೋ ಅಥವಾ ಬಸವಣ್ಣನನ್ನು ವಿರೋಧಿಸಿದನೋ ಆಗ ಬಿಜ್ಜಳನನ್ನು ಕೊಂದು ಖುದ್ದು ಅಧಿಕಾರ ಹಿಡಿಯುವ ರಾಜಕೀಯ ಧ್ರುವೀಕರಣದ ಸಜ್ಜೆ ಸಿದ್ಧವಾಗಿತ್ತು. ಅದಕ್ಕೆ ಪೂರಕವಾಗಿ ಭಕ್ತಿಪಂಥದ ಸಿದ್ಧ ಮಾದರಿಯ ಸೂತ್ರ, ಅಸಮಾನತೆಯ ಸಾಮಾಜಿಕ ಪರಿಸ್ಥಿತಿಗಳ ವಾತಾವರಣವಿದ್ದಿತು. ಈ ಎಲ್ಲಾ ಸನ್ನಿವೇಶಗಳು ಬಸವಣ್ಣನ ಮಹತ್ವಾಕಾಂಕ್ಷೆಗೆ ಆಸರೆಯೂ ಆಗಿದ್ದವು. ಹಾಗಾಗಿಯೇ ಖುದ್ದು ವೀರಮಾಹೇಶ್ವರನಾಗಿದ್ದ ಅವನು ಶೈವವನ್ನು ಸದೃಢಗೊಳಿಸಿ ವಿಸ್ತರಿಸಲು ಸದಾ ಸಿದ್ಧರಿದ್ದ ಕಾಳಾಮುಖಿ ವೀರಶೈವ ವೀರಮಾಹೇಶ್ವರರನ್ನು ಜಂಗಮ-ದಾಸೋಹಗಳ ಕಾರಣವೊಡ್ಡಿ ಎಲ್ಲೆಡೆಯಿಂದ ಕಲ್ಯಾಣಕ್ಕೆ ಬರಮಾಡಿಕೊಂಡು ಶಕ್ತಿಯನ್ನು ಕ್ರೋಡೀಕರಿಸುತ್ತಿದ್ದನು. ಬಸವಣ್ಣನ ಮಹತ್ವಾಕಾಂಕ್ಷೆಯ ಉದ್ದೇಶ ಇತರೆ ಭಕ್ತಿಪಂಥಗಳಂತೆ ಕೇವಲ ಅಸಮಾನತೆಯನ್ನು ತೊಡೆದು ಅಧ್ಯಾತ್ಮವನ್ನು ಪಸರಿಸುವ ಭಕ್ತಿ ಚಿಂತನೆಯಿಂದಲ್ಲ ಎಂಬುದು ಬಸವರಾಜ ರಗಳೆ, ಬಸವ ಪುರಾಣ, ಮೌಖಿಕ ಇತಿಹಾಸ, ಬಿಜ್ಜಳನ ಕೊಲೆಯಲ್ಲದೆ ವಚನಗಳಿಂದಲೂ ಸ್ಪಷ್ಟವಾಗುತ್ತದೆ. ಅಲ್ಲದೆ, ಇಂಥ ಕ್ರಾಂತಿ ಮತ್ತಿನ್ಯಾವ ಭಕ್ತಿಪಂಥದ ಚಳವಳಿಯಲ್ಲಿಯೂ ನಡೆದಿಲ್ಲ. ಆದರೆ ಈ ಮಹತ್ವಾಕಾಂಕ್ಷೆಗೆ 'ಹುಟ್ಟಿನಿಂದ ಜಾತಿ' ಮತ್ತದರ ಚಿಗುರು ಕವಲು ನಿಯಮಗಳು ಬರಸಿಡಿಲಿನಂತೆ ಅಪ್ಪಳಿಸಿಬಿಟ್ಟವು. ಉತ್ತರದಿಂದ ಸಾಮಾಜಿಕವಾಗಿ ಜಾರಿಗೊಳ್ಳುತ್ತ ಬಂದ ಈ ನಿಯಮಗಳನ್ನು ವೀರಶೈವ ಮತ್ತದರ ಆದ್ಯರು ಗಟ್ಟಿಯಾಗಿ ಅಪ್ಪಿಕೊಂಡುಬಿಟ್ಟರು. ಅಲ್ಲಿಯವರೆಗೆ ಒಗ್ಗಟ್ಟಾಗಿ ಜತೆಗೂಡಿ ಹೊರಗಿನ ವಿರೋಧವನ್ನು ಯಶಸ್ವಿಯಾಗಿ ಹತ್ತಿಕ್ಕಿದ್ದ ಬಸವಣ್ಣ ಮತ್ತವನ ಶರಣ ಸಂಘವನ್ನು ಒಳಗಿನ ಈ ಹೊಡೆತ ಕಂಗೆಡಿಸಿಬಿಟ್ಟಿತು.

ಆದ್ಯರ ವಿರುದ್ಧ ಬಂಡೆದ್ದು ಈ ನವನಿಯಮಗಳ ವಿರುದ್ಧ ಹೋರಾಡಿದರೂ ಹಿನ್ನಡೆಯನ್ನನುಭವಿಸುತ್ತಿದ್ದ ಬಸವಣ್ಣನನ್ನು ಹತ್ತಿಕ್ಕಲು ಇದೇ ಸಮಯವೆಂದು ಬಿಜ್ಜಳನ ಮಗ ಸೋವೇಶನೂ ಮುಂದಾದನು. ಒಟ್ಟಿನಲ್ಲಿ ಹರಳಯ್ಯ-ಮಧುವಯ್ಯನ ಮಕ್ಕಳ ಜಾತಕಗಳು ಹೊಂದಿದ್ದವೋ ಇಲ್ಲವೋ ರಾಜ-ರಾಜಗುರು-ಧರ್ಮಕಾರಣ ಶಕ್ತಿಗಳ ನಕ್ಷತ್ರಗಳು ಧ್ರುವೀಕರಣಗೊಂಡು ಹರಳಯ್ಯ-ಮಧುವಯ್ಯನ ಮಕ್ಕಳ ಕಲ್ಯಾಣವು ಕಲ್ಯಾಣದ ಕ್ರಾಂತಿಯನ್ನು ಪರಿಸಮಾಪ್ತಿಗೊಳಿಸಿತು. ಜಗತ್ತಿನ ಬಹುಪಾಲು ಮಹತ್ವಾಕಾಂಕ್ಷಿಗಳು ಮತ್ತು ಕ್ರಾಂತಿಕಾರಿಗಳು ತಮ್ಮ ಆಕಾಂಕ್ಷೆಗಳು ಈಡೇರದಿದ್ದಾಗ, ಕ್ರಾಂತಿಗಳಲ್ಲಿ ಸೋತಾಗ ಕಡೆಗೆ ಶರಣಾದದ್ದು ಆತ್ಮಹತ್ಯೆಗೇನೆ! ಬಸವಣ್ಣನೂ ಅದಕ್ಕೆ ಹೊರತಾಗಿರಲಿಲ್ಲ. ಜೈನರ ಬಿಜ್ಜಳರಾಯ ಚರಿತದಲ್ಲಿ ನೇರವಾಗಿ ಹೇಳಿದ್ದುದನ್ನು ಬಸವಪುರಾಣವು ಸಂಗಮನಲ್ಲಿ ಐಕ್ಯನಾದನು ಎಂದು ಸೂಚ್ಯವಾಗಿ ಹೇಳಿದೆಯಷ್ಟೆ. ಚೈನಾದ ಮಿಂಗ್ ವಂಶದ ಶಾಂಗ್ಝೆನ್ ಚಕ್ರವರ್ತಿ, ಜರ್ಮನಿಯ ಹಿಟ್ಲರ್, ಚಿಲಿಯ ಹೋಸೆ ಮ್ಯಾನುಯಲ್ ಬಲ್ಮಸೀಡ ಮತ್ತು ಸಾಲ್ವಡೋರ್ ಅಲ್ಲಂಡೆ, ಬ್ರೆಜಿಲ್ಲಿನ ಗೆಟ್ಯೂಲಿಯೋ ವರ್ಗಾಸ್, ಜಾರ್ಜಿಯಾದ ಜ್ವಿಯಾದ್ ಗಾಮಸ್ಕೂರ್ದಿಯ ಹೀಗೆ ಆತ್ಮಹತ್ಯೆ ಮಾಡಿಕೊಂಡ ಮಹತ್ವಾಕಾಂಕ್ಷಿಗಳ ಪಟ್ಟಿ ಬೆಳೆಯುತ್ತದೆ. ಅಷ್ಟೇ ಅಲ್ಲದೆ ಈ ಪಟ್ಟಿಯು ಕ್ರಿಸ್ತಪೂರ್ವ ಹನ್ನೊಂದನೇ ಶತಮಾನದ ಚೀನಿ ಶಾಂಗ್ ವಂಶದ ಚಕ್ರವರ್ತಿ ಶೂ, ಒಂಬತ್ತನೇ ಶತಮಾನದ ಇಸ್ರೇಲಿನ ದೊರೆಯಾದ ಜಿಮ್ರಿಯಿಂದ ಕ್ರಿಸ್ತಶಕ 2019ರ ಇಸ್ಲಾಮಿಕ್ ಸ್ಟೇಟಿನ ಮುಖ್ಯಸ್ಥನಾದ ಅಬು ಬಕ್ರ್ ಅಲ್-ಬಗ್ದಾದಿ ಮತ್ತು ಪೆರು ದೇಶದ ಮುಖ್ಯಸ್ಥನಾಗಿದ್ದ ಅಲನ್ ಗಾರ್ಸಿಯಾ ಪೆರೇಜ್‌ವರೆಗೆ ವಿಶ್ವವ್ಯಾಪಿಯಾಗಿ ಕಾಲಾತೀತವಾಗಿ ಮಹತ್ವಾಕಾಂಕ್ಷಿಗಳ ಮತ್ತು ಕ್ರಾಂತಿಕಾರಿಗಳ 'ಮರಣವೇ ಮಹಾನವಮಿ' ಎಂಬ ಏಕಮುಖಿ ಮನಸ್ಥಿತಿಯ ಜಾಗತಿಕ ಚಿತ್ರಣವನ್ನು 'ಶರಣರ ಸಾವನ್ನು ಮರಣದಲ್ಲಿ ಕಾಣು' ಎಂಬಂತೆ ತೆರೆದಿಡುತ್ತದೆ.

ಈ ತಾರ್ಕಿಕ ಆಯಾಮದಲ್ಲಿ ಬಸವಣ್ಣನ ಚರಿತ್ರೆಯನ್ನು ಏಕೆ ಯಾವ ಸಂಶೋಧನೆಗಳೂ ನೋಡಿಲ್ಲ ಎಂಬುದು ನಮ್ಮ ಸಾಮಾಜಿಕ ಸಾಂಸ್ಕೃತಿಕ ಸಂಶೋಧನೆಗಳು ಎಷ್ಟೊಂದು ಪೂರ್ವಾಗ್ರಹಗಳಿಂದ ಕೂಡಿವೆ ಎಂಬ ಒಂದು ಹೊಳಹನ್ನು ನೀಡುತ್ತದೆ. ಇನ್ನು ಅನುಭವ ಮಂಟಪ, ಬಸವ ಮಹಾಮನೆಗಳು ಬಸವ ಭಕ್ತರು ಹೇಳುವಷ್ಟು ವಿಶಾಲವಾಗಿ ವೈಭವೋಪೇತವಾಗಿ ಇದ್ದವೇ? ಮಹಾಮನೆ ಎನ್ನುವ ಪದವೇ ಅಲೌಕಿಕ ಸ್ವರೂಪ. ಇದನ್ನು ಲೌಕಿಕವಾಗಿ ಇದ್ದಿತು ಎನ್ನುವುದು ತಪ್ಪು. ನಿತ್ಯವೂ ಒಂದಿಲ್ಲೊಂದು ಕಡೆ ಮನೆ ಪಾಯ ಹಾಕಲು ಅಗೆಯುವಾಗ ಪುರಾತನ ಕಟ್ಟಡಗಳ ಪಳೆಯುಳಿಕೆ ಬಿಡಿ, ರಾಖಿಗಡಿಯಂಥ ಕ್ರಿಸ್ತಪೂರ್ವ ಶತಮಾನಗಳ ಮಡಕೆ ಚೂರಿನಿಂದ ಹಿಡಿದು ಮೂಳೆಚೂರುಗಳು ಸಿಕ್ಕದ್ದೂ ಸುದ್ದಿಯಾಗುತ್ತಿರುವಾಗ ಇಷ್ಟೊಂದು ಮಹತ್ವದ ಕಲ್ಯಾಣದ ಬಸವಣ್ಣ, ಶರಣ, ಮಹಾಮನೆ, ಅನುಭವ ಮಂಟಪ ಇತ್ಯಾದಿ ಯಾವುದೇ ಕುರುಹು ಏಕೆ ಈವರೆಗೆ ಸಿಕ್ಕಿಲ್ಲ? ಎಂಬ ಪ್ರಶ್ನೆಯೇ ಇದಕ್ಕೆ ಉತ್ತರ. ಅಲ್ಲದೆ ದರ್ಗಾ ಆಗಿರುವ ಕಟ್ಟಡವೇ ಅನುಭವ ಮಂಟಪ ಎನ್ನುವುದೂ ಆಧಾರರಹಿತ. ಹಾಗಾಗಿಯೇ ಬಸವ ಭಂಜಕರು ಯಾವ ಸಾಕ್ಷಿ, ಪುರಾವೆ ಹುಡುಕದೆ ಒಂಬೈನೂರು ಕೋಟಿ ರು. ವೆಚ್ಚದಲ್ಲಿ ಜಂಗಮವನ್ನು ನಿಶ್ಶೂನ್ಯಗೊಳಿಸಿ ಅನುಭವ ಮಂಟಪ ಸಹಿತದ ಮಹಾಮನೆ ಎಂಬ ಸ್ಥಾವರವನ್ನು ಕಟ್ಟಲು ಹೊರಟಿರುವುದು.

ಈಗ ಜ್ವಲಂತವಾಗಿರುವ ವೀರಶೈವ ಲಿಂಗಾಯತ ನಿಜಕ್ಕೂ ಬೇರೆಯೇ?

ಬೇರೆ ಎನ್ನುವುದು ಒಂದು ಭಂಜಕ ಹುನ್ನಾರ. ಶಿಕ್ಷಣ ಕ್ಷೇತ್ರದ ಮೇಲೆ ಮಾರ್ಕ್ಸ್‌ವಾದದ ಹಿಡಿತದಿಂದಾಗಿ ಧಾರ್ಮಿಕ ವಿಚಾರಧಾರೆ, ಧಾರ್ಮಿಕ ಸಂಘಟನೆಗಳು, ಅಧ್ಯಾತ್ಮದ ವಿಷಯಗಳ ಗಂಭೀರವಾದ ಅಧ್ಯಯನ ಹಾಗೂ ಸಂಶೋಧನಾ ಕಾರ್ಯಗಳು ಭಾರತ ಸ್ವಾತಂತ್ರ್ಯದೊಂದಿಗೆ ನಿಂತುಹೋದವು. ಹಿಂದೆಲ್ಲಾ ಪರಂಪರಾಗತವಾಗಿ ಭಾರತೀಯ ಬೇರು, ಸಂಸ್ಕೃತಿ, ಸಂಪ್ರದಾಯ ಮತ-ಧರ್ಮಗಳ ಬೋಧೆ ಮತ್ತು ಸಂಸ್ಕಾರ ಸಮಾಜದ ಹಿರಿಯರಿಂದ ಸಿಗುತ್ತಿತ್ತು. ಶತಮಾನಗಳ ವಸಾಹತುಶಾಹಿ ಆಡಳಿತ ಮತ್ತು ಆಧುನಿಕ ಜೀವನಶೈಲಿಯ ಮಾರ್ಪಿನಿಂದ ಈ ಜ್ಞಾನಪ್ರಸಾರದಲ್ಲಿ ತಡೆಯುಂಟಾಯಿತು. ವಸಾಹತುಶಾಹಿ ಬ್ರಿಟಿಷರು ಅಧ್ಯಯನ ಮತ್ತು ಸಂಶೋಧನೆಯ ಶಿಸ್ತನ್ನು ಕಲಿಸಿ ಒಂದು ಭದ್ರ ಬುನಾದಿ ಹಾಕಿಕೊಟ್ಟಿದ್ದರೂ ಸ್ವಾತಂತ್ರ್ಯಾನಂತರ ನಮ್ಮ ಶೈಕ್ಷಣಿಕ ಕ್ಷೇತ್ರ ಅತಂತ್ರವಾಯಿತು. ವೀರಶೈವ-ಲಿಂಗಾಯತ ಸಂಪ್ರದಾಯದಲ್ಲೂ ಮಾರ್ಕ್ಸ್‌ವಾದದ ಹಿಡಿತದ ಧಾರ್ಮಿಕ ವಿಚಾರಧಾರೆ ಆವರಿಸಿ ಸತ್ಯವನ್ನು ಮಂಕಾಗಿಸಿತು. ಕೆಲವೇ ಕೆಲವು ಜನಪ್ರಿಯ ವಚನಗಳನ್ನು ಕಮ್ಯುನಿಸ್ಟ್ ಸಿದ್ಧಾಂತದ ಸಂದೇಶಗಳಂತೆ ಈಗಿನ ಸಂಶೋಧಕರು ಅರ್ಥೈಸಿಬಿಟ್ಟಿದ್ದಾರೆ! ಇದರ ಪರಿಣಾಮವಾಗಿ ವೀರಶೈವ ಲಿಂಗಾಯತ ಸಿದ್ಧಾಂತವನ್ನು ಕೇವಲ ಸಮಾಜವಾದವನ್ನು ಪ್ರತಿಪಾದಿಸುವ ಕಮ್ಯುನಿಸ್ಟ್ ತತ್ವಕ್ಕೆ ತಳುಕು ಹಾಕಿ ಬೇರೆಯದೇ ವ್ಯಾಖ್ಯಾನವನ್ನು ಕೊಡಲಾಗುತ್ತಿದೆ. ತತ್ಫಲವಾಗಿ ಅದರಲ್ಲಿರುವ ಜಿಜ್ಞಾಸೆ, ಧಾರ್ಮಿಕ, ತಾತ್ವಿಕ ಹಾಗೂ ಆಧ್ಯಾತ್ಮಿಕ ಅಂಶಗಳಿಂದ ಸಮಾಜವನ್ನು ದೂರಿಡಲಾಗುತ್ತಿದೆ. ವಿಪರ್ಯಾಸವೆಂದರೆ ಇದಕ್ಕೆ ಕೆಲವು ಅಧ್ಯಯನವಿಲ್ಲದ ತಳುಕಿನ ವಿರಕ್ತರೂ ಬಲಿಯಾಗಿರುವರು.

ವಿರಕ್ತ ಪೀಠದ ಚನ್ನಬಸವಣ್ಣನವರ ಕರಣಹಸುಗೆ, ಧರ್ಮಶಾಸ್ತ್ರ ಹಾಗೂ ಅಧ್ಯಾತ್ಮಶಾಸ್ತ್ರವಲ್ಲದೆ ಬಸವಪೂರ್ವ ಕಾಲದ ಶಿಲಾಶಾಸನಗಳು, ವತುಲಸಿದ್ಧಾಖ್ಯ, ಲಕುಲಾಗಮ, ಲಕುಲಸಿದ್ಧಾಂತ ಮುಂತಾದ ಶೈವಾಗಮಗಳು, ಮಹಾನಿರ್ವಾಣತಂತ್ರ ಹಾಗೂ ಮಾಲಿನಿವಿಜಯತಂತ್ರ ಮುಂತಾದ ತಂತ್ರಶಾಸ್ತ್ರಗಳ ವಿಶ್ಲೇಷಣೆಯ ಆಧಾರದ ಮೇಲೆ ವೀರಶೈವತ್ವ ಅಥವಾ ಲಿಂಗಾಯತ ಸಿದ್ಧಾಂತದ ಹುಟ್ಟು, ಸೈದ್ಧಾಂತಿಕ ಬುನಾದಿ, ತತ್ವಜ್ಞಾನ, ಪರಂಪರೆ, ಧಾರ್ಮಿಕ ವಿಧಿಗಳು ಹಾಗೂ ಸಾಮಾಜಿಕ-ಸಾಂಸ್ಕೃತಿಕ-ಆಧ್ಯಾತ್ಮಿಕ ಆಯಾಮಗಳ ಹಿನ್ನೆಲೆಯನ್ನು ಕಂಡುಕೊಳ್ಳಬೇಕು. ಅನಾದಿಕಾಲದಿಂದಲೂ ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿರುವ ಶೈವಸಿದ್ಧಾಂತಗಳಲ್ಲಿ ಕರ್ನಾಟಕದಲ್ಲಿಯೂ ಅಸ್ತಿತ್ವದಲ್ಲಿತ್ತೆನ್ನುವ, ಲಕುಲೀಶ-ಪಾಶುಪತ ಶೈವಮತ ಅಥವಾ ಕಾಳಾಮುಖ ಶೈವಮತವೆಂದು ಪಾಶ್ಚಿಮಾತ್ಯ ಸಂಶೋಧಕರು ಸಾಬೀತು ಮಾಡಿದ್ದಾರೆ. ಈ ಶೈವರ ಮೇಲೆ ಅಂದಿನ ಪ್ರಬಲ ಜೈನಮತಸ್ಥರಿಂದ ಆಗುತ್ತಿರುವ ಅನ್ಯಾಯದಿಂದಾಗಿ ಅವಸಾನದ ಅಂಚಿನಲ್ಲಿದ್ದುದನ್ನು ರೇಣುಕಾದಿ ಆದ್ಯರಲ್ಲದೇ ಬಸವಣ್ಣನ ನೇತೃತ್ವದಲ್ಲಿ ಶರಣರೆಲ್ಲರೂ ಸೇರಿ ಶತಮಾನಗಳ ಕಾಲಾಂತರದಲ್ಲಿ ಪುನರುಜ್ಜೀವನಗೊಳಿಸಿದರು. ಹೀಗೆ ಪುನರುಜ್ಜೀವನಗೊಂಡ ಸಂಪ್ರದಾಯವೇ ವೀರಶೈವತ್ವ ಅಥವಾ ಲಿಂಗವಂತ ಸಂಪ್ರದಾಯ! ಈ ವೀರಶೈವತ್ವದ ಪ್ರಮುಖ ಲಕ್ಷಣವೇ ಸಾಮಾಜಿಕ ಸುಧಾರಣೆಯ ಕಳಕಳಿ! ಇದನ್ನು ಎಲ್ಲಾ ಪ್ರಮುಖ ಗುರುಪೀಠಗಳು ಮತ್ತು ವಿರಕ್ತಪೀಠಗಳು ಹಿರಿಯರು ಬಲ್ಲರು.

**(ಮುಂದುವರಿಯುವುದು)**

**(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)**

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 341

## ಸಮಾಚಾರ ಸಣ್ಣದಲ್ಲ

### 3 ಜೈನ ಮುನಿಗಳಿಗೆ ಹಲ್ಲೆ: 6 ಮಂದಿ ಸೆರೆ

**ಭೋಪಾಲ್:** ಮಧ್ಯಪ್ರದೇಶದ ಸಿಂಗೋಲಿ ನಗರದಲ್ಲಿ ಭಾನುವಾರ ರಾತ್ರಿ ನಡೆದುಕೊಂಡು ಹೋಗುತ್ತಿದ್ದ ಜೈನ ಮುನಿಗಳ ಮೇಲೆ ಆರು ಜನರು ಹಣಕ್ಕಾಗಿ ಹಲ್ಲೆ ಮಾಡಿದ್ದಾರೆ. ಮೂವರು ಮುನಿಗಳಿಗೆ ಬೆನ್ನು, ತಲೆ, ಭುಜದಲ್ಲಿ ಗಾಯಗಳಾಗಿವೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಸಿಂಗೋಲಿ ಪೊಲೀಸರು ಒಬ್ಬ ಬಾಲಕ ಮತ್ತು 5 ಯುವಕರನ್ನು ಬಂಧಿಸಿದ್ದಾರೆ. ಮೋಟಾರ್ ಬೈಕ್‌ನಲ್ಲಿ ಬಂದ 6 ದುಷ್ಕರ್ಮಿಗಳು, ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಜೈನ ಮುನಿಗಳನ್ನು ತಡೆದು ಹಣ ಕೇಳಿ, ಕೊಡದೇ ಇದ್ದುದಕ್ಕೆ ಹಲ್ಲೆ ಮಾಡಿದ್ದಾರೆ ಎನ್ನಲಾಗಿದೆ. ಸುದ್ದಿ ತಿಳಿದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿ ನಗರದಲ್ಲಿ ಸೋಮವಾರ ಬಂದ್ ಆಚರಿಸಿದ್ದಾರೆ.

### ಮೈಥೇಯಿ ಯಾತ್ರೆ: ಕುಕಿ ಜನಾಂಗ ಅಡ್ಡಿ

**ಇಂಫಾಲ:** ಮಣಿಪುರದಲ್ಲಿನ ಜನಾಂಗೀಯ ಸಂಘರ್ಷ ಈಗ ಬೇರೆಯದೇ ರೂಪು ಪಡೆಯುತ್ತಿದೆ. ಮೈಥೇಯಿ ಸಮುದಾಯದವರು ಥಾಂಗ್ಜಿಂಗ್ ಬೆಟ್ಟಕ್ಕೆ ಪ್ರತಿವರ್ಷ ಏಪ್ರಿಲ್‌ನಲ್ಲಿ ಯಾತ್ರೆ ಕೈಗೊಳ್ಳುತ್ತಾರೆ. ಅದಕ್ಕಾಗಿ ಮೊಯಿರಾಂಗ್‌ವರೆಗೆ ತಲುಪಿದ್ದಾರೆ. ಆದರೆ, ಕುಕಿ ಜನಾಂಗದವರು ಮೈಥೇಯಿಗಳ ಯಾತ್ರೆಗೆ ಅಡ್ಡಿಪಡಿಸಲು ಮುಂದಾಗಿದ್ದಾರೆ. ಥಾಂಗ್ಜಿಂಗ್ ಬೆಟ್ಟ ಹತ್ತಲು ಬಿಡುವುದಿಲ್ಲ ಎಂದು ಕುಕಿ ಜನಾಂಗದವರು ಮೈಥೇಯಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಪೊಲೀಸರು ಮತ್ತು ಅರೆಸೇನಾ ಪಡೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಿಷ್ಣುಪುರ ಮತ್ತು ಚುರಚಂದಾಪುರ ಜಿಲ್ಲೆಗಳಿಗೆ ರವಾನಿಸಲಾಗಿದೆ.

### ಅಯ್ಯಪ್ಪ ಸ್ವಾಮಿ ಚಿನ್ನದ ಲಾಕೆಟ್

**ತಿರುವನಂತಪುರ:** ಸೌರಮಾನ ಯುಗಾದಿ ಅಂದರೆ ವಿಷು ಹಬ್ಬದ ಹಿನ್ನೆಲೆಯಲ್ಲಿ ತಿರುವಾಂಕೂರು ದೇವಸ್ವಂ ಮಂಡಳಿ(ಟಿಡಿಬಿ) ಶ್ರೀ ಅಯ್ಯಪ್ಪ ಸ್ವಾಮಿಯ ಚಿತ್ರವಿರುವ ಚಿನ್ನದ ಲಾಕೆಟ್‌ಗಳನ್ನು ಸೋಮವಾರ ಬಿಡುಗಡೆ ಮಾಡಿದೆ.

ಶಬರಿಮಲೆ ದೇವಸ್ಥಾನದ ಗರ್ಭಗುಡಿಯಲ್ಲಿ ಲಾಕೆಟ್‌ಗಳನ್ನು ದೇವರ ಸನ್ನಿಧಿಯಲ್ಲಿ ಇರಿಸಲಾಗಿದೆ. ಆನ್‌ಲೈನ್ ಮೂಲಕ ಕೋರಿಕೆ ಸಲ್ಲಿಸಿದ ಭಕ್ತರಿಗೆ ವಿತರಿಸಲಾಗುವುದು. ಲಾಕೆಟ್ ವಿತರಣೆ ಕಾರ್ಯಕ್ರಮಕ್ಕೆ ಸಚಿವ ವಾಸವನ್ ವಿ.ಎನ್. ಸೋಮವಾರ ಚಾಲನೆ ನೀಡಿದರು. 2 ಗ್ರಾಂ ಲಾಕೆಟ್ ಬೆಲೆ 19,300 ರು. ಮತ್ತು 4 ಗ್ರಾಂನದು 38,600 ರು. ಎಂದು ಟಿಡಿಬಿ ಪ್ರಕಟಣೆ ತಿಳಿಸಿದೆ.

### ಕಾಡಾನೆ ದಾಳಿಗೆ 20ರ ಯುವಕ ಬಲಿ

**ತ್ರಿಶೂರ್:** ಕೇರಳದ ತ್ರಿಶೂರ್ ಜಿಲ್ಲೆಯ ಅರಣ್ಯದಂಚಿನ ಪ್ರದೇಶದಲ್ಲಿ ಜೇನು ಸಂಗ್ರಹಿಸಲು ಜತೆಗಾರರೊಂದಿಗೆ ತೆರಳಿದ್ದ 20 ವರ್ಷದ ಯುವಕ ಸೆಬಾಸ್ಟಿಯನ್ ಎಂಬಾತ ಕಾಡಾನೆ ದಾಳಿಯಲ್ಲಿ ಮೃತಪಟ್ಟಿದ್ದಾನೆ.

ಭಾನುವಾರ ರಾತ್ರಿ ಜೇನು ಸಂಗ್ರಹಿಸಲು ಹೋಗಿದ್ದ ಮೂವರು, ಕಾಡಿನಲ್ಲಿ ಆನೆ ನೋಡಿ ಹೆದರಿ ಓಡಲಾರಂಭಿಸಿದ್ದಾರೆ. ಓಡುವ ಭರದಲ್ಲಿ ಸೆಬಾಸ್ಟಿಯನ್ ಕೆಳಕ್ಕೆ ಬಿದ್ದಿದ್ದು, ಆತನನ್ನು ಆನೆ ತುಳಿದಿದೆ ಎಂದು ಹೇಳಲಾಗಿದೆ.

### ತಿಮ್ಮಪ್ಪನಿಗೆ ಪವನ್ ಪತ್ನಿ ಅನ್ನಾ ಮುಡಿ

**ತಿರುಪತಿ:** ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ, ತೆಲುಗು ಚಿತ್ರನಟ ಪವನ್ ಕಲ್ಯಾಣ್ ಅವರ ಕಿರಿಯ ಮಗ ಸಿಂಗಪುರದ ಬೇಸಿಗೆ ಶಿಬಿರದಲ್ಲಾದ ಬೆಂಕಿ ಅವಘಡದಿಂದ ಪಾರಾಗಿ ಬಂದಿದ್ದಕ್ಕೆ ಪವನ್ ಪತ್ನಿ ಅನ್ನಾ ಲೆಜ್ನೆವಾ ತಿರುಪತಿಗೆ ತೆರಳಿ ತಿಮ್ಮಪ್ಪನಿಗೆ ಮುಡಿ ಕೊಟ್ಟು ಹರಕೆ ತೀರಿಸಿದ್ದಾರೆ.

ಏ.8ರಂದು ಸಿಂಗಪುರದಲ್ಲಿನ ಬೇಸಿಗೆ ಶಿಬಿರದಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಪವನ್ ಕಲ್ಯಾಣ್ ಕಿರಿಯ ಪುತ್ರ ಮಾರ್ಕ್ ಶಂಕರ್(8) ಸೇರಿದಂತೆ ಕೆಲ ಮಕ್ಕಳಿಗೆ ಸುಟ್ಟಗಾಯಗಳಾಗಿವೆ. ಶಂಕರ್ ಕೈಕಾಲಿಗೆ ಸುಟ್ಟ ಗಾಯವಾಗಿದೆ. ಮಗ ಜೀವಂತ ಪಾರಾಗಿ ಬಂದಿದ್ದಕ್ಕೆ ತಿರುಪತಿ ತಿಮ್ಮಪ್ಪನ ಕೃಪೆಯೇ ಕಾರಣ ಎಂದು ಅನ್ನಾ ಲೆಜ್ನೆವಾ ಅವರು ತಿರುಪತಿಗೆ ತೆರಳಿ ಮುಡಿ ಕೊಟ್ಟಿದ್ದಾರೆ. ಡಿಸಿಎಂ ಪವನ್ ಸರಕಾರದ ಕೆಲಸಗಳಲ್ಲಿ ಬಿಜಿ ಇದ್ದುದರಿಂದ ಅನ್ನಾ ಒಬ್ಬರೇ ತಿರುಪತಿಗೆ ಹೋಗಿ ಹರಕೆ ತೀರಿಸಿ ಬಂದಿದ್ದಾರೆ.

{ಯೋಗಿ ಆದಿತ್ಯನಾಥ್} ಉ.ಪ್ರ. ಸಿಎಂ

**ಡಾ.ಬಿ.ಆರ್.ಅಂಬೇಡ್ಕರ್ ಅವರ ಹೋರಾಟ ದೇಶದ ಜನರಿಗೆ ಸದಾ ಸ್ಫೂರ್ತಿದಾಯಕ. ಎಲ್ಲರನ್ನೂ ಒಳಗೊಂಡ, ಎಲ್ಲರನ್ನೂ ಒಳಗೊಳ್ಳುವ, ಅತ್ಯುತ್ತಮ ಪ್ರಜಾಪ್ರಭುತ್ವ ಮೌಲ್ಯಗಳ, ಒಂದು ಭಾರತ-ಶ್ರೇಷ್ಠ ಭಾರತ ಎಂಬ ಸಂದೇಶ ಸಾರಿದ ಅಂಬೇಡ್ಕರ್ ಅವರೇ ನಿಜವಾದ 'ಭಾರತ ರತ್ನ'. ಅವರು ಪ್ರಜಾಪ್ರಭುತ್ವದ ಜೀವಂತ ಶಾಲೆ ಇದ್ದಂತೆ. ಅವರಿಗೆ ನನ್ನ ನಮನ.**

ಹಸ್ತಾಂತರಕ್ಕೆ ಭಾರತ ಸರಕಾರದ ಮನವಿ | ಪಿಎನ್‌ಬಿಗೆ 6100 ಕೋಟಿ ರು. ವಂಚನೆ | 2018-ಭಾರತದಿಂದ ಅಮೆರಿಕಕ್ಕೆ ಪರಾರಿ

# ವಂಚಕ ಮೆಹುಲ್ ಚೋಕ್ಸಿ ಬೆಲ್ಜಿಯಂನಲ್ಲಿ ಬಂಧನ

**ದೆಹಲಿ:** ಕೆಲವು ದಿನಗಳ ಹಿಂದಷ್ಟೇ ಭಾರತದ ಮೋಸ್ಟ್ ವಾಂಟೆಡ್ ಕ್ರಿಮಿನಲ್, ಪಾಕಿಸ್ತಾನ ಮೂಲದ ಭಯೋತ್ಪಾದಕ ತಹಾವುರ್ ಹುಸೇನ್ ರಾಣಾನನ್ನು ಅಮೆರಿಕದಿಂದ ಎಳೆದು ತಂದಿರುವ ಭಾರತದ ಅಧಿಕಾರಿಗಳು, ಈಗ ಭಾರೀ ವಂಚಕ ವಜ್ರೋದ್ಯಮಿ ಮೆಹುಲ್ ಚೋಕ್ಸಿಯನ್ನು ಬೆಲ್ಜಿಯಂನಿಂದ ಹೆಡೆಮುರಿ ಕಟ್ಟಿ ಕರೆತರುವ ಸಮಯ ಸಮೀಪಿಸಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ 6100 ಕೋಟಿ ರು. ಸಾಲ ಪಡೆದು ವಂಚಿಸಿ ಭಾರತದಿಂದ ಪರಾರಿಯಾಗಿದ್ದ ವಜ್ರದ ವ್ಯಾಪಾರಿ, ಒಂದು ಕಾಲದ ಜನಪ್ರಿಯ ಬ್ರ್ಯಾಂಡ್ 'ಗೀತಾಂಜಲಿ ಗ್ರೂಪ್' ಮಾಲೀಕ ಮೆಹುಲ್ ಚೋಕ್ಸಿಯನ್ನು ಬೆಲ್ಜಿಯಂ ಪೊಲೀಸರು ಶನಿವಾರ ಬಂಧಿಸಿದ್ದಾರೆ.

**ಎರಡೆರೆಡು ವಾರಂಟ್:** ಘೋಷಿತ ಅಪರಾಧಿಯಾಗಿರುವ ಮೆಹುಲ್ ಚೋಕ್ಸಿ ಬಂಧನಕ್ಕೆ ಭಾರತದ ನ್ಯಾಯಾಲಯ ಈ ಹಿಂದೆಯೇ ಬಂಧನ ವಾರಂಟ್ ಹೊರಡಿಸಿದೆ. ಮುಂಬೈ ನ್ಯಾಯಾಲಯ 2018ರ ಮೇ 23 ಮತ್ತು 2021ರ ಜೂ.15ರಂದು ಮುಕ್ತ ಬಂಧನ ವಾರಂಟ್‌ಗಳನ್ನು ಹೊರಡಿಸಿತ್ತು. ಚೋಕ್ಸಿಯನ್ನು ಬಂಧಿಸುವಾಗ, ಬೆಲ್ಜಿಯಂ ಪೊಲೀಸರು ಈ ವಾರಂಟ್‌ಗಳನ್ನು ಉಲ್ಲೇಖಿಸಿದ್ದಾರೆ. ಅಲ್ಲದೇ, ಜಾರಿ ನಿರ್ದೇಶನಾಲಯ(ಇ.ಡಿ) ಮತ್ತು ಕೇಂದ್ರ ತನಿಖಾ ದಳ(ಸಿಬಿಐ)ವೂ ಬೆಲ್ಜಿಯಂ ಪೊಲೀಸರಿಗೆ ಮನವಿ ಮಾಡಿಕೊಂಡಿದ್ದವು. ಅದರನ್ವಯ ಬೆಲ್ಜಿಯಂನ ಆಸ್ಪತ್ರೆಯೊಂದರಲ್ಲಿದ್ದ ಮೆಹುಲ್ ಚೋಕ್ಸಿಯನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ. ಆತ ಸದ್ಯ ಬೆಲ್ಜಿಯಂ ಸೆರೆಮನೆಯಲ್ಲಿದ್ದಾನೆ. ಘೋಷಿತ ಅಪರಾಧಿಯಾದ ಮೆಹುಲ್ ಚೋಕ್ಸಿಯನ್ನು ಭಾರತಕ್ಕೆ ಎಳೆದು ತರಲು ಭಾರತದ ತನಿಖಾ ಸಂಸ್ಥೆಗಳು ಅದಾಗಲೇ 'ಹಸ್ತಾಂತರ' ಪ್ರಕ್ರಿಯೆಗೆ ಬೆಲ್ಜಿಯಂ ಸರಕಾರಕ್ಕೆ ಮನವಿ ಮಾಡಿವೆ. ಈ ಸಂಬಂಧದ ಪ್ರಕ್ರಿಯೆ ಆಗಲೇ ಆರಂಭಗೊಂಡಿದ್ದು, ಸದ್ಯದಲ್ಲೇ ಚೋಕ್ಸಿಯನ್ನು ಭಾರತಕ್ಕೆ ಎಳೆದು ತರಲಾಗುತ್ತದೆ ಎನ್ನಲಾಗಿದೆ.

ಮೆಹುಲ್ ಚೋಕ್ಸಿ ಆಗ-ಈಗ. ಭಾರತದಲ್ಲಿ ವಜ್ರ ವ್ಯಾಪಾರಿಯಾಗಿದ್ದಾಗ ಹಾಗೂ ಇತ್ತೀಚೆಗೆ ವಿದೇಶಿ ನೆಲದಲ್ಲಿ ಬಂಧನಕ್ಕೊಳಗಾದ ಸಂದರ್ಭದ ಚಿತ್ರ.

**'ಗೀತಾಂಜಲಿ ಗ್ರೂಪ್' ಮಾಲೀಕ**

ಭಾರತದಲ್ಲಿ 'ಗೀತಾಂಜಲಿ ಗ್ರೂಪ್' ಆರಂಭಿಸಿ ಹೆಸರಾಂತ ವಜ್ರದ ವ್ಯಾಪಾರಿಯಾಗಿದ್ದ ಮೆಹುಲ್ ಚೋಕ್ಸಿ, ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ನಕಲಿ ದಾಖಲೆಗಳನ್ನು ನೀಡಿ 6100 ಕೋಟಿ ರು.ಗೂ ಅಧಿಕ ಮೊತ್ತದ ಸಾಲ ಪಡೆದಿದ್ದ. ಕಡೆಗೆ ಸಾಲ ತೀರಿಸಲಾಗದೇ 2018ರಲ್ಲಿ ದೇಶದಿಂದ ಓಡಿಹೋಗಿದ್ದ. ಮೊದಲಿಗೆ ಅಮೆರಿಕ, ಬಳಿಕ ಆಂಟಿಗುವಾ ಮತ್ತು ಬಾರ್ಬುಡಾದಲ್ಲಿ ವಾಸಿಸುತ್ತಿದ್ದ. ಇತ್ತೀಚೆಗೆ ತೀವ್ರ ಅನಾರೋಗಕ್ಕೆ (ಕ್ಯಾನ್ಸರ್) ತುತ್ತಾಗಿದ್ದರಿಂದ ಚಿಕಿತ್ಸೆಗಾಗಿ ಬೆಲ್ಜಿಯಂನ ಆಂಟ್ವೆರ್ಪ್‌ನಲ್ಲಿ ನೆಲೆಸಿದ್ದ.

ಚೋಕ್ಸಿ ಬೆಲ್ಜಿಯಂನಲ್ಲಿರುವ ಮಾಹಿತಿ ಲಭ್ಯವಾದ ಬಳಿಕ ಆತನನ್ನು ಭಾರತಕ್ಕೆ ಹಸ್ತಾಂತರಿಸುವಂತೆ ಸಿಬಿಐ ಬೆಲ್ಜಿಯಂ ಸರಕಾರಕ್ಕೆ ಮನವಿ ಮಾಡಿತ್ತು. ಸಿಬಿಐ ಮನವಿ ಮೇರೆಗೇ ಈಗ ಚೋಕ್ಸಿಯನ್ನು ಬೆಲ್ಜಿಯಂ ಪೊಲೀಸರು ಬಂಧಿಸಿದ್ದು, ಭಾರತಕ್ಕೆ ಹಸ್ತಾಂತರಿಸಲು ಸಿದ್ಧರಿದ್ದಾರೆ ಎನ್ನಲಾಗಿದೆ. ಆದರೆ, ಚೋಕ್ಸಿ ಎಂದಿನಂತೆ ಅನಾರೋಗ್ಯ ಮತ್ತು ಇತರ ಕಾರಣಗಳನ್ನು ಉಲ್ಲೇಖಿಸಿ ಅವರು ಜಾಮೀನು ಕೋರುವ ನಿರೀಕ್ಷೆಯಿದೆ. ಆತನ ವಕೀಲರು ಈ ದಿಶೆಯಲ್ಲಿ ಅದಾಗಲೇ ಪ್ರಯತ್ನ ಆರಂಭಿಸಿದ್ದಾರೆ ಎಂಬ ಮಾಹಿತಿಯೂ ಇದೆ. ಇಂಥದೊಂದು ಕಾನೂನು ಪ್ರಕ್ರಿಯೆ ಬೆಲ್ಜಿಯಂ ನ್ಯಾಯಾಲಯದಲ್ಲಿ ಶುರುವಾದರೆ ಚೋಕ್ಸಿಯನ್ನು ಭಾರತಕ್ಕೆ ಕರೆತರುವುದು ತಡವಾಗಬಹುದು ಎಂಬ ಮಾತೂ ಇದೆ.

### ಕೈಬಿಟ್ಟಿದ್ದ ಇಂಟರ್‌ಪೋಲ್!

**ಭಾರತ ಸರಕಾರದ ಕೋರಿಕೆ ಮೇರೆಗೆ ವಂಚಕ ಮೆಹುಲ್ ಚೋಕ್ಸಿ ವಿರುದ್ಧ ರೆಡ್ ಕಾರ್ನರ್ ನೋಟಿಸ್ ಹೊರಡಿಸಿದ್ದ ಇಂಟರ್‌ಪೋಲ್ ಪೊಲೀಸರು, ಆ ಬಳಿಕ 2022ರಲ್ಲಿ ನೋಟಿಸ್ ವಾಪಸ್ ತೆಗೆದುಕೊಂಡಿದ್ದರು. ಹಾಗಾಗಿಯೇ ವಂಚಕ ಚೋಕ್ಸಿಯ ಬಂಧನ ವಿದೇಶಿ ನೆಲದಲ್ಲಿ ಕಷ್ಟವಾಗಿತ್ತು.**

### ಸದ್ಯ ಬ್ರಿಟನ್‌ನಲ್ಲಿರುವ ಸೋದರಳಿಯ ನೀರವ್

ನೀರವ್ ಮೋದಿ ಆಗ-ಈಗ

**ವಂಚಕ ಮೆಹುಲ್ ಚೋಕ್ಸಿ ಸೋದರಳಿಯ ನೀರವ್ ಮೋದಿ ಕೂಡಾ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ(ಪಿಎನ್‌ಬಿ) 6,498 ಕೋಟಿ ರು.ಗಳಷ್ಟು ದೊಡ್ಡ ಮೊತ್ತವನ್ನು ವಂಚಿಸಿದ್ದಾನೆ. ಈ ಹಗರಣದಲ್ಲಿಯೂ ಮೆಹುಲ್ ಚೋಕ್ಸಿ ಪಾತ್ರವಿದೆ. ಆತ ಈಗ ಬ್ರಿಟನ್‌ನಲ್ಲಿ ಅಡಗಿದ್ದಾನೆ. ಆತನನ್ನೂ ಭಾರತಕ್ಕೆ ಎಳೆದು ತರುವ ಪ್ರಕ್ರಿಯೆಯಲ್ಲೇ ಭಾರತದ ಅಧಿಕಾರಿಗಳು ತೊಡಗಿದ್ದಾರೆ. ಆದರೆ, ನೀರವ್ ಕೂಡಾ ಬ್ರಿಟನ್ ನ್ಯಾಯಾಲಯಗಳಲ್ಲಿ ಒಂದಾದ ಮೇಲೊಂದರಂತೆ ಅರ್ಜಿಗಳನ್ನು ಹಾಕಿಕೊಂಡು ಗಡಿಪಾರು ಆಗುವುದು ಮುಂದೂಡಿಕೆ ಆಗುವಂತೆ ಮಾಡುತ್ತಲೇ ಇದ್ದಾನೆ.**

### ಚೋಕ್ಸಿ ಪತ್ನಿ ಪ್ರೀತಿಯೂ ವಂಚಕಿ

**ವಂಚಕ ಮೆಹುಲ್ ಚೋಕ್ಸಿ ಪತ್ನಿ ಪ್ರೀತಿ ಚೋಕ್ಸಿಯೂ ವಂಚಕಿ ಎಂಬುದು ತಿಳಿದುಬಂದಿದೆ. ಪಿಎನ್‌ಬಿಗೆ ನೀರವ್ ಮತ್ತು ಚೋಕ್ಸಿ ಸೇರಿಕೊಂಡು 13,850 ಕೋಟಿ ರು.ಗಳಷ್ಟು ದೊಡ್ಡ ಮೊತ್ತವನ್ನು ವಂಚಿಸುವುದರಲ್ಲಿ ಪ್ರೀತಿ ಚೋಕ್ಸಿ ಪಾತ್ರವೂ ಇದೆ. ಆಕೆಯೇ ಇದಿಷ್ಟೂ ಮೊತ್ತವನ್ನು ಸುರಕ್ಷಿತವಾಗಿ ವಿವಿಧ ದೇಶಗಳಿಗೆ ಸಾಗಿಸುವುದಕ್ಕೆ ಯೋಜನೆ ರೂಪಿಸಿದ್ದಳು ಎನ್ನಲಾಗಿದೆ.**

**2013ರಲ್ಲಿ ಮ್ಯಾಗ್ನಸ್ ಕನ್ಸಲ್ಟೆನ್ಸಿಯ ಸಿಡಿ ಶಾ ಜತೆಗೂಡಿ ಕೆಲಸ ಮಾಡಿ ಅನುಭವ ಪಡೆದಿದ್ದ ಪ್ರೀತಿ ಚೋಕ್ಸಿ, ವಿವಿಧ ದೇಶಗಳಲ್ಲಿ ಚಾರಿಂಗ್ ಕ್ರಾಸ್ ಲಿ., ಕೊಲಿಂಡೇಲ್ ಹೋಲ್ಡಿಂಗ್ ಲಿ., ಮತ್ತು ಹಿಲ್ಲಿಂಗ್ಡನ್ ಹೋಲ್ಡಿಂಗ್ಸ್ ಲಿ. ಹೆಸರಲ್ಲಿ ವಿದೇಶಗಳಲ್ಲಿ ಕಂಪನಿ ಆರಂಭಿಸಿದ ಪ್ರೀತಿ 'ಪಿಎನ್‌ಬಿ'ಯಿಂದ ಸಾಲವಾಗಿ ಪಡೆದ ಹಣವನ್ನೆಲ್ಲಾ ವಿದೇಶಗಳಿಗೆ ಸಾಗಿಸಿದ್ದಾಳೆ ಎನ್ನಲಾಗಿದೆ. ಹಿಲ್ಲಿಂಗ್ಡನ್ ಹೋಲ್ಡಿಂಗ್ಸ್‌ನ ದೊಡ್ಡ ಷೇರುದಾರಳಾದ ಪ್ರೀತಿ, ನಂತರದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಗೋಲ್ಡ್‌ಹಾಕ್ ಡಿಎಂಸಿಸಿ ಕಂಪನಿ ಸ್ಥಾಪಿಸಿದಳು. ಈ ಕಂಪನಿಯ ಒಡೆತನದಲ್ಲಿ ದುಬೈನ ಅಲ್ಮಾಸ್ ಟವರ್ಸ್‌ನಲ್ಲಿ ಮೂರು ಅತ್ಯಧಿಕ ಬೆಲೆಯ (23 ಕೋಟಿ ರು.) ಅಪಾರ್ಟ್‌ಮೆಂಟ್‌ಗಳಿವೆ ಎಂದು ತಿಳಿದುಬಂದಿದೆ.**

### ಮೆಹುಲ್ ಚೋಕ್ಸಿ ಯಾರು?

**1959ರಲ್ಲಿ ಭಾರತದಲ್ಲಿ ಜನಿಸಿದ ಮೆಹುಲ್ ಚೋಕ್ಸಿ, ಕಾಲೇಜು ವ್ಯಾಸಂಗದ ಬಳಿಕ ವಜ್ರದ ವ್ಯಾಪಾರಕ್ಕಿಳಿದ. ನಂತರದಲ್ಲಿ 'ಗೀತಾಂಜಲಿ ಗ್ರೂಪ್' ಹೆಸರಿನಲ್ಲಿ ದೊಡ್ಡ ಮಟ್ಟದಲ್ಲಿ ವಜ್ರ-ಆಭರಣಗಳ ವ್ಯಾಪಾರ ಆರಂಭಿಸಿ ಹಲವು ವರ್ಷಗಳವರೆಗೂ ಮುಂದುವರಿಸಿದ. ಜಾಹೀರಾತುಗಳ ಮೂಲಕ ದೊಡ್ಡದಾಗಿ ಗುರುತಿಸಿಕೊಂಡ ಚೋಕ್ಸಿ, ಬಳಿಕ ಹಂತ ಹಂತವಾಗಿ ಪಂಜಾಬ್ ನ್ಯಾಷನಲ್ ಬ್ಯಾಂಕ್)ಪಿಎನ್‌ಬಿ)ನಿಂದ ಸಾಲ ಪಡೆಯಲಾರಂಭಿಸಿದ. ವಿದೇಶದಲ್ಲೂ ವಹಿವಾಟು ವಿಸ್ತರಿಸುವ ನೆಪವೊಡ್ಡಿ 6097 ಕೋಟಿ ರು.ವರೆಗೂ ಸಾಲ ಪಡೆದ. ಜತೆಗೆ ಸೋದರಳಿಯ ನೀರವ್ ಮೋದಿಯನ್ನೂ ಜತೆಗಿಟ್ಟುಕೊಂಡು ಬ್ಯಾಂಕ್ ವಂಚನೆ ಮೊತ್ತವನ್ನು ಮತ್ತಷ್ಟು ಹಿಗ್ಗಿಸಿದ. 2011ರಿಂದ 2018ರ ನಡುವೆ ಇಬ್ಬರೂ 'ಪಿಎನ್‌ಬಿ'ಯಿಂದ ಚೋಕ್ಸಿ 6097 ಕೋಟಿ ರು. ಮತ್ತು ನೀರವ್ ಮೋದಿ 6,498 ಕೋಟಿ ರು. ಸಾಲ ಪಡೆದಿದ್ದು, ಬಡ್ಡಿ ಸೇರಿ ಅದೀಗ 13,850 ಕೋಟಿ ರು.ಗೆ ತಲುಪಿದೆ. ಈ ಮಧ್ಯೆ, ಆಂಟಿಗುವಾ ಪೌರತ್ವವನ್ನು 2017ರಲ್ಲೇ ಪಡೆದುಕೊಂಡ ಚೋಕ್ಸಿ, 2018ರಲ್ಲಿ ದೇಶ ತೊರೆದು ಮೊದಲ ಅಮೆರಿಕ ತಲುಪಿದ. ಬಳಿಕ ಆಂಟಿಗುವಾದಲ್ಲಿ ನೆಲೆಗೊಂಡ.**

**2018ರಲ್ಲಿ ಪಿಎನ್‌ಬಿಗೆ ಚೋಕ್ಸಿ, ನೀರವ್ ವಂಚನೆ ಬಯಲಿಗೆ ಬಂದ ಬಳಿಕ ಸಿಬಿಐ ಮತ್ತು ಇ.ಡಿ ತನಿಖೆ ಆರಂಭಿಸಿದವು. ನಂತರದ ದಿನಗಳಲ್ಲಿ 'ಪಿಎಂಎಲ್‌ಎ' ಅನ್ವಯ ಮುಂಬೈ ನ್ಯಾಯಾಲಯದ ಅನುಮತಿ ಪಡೆದು ಚೋಕ್ಸಿ ಮತ್ತು ಗೀತಾಂಜಲಿ ಗ್ರೂಪ್‌ಗೆ ಸೇರಿದ 2,565 ಕೋಟಿ ರು. ಮೌಲ್ಯದ ಆಸ್ತಿಗಳನ್ನು ವಶಪಡಿಸಿಕೊಂಡು ಹರಾಜು ಹಾಕಿ ಬ್ಯಾಂಕ್ ಸಾಲಕ್ಕೆ ಜಮಾ ಮಾಡಲಾಗಿದೆ.**

## ನಟ ಸಲ್ಮಾನ್‌ಗೆ ಮತ್ತೆ ಬೆದರಿಕೆ-ಬಿಗಿಭದ್ರತೆ



**ಮುಂಬೈ:** ಬಾಲಿವುಡ್ ನಟ ಸಲ್ಮಾನ್ ಖಾನ್ ಕಾರು ಸ್ಫೋಟಿಸುವುದಾಗಿ ಮತ್ತೆ ಬೆದರಿಕೆ ಸಂದೇಶ ಬಂದಿದೆ. ಹಾಗಾಗಿ ಮುಂಬೈನ ವರ್ಲಿಯಲ್ಲಿರುವ ಅವರ ನಿವಾಸಕ್ಕೆ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ. ಕಾರು ಸ್ಫೋಟಿಸಿ ಸಲ್ಮಾನ್ ಹತ್ಯೆ ಮಾಡುವುದಾಗಿ ವರ್ಲಿ ಸಂಚಾರ ಪೊಲೀಸರ ಅಧಿಕೃತ ಸಂಖ್ಯೆಗೆ ಸೋಮವಾರ ಬೆಳಗ್ಗೆ ವಾಟ್ಸಾಪ್ ಸಂದೇಶ ಬಂದಿದೆ. ಈ ಸಂಬಂಧ ವರ್ಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ.

## ಅಮರನಾಥ ಯಾತ್ರೆ ನೋಂದಣಿ ಆರಂಭ

**ಶ್ರೀನಗರ:** ಅಮರನಾಥ ಯಾತ್ರೆ ಜೂ.29ರಿಂದ ಆ.19ರವರೆಗೆ ನಡೆಯಲಿದ್ದು, ಯಾತ್ರೆಗೆ ನೋಂದಣಿ ಪ್ರಕ್ರಿಯೆ ಸೋಮವಾರ ಆರಂಭವಾಗಿದೆ.



ಸಮುದ್ರಮಟ್ಟದಿಂದ 12,756 ಅಡಿ ಎತ್ತರದ ಗುಹೆಯಲ್ಲಿ ನೈಸರ್ಗಿಕವಾಗಿ ರೂಪುಗೊಳ್ಳುವ ಹಿಮದ ಶಿವಲಿಂಗದ ದರ್ಶನಕ್ಕೆ ಪ್ರತಿ ವರ್ಷ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ.

ನೋಂದಣಿ: ಯಾತ್ರಿಕರು ಶ್ರೀ ಅಮರನಾಥ ದೇವಾಲಯ ಮಂಡಳಿಯ ಅಧಿಕೃತ ವೆಬ್‌ಸೈಟ್ ತೆರೆದು ನೋಂದಣಿ ಮಾಡಿಕೊಳ್ಳಬಹುದು. ನೋಂದಣಿ ಶುಲ್ಕ 220 ರು. ಅಲ್ಲದೇ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಜಮ್ಮು-ಕಾಶ್ಮೀರ ಬ್ಯಾಂಕ್ ಸೇರಿದಂತೆ ದೇಶಾದ್ಯಂತ ನಿಗದಿತ 540 ಬ್ಯಾಂಕ್ ಶಾಖೆಗಳಿಗೆ ತೆರಳಿ ನೇರವಾಗಿ ನೋಂದಾಯಿಸಿಕೊಳ್ಳಬಹುದು. ನೋಂದಣಿಗೆ ಗುರುತು, ವಿಳಾಸ ದೃಢೀಕರಣದ ಮೂಲ ದಾಖಲೆಗಳು ಮತ್ತು ಆರೋಗ್ಯ ದೃಢೀಕರಣದ ಪ್ರಮಾಣಪತ್ರವನ್ನು ಕಡ್ಡಾಯವಾಗಿ ನೋಂದಣಿಗೆ ನೀಡಬೇಕು. ಎತ್ತರದ ಪ್ರದೇಶದಲ್ಲಿ ಚಾರಣ ಕೈಗೊಳ್ಳಲು ನೀವು ದೈಹಿಕವಾಗಿ ಸದೃಢರಾಗಿದ್ದೀರಿ ಎಂಬುದನ್ನು ಖಚಿತಪಡಿಸುವ ವೈದ್ಯರು ಅಥವಾ ವೈದ್ಯಕೀಯ ಸಂಸ್ಥೆಗಳು ನೀಡುವ ಆರೋಗ್ಯ ಪ್ರಮಾಣಪತ್ರ ಯಾತ್ರೆಗೆ ತೆರಳಲು ಕಡ್ಡಾಯ. ಆರೋಗ್ಯ ಪ್ರಮಾಣಪತ್ರವು ಏ.15ರ ನಂತರದ್ದಾಗಿರಬೇಕು. 13 ವರ್ಷಕ್ಕಿಂತ ಕಿರಿಯ ಮತ್ತು 70 ವರ್ಷ ದಾಟಿದವರಿಗೆ ಯಾತ್ರೆಗೆ ಅವಕಾಶವಿರುವುದಿಲ್ಲ.

## ರಾಣಾಗೆ ನಿತ್ಯ 10 ಗಂಟೆ ವಿಚಾರಣೆ

**ದೆಹಲಿ:** 2008ರ ನ.26ರಂದು ನಡೆದ ಮುಂಬೈ ಭಯೋತ್ಪಾದಕ ದಾಳಿಯ ಪ್ರಮುಖ ಸಂಚುಕೋರ ತಹಾವುರ್ ಹುಸೇನ್ ರಾಣಾನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳು ನಿತ್ಯವೂ 10 ಗಂಟೆ ವಿಚಾರಣೆ ನಡೆಸುತ್ತಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.



18 ದಿನಗಳ ಅವಧಿಗೆ ಕಸ್ಟಡಿಗೆ ಪಡೆದುಕೊಂಡಿರುವ 'ಎನ್‌ಐಎ' ಅಧಿಕಾರಿಗಳು, ವಿಚಾರಣೆ ಆರಂಭಕ್ಕೂ ಮುನ್ನ ನಿತ್ಯವೂ ರಾಣಾ ವೈದ್ಯಕೀಯ ತಪಾಸಣೆ ಮಾಡಿಸಿ ದಾಖಲಿಸುತ್ತಿದ್ದಾರೆ. ಅಲ್ಲದೇ, ರಾಣಾಗೆ ವಕೀಲರ ಭೇಟಿಗೂ ಅವಕಾಶ ನೀಡುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಎನ್‌ಐಎ ಮುಖ್ಯಸ್ಥರಾದ ಜಯಾ ರಾಯ್ ಅವರು ತನಿಖಾ ತಂಡದ ನೇತೃತ್ವ ವಹಿಸಿದ್ದಾರೆ. ರಾಣಾ ವಿಚಾರಣೆಗೆ ಸಹಕರಿಸುತ್ತಿದ್ದಾನೆ. ರಾಣಾ ಇಂತಹುದೇ ಆಹಾರ ಬೇಕು ಎಂದು ನಿರ್ದಿಷ್ಟವಾಗಿ ಬೇಡಿಕೆ ಇಟ್ಟಿಲ್ಲ. ನಿಯಮಗಳ ಪ್ರಕಾರ ಆರೋಪಿಗಳಿಗೆ ನೀಡುವ ಆಹಾರ ಪದಾರ್ಥಗಳನ್ನೇ ರಾಣಾಗೂ ಒದಗಿಸಲಾಗುತ್ತಿದೆ. ಭದ್ರತಾ ಸಿಬ್ಬಂದಿ ದಿನದ 24 ಗಂಟೆಗಳೂ ಪಾಳಿಯಲ್ಲಿ ಕಾವಲು ನಡೆಸಿದ್ದಾರೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ವಕ್ಫ್ ಕಾಯಿದೆ ವಿರೋಧಿಸಿದ್ದಕ್ಕೆ ಟೀಕೆ

## ಕಾಂಗ್ರೆಸ್ ಹರಡುತ್ತಿದೆ ಓಟ್‌ಬ್ಯಾಂಕ್ ವೈರಸ್

**ದೆಹಲಿ:** ಇತ್ತೀಚೆಗೆ ದೇಶಾದ್ಯಂತ ಜಾರಿಯಾಗಿರುವ ವಕ್ಫ್(ತಿದ್ದುಪಡಿ) ಕಾಯಿದೆ-2025 ಅನ್ನು ವಿರೋಧಿಸುತ್ತಿರುವ ಕಾಂಗ್ರೆಸ್ ಪಕ್ಷ 'ಓಟ್ ಬ್ಯಾಂಕ್ ವೈರಸ್' ಹರಡುತ್ತಿದೆ. ಕಾಂಗ್ರೆಸ್ ಸಂವಿಧಾನದ ವಿಧ್ವಂಸಕವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಟೀಕಿಸಿದ್ದಾರೆ.



ಹಿಸ್ಸಾರ್‌ನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನ ಸಂದರ್ಭ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ದೇಶದ ಅತಿ ಹಳೆಯ ಪಕ್ಷವಾದ ಕಾಂಗ್ರೆಸ್, ಮೊದಲಿನಿಂದಲೂ ಎಸ್‌ಟಿ ಮತ್ತು ಎಸ್‌ಟಿ ಸಮುದಾಯವನ್ನು 2ನೇ ದರ್ಜೆ ನಾಗರಿಕರು ಎಂದೇ ಪರಿಗಣಿಸಿದೆ ಎಂದು ಖಂಡಿಸಿದರು.

ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಮಾನತೆ ತರಲು ಬಯಸಿದ್ದರು. ಪ್ರತಿ ಬಡವ, ಹಿಂದುಳಿದ ಸಮುದಾಯದವರು ಸಮಾಜದಲ್ಲಿ ಘನತೆಯಿಂದ ತಲೆ ಎತ್ತಿ ಬದುಕಲು ಸಾಧ್ಯವಾಗಬೇಕು, ಕನಸು ಕಾಣಬೇಕು ಮತ್ತು ಅವನ್ನು ಪೂರ್ಣಗೊಳಿಸಬೇಕು ಎಂದು ಬಯಸಿದ್ದರು. ಆದರೆ ಕಾಂಗ್ರೆಸ್ ಮತ ಬ್ಯಾಂಕ್ ರಾಜಕೀಯದ ವೈರಸ್ ಹರಡಿ ಇಡೀ ಸಮುದಾಯವನ್ನೇ ಕತ್ತಲೆಗೆ ದೂಡಿದೆ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಆಡಳಿತದಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿಗಳಿಗೆ ಬ್ಯಾಂಕ್ ಬಾಗಿಲು ತೆರೆದಿರಲಿಲ್ಲ. ಸಾಲ ಸೌಲಭ್ಯವಿರಲಿಲ್ಲ, ಸರಕಾರದಿಂದ ಕಲ್ಯಾಣ ಕಾರ್ಯಕ್ರಮಗಳು ಕನಸಾಗಿದ್ದವು. ಎನ್‌ಡಿಎ ಸರಕಾರ ಜನ ಧನ್ ಖಾತೆಗೆ ಅವಕಾಶ ಮಾಡಿಕೊಟ್ಟಿತು. ಹತ್ತಾರು ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು. ಅವೆಲ್ಲದರ ದೊಡ್ಡ ಫಲಾನುಭವಿಗಳು ಎಸ್‌ಸಿ-ಎಸ್‌ಟಿ ಸೋದರ-ಸೋದರಿಯರು ಎಂದು ಮೋದಿ ಗಮನ ಸೆಳೆದರು.

ಡಿಆರ್‌ಡಿಒದಿಂದ ಸಂಶೋಧನೆ-ಅಭಿವೃದ್ಧಿ | ಆಂಧ್ರದ ಕರ್ನೂಲ್‌ನಲ್ಲಿ ಯಶಸ್ವಿ ಪ್ರಯೋಗ

## ಡ್ರೋನ್ ನಾಶಕ್ಕೆ ಲೇಸರ್ ಗನ್: ಸೇನೆಗೆ ಹೊಸಶಕ್ತಿ

**ದೆಹಲಿ:** ಭಾರತದ ರಕ್ಷಣಾ ಕ್ಷೇತ್ರದ ಸಂಶೋಧನಾ ಸಂಸ್ಥೆ(ಡಿಆರ್‌ಡಿಒ) ಶತ್ರು ದೇಶದಿಂದ ಭಾರತದ ಗಡಿಯೊಳಕ್ಕೆ ಹಾರಿಬರುವ ಡ್ರೋನ್‌ಗಳು ಮತ್ತು ಕ್ಷಿಪಣಿಗಳನ್ನು ದೂರದಿಂದಲೇ ಕಂಡುಕೊಂಡು ನಾಶಪಡಿಸಬಲ್ಲ ಸಮರ್ಥ ಲೇಸರ್ ಗನ್ ಅಭಿವೃದ್ಧಿಪಡಿಸಿದೆ.

ಹೈದರಾಬಾದ್‌ನಲ್ಲಿರುವ ಡಿಆರ್‌ಡಿಒ ಘಟಕದ ಹೈ ಎನರ್ಜಿ ಸಿಸ್ಟಮ್ಸ್ ಅಂಡ್ ಸೈನ್ಸಸ್(ಚೆಸ್) ವಿಭಾಗದ ತಂತ್ರಜ್ಞರು, 30 ಕಿಲೋವಾಟ್ ಸಾಮರ್ಥ್ಯದ ಲೇಸರ್ ಕಿರಣಗಳ ಮೂಲಕವೇ ಶತ್ರುಪಡೆಯ ಆಕಾಶಕಾಯವನ್ನು ಕ್ಷಣ ಮಾತ್ರದಲ್ಲಿ ಸುಟ್ಟು ನಾಶ ಪಡಿಸಬಲ್ಲ ಸಮರ್ಥ ಶಸ್ತ್ರಾಸ್ತ್ರವನ್ನು ಅಭಿವೃದ್ಧಿಪಡಿಸಿದ್ದಾರೆ. ಇದರ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ಎಲ್‌ಆರ್‌ಡಿಇ, ಐಆರ್‌ಡಿಇ, ಡಿಎಲ್‌ಆರ್‌ಎಲ್ ಮತ್ತು ಭಾರತದ ಹಲವು ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ರಕ್ಷಣಾ ಸಲಕರಣೆ ಕ್ಷೇತ್ರದ ಕೈಗಾರಿಕೆಗಳು ನೆರವಾಗಿವೆ. ಇದು ಎಂಕೆ-11ಎ ಲೇಸರ್ 'ಡೈರೆಕ್ಟೆಡ್ ಎನರ್ಜಿ ವೆಪನ್' (ಡಿಇಡಬ್ಲ್ಯು) ಸಿಸ್ಟಂ ಆಗಿದೆ. ಆಂಧ್ರದ ಕರ್ನೂಲ್‌ನಲ್ಲಿರುವ ನ್ಯಾಷನಲ್ ಓಪನ್ ಏರ್ ರೇಂಜ್‌ನಲ್ಲಿ ಈ ಲೇಸರ್ ಗನ್‌ನ ಮೊದಲ ಪ್ರಯೋಗ ಭಾನುವಾರ ಸಂಜೆ ನಡೆಸಲಾಗಿದ್ದು, ಅದು ಯಶಸ್ವಿಯಾಗಿದೆ.

ಈ 'ಡಿಇಡಬ್ಲ್ಯು' ಶಸ್ತ್ರ ಘಟಕ ಆಕಾಶದಲ್ಲಿ ಹಾರಿ ಬರುವ ಶತ್ರುಪಡೆಯ ಡ್ರೋನ್ ಮತ್ತು ಕ್ಷಿಪಣಿಗಳನ್ನು ಗುರುತಿಸಿ, ನಿಖರವಾಗಿ ಗುರಿ ಇಟ್ಟು ಕ್ಷಣ ಮಾತ್ರದಲ್ಲಿ ಸುಟ್ಟು ಹಾಕಬಲ್ಲದು. ಅಮೆರಿಕ, ರಷ್ಯಾ ಮತ್ತು ಚೀನಾ ಬಳಿ ಮಾತ್ರವೇ ಇಂತಹ ಲೇಸರ್ ಗನ್‌ಗಳು ಇವೆ. ಈಗ ಈ ಸಾಲಿಗೆ ಭಾರತವೂ ಸೇರಿದೆ.

### ಭಾರತ 4ನೇ ರಾಷ್ಟ್ರ

**ಈ ಲೇಸರ್ ಗನ್ ಡ್ರೋನ್ ಮಾತ್ರವಲ್ಲದೇ, ಶತ್ರುಪಡೆಯ ಕ್ಷಿಪಣಿ, ಫಿಕ್ಸೆಡ್ ವಿಂಗ್ ಏರ್‌ಕ್ರಾಫ್ಟ್ ಮೊದಲಾದವನ್ನು ಹೊಡೆದುರುಳಿಸುವ ಸಾಮರ್ಥ್ಯ ಹೊಂದಿದೆ. ವಿಶ್ವದಲ್ಲಿ ಇಂತಹ ಅತ್ಯಾಧುನಿಕ ಶಸ್ತ್ರಾಸ್ತ್ರ ಹೊಂದಿರುವ ದೇಶಗಳ ಪಟ್ಟಿಗೆ ಭಾರತ 4ನೇ ದೇಶವಾಗಿ ಸೇರ್ಪಡೆಯಾಗಿದೆ. ಇದಲ್ಲದೇ ಡಿಆರ್‌ಡಿಒ ಇನ್ನೂ ಹಲವು ಹೊಸ ಬಗೆಯ ಶಸ್ತ್ರಾಸ್ತ್ರಗ ಳನ್ನು ತಯಾರಿಸುತ್ತಿದೆ. ಹೈ ಎನರ್ಜಿ ಮೈಕ್ರೋವೇವ್, ಎಲೆಕ್ಟ್ರೋ ಮ್ಯಾಗ್ನೆಟಿಕ್ ಪಲ್ಸ್ ಶಸ್ತ್ರಾಸ್ತ್ರಗಳು ಡಿಆರ್‌ಡಿಒ ಪ್ರಯೋಗಾಲಯದಲ್ಲಿ ಅಭಿವೃದ್ಧಿ ಹೊಂದು ತ್ತಿವೆ ಎಂದು ಡಿಆರ್‌ಡಿಒ ಅಧ್ಯಕ್ಷ ಸಮೀರ್ ವಿ ಕಾಮತ್ ಹೇಳಿದ್ದಾರೆ.**

### ಎಲ್ಲಿ ಬಳಕೆಗೆ ಸೂಕ್ತ

**ಈ ಬಲು ಶಕ್ತಿಶಾಲಿ ಲೇಸರ್ ಗನ್ ಭಾರತದ ಸೇನಾಪಡೆಗಳಿಗೆ ಹೆಚ್ಚಿನ ಶಕ್ತಿ ಒದಗಿಸಲಿದೆ. ಅದರಲ್ಲೂ ರಾಜಸ್ಥಾನ, ಪಂಜಾಬ್, ಕಾಶ್ಮೀರ ಭಾಗದ ಗಡಿ ಪ್ರದೇಶಗಳಲ್ಲಿ ಡ್ರೋನ್‌ಗಳನ್ನು ಬಳಸಿ ಪಾಕ್ ಸೇನೆಯು ಭಾರತದೊಳಕ್ಕೆ ಮಾದಕದ್ರವ್ಯಗಳು, ಶಸ್ತ್ರಾಸ್ತ್ರಗಳನ್ನು ಸಾಗಿಸುವ ದುಸ್ಸಾಹಸ ಮಾಡುತ್ತಿದೆ, ಅದನ್ನು ತಡೆಯಲು ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಈ 'ಡಿಇಡಬ್ಲ್ಯು' (ಡ್ರೋನ್ ನಾಶಕ) ಲೇಸರ್ ಗನ್ ಬಹಳ ಪ್ರಯೋಜನಕಾರಿಯಾಗಲಿದೆ. ಈ ಲೇಸರ್ ಗನ್ ಗಡಿಭಾಗದಲ್ಲಷ್ಟೇ ಅಲ್ಲ, ದೇಶದೊಳಗಿದ್ದುಕೊಂಡೇ(ಉದಾ: ಜಮ್ಮು-ಕಾಶ್ಮೀರ) ದೇಶವಿರೋಧಿ ಕೆಲಸ ಮಾಡುವ ದೇಶದ್ರೋಹಿಗಳ ಮನೆಗಳ ತಾರಸಿಯಲ್ಲಿನ ಸಿಗ್ನಲ್ ಟವರ್‌ಗಳನ್ನೂ ದೂರದಿಂದಲೇ ಸುಟ್ಟು ಹಾಕಬಲ್ಲದಾಗಿದೆ. ಗಣ್ಯ ವ್ಯಕ್ತಿಗಳ ಸಭೆ-ಸಮಾರಂಭಗಳ ಮೇಲೆ ಸಂಭಾವ್ಯ ಡ್ರೋನ್ ದಾಳಿ ತಡೆಯಲೂ ಇದು ನೆರವಾಗಲಿದೆ. ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಈ ಲೇಸರ್ ಗನ್ ಮತ್ತು ಅದರ ಕಾರ್ಯಶೈಲಿಯು ಹಾಲಿವುಡ್‌ನ ಜನಪ್ರಿಯ ಚಲನಚಿತ್ರ 'ಸ್ಟಾರ್ ವಾರ್ಸ್'ನಲ್ಲಿ ತೋರಿಸಿದ್ದ ಕಾಲ್ಪನಿಕ ಲೇಸರ್ ಗನ್ ನೆನಪಿಸುತ್ತದೆ.**



## ಬಿಜೆಪಿ, ಆರ್‌ಎಸ್‌ಎಸ್ ಅಂಬೇಡ್ಕರ್ ಶತ್ರುಗಳು

**ದೆಹಲಿ:** ಬಿಜೆಪಿ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಶತ್ರುಗಳು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ಅಂಬೇಡ್ಕರ್ ಜನ್ಮ ದಿನಾಚರಣೆ ಸಂದರ್ಭ ದೆಹಲಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಖರ್ಗೆ, ಕೇಂದ್ರದಲ್ಲಿನ ಮೋದಿ ಸರಕಾರ ಅಂಬೇಡ್ಕರ್ ಪರಂಪರೆಗೆ ಕೇವಲ ಲಿಪ್ ಸರ್ವಿಸ್ (ಬಾಯುಪಚಾರ) ನೀಡುತ್ತಿದೆ. ಆದರೆ ಸಂವಿಧಾನ ಶಿಲ್ಪಿಯ ಆಶಯಗಳನ್ನು ಈಡೇರಿಸಲು ಏನನ್ನೂ ಮಾಡುತ್ತಿಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ. 1952 ರ ಚುನಾವಣೆಯಲ್ಲಿ ಅಂಬೇಡ್ಕರ್ ಅವರ ಸೋಲಿಗೆ ಎಸ್.ಎ.ಡಾಂಗೆ ಮತ್ತು ವಿ.ಡಿ.ಸಾವರ್ಕರ್ ಕಾರಣ ಎಂದು ಖರ್ಗೆ ಬಿಜೆಪಿ ಆರೋಪಕ್ಕೆ ತಿರುಗೇಟು ನೀಡಿದರು.

ಜಾತಿ ಜನಗಣತಿ ವಿಚಾರ ಪ್ರಸ್ತಾಪಿಸಿದ ಖರ್ಗೆ, ಈ ಜಾತಿ ಗಣತಿ ರಾಷ್ಟ್ರವ್ಯಾಪಿ ನಡೆಸಬೇಕಾದ ಅಗತ್ಯವಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗೆ ಮೀಸಲು ಸೌಲಭ್ಯ ಒದಗಿಸಬೇಕು ಎಂದು ಆಗ್ರಹಿಸಿದರು. ಮೀಸಲಿಗೆ ಸಂಬಂಧಿಸಿ ಶೇ.50ರ ಮಿತಿಯನ್ನು ತೆಗೆದುಹಾಕುವ ಅಗತ್ಯವನ್ನು ಖರ್ಗೆ ಒತ್ತಿ ಹೇಳಿದರು. ಸಾಂವಿಧಾನಿಕ ಮೌಲ್ಯಗಳು ಮತ್ತು ಪ್ರಜಾಪ್ರಭುತ್ವದ ರಕ್ಷಣೆಗೆ ಕಾಂಗ್ರೆಸ್ ಬದ್ಧವಾಗಿದೆ ಎಂದರು.

ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಭಾರೀ ಪ್ರಗತಿ ನಿರೀಕ್ಷೆ

## ಅಮೆರಿಕ-ಚೀನಾ ಸುಂಕ ಸಮರ: ಭಾರತಕ್ಕೆ ಲಾಭ

**ದೆಹಲಿ:** ಅಮೆರಿಕ-ಚೀನಾ ಸುಂಕ ಸಮರ ನಡೆಯುತ್ತಿರುವುದರಿಂದ ಭಾರತಕ್ಕೆ ಮಕ್ಕಳ ಆಟಿಕೆಗಳ ಪ್ರಮುಖ ರಫ್ತು ಕೇಂದ್ರವಾಗಲು ಸುವರ್ಣ ಅವಕಾಶ ಒದಗಿಸಿಕೊಟ್ಟಿದೆ ಎಂದು ಭಾರತದ ಆಟಿಕೆ ಉದ್ಯಮಿಗಳು ಪ್ರತಿಕ್ರಿಯಿಸಿದ್ದಾರೆ.

ಚೀನಾದಿಂದ ಅಮೆರಿಕಕ್ಕೆ ವಾರ್ಷಿಕ 8000 ಕೋಟಿ ಡಾಲರ್ ಮೌಲ್ಯದ ಆಟಿಕೆಗಳು ರಫ್ತಾಗುತ್ತವೆ. ಈಗ ಚೀನಾದ ಆಟಿಕೆಗಳ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶೇ.145ರಷ್ಟು ಪ್ರತಿಸುಂಕ ವಿಧಿಸಿರುವುದು ಚೀನಾ ಆಟಿಕೆ ರಫ್ತು ವಹಿವಾಟಿಗೆ ದೊಡ್ಡ ಪೆಟ್ಟು ನೀಡಲಿದೆ. ಅಲ್ಲದೇ ವಿಯಟ್ನಾಂ ದೇಶವೂ ಅಮೆರಿಕಕ್ಕೆ ವಾರ್ಷಿಕ 600 ಕೋಟಿ ಡಾಲರ್‌ಗಳಷ್ಟು ಆಟಿಕೆಗಳನ್ನು ರಫ್ತು ಮಾಡುತ್ತಿತ್ತು. ವಿಯೆಟ್ನಾಂ ಸರಕುಗಳಿಗೂ ಟ್ರಂಪ್ ಅವರು ಶೇ.46ರಷ್ಟು ಪ್ರತಿಸುಂಕ ವಿಧಿಸಿದ್ದಾರೆ. ಪರಿಣಾಮ, ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಬಹಳಷ್ಟು ಬದಲಾವಣೆಗಳಾಗುತ್ತವೆ. ಬೇರೆ ದೇಶಗಳಲ್ಲಿನ ಆಟಿಕೆ ತಯಾರಕರು ಮತ್ತು ರಫ್ತುದಾರರಿಗೆ ದೊಡ್ಡ ಮಟ್ಟದ ಅವಕಾಶಗಳನ್ನು ಸೃಷ್ಟಿಸಿಕೊಡಲಿದೆ ಎಂದು ಭಾರತದ ಆಟಿಕೆ ತಯಾರಕರ ಸಂಘದ ಅಧ್ಯಕ್ಷ ಅಕ್ಷಯ್ ಬಿಂಜ್ರಾಜ್ಕ ಸುದ್ದಿಸಂಸ್ಥೆಗೆ ಸೋಮವಾರ ಪ್ರತಿಕ್ರಿಯಿಸಿದ್ದಾರೆ.

ಈ ಅವಕಾಶವನ್ನು ಬಳಸಿಕೊಳ್ಳುವುದಕ್ಕೆ ಭಾರತಕ್ಕೆ ಉತ್ತಮ ಅವಕಾಶ ಸಿಕ್ಕಿದೆ. ಭಾರತದಲ್ಲಿ ತಯಾರಾಗುವ ಆಟಿಕೆಗಳು ಈಗ ಗುಣಮಟ್ಟ ಮತ್ತು ಬೆಲೆ ಎರಡರಲ್ಲೂ ಚೀನಾ ಉತ್ಪನ್ನಗಳೊಂದಿಗೆ ಸ್ಪರ್ಧೆ ಮಾಡಬಹುದು ಎಂದಿದ್ದಾರೆ.

### ಕರ್ನಾಟಕದಲ್ಲೂ ಆಟಿಕೆ ತಯಾರಿಕೆ

**2014-15ರಲ್ಲಿ 4 ಕೋಟಿ ಡಾಲರ್‌ಗಳಷ್ಟಿದ್ದ ಭಾರತದ ಆಟಿಕೆ ರಫ್ತು, ಕಳೆದ ಮೂರು ವರ್ಷಗಳಲ್ಲಿ 34.80 ಕೋಟಿ ಡಾಲರ್‌ಗಳ ಗಾತ್ರಕ್ಕೆ ಹಿಗ್ಗಿದೆ ಎಂದಿರುವ ಪ್ಲೇಗ್ರೊ ಟಾಯ್ಸ್ ಕಂಪನಿ ಸಿಇಒ ಮನು ಗುಪ್ತಾ, ಅಮೆರಿಕ ಪ್ರತಿಸುಂಕದ ಕಾರಣ ಮುಂಬರುವ ದಿನಗಳಲ್ಲಿ ಅಮೆರಿಕಕ್ಕೆ ಭಾರತದ ಆಟಿಕೆಗಳ ರಫ್ತು ಪ್ರಮಾಣವನ್ನೂ ಭಾರೀ ಪ್ರಮಾಣದಲ್ಲಿ ಹೆಚ್ಚಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಆಟಿಕೆ ತಯಾರಿಕೆಯಲ್ಲಿ ಕರ್ನಾಟಕ, ಮಧ್ಯಪ್ರದೇಶ, ಒಡಿಶಾ, ಹರಿಯಾಣ, ಬಿಹಾರ ರಾಜ್ಯಗಳು ಮುಂಚೂಣಿಯಲ್ಲಿವೆ ಎಂದೂ ಗುಪ್ತಾ ಹೇಳಿದ್ದಾರೆ.**

## ಸುಡಾನ್ ನರಮೇಧ: 200 ನಿರಾಶ್ರಿತರ ಹತ್ಯೆ

**ಡಾರ್ಫರ್:** ಸುಡಾನ್ ದೇಶದಲ್ಲಿ ಕಳೆದೆರಡು ದಿನಗಳಲ್ಲಿ ಭಾರೀ ನರಮೇಧವೇ ನಡೆದು ಹೋಗಿದೆ. ಕುಖ್ಯಾತ ಅರೆಸೈನಿಕ ಪಡೆ 'ಆರ್‌ಎಸ್‌ಎಫ್' ಡಾರ್ಫರ್ ಪ್ರದೇಶದಲ್ಲಿನ ನಿರಾಶ್ರಿತರ ಶಿಬಿರಗಳ ಮೇಲೆ ದಾಳಿ ನಡೆಸಿ 20 ಮಕ್ಕಳು ಮತ್ತು 9 ಪರಿಹಾರ ಕಾರ್ಯಕರ್ತರು ಸೇರಿದಂತೆ 200 ಜನರನ್ನು ಕೊಂದು ಹಾಕಿದೆ.

**ನಿರಾಶ್ರಿತರ ಶಿಬಿರಗಳ ಮೇಲೆ ಆರ್‌ಎಸ್‌ಎಫ್ ದಾಳಿ**

ರಾಪಿಡ್ ಸಪೋರ್ಟ್ ಫೋರ್ಸ್(ಆರ್‌ಎಸ್‌ಎಫ್) ಮತ್ತು ಉಗ್ರರ ಗುಂಪು ಸುಡಾನ್‌ನ ಝಮ್‌ಝಮ್ ಮತ್ತು ಅಬು ಶೋರೂಕ್ ಪ್ರದೇಶದಲ್ಲಿನ ನಿರಾಶ್ರಿತರ ಶಿಬಿರಗಳ ಮೇಲೆ ಹಾಗೂ ಪ್ರಾಂತೀಯ ರಾಜಧಾನಿ ಅಲ್-ಫಶರ್ ಪಟ್ಟಣದ ಮೇಲೆ ಶನಿವಾರ-ಭಾನುವಾರ ದಾಳಿ ಮಾಡಿ 200 ಜನರನ್ನು ಕೊಂದು ಹಾಕಿವೆ. ವೈದ್ಯಕೀಯ ಕಾರ್ಯಕರ್ತರಾದ ಡಾ.ಮಹಮೂದ್ ಬಾಬಾಕರ್ ಇದ್ರಿಸ್ ಮತ್ತು ಪ್ರದೇಶದ ಮುಖ್ಯಸ್ಥರಾದ ಆಡಮ್ ಬಾಬಾಕರ್ ಅಬ್ದುಲ್ಲಾ ಮತ್ತು ಇತರೆ 7 ಕಾರ್ಯಕರ್ತರೂ ಹತರಾಗಿದ್ದಾರೆ ಎಂದು ವಿಶ್ವಸಂಸ್ಥೆಯ ಅಧಿಕಾರಿ, ಸುಡಾನ್ ನಿವಾಸಿ ಸಂಯೋಜಕರಾದ ಕ್ಲೆಮೆಂಟೈನ್ ನೆಕ್ವೆಟಾ ಸಲ್ಮಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. 2 ವರ್ಷಗಳ ಹಿಂದೆ ಸುಡಾನ್‌ನಲ್ಲಿ ಅಂತರ್ಯುದ್ಧ ಆರಂಭವಾಗಿದ್ದು, ಸರಕಾರದ ಸೇನೆ ಮತ್ತು ಆರ್‌ಎಸ್‌ಎಫ್ ನಡುವೆ ಶಸ್ತ್ರಾಸ್ತ್ರ ಸಂಘರ್ಷ ನಡೆಯುತ್ತಲೇ ಇದೆ. ಈ ಸಂಘರ್ಷದಲ್ಲಿ 24 ಸಾವಿರಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ.

## ಸಮಾಚಾರ ಸಣ್ಣದಲ್ಲ

### ನೀರು ಪೋಲಾಗದಂತೆ ನಿಗಾವಹಿಸಿ: ಡಿಸಿ

**ವಿಜಯಪುರ:** ಕುಡಿಯುವ ನೀರಿನ ಉದ್ದೇಶಕ್ಕಾಗಿ ಆಲಮಟ್ಟಿ ಜಲಾಶಯದಿಂದ ಕಾಲುವೆ ಜಾಲಗಳ ಮೂಲಕ ಇದೇ 22ರವರೆಗೆ ಜಿಲ್ಲೆಯ ಕೆರೆಗಳನ್ನು ತುಂಬಿಸಲಾಗುತ್ತಿದ್ದು, ನೀರು ಪೋಲಾಗದೆ, ನೀರು ಉದ್ದೇಶಿತ ಸ್ಥಳಕ್ಕೆ ತಲುಪುವಂತೆ ನಿಗಾವಹಿಸುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಸೂಚನೆ ನೀಡಿದರು. ಕೆರೆಗಳನ್ನು ತುಂಬಿಸಲು ಹರಿ ಬಿಡಲಾಗುತ್ತಿರುವ ನೀರು ಅನ್ಯ ಉದ್ದೇಶಕ್ಕೆ ಬಳಕೆಯಾಗದಂತೆ ಎಚ್ಚರಿಕೆ ವಹಿಸುವಂತೆ ಸೂಚಿಸಿದ ಅವರು, ಈ ಸಂದರ್ಭದಲ್ಲಿ ಯಾರೂ ಪಂಪಸೆಟ್‌ಗಳನ್ನು ಬಳಸಿ ಅಕ್ರಮವಾಗಿ ನೀರೆತ್ತುವುದನ್ನು ಮಾಡದೇ, ಕುಡಿಯುವ ನೀರಿನ ನಿವಾರಣೆಗೆ ಕೈಗೊಂಡಿರುವ ಕಾರ್ಯಕ್ಕೆ ಸಹಕರಿಸಬೇಕು. ಅಕ್ರಮವಾಗಿ ಪಂಪಸೆಟ್ ಬಳಕೆ ಮಾಡುವುದು ಕಂಡು ಬಂದಲ್ಲಿ ಅಂತಹವರ ಮೇಲೆ ಕಾಯ್ದೆಯನ್ವಯ ಸೂಕ್ತ ಕ್ರಮ ವಹಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

### ಸದೃಢ ಸಮಾಜ ನಿರ್ಮಿಸಲು ಕರೆ

**ಆಲಮಟ್ಟಿ:** ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ. ಅಂಬೇಡ್ಕರ್ ರವರ ಜಯಂತಿಯನ್ನು ಅಧೀಕ್ಷಕ ಇಂಜಿನಿಯರರು, ಕೃಷ್ಣಾ ಭಾಗ್ಯ ಜಲ ನಿಗಮ ನಿ. ಆಣೆಕಟ್ಟು ವೃತ್ತ ಆಲಮಟ್ಟಿ ಕಚೇರಿಯಲ್ಲಿ ಆಚರಿಸಲಾಯಿತು. ಅಧೀಕ್ಷಕ ಇಂಜಿನಿಯರ್ ವ್ಹಿ. ಆರ್. ಹಿರೇಗೌಡ್ರ ರವರು ಮಾತನಾಡಿದ, ಡಾ.ಅಂಬೇಡ್ಕರ್ ರವರು ಸಾಮಾಜಿಕ ಹರಿಕಾರರಾಗಿ, ದಲಿತ ಹಾಗೂ ಶೋಷಿತ ವರ್ಗದವರ ಏಳಿಗೆಗಾಗಿ, ಸ್ವತಂತ್ರ ಭಾರತದ ಸಂವಿಧಾನ ರಚನೆಗಾಗಿ ಹಗಲಿರುಳು ಕೆಲಸ ಮಾಡಿದ ಮಹಾನುಭಾವರಾಗಿದ್ದು, ಅವರ ಆಶಯಗಳಂತೆ ನಾವೆಲ್ಲರೂ ಕಾರ್ಯ ನಿರ್ವಹಿಸಿ ಸದೃಢ ಸಮಾಜ ನಿರ್ಮಿಸೋಣ ಮತ್ತು ಸರಕಾರದ ಯೋಜನೆಗಳನ್ನು ಸಮಾಜದ ಎಲ್ಲ ವರ್ಗದ ಜನರಿಗೆ ತಲುಪಿಸಲು ಕಟಿಬದ್ಧರಾಗಿರೋಣ ಎಂದು ಎಲ್ಲ ಅಧಿಕಾರಿ/ ಸಿಬ್ಬಂದಿಯವರಿಗೆ ಕರೆ ಕೊಟ್ಟರು. ಕಚೇರಿಯ ತಾಂತ್ರಿಕ ಸಹಾಯಕ ಶ್ರೀ ಬಾಗವಾನ, ಅಧೀಕ್ಷಕ ಶ್ರೀ ಸಂತೋಷ, ಸಹಾಯಕ ಇಂಜಿನಿಯರ್ ಶ್ರೀರಕ್ಷಾ ಹಾಗೂ ಎಲ್ಲ ಸಿಬ್ಬಂದಿಯವರು ಹಾಜರಿದ್ದರು.

### ಸಂವಿಧಾನಕ್ಕೆ ಎಲ್ಲರೂ ಗೌರವ ನೀಡಿ

**ದೇವರಹಿಪ್ಪರಗಿ:** ಭಾರತೀಯ ಸಂವಿಧಾನ ಜಗತ್ತಿನ ಎಲ್ಲಾ ರಾಷ್ಟ್ರಗಳಿಗಿಂತ ಅತ್ಯಂತ ಶ್ರೇಷ್ಠ ಗ್ರಂಥ. ಸಂವಿಧಾನ ರಚನೆಯಾಗಿ 7 ದಶಕಗಳು ಕಳೆದಿವೆ. ಸಂವಿಧಾನಕ್ಕೆ ಪ್ರತಿಯೊಬ್ಬರು ಗೌರವ ನೀಡಬೇಕು ಕಾನೂನಿನ ಚೌಕಟ್ಟಿನಲ್ಲಿ ನಾವೆಲ್ಲ ಜೀವಿಸಬೇಕು. ಸಂವಿಧಾನ ನೀಡಿರುವ ಆಶಯಗಳನ್ನು ಕರ್ತವ್ಯ ಎಂದು ಗೌರಸಬೇಕು ಎಂದು ಶಾಸಕ ರಾಜುಗೌಡ ಪಾಟೀಲ ಕುದುರಿ ಸಾಲವಾಡಗಿ ಹೇಳಿದರು. ನೂತನ ಪ.ಪಂ ಸಭಾಭವನದಲ್ಲಿ ಏರ್ಪಡಿಸಿದ್ದ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿಯಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲೂ ಸಹೋದರತೆ ಮೂಡಿಸುವಲ್ಲಿ ರಾಷ್ಟ್ರಕ್ಕೆ ಸಂವಿಧಾನ ಪ್ರಮುಖ ಪಾತ್ರ ವಹಿಸಿದ್ದು, ವಿಶ್ವದಲ್ಲೇ ಶ್ರೇಷ್ಠವಾಗಿದೆ. ಸಮಬಾಳು ಮತ್ತು ಸಮಪಾಲು ಅಂಬೇಡ್ಕರ್ ಅವರ ಆಶಯವಾಗಿತ್ತು. ಬರುವಂತ ದಿನಗಳಲ್ಲಿ ಸುಮಾರು 2ಕೋಟಿ ರು. ವೆಚ್ಚದ ಪಟ್ಟಣದಲ್ಲಿ ಸುಂದರವಾದ ಅಂಬೇಡ್ಕರ್ ಭವನ ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸವನ್ನು ತಾಳಿಕೋಟಿ ಎಸ್.ಕೆ.ಕಾಲೇಜಿನ ಸುಜಾತಾ ಚಲವಾದಿ ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಪ.ಪಂ ಅಧ್ಯಕ್ಷೆ ಜಯಶ್ರೀ ದೇವಣಗಾಂವ, ಉಪಾಧ್ಯಕ್ಷರಾದ ರಮೇಶ ಮಸಿಬಿನಾಳ, ಮುಖ್ಯಾಧಿಕಾರಿ ಸುರೇಖಾ ಬಾಗಲಕೋಟ, ತಾ.ಪಂ ಇಒ ಭಾರತಿ ಚೆಲುವಯ್ಯ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡ ಉಪಸ್ಥಿತರಿದ್ದರು.

### ಪಟ್ಟಣದ ವಿವಿಧೆಡೆ ಅಂಬೇಡ್ಕರ್ ಜಯಂತಿ

**ಸಿಂದಗಿ:** ಪಟ್ಟಣದ ರಾಂಪೂರ ರಸ್ತೆಯಲ್ಲಿರುವ ಪ್ರೇರಣಾ ಪಬ್ಲಿಕ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಸಂವಿಧಾನ ಶಿಲ್ಪಿ, ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವ ಆಚರಣೆ ಮಾಡಲಾಯಿತು. ಇದೇ ಸಮಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷ ಆರ್.ಡಿ. ಕುಲಕರ್ಣಿ ಸಂಸ್ಥೆಯ ನಿರ್ದೇಶಕ ಪಿ.ಡಿ ಕುಲಕರ್ಣಿ ಶಾಲೆಯ ಮುಖ್ಯ ಗುರುಮಾತೆ ಎಸ್.ಆಯ್.ಅಸ್ಕಿ ಸೇರಿದಂತೆ ಶಾಲೆಯ ಬೋಧಕ ಬೋಧ ಕೇತರ ಸಿಬ್ಬಂದಿಗಳು ಇದ್ದರು. ಶಿವಯೋಗಿ ಸಿದ್ದರಾಮೇಶ್ವರ ವೃತ್ತ ಪಟ್ಟಣದ ಜೇವರ್ಗಿ ರಸ್ತೆಯಲ್ಲಿರುವ ಮೋರಟಗಿ ನಾಕಾ ಹತ್ತಿರ ಶಿವಯೋಗಿ ಸಿದ್ದರಾಮೇಶ್ವರ ವೃತ್ತದಲ್ಲಿ ಭೋವಿ ವಡ್ಡರ ಸಮಾಜದ ವತಿಯಿಂದ ಡಾ ಅಂಬೇಡ್ಕರ್ 134ನೇ ಜಯಂತ್ಯುತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕ ಮುತ್ತಪ್ಪ ಪಾತ್ರೋಟಿ, ಭೋವಿ ಸಮಾಜದ ತಾಲೂಕು ಅಧ್ಯಕ್ಷ ಪಂಡಿತ ಯಂಪೂರೆ, ಪ್ರಾಧಿಕಾರ ಸದಸ್ಯ ಅಂಬರೀಶ ಚೌಗಲೆ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

{ಶಿವಗಂಗಾ ಬಸವರಾಜ್} ಶಾಸಕ
ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಡಾ.ಶಾಮನೂರು ಶಿವಶಂಕರಪ್ಪನವರು ಹೇಳಿರುವುದು ಸರಿಯಾಗಿದೆ. ನಾವೂ ಅವರ ಬೆನ್ನಿಗೆ ನಿಲ್ತೀವಿ. ಸಚಿವ ಸಂಪುಟದಲ್ಲಿನ ಏಳು ಲಿಂಗಾಯತ ಸಚಿವರು ಜಾತಿಗಣತಿ ವರದಿ ಬಿಡುಗಡೆಯನ್ನು ವಿರೋಧಿಸಬೇಕು. ಇದಕ್ಕೂ ಮೊದಲು ಸಚಿವರು ಎಲ್ಲ ಲಿಂಗಾಯತ ಶಾಸಕರ-ಸಚಿವರ ಸಭೆ ಕರೆದು ಚರ್ಚೆ ನಡೆಸಬೇಕು.

ದಲಿತ ವಿದ್ಯಾರ್ಥಿ ಪರಿಷತ್ತಿನಿಂದ ಡಾ.ಬಿ.ಆರ್.ಅಂಬೇಡ್ಕರ್ ಹುಟ್ಟುಹಬ್ಬ : ಸಚಿವ ಎಂ.ಬಿ.ಪಾಟೀಲ

# ಸಮಾನತೆಯ ಆಧಾರಿತ ಸಮಾಜ ನಿರ್ಮಾಣ ಅವಶ್ಯ

**ವಿಜಯಪುರ:** ಡಾ. ಬಿ. ಆರ್. ಅಂಬೇಡ್ಕರ ಅವರ ತತ್ವಾದರ್ಶಗಳು ಇಡೀ ವಿಶ್ವಕ್ಕೆ ಪ್ರಸ್ತುತವಾಗಿವೆ ಎಂದು ಕೈಗಾರಿಕೆ, ಮೂಲಸೌಲಭ್ಯ, ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ಇಂದು ಸೋಮವಾರ ನಗರದಲ್ಲಿ ದಲಿತ ವಿದ್ಯಾರ್ಥಿ ಪರಿಷತ್, ಜಾಗೃತ ಕರ್ನಾಟಕ, ಅನೌಪಚಾರಿಕೆ ಶಿಕ್ಷಣ ಸಂಸ್ಥೆ ಆಯೋಜಿಸಿರುವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾಯಕಯೋಗಿ ಬಸವಣ್ಣ ಮತ್ತು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳಲ್ಲಿ ಸ್ಪಷ್ಟವಾದ ಸಾಮ್ಯತೆಗಳಿವೆ. ಇಬ್ಬರೂ ಸಮಾಜದಲ್ಲಿ ಸಮಾನತೆಗಾಗಿ ಬದ್ಧರಾಗಿ, ಅಸ್ಪೃಶ್ಯತೆ ಮತ್ತು ಅಸಮಾನತೆ ವಿರುದ್ಧ ಧ್ವನಿ ಎತ್ತಿದ್ದಾರೆ. ಈ ಮಹನೀಯರು ಬೋಧಿಸಿದ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ. ಈ ಹಿನ್ನೆಲೆಯಲ್ಲಿ ಬಸವಭಾರತ ಮತ್ತು ಅಂಬೇಡ್ಕರ್ ಭಾರತ ಎಂಬ ಸಮಾನತೆಯ ಆಧಾರಿತ ಸಮಾಜ ನಿರ್ಮಾಣ ಅವಶ್ಯವಿದೆ ಎಂದು ಅವರು ಹೇಳಿದರು.

ಡಾ. ಬಿ. ಆರ್. ಅಂಬೇಡ್ಕರ್ ಹಬ್ಬವನ್ನು ಆಯೋಜಿಸುವ ಮೂಲಕ ಶ್ರೀನಾಥ ಪೂಜಾರಿ ಮತ್ತು ತಂಡದವರು ಅತ್ಯುತ್ತಮ ಕಾರ್ಯ ಮಾಡಿದ್ದಾರೆ. ಮುಂಬರುವ ದಿನಗಳಲ್ಲಿ ಅನುಭವ ಮಂಟಪದ ಮಾದರಿಯಲ್ಲಿ ಈ ಹಬ್ಬ ಮುಂದುವರೆಯಬೇಕು. ಇದಕ್ಕೆ ಎಲ್ಲರೂ ಕೈ ಜೋಡಿಸೋಣ ಎಂದು ಅವರು ಹೇಳಿದರು. ಸಂವಿಧಾನ ಭಾರತದ ಹೃದಯವಿದ್ದಂತೆ. ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ಮನುಸ್ಮೃತಿ ಮರಳಿ ತರುವ ಪ್ರಯತ್ನ ಯಶಸ್ವಿಯಾಗುವುದಿಲ್ಲ ಎಂದು ಸಚಿವರು ಹೇಳಿದರು.

ಎಸ್ಪಿ ಲಕ್ಷ್ಮಣ ನಿಂಬರಗಿ ಮಾತನಾಡಿದ ಅವರು, ಡಾ. ಅಂಬೇಡ್ಕರ್ ಅವರು ಉತ್ಕೃಷ್ಟ ಸಂವಿಧಾನ ನೀಡುವ ಮೂಲಕ ದೇಶದಲ್ಲಿ ಸರ್ವಜನರ ಸಬಲೀಕರಣಕ್ಕೆ ಶ್ರಮಿಸಿದ್ದಾರೆ. ಇತರ ದೇಶಗಳಿಗೆ ಮಾದರಿಯಾದ ಸಂವಿಧಾನ ನೀಡಿದ್ದಾರೆ. ಸಚಿವ ಎಂ. ಬಿ. ಪಾಟೀಲರು ಜಲಸಂಪನ್ಮೂಲ ಸಚಿವರಾಗಿ ಅಂಬೇಡ್ಕರ್ ತತ್ವಾದರ್ಶಗಳಡಿ ಕೈಗೊಂಡ ನೀರಾವರಿ ಯೋಜನೆಗಳ ಮೂಲಕ ಎಲ್ಲರ ಅಭ್ಯುದಯಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ಸಚಿವರು ಪ್ರಶಸ್ತಿ ಪ್ರಧಾನ ಮಾಡಿದರು. ಈ ಸಂದರ್ಭದಲ್ಲಿ ಭಾರತೀಯ ಬೌದ್ಧ ಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಬಸವರಾಜ ಹೊಳ್ಕರ, ಮುಖಂಡರಾದ ಚನ್ನು ಕಟ್ಟಿಮನಿ, ಸೋಮನಾಥ ಕಳ್ಳಿಮನಿ, ಸಂಜೀವ ಕಂಬಾಗಿ, ಶಿಳ್ಳಿನ, ಆರತಿ ಶಹಾಪುರ, ಅಡಿವೆಪ್ಪ ಸಾಲಗಲ, ಸುನೀತಾ, ರೇಣುಕಾ, ಅಕ್ಷಯಕುಮಾರ, ಬಸವರಾಜ ಮುಂತಾದವರು ಉಪಸ್ಥಿತರಿದ್ದರು.

ವಿಜಯಪುರ ನಗರದಲ್ಲಿ ದಲಿತ ವಿದ್ಯಾರ್ಥಿ ಪರಿಷತ್, ಜಾಗೃತ ಕರ್ನಾಟಕ, ಅನೌಪಚಾರಿಕೆ ಶಿಕ್ಷಣ ಸಂಸ್ಥೆ ಆಯೋಜಿಸಿರುವ ಡಾ. ಬಿ. ಆರ್. ಅಂಬೇಡ್ಕರ್ ಹಬ್ಬದ ಅಂಗವಾಗಿ ನಡೆದ ಅಂಬೇಡ್ಕರ ಜಯಂತಿ ಕಾರ್ಯಕ್ರಮವನ್ನು ಸಚಿವ ಎಂ. ಬಿ. ಪಾಟೀಲ ಉದ್ಘಾಟಿಸಿದರು.

### ಅಂಬೇಡ್ಕರ್ ಮಾರ್ಗದಲ್ಲಿ ಎಲ್ಲರೂ ಸಾಗೋಣ

**ಮಾಜಿ ಶಾಸಕ ಪ್ರೊ. ರಾಜು ಆಲಗೂರ ಮಾತನಾಡಿದ ಅವರು, 'ಸಚಿವ ಎಂ. ಬಿ. ಪಾಟೀಲ ಅವರು ಸಾಮಾಜಿಕ ನ್ಯಾಯ ಪರಿಕಲ್ಪನೆಯಡಿ ಕೆಲಸ ಮಾಡುವ ಡಿಸಿ, ಎಸ್ಪಿ, ಸಿಇಓ ಅಧಿಕಾರಿಗಳನ್ನು ಜಿಲ್ಲೆಗೆ ತಂದಿದಾರೆ. ಈ ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಡಾ. ಬಿ. ಆರ್. ಅಂಬೇಡ್ಕರ್ ಹಬ್ಬ ಸಮಾಜಮುಖಿ ಚಿಂತನಗಳನ್ನು ಮಂಥನ ಮಾಡಲು ಸಹಕಾರಿಯಾಗಿದೆ. ಅಂಬೇಡ್ಕರ ಚಿಂತನೆಗಳ ಮಾರ್ಗದಲ್ಲಿ ಎಲ್ಲರೂ ಸಾಗೋಣ'ಎಂದು ಹೇಳಿದರು.**

# ಡಾ.ಅಂಬೇಡ್ಕರ್ ಎಲ್ಲಾ ಜನಾಂಗದವರಿಗೆ ನ್ಯಾಯ

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿರುವ ಪುತ್ಥಳಿಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾಲಾರ್ಪಣೆ ಸಲ್ಲಿಸಿದರು.

**ವಿಜಯಪುರ:** ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿರುವ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಾಮಾಜಿಕ ಕ್ರಾಂತಿಯ ಹರಿಕಾರ, ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರವರು ರಚಿಸಿದ ಸಂವಿಧಾನ ಸೂರ್ಯ ಚಂದ್ರದರು ಇರುವವರೆಗೆ ಈ ದೇಶದ ಸಂವಿಧಾನವಾಗಿ ಉಳಿಯುತ್ತದೆ. ಯಾವುದೇ ಕಾಲಕ್ಕೂ ಸಂವಿಧಾನಕ್ಕೆ ಧಕ್ಕೆ ಆಗದಂತೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸೇರಿದಂತೆ ನಮ್ಮ ನಾಯಕರು ನೋಡಿಕೊಳ್ಳುತ್ತಾರೆ. ಎಂಬ ಅಚಲ ವಿಶ್ವಾಸವಿದೆ. ಅಂಬೇಡ್ಕರ್ ಜಯಂತಿ ಅಂದರೆ ನಮಗೆಲ್ಲ ಹಬ್ಬವಿದ್ದಂತೆ. ಏಕೆಂದರೆ ಎಲ್ಲ ಜನಾಂಗದವರಿಗೆ ನ್ಯಾಯ ಕೊಟ್ಟಿರುವ ಪುಣ್ಯಾತ್ಮರು ಅಂಬೇಡ್ಕರರು ಎಂದು ಹೇಳಿದರು.

ಮುಖಂಡ ಮಡಿವಾಳ ಯಾಳವಾರ, ದಾದಾಸಾಹೇಬ ಬಾಗಾಯತ, ವಿಠ್ಠಲ ನಡುವಿನಕೇರಿ, ಶಶಿಧರ ಅಥರ್ಗಾ, ಗುರು ಗಚ್ಚಿನಮಠ, ರಾಘವ ಅಣ್ಣಿಗೇರಿ, ಶಂಕರ ಹೂಗಾರ, ಪಾಂಡುಸಾಹುಕಾರ ದೊಡಮನಿ, ಕಿರಣ ಪಾಟೀಲ, ರಾಜಶೇಖರ ಕುರಿಯವರ, ಜವಾಹರ ಗೋಸಾವಿ, ದತ್ತಾ ಗೊಲಂಡೆ, ಅಶೋಕ ಬೆಲ್ಲದ, ರಾಜು ಬಿರಾದಾರ, ಪ್ರವೀಣ ನಾಟೀಕಾರ, ಪ್ರವೀಣ ಕೂಡಗಿ, ರಾಜಲಕ್ಷ್ಮೀ ಪರ್ವತ್ತನವರ, ಲಕ್ಷ್ಮೀ ಕನ್ನೊಳ್ಳಿ, ಸುಚೇತಾ ಜಾಧವ, ರಾಜಶೇಖರ ಭಜಂತ್ರಿ, ನಾಗರಾಜ ಮುಳವಾಡ, ಸಿದ್ದನಗೌಡ ಬಿರಾದಾರ, ಬಸವರಾಜ ಗುರಣ್ಣವರ, ಬಸು ಲವಗಿ, ಬಸವರಾಜ ಬಿರಾದಾರ, ಮಹೇಂದ್ರ ಸುಣಗಾರ ಸೇರಿದಂತೆ ಮತ್ತಿತರರು ಇದ್ದರು.

## ಅಂಬೇಡ್ಕರ್ ಒಂದು ವರ್ಗಕ್ಕೆ ಸೀಮಿತ ನಾಯಕರಲ್ಲ

**ಬಸವನಬಾಗೇವಾಡಿ:** ಡಾ, ಬಾಬಾಸಾಹೇಬ ಅಂಬೇಡ್ಕರ್ ಅವರು ಕೇವಲ ಒಂದು ವರ್ಗಕ್ಕೆ ಸೀಮಿತವಾದ ನಾಯಕರಲ್ಲ ದೇಶವೇ ಮಾನ್ಯ ಮಾಡುವ ರಾಷ್ಟ್ರ ನಾಯಕ ಎಂದು ಧಾರವಾಡ ಎಲ್ಐಸಿಯ ಡೆಪ್ಯುಟಿ ಮ್ಯಾನೇಜರ ಪಿ ಎಸ್ ಮಳಗಿ ಹೇಳಿದರು.

ಪಟ್ಟಣದ ಬಸವ ಭವನದಲ್ಲಿ ಸೋಮವಾರ ತಾಲೂಕಾ ಆಡಳಿತ, ತಾಲೂಕ ಪಂಚಾಯತ, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಸಂವಿಧಾನ ಶಿಲ್ಪಿ ಡಾ,ಬಿ ಆರ್ ಅಂಬೇಡ್ಕರ ಅವರ 134ನೇ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, 'ನಾನು ಶ್ರೇಷ್ಠ ನೀನು ಕನಿಷ್ಠ ಎನ್ನುವ ಕಾಲಗಟ್ಟದಲ್ಲಿ ಜನಿಸಿದ ಅಂಬೇಡ್ಕರ ಅವರು ಆರ್ಥಿಕವಾಗಿ ಸ್ಥಿತಿವಂತರಾಗಿದ್ದರು ಆದರೆ ಕೆಲ ಬರಹಗಾರರು ಜಾತಿ ಆಧರದ ಮೇಲೆ ಅಂಬೇಡ್ಕರ ಅವರು ಬಡವರಾಗಿದ್ದರು ಎಂದು ತಪ್ಪು ಸಂದೇಶವನ್ನ ನೀಡಿದ್ದಾರೆ, ಅಂಬೇಡ್ಕರ ಅವರು ಜಾತಿ ವ್ಯವಸ್ಥೆಯಿಮದ ಸಾಕಷ್ಟು ಕಷ್ಟಗಳನ್ನ ಎದುರಿಸಿದ್ದಾರೆ, ಅಂಬೇಡ್ಕರ ಅವರು ಆರ್ಥಿಕ ತಜ್ಞರಾಗಿದ್ದ ಅಂಬೇಡ್ಕರ ಅವರ ಆರ್ಥಿಕ ಚಿಂತನೆಯ ಆಧಾರದ ಮೇಲೆ ರಿಸರ್ವ ಬ್ಯಾಂಕ್ ಸ್ಥಾಪಿತಗೊಂಡಿತು, ಅಂಬೇಡ್ಕರ ಮೀಸಲಾತಿಗಾಗಿ ಹೋರಾಟ ಮಾಡಿದವರಲ್ಲ ಅಂದಿನ ಜಾತಿ ವ್ಯವಸ್ಥೆ ಮದ್ಯ ಸಮಾನತೆಯ ಅವಕಾಶಕ್ಕಾಗಿ ಹೋರಾಟ ಮಾಡಿದ್ದಾರೆ ಅಂತಹ ಮಹಾಪುರಷನ ಆದರ್ಶಗಳನ್ನ ನಿಮ್ಮ ಮಕ್ಕಳಿಗೆ ತಿಳಿಸುವ ಕೆಲಸ ಮಾಡಬೇಕು'ಅಂಬೇಡ್ಕರ ಅವರ ಪುಸ್ತಕಗಳನ್ನ ಮಕ್ಕಳಿಗೆ ನೀಡಿ ಎಂದರು.

ಪುರಸಭೆ ಅಧ್ಯಕ್ಷೆ ಜಗೇವಿ ಗುಂಡಳ್ಳಿ ಉಪಾಧ್ಯಕ್ಷ ಅಶೋಕ ಹಾರಿವಾಳ, ಮುಖಂಡರಾದ ಅಶೋಕ ಚಲವಾದಿ, ಗುರು ಗುಡಿಮನಿ, ಸಂಜೀವ ಕಲ್ಯಾಣಿ, ಸಂಗಮೇಶ ಒಲೇಕಾರ, ತಹಶೀಲ್ದಾರ ವೈ ಎಸ್ ಸೋಮನಕಟ್ಟಿ, ಡಿವೈಎಸ್‌ಪಿ ಬಲ್ಲಪ್ಪ ನಂದಗಾವಿ ಮಾತನಾಡಿದರು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಮಂಜುಳಾ ಹಿರೇಮನಿ ಸಂವಿಧಾನ ಪೀಠಿಕೆ ವಾಚಿಸಿದರು, ಜಾಗೃತಿ ಉಸ್ತುವಾರಿ ಸಮಿತಿ ಸದಸ್ಯ ಅರವಿಂದ ಸಾಲವಾಡಗಿ,ರವಿ ನಾಯ್ಕೊಡಿ, ಶಿವಾನಂದ ಮಂಗಾನವರ, ಬಸವನಗೌಡ ಪಾಟೀಲ, ಇಓ ಪ್ರಕಾಶ ದೇಸಾಯಿ, ಪುರಸಭೆ ಮುಖ್ಯಾಧಿಕಾರಿ ಎಚ್ ಎಸ್ ಚಿತ್ತರಗಿ, ಬಿಇಓ ವಸಂತ ರಾಠೋಡ, ವೇದಿಕೆಯಲ್ಲಿದ್ದರು ವಿರೇಶ ಹೊನವಡ ಸ್ವಾಗತಿಸಿದರು, ರಶ್ಮೀ ರಾಘವೇಂದ್ರ ನಿರೂಪಿಸಿದರು, ಮಕಬುಲ್ ದಫೇದಾರ ವಂದಿಸಿದರು, ಕಾರ್ಯಕ್ರಮಕ್ಕು ಮುನ್ನ ಅಂಬೇಡ್ಕರ ಅವರ ಭಾವಚಿತ್ರ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ಬಸವ ಭವನದಲ್ಲಿ ಹಮ್ಮಿಕೊಂಡ ಅಂಬೇಡ್ಕ ಜಯಂತಿ ಕಾರ್ಯಕ್ರಮವನ್ನು ವೇದಿಕೆಯ ಗಣ್ಯರು ಉದ್ಘಾಟಿಸಿದರು.

## ಗ್ಯಾರಂಟಿ ಕೊಟ್ಟು ಸಬ್ಸಿಡಿ ನಿಲ್ಲಿಸಿದ ಭ್ರಷ್ಟ ಸರಕಾರ

**ಆಲಮಟ್ಟಿ:** ರಾಜ್ಯದಲ್ಲಿಯ ಕಾಂಗ್ರೆಸ್ ಸರಕಾರ ಅಧಿಕಾರದ ಹಿಡಿಯುವ ಆಸೆಗಾಗಿ ಅವೈಜ್ಞಾನಿಕ ವಾಗಿ ಉಚಿತ ಗ್ಯಾರಂಟಿಗಳನ್ನು ನೀಡಿ ರಾಜ್ಯದ ಬೊಕ್ಕಸವನ್ನು ಕೊಳ್ಳೆ ಹೊಡೆಯುತ್ತಿದೆ ಎಂದು ಮಾಜಿ ಶಾಸಕ ಎ.ಎಸ್. ಪಾಟೀಲ (ನಡಹಳ್ಳಿ) ಹೇಳಿದರು.

ಸಮೀಪದ ಯಲಗೂರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಬಿಜೆಪಿ ಸರಕಾರ ಪ್ರತಿವರ್ಷ ರೈತರಿಗೆ ನೀಡುತ್ತಿದ್ದ ಬೆಳೆ ಹಾನಿ ಪರಿಹಾರ, ಸಬ್ಸಿಡಿ ರೂಪದಲ್ಲಿ ನೀಡುತ್ತಿದ್ದ ಕೃಷಿ ಉಪಕರಣ ಗಳ ಪೂರೈಕೆ ನಿಲ್ಲಿಸಿದೆ ಎಂದು ಆರೋಪಿಸಿದರು. ಉಚಿತ ಗ್ಯಾರಂಟಿಗಳ ಪರಿಣಾಮ ನೀರಾವರಿ ಯೋಜನೆಗಳಿಗೆ ಹಣವಿಲ್ಲದಾಗಿದೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ ರೈತರ ಭೂಮಿ ಸ್ವಾಧೀನಪಡಿಸಿಕೊಂಡಿದ್ದು, ಪರಿಹಾರಕ್ಕಾಗಿ ನ್ಯಾಯಾಲಯಗಳಿಗೆ ಅಲೆದಾಡುವ ಪರಿಸ್ಥಿತಿ ಬಂದಿದೆ, ಇಂತಹ ಕೆಟ್ಟ ಸರಕಾರವನ್ನು ಕಿತ್ತಿಹಾಕಲು ರಾಜ್ಯ ಬಿಜೆಪಿ ಪಕ್ಷ ಇದೇ 17 ರಂದು ವಿಜಯಪುರದಲ್ಲಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ಜನಾಕ್ರೋಶ ಯಾತ್ರೆ ಆಗಮಿಸಿಲಿದ್ದು ಈ ಸಮಾವೇಶದಲ್ಲಿ ಅಂದಾಜು 25ಸಾವಿರ ಜನ ಸೇರಿಸುವ ಗುರಿಹೊಂದಲಾಗಿದೆ ಎಂದರು. ವಿಜಯಪುರ ಶಾಸಕ ಯತ್ನಾಳ ಅವರ, ಉಚ್ಚಾಟನೆಯಿಂದ ಪಕ್ಷದ ಯುವ ಕಾರ್ಯಕರ್ತರು ಪಕ್ಷದಿಂದ ದೂರು ಉಳಿದಿಲ್ಲವೆ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು ಭಾರತೀಯ ಜನತಾ ಪಕ್ಷ ವಿಶ್ವದಲ್ಲಿಯೆ ಹೆಚ್ಚು ಕಾರ್ಯಕರ್ತರನ್ನು ಹೊಂದಿದ ಪಕ್ಷವಾಗಿದೆ. ಮತ್ತು ನಮ್ಮ ಪಕ್ಷದಲ್ಲಿ ವ್ಯಕ್ತಿಗಿಂತ ಪಕ್ಷ ದೊಡ್ಡದು ಹೀಗಾಗಿ ನಮ್ಮ ಪಕ್ಷದ ವರಿಷ್ಠರು ರಾಜ್ಯದಲ್ಲಿಯ ಪಕ್ಷದ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದು ಪಕ್ಷದ ಹಿತದೃಷ್ಟಿಯಿಂದ ಅವರು ತಗೆದುಕೊಳ್ಳುವ ನಿರ್ಧಾರಕ್ಕೆ ನಾವು ಬದ್ದರೆಂದು ಹೇಳಿದರು. ಯಲಗೂರದಲ್ಲಿ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಚನ್ನಬಸು ಚನ್ನಿಗಾವಿ, ಸಂಗಣ್ಣ ಕರಭಂಟನಾಳ, ಮುತ್ತಣ್ಣ ಹುಗ್ಗಿ, ಸುಭಾಸ ಕಟ್ಟಿಮನಿ, ವೈ.ಟಿ.ಗೌಡರ, ರಾಜು ಮುಚ್ಚಂಡಿ, ಮುಂತಾದವರು ಉಪಸ್ಥಿತರಿದ್ದರು.

ಭಾರತ ರತ್ನ ಡಾ:ಬಿಆರ್ ಅಂಬೇಡ್ಕರ್ ಅವರ ಜನ್ಮದಿನದ ಅಂಗವಾಗಿ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ, ಚಿಕ್ಕಸಿಂದಗಿ ಶಾಲೆಯಲ್ಲಿ ಇಂದು ಮುಖ್ಯಪಾಧ್ಯಾಯ ಬಸಮ್ಮ ಭಜಂತ್ರಿ ಪುಷ್ಪಾರ್ಚನೆ ಮೂಲಕ ನಮನ ಸಲ್ಲಿಸಿದರು. ಜತೆಗೆ ಸಹ ಶಿಕ್ಷಕರರಾದ ಸಿ.ಆರ್. ಬಿರಾದಾರ, ದ್ರಾಕ್ಷಾಯಣಿ ಕೊಳ್ಳುಕುರ, ಎಸ್.ಕೆ. ಪಾಟೀಲ್, ಸುರೇಖಾ ಪೂಜಾರಿ, ಮಲ್ಲಿಕಾ ಭೈರಿ, ಹಾಗೂ ಸಿಬ್ಬಂದಿಗಳು ಹಾಜರಿದ್ದರು.

## ಮೀಸಲು ಕಿತ್ತುಕೊಳ್ಳುವ ಹುನ್ನಾರ :ರಾಜರತ್ನ ಅಂಬೇಡ್ಕರ್

**ಸಿಂದಗಿ:** ಸದ್ಯ ದೇಶದಲ್ಲಿ ಸಂವಿಧಾನ ತಿದ್ದುಪಡಿ ಮೀಸಲು ಕಿತ್ತುಕೊಳ್ಳುವ ಹುನ್ನಾರ ಮನುವಾದಿಗಳು ಮಾಡುತ್ತಿದ್ದು, ಇದರ ಬಗ್ಗೆ ಎಲ್ಲರೂ ಎಚ್ಚರದ ಹೆಜ್ಜೆ ಇಡುವ ಮುಖೇನ ಜಾಗೃತ ವಸಬೇಕು. ದಲಿತರಿಗಾಗಿ ಅಂಬೇಡ್ಕರ್ ಅವರು ಪಟ್ಟಿರುವ ಶ್ರಮವನ್ನು ನೆನಪಿಸಿ ಮುನ್ನಡೆಯಬೇಕಿದೆ. ಡಾ.ಅಂಬೇಡ್ಕರರು ಇಲ್ಲವಾಗಿದ್ದರೆ ನಾಲ್ಲಿದ್ದೇವೆ ಎಂದು ಗೊತ್ತಾಗುತ್ತಿರಲಿಲ್ಲ ಎಂದು ನುಡಿದರು. ಅದಕ್ಕೆ ಸಂವಿಧಾನ ಪೀಠಿಕೆಯ ಮಹತ್ವ ಅರಿತು ಅದಕ್ಕೆ ತೊಡಕುಂಟು ಮಾಡುತ್ತಿರುವ ಶಕ್ತಿಯನ್ನು ದೂರರಿಸಬೇಕು ಎಂದು ಅಂಬೇಡ್ಕರ್ ವಂಶಜ ರಾಜರತ್ನ ಅಂಬೇಡ್ಕರ್ ಹೇಳಿದರು.

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತ್ಯುತ್ಸವ ಸಮಿತಿ, ಸಿಂದಗಿ ಜೈಭೀಮ ನಗರ ಹಾಗೂ ದಲಿತ ಸಂಘಟನೆಗಳ ಮತ್ತು ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಹಮ್ಮಿಕೊಂಡ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೆಯ ಜಯಂತ್ಯುತ್ಸವ ಮತ್ತು ಬುದ್ಧವಂದನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಅಂಬೇಡ್ಕರ್ ಜಯಂತಿ, ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ವ್ಯಕ್ತಿಯ ಸ್ಫೂರ್ತಿದಾಯಕ ಪ್ರಯಾಣವನ್ನು ಆಧರಿಸಿದೆ. ಶತಮಾನದಿಂ ದಲೂ ಭಾರತ ದೇಶದಲ್ಲಿರುವ ಜಾತಿ ವ್ಯವಸ್ಥೆಯನ್ನು ಮೀರಿ ಸಮಾನತೆ ಹಾಗೂ ಸಾಮಾಜಿಕ ನ್ಯಾಯವನ್ನು ಹೊಂದಲು ಡಾ.ಬಿ.ಆರ್.ಅಂಬೇಡ್ಕರ್ ಅವರ ಶ್ರಮ ಮತ್ತು ಹೋರಾಟ ವನ್ನು ನಾವುಗಳು ಸ್ಮರಿಸಿಕೊಳ್ಳಬೇಕಾಗಿದೆ. ಆದರೀಗ ದಲಿತರು ತಕಾಯುವ ಸಂಧಾನವನ್ನು ದುರ್ಬಲಗೊಳಿಸಿ, ಸರಕಾರಿ ಸಂಸ್ಥೆಗಳೆಲ್ಲವನ್ನೂ ಹಾನಿ ಮಾಡಲಾಗುತ್ತಿದೆ. ಇದು ಬಾಬಾ ಸಾಹೇಬರಿಗೆ ಮೊದಲೇ ಗೊತ್ತಿತ್ತು. ಹೀಗಾಗಿ ದಲಿತರ ತಾಸಕ್ತಿ ರಕ್ಷಣೆಗಾಗಿ ಅವರು ಸಂವಿಧಾನವೊಂದನ್ನೆ ಕೊಟ್ಟು ಹೋಗಿಲ್ಲ. ಬುದ್ಧ ಮಾರ್ಗವನ್ನೂ ಬಿಟ್ಟು ಹೋಗಿದ್ದಾರೆ. ಸಂವಿಧಾನ ನಮ್ಮನ್ನು ರಕ್ಷಣೆ ಮಾಡದಿದ್ದರೆ ಇದುವೇ ನಮ್ಮ ರಕ್ಷಣೆಗೆ ಬರಲಿದೆ ಎಂದು ಸಲಹೆ ನೀಡಿದರು. ಈ ವೇಳೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಸಿ ಶಾಸಕ ಅಶೋಕ ಮನಗೂಳಿ ಮಾತನಾಡಿದರು. ಮಾಜಿ ಶಾಸಕ ರಮೇಶ ಭೂಸನೂರ, ಆಲಮೇಲ ಪಪಂ ಅಧ್ಯಕ್ಷ ಸಾದಿಕ್ ಸುಂಬಡ ಮಾತನಾಡಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸಿಂದಗಿ ಬುದ್ಧಹಾರ ಧಮ್ಮ ಜಯಾ ಭಂತೆ ಸಂಘಪಾಲ ಬಂತೇಜ ಆಶೀರ್ವಚನ ನೀಡಿದರು. ಬರಂಗ ಸಭೆಯಲ್ಲಿ ಪ್ರಶಾಂತ ಸುಣಗಾರ, ಶ್ರೀಶೈಲ ಗೌಡ ಬಿರಾದಾರ ಮಾಗಣಗೇರಿ, ರಾಜಶೇಖರ ಕೂಚಬಾಳ, ಚಂದ್ರಕಾಂತ ಸಿಂಗೆ, ಪುರಸಭೆ ಅಧ್ಯಕ್ಷ ಶಾಂತೀರ ಬಿರಾದಾರ, ರಾಕೇಶ ಕಲ್ಲೂರ, ಸಲಿಂಪಟೇಲ್ ಮರ್ತೂರ, ಗೊಲ್ಲಾಳಪ್ಪಗೌಡ ಮಾಗಣಗೇರಿ, ಪೀರು ಕೆರೂರ, ಸಂತೋಷ ಪಾಟೀಲ, ಭೀಮು ಬಮ್ಮನಹಳ್ಳಿ, ಯಮನಪ್ಪ ಹೊಸಮನಿ, ಶೈಲಜಾ ಸ್ಥಾವರಮಠ, ಅಂಬಿಕಾ ಪಾಟೀಲ, ಎಸ್.ಎಂ.ಚಿಗರಿ, ಸೈನಾಜ ಮಸಳಿ, ರಾಮು ಅಗ್ನಿ, ಪರಶುರಾಮ ಕಾಂಬಳೆ ಸೇರಿದಂತೆ ಅಂಬೇಡ್ಕರ್ ಅವರ ಅನುಯಾಗಳು ಮತ್ತು ಅಭಿಮಾನಿಗಳು ಇದ್ದರು.

ಡಾ.ಬಿ.ಆರ್.ಅಂಬೇಡ್ಕರ್ 134ನೆಯ ಜಯಂತ್ಯುತ್ಸವ ಮತ್ತು ಬುದ್ಧವಂದನೆ ಕಾರ್ಯಕ್ರಮವನ್ನು ಅಂಬೇಡ್ಕರ್ ವಂಶಜ ರಾಜರತ್ನ ಅಂಬೇಡ್ಕರ್ ಉದ್ಘಾಟಿಸಿದರು.

## ವಿವಿಧ ಗಣ್ಯರಿಗೆ ವಿಶೇಷ ಸಾಧಕ ಪ್ರಶಸ್ತಿ

**ವಿಜಯಪುರ:** ನಿನ್ನೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಕರ್ನಾಟಕ ಆಯುಷ್ ಫೆಡರೇಶನ್ ಆಫ್ ಇಂಡಿಯಾ ಜಾಗತಿಕ ಯೋಗಕ್ಷೇಮ ಸಂಗಮ (Global wellbeing Confluence) ಕಾರ್ಯಕ್ರಮದಲ್ಲಿ ವಿಶೇಷ ಸಾಧಕ ಪ್ರಶಸ್ತಿಯನ್ನು ಮ್ಯಾರಥಾನರ್, ಸೈಕ್ಲಿಸ್ಟ್ ಮತ್ತು ಕೈಗಾರಿಕಾ ಸಚಿವರ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಮಹಾಂತೇಶ ಬಿರಾದಾರ ಅವರಿಗೆ ಮತ್ತು ಆಲಮೇಲದ ವೈದ್ಯಸಾಹಿತಿ, ವ್ಯಂಗ್ಯಚಿತ್ರಕಾರ ಡಾ ಸಮೀರ ಹಾದಿಮನಿ ಯವರಿಗೆ ಸುತ್ತೂರು ಮಠದ ಪೂಜ್ಯ ಶ್ರೀ ಡಾ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನೀಡಿ ಗೌರವಿಸಿದರು. ವೇದಿಕೆ ಮೇಲೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ, ಎಸ್-ವ್ಯಾಸ ಯೋಗ ವಿಶ್ವ ವಿದ್ಯಾಲಯದ ಕುಲಪತಿ ಡಾ ಎಚ್ ಆರ್ ನಾಗೇಂದ್ರ ಗುರೂಜಿ, ಆಯುಷ್ ಟಿವಿಯ ಉಪಾಧ್ಯಕ್ಷ ಆರ್ ಹರೀಶ್, ವಿಜಯಕರ್ನಾಟಕದ ಸಿಇಓ ದೀಪಕ ಸಲುಜ, ಎಫ್ಐ ಅಧ್ಯಕ್ಷ ಡಾ ಮೋಹನ ಬಿರಾದಾರ, ಡಾ ಸೋಮಶೇಖರ್ ಹುದ್ದಾರ, ಡಾ ಜಿ ಬಿ ಕುಂಬಾರ ಉಪಸ್ಥಿತರಿದ್ದರು.

## ಅಂಬೇಡ್ಕರ್ ಮೂರ್ತಿಗೆ ಪುಷ್ಪ ನಮನ ಸಲ್ಲಿಕೆ

**ತಾಳಿಕೋಟಿ:** ಭಾರತ ರತ್ನ, ಸಂವಿಧಾನ ಶಿಲ್ಪಿ, ಡಾ.ಬಿ.ಆರ್.ಅಂಬೇಡ್ಕರ್ ಅವರ 134 ನೇ ಜಯಂತ್ಯುತ್ಸವವನ್ನು ತಾಲೂಕ ಆಡಳಿತ, ತಾಲೂಕ ಪಂಚಾಯತ್, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಸೋಮವಾರ ವಿಜೃಂಭಣೆ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಜಯಂತಿ ಅಂಗವಾಗಿ ಬೆಳಗ್ಗೆ 10 ಗಂಟೆಗೆ ಪಟ್ಟಣದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ವೃತ್ತದಲ್ಲಿರುವ ಅವರ ಮೂರ್ತಿಗೆ ತಾಲೂಕಾಡಳಿತದ ವತಿಯಿಂದ ಪುಷ್ಪ ನಮನ ಸಲ್ಲಿಸಲಾಯಿತು.

ನಡೆದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರದ ಭವ್ಯ ಮೆರವಣಿಗೆ ಕಾರ್ಯಕ್ರಮಕ್ಕೆ ತಹಸೀಲ್ದಾರ್ ಡಾ.ವಿನಯಾ ಹೂಗಾರ ಚಾಲನೆ ನೀಡಿದರು. ಅಲ್ಲಿಂದ ಆರಂಭವಾದ ಮೆರವಣಿಗೆಯಲ್ಲಿ ಡಿಜೆ ಸೌಂಡ್ಸ್ ನಲ್ಲಿ ಹಾಕಿದ ಬಾಬಾ ಸಾಹೇಬರ ಜೀವನಗಾತೆ ಹಾಡುಗಳಿಗೆ ಯುವಕರು ಸ್ಟೆಪ್ ಹಾಕಿ ಬಾಬಾ ಸಾಹೇಬರ ಮೇಲಿರುವ ತಮ್ಮ ಅಭಿಮಾನವನ್ನು ಮೆರೆದರು. ಮೆರವಣಿಗೆ ಉದ್ದಕ್ಕೂ ಬಾಬಾ ಸಾಹೇಬರ ಉದ್ಘೋಷಣೆಗಳು ನಾಲ್ಕು ದಿಕ್ಕುಗಳಲ್ಲೂ ಮೊಳಗಿದವು. ಮೆರವಣಿಗೆ ಅಂಬೇಡ್ಕರ್ ಸರ್ಕಲ್ ದಿಂದ ಆರಂಭವಾಗಿ ಅಂಬಾಭವಾನಿ ಮಂದಿರ, ಕತ್ರಿ ಬಜಾರ್, ಶಿವಾಜಿ ಸರ್ಕಲ್, ಮಹಾರಾಣಾ ಪ್ರತಾಪ್ ಸಿಂಹ ಸರ್ಕಲ್, ಬಸ್ ನಿಲ್ದಾಣ ಮಾರ್ಗವಾಗಿ ಶ್ರೀ ಬಸವೇಶ್ವರ ವೃತ್ತ ಅಲ್ಲಿಂದ ಮತ್ತೆ ಅಂಬೇಡ್ಕರ್ ಸರ್ಕಲ್‌ಗೆ ತಲುಪಿತು. ನಂತರ ಅಲ್ಲಿಯೇ ವೇದಿಕೆ ಕಾರ್ಯಕ್ರಮ ಜರುಗಿತು. ಮೆರವಣಿಗೆ ಯಲ್ಲಿ ಸಮಾಜದ ಮುಖಂಡರಾದ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್‌ಬಿ ಕಟ್ಟಿಮನಿ, ಮುತ್ತಪ್ಪ ಚಮಲಾಪೂರ, ಬಸವರಾಜ ಕಟ್ಟಿಮನಿ, ನಾಗೇಶ ಕಟ್ಟಿಮನಿ, ಜೈಭೀಮ್ ಮುತ್ತಗಿ, ದೇವೇಂದ್ರ ಹಾದಿಮನಿ, ಶಾಂತಪ್ಪ ಚಲವಾದಿ, ಪರಶುರಾಮ ಕಟ್ಟಿಮನಿ, ಮಹೇಶ ಚಲವಾದಿ, ಶೇಖರ ರಕ್ಕಸಗಿ, ಬಸವರಾಜ ಗುಂಟಾಕನಾಳ, ರಾಘು ಬಿಜಾಪುರ, ಪುರಸಭೆ ಮುಖ್ಯಾಧಿಕಾರಿ ಮೋಹನ ಜಾಧವ, ತಾಪಂ ಇಒ ನಿಂಗಪ್ಪ ಮಸಳಿ, ಸಮಾಜ ಕಲ್ಯಾಣ ಇಲಾಖೆ ಕಾರ್ಯಾಲಯ ಅಧೀಕ್ಷಕ ಶಿವಲಿಂಗ ಹಚಡದ, ಪಿಎ ರಾಮನಗೌಡ ಸಂಕನಾಳ, ಸಿಆರ್‌ಪಿ ರಾಜು ವಿಜಾಪುರ, ಬಿ.ಆರ್.ಸಿ. ಕಾಶಿನಾಥ್ ಸಜ್ಜನ, ಸಿ.ಆರ್.ಸಿ. ಇಬ್ರಾಹಿಂ ಆಲಮೇಲ ಹಾಗೂ ತಾಲೂಕ ಮಟ್ಟದ ಅಧಿಕಾರಿಗಳು, ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ಸಮಾಜದ ಗಣ್ಯರು ಹಿರಿಯರು ಇದ್ದರು.

ನಡೆದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರದ ಭವ್ಯ ಮೆರವಣಿಗೆ ಕಾರ್ಯಕ್ರಮಕ್ಕೆ ತಹಸೀಲ್ದಾರ್ ಡಾ.ವಿನಯಾ ಹೂಗಾರ ಚಾಲನೆ.

## ಅಂಬೇಡ್ಕರ್ ಕಹಿ ಉಂಡವರು

**ಇಂಡಿ:** ಡಾ. ಬಿ.ಆರ್ ಅಂಬೇಡ್ಕರವರು ಅನುಭಸಿದ ಕಷ್ಟ,ನಷ್ಟ ನೋವು ಅಪಮಾನ ಸಸಿಕೊಂಡು ಕಹಿಯನ್ನು ಉಂಡು ಇಡೀ ನೊಂದ ಜನಾಂಗಕ್ಕೆ ಸಿಹಿ ಉಣಬಡಿಸಿದ ಜ್ಞಾನ ರತ್ನ ಅಂಬೇಡ್ಕರವರು ವಿಶ್ವದ ಸರ್ವಶ್ರೇಷ್ಠ ಸಂವಿಧಾನವನ್ನು ಪ್ರತಿಯೊಬ್ಬ ಭಾರತೀಯನಿಗೆ ಕೊಡುಗೆ ನೀಡುವ ಮೂಲಕ ಸದೃಢ ಭಾರತ ನಿರ್ಮಾಣಕ್ಕಾಗಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ಭದ್ರ ಬುನಾದಿ ಹಾಕಿದ್ದಾರೆ ಎಂದು ಕಂದಾಯ ಉಪಭಾಗಾಧಿಕಾರಿ ಅನುರಾಧಾ ವಸ್ತ್ರದ ಹೇಳಿದರು. ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಗುರುಭವನದಲ್ಲಿ ತಾಲೂಕಾಡಳಿತ ಹಮ್ಮಿಕೊಂಡ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು, ಎಜುಕೇಶನ್ ಈಜ್ ಮೋಸ್ಟ್ ಪವರ್ ಫುಲ್‌ವೇಪನ್ಸ್ ಶಿಕ್ಷಣ ಎಂಬುದು ದೊಡ್ಡ ಅಸ್ತ್ರ ಶಿಕ್ಷಣದಿಂದ ಇಡೀ ದೇಶ ಸಮಾಜ ಬದಲಾವಣೆ ಮಾಡುವ ಶಕ್ತಿ ಶಿಕ್ಷಣದಲ್ಲಿದೆ ಎಂಬ ಪರಿಜ್ಞಾನದಿಂದ ಸಾಕಷ್ಟು ಸಮಾಜ ಕನಸು ಕಂಡಿದ ಮಹಾನ ದಾರ್ಶನಿಕ ಯುಗಪುರುಷ ಅಂದಿನ ಸಮಾಜದಲ್ಲಿ ಅಸಮಾನತೆ ಅವರು ಅನುಭಸಿದ ಕಷ್ಟ ನನ್ನ ಜನಾಂಗ ಅನುಭಸಬಾರದು ಎಂದು ಇಡೀ ವಿಶ್ವದ ಅನೇಕ ದೇಶಗಳ ಸಂವಿಧಾನ ಅಧ್ಯಾಯನ ಮಾಡಿ ಬಹುತ್ವದ ಲಿಖಿತ ಸಂವಿಧಾನ ರಚನೆ ಮಾಡಿ ಸಮಾಜ ಕಟ್ಟುವಲ್ಲಿ ಶ್ರಮಿಸಿದ್ದಾರೆ.

## ಅಕ್ರಮ ನಡೆಸಿದ ಆರೋಪ

ನ್ಯಾಷನಲ್ ಹೆರಾಲ್ಡ್ ಹಣ ವರ್ಗಾವಣೆ ಪ್ರಕರಣದಲ್ಲಿ ಮಹತ್ವದ ಹೆಜ್ಜೆ ಇರಿಸಿರುವ ಜಾರಿ ನಿರ್ದೇಶನಾಲಯ (ಇ.ಡಿ), ''ಕಾಂಗ್ರೆಸ್ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ, ಅವರ ಪುತ್ರ ಹಾಗೂ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಕಾಂಧಿ ಮತ್ತು ಇತರ ಹಿರಿಯ ಕಾಂಗ್ರೆಸ್ಸಿಗರು ಪಿತೂರಿ ನಡೆಸಿ, 'ಅಸೋಸಿಯೇಟೆಡ್ ಜರ್ನಲ್ಸ್ ಮಿಲಿಟೆಡ್'ನ (ಎಜೆಎಲ್) 2000 ಕೋಟಿ ರುಪಾಯಿಗೂ ಹೆಚ್ಚು ಬೆಲೆಯ ಆಸ್ತಿಯನ್ನು 'ಯಂಗ್ ಇಂಡಿಯನ್ ಲಿಮಿಟೆಡ್' (ವೈಐಎಲ್) ಸಂಸ್ಥೆಯ ಮೂಲಕ ಕೇವಲ 50 ಲಕ್ಷ ರುಪಾಯಿಗೆ ಕಬಳಿಸಿದ್ದಾರೆ'' ಎಂಬ ಆರೋಪದ ಮೇರೆಗೆ, ಎಜೆಲ್‌ಗೆ ಸೇರಿದ ವಿವಿಧ ನೆಲೆಗಳಲ್ಲಿನ ಸ್ವತ್ತುಗಳ ಸ್ವಾಧೀನಕ್ಕೆ ಮುಂದಾಗಿದೆ.

## ಕ್ರಮ ಕೈಗೊಂಡಿದ್ದು ಹೀಗೆ

2013ರ 'ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆ'ಯ (Prevention of Money Laundering Act- PMLA) ಸೆಕ್ಷನ್ 8ರ ಅಡಿಯಲ್ಲಿ ನ್ಯಾಯ ನಿರ್ಣಯ ಪ್ರಾಧಿಕಾರವು ತಾತ್ಕಾಲಿಕ ಜಪ್ತಿಯನ್ನು ದೃಢಪಡಿಸಿದ ನಂತರ, ಕಾಯ್ದೆಯ ನಿಯಮ 5ರ ಅಡಿಯಲ್ಲಿ ಈ ಕ್ರಮವನ್ನು ಕೈಗೊಳ್ಳಲಾಗುತ್ತಿದೆ ಹಾಗೂ ಸ್ವತ್ತುಗಳ ಮುಟ್ಟುಗೋಲು ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ ಎಂಬುದು ಗಮನಾರ್ಹ. ನವದೆಹಲಿ, ಲಖನೌ ಮತ್ತು ಮುಂಬೈಗಳಲ್ಲಿ 'ಎಜೆಎಲ್'ಗೆ ಸೇರಿದ ಸ್ವತ್ತುಗಳಿದ್ದು, ಇವುಗಳ ನೋಂದಣಿದಾರರಿಗೆ 'ಇ.ಡಿ' ಮೊನ್ನೆ ಏಪ್ರಿಲ್ 11ರಂದು ಔಪಚಾರಿಕ ನೋಟಿಸ್‌ಗಳನ್ನು ನೀಡಿತ್ತು. ಈಗ, ಕಾಂಗ್ರೆಸ್‌ನ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರು ಫಲಾನುಭವಿಗಳಾಗಿರುವ 'ಯಂಗ್ ಇಂಡಿಯನ್ ಲಿಮಿಟೆಡ್' ಸಂಸ್ಥೆಯ ಮೂಲಕ ಈ ಸ್ವತ್ತುಗಳನ್ನು 'ಇ.ಡಿ' ಸ್ವಾಧೀನಪಡಿಸಿಕೊಂಡಿದೆ.

## ಏನಿದು ಪ್ರಕರಣ?

ಇದು ಒಂದು ಕಾಲದಲ್ಲಿ 'ನ್ಯಾಷನಲ್ ಹೆರಾಲ್ಡ್' ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದ 'ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್' (ಎಜೆಎಲ್) ಸಂಸ್ಥೆಯನ್ನು 'ಯಂಗ್ ಇಂಡಿಯನ್ ಲಿಮಿಟೆಡ್' (ವೈಐಎಲ್) ಎಂಬ ಮತ್ತೊಂದು ಕಂಪನಿಯು ಸ್ವಾಧೀನ ಮಾಡಿಕೊಂಡಿದ್ದಕ್ಕೆ ಸಂಬಂಧಿಸಿದ ಪ್ರಕರಣ. ಈ ಸ್ವಾಧೀನವು ಅಕ್ರಮವಾಗಿದ್ದು, ಇದರ ಹಿಂದೆ ದುರುದ್ದೇಶವಿದೆ ಎಂಬುದು ಆರೋಪವಾಗಿತ್ತು. ಅಂದರೆ, ''ಎಜೆಎಲ್ ಮತ್ತು ವೈಐಎಲ್ ಸಂಸ್ಥೆಗಳ ಒಡೆತನದಲ್ಲಿ 'ನ್ಯಾಷನಲ್ ಹೆರಾಲ್ಡ್' ಪತ್ರಿಕೆಯಿದ್ದು, ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿಯವರಿಗೆ ಇದರಲ್ಲಿ

ಪಾಲುದಾರಿಕೆಯಿದೆ. 2,000 ಕೋಟಿ ರುಪಾಯಿಯಷ್ಟು ಮೌಲ್ಯದ ಇದರ ಆಸ್ತಿಯ ಸ್ವಾಧೀನಕ್ಕೆ ಅಕ್ರಮ ಹಣ ವರ್ಗಾವಣೆ ನಡೆದಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಸುಮನ್ ದುಬೆ, ಸ್ಯಾಮ್ ಪಿತ್ರೋಡಾ, ದಿವಂಗತ ಆಸ್ಕರ್ ಫರ್ನಾಂಡಿಸ್, ದಿವಂಗತ ಮೋತಿಲಾಲ್ ವೋರಾ ಹಾಗೂ ವೈಐಎಲ್ ಸಂಸ್ಥೆಯ ಇನ್ನಿತರರು ಕ್ರಿಮಿನಲ್ ಸಂಚು ನಡೆಸಿ 'ಎಜೆಎಲ್'ನ ಸ್ವತ್ತುಗಳನ್ನು ವಂಚನೆಯಿಂದ ಕಬಳಿಸಿದ್ದಾರೆ'' ಎಂದು ಆರೋಪಿಸಿ ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಅವರು 2014ರಲ್ಲಿ ದೆಹಲಿಯ ಪಟಿಯಾಲಾ ಹೌಸ್ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು. 'ಇ.ಡಿ' ವತಿಯಿಂದ ತನಿಖೆ ನಡೆಸುವುದಕ್ಕೆ ನ್ಯಾಯಾಲಯವು ಅನುಮತಿಸಿತ್ತು. ಈ ಖಾಸಗಿ ದೂರಿನ ಮೇರೆಗೆ 'ಇ.ಡಿ' 2021ರಲ್ಲಿ ತನಿಖೆಗೆ ಔಪಚಾರಿಕವಾಗಿ ಶುರುವಿಟ್ಟುಕೊಂಡಿತು. ಸದರಿ ತನಿಖಾ ಪ್ರಕ್ರಿಯೆಯನ್ನು ಆರೋಪಿಗಳು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದುಂಟು. ಆದರೆ, ಈ ಪ್ರಕ್ರಿಯೆಯು ಸಮರ್ಪಕವಾಗಿದೆ ಎಂಬುದಾಗಿ ದೆಹಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದ ಬಳಿಕ ತನಿಖೆ ಮುಂದುವರಿದಿತ್ತು.

ನ್ಯಾಷನಲ್ ಹೆರಾಲ್ಡ್ ಪ್ರಕರಣ

# ಇ.ಡಿ ಇಕ್ಕಳದಲ್ಲಿ ಅಧಿನಾಯಕಿ, ಯುವರಾಜ

ಅಕ್ರಮ ಹಣ ವರ್ಗಾವಣೆ ಪ್ರಕರಣದ ಸಂಬಂಧವಾಗಿ ಕಾಂಗ್ರೆಸ್ ಪಕ್ಷದ ಮಾಲೀಕತ್ವದ 'ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್' (ಎಜೆಎಲ್) ಸಂಸ್ಥೆಗೆ ಸೇರಿದ ಕೋಟ್ಯಂತರ ರುಪಾಯಿ ಮೌಲ್ಯದ ಸ್ವತ್ತಿನ ಸ್ವಾಧೀನಕ್ಕೆ ಜಾರಿ ನಿರ್ದೇಶನಾಲಯ (ಇ.ಡಿ) ಟೊಂಕ ಕಟ್ಟಿದೆ. ಈ ಬೆಳವಣಿಗೆಯ ಕುರಿತಾದ ಕಿರುನೋಟ ಇಲ್ಲಿದೆ.

## ರಾಜಕೀಯ ತರಂಗ?

'ಇ.ಡಿ'ಯ ಈ ಮಹತ್ವದ ಹೆಜ್ಜೆಗಳಿಂದಾಗಿ ರಾಜಕೀಯ ವಲಯದಲ್ಲಿ ಅಲೆಯೇಳುವುದು ನಿಶ್ಚಿತ ಎನ್ನುತ್ತಾರೆ ಬಲ್ಲವರು. ಅವರ ಅಭಿಪ್ರಾಯದಂತೆ ಗಾಂಧಿ ಕುಟುಂಬವು ಕಾನೂನು ಸಂಬಂಧಿತ ಸಮಸ್ಯೆಗಳ ಮತ್ತಷ್ಟು ಹೊರೆಯನ್ನು ಹೊರಬೇಕಾಗಿ ಬರಬಹುದು ಮತ್ತು ಈ ಬೆಳವಣಿಗೆಯು 'ಪಕ್ಷ ರಾಜಕೀಯ'ದ ಮೇಲೂ ತನ್ನದೇ ಆದ ಪರಿಣಾಮವನ್ನು ಬೀರಬಹುದು. ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು 'ಯಂಗ್ ಇಂಡಿಯನ್ ಲಿಮಿಟೆಡ್' ಸಂಸ್ಥೆಯ ಬಹುಪಾಲು ಷೇರುದಾರರಾಗಿದ್ದು, ಶೇ.38ರಷ್ಟು ಪಾಲು ಹೊಂದಿದ್ದಾರೆ ಎಂಬುದಿಲ್ಲಿ ಉಲ್ಲೇಖನೀಯ.

## 'ಇ.ಡಿ' ಇಕ್ಕಳದ ಜಾಡು

ENFORCEMENT DIRECTORATE

- ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯವು ಅನೇಕ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆಗಳನ್ನು ನಡೆಸಿ, ಹಣಕಾಸಿನ ಅಕ್ರಮಗಳು ನಡೆದಿರುವ ಶಂಕೆ ಮೂಡಿಸಿದ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿತು.
- ತರುವಾಯದಲ್ಲಿ, 'ಎಜೆಎಲ್ ಮತ್ತು ಯಂಗ್ ಇಂಡಿಯನ್ ಪ್ರೈ ಲಿಮಿಟೆಡ್‌ಗಳ ಸಂಯುಕ್ತ ಜಾಲದ ನೆರವಿನಿಂದ ರಾಜಕೀಯ-ಆರ್ಥಿಕ ನಂಟನ್ನು ದಕ್ಕಿಸಿಕೊಂಡು ಆಸ್ತಿಗಳನ್ನು ಅಕ್ರಮವಾಗಿ ಸಂಪಾದಿಸಲಾಗಿದೆ' ಎಂದು 'ಇ.ಡಿ' ಆರೋಪಿಸಿದ್ದರ ಜತೆಗೆ ಸ್ವಾಧೀನ ಪ್ರಕ್ರಿಯೆ ವೇಳೆ ಆಸ್ತಿ ಮೌಲ್ಯವನ್ನು ಗಣನೀಯವಾಗಿ ತಗ್ಗಿಸಲಾಗಿದೆ ಎಂದು ಪ್ರತಿಪಾದಿಸಿತು.
- ಈ ಪ್ರಕರಣದಲ್ಲಿ ಸುಮಾರು 988 ಕೋಟಿ ರುಪಾಯಿಗಳಷ್ಟು ಗಳಿಕೆಯನ್ನು ಅಕ್ರಮವಾಗಿ ವರ್ಗಾವಣೆ ಮಾಡಲಾಗಿದೆ. ಈ ಹಣವನ್ನು ದುರುದ್ದೇಶಪೂರಿತ ರೀತಿಯಲ್ಲಿ ಗಳಿಸಿ ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು 'ಇ.ಡಿ' ಶಂಕಿಸಿತು.
- 2023ರ ನವೆಂಬರ್ 20ರಂದು ನವದೆಹಲಿ, ಲಖನೌ ಮತ್ತು ಮುಂಬೈನಲ್ಲಿರುವ 'ಎಜೆಎಲ್'ಗೆ ಸೇರಿದ ಸುಮಾರು 661 ಕೋಟಿ ರುಪಾಯಿ ಮೌಲ್ಯದ ಸ್ಥಿರಾಸ್ತಿಗಳನ್ನು ಹಾಗೂ 90.2 ಕೋಟಿ ರುಪಾಯಿ ಮೌಲ್ಯದ ಷೇರುಗಳನ್ನು 'ಇ.ಡಿ' ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿತು.
- ಈ ಮುಟ್ಟುಗೋಲು ಕ್ರಮವನ್ನು ಸಕ್ಷಮ ಪ್ರಾಧಿಕಾರವು ಮೊನ್ನೆ ಏಪ್ರಿಲ್ 10ರಂದು ದೃಢಪಡಿಸಿದ್ದರಿಂದ ಸ್ವತ್ತುಗಳ ಸ್ವಾಧೀನ ಪ್ರಕ್ರಿಯೆಯ ಮಾರ್ಗ ಸಲೀಸಾಯಿತು.
- ಈಗ ನಡೆದಿರುವ ದಾಳಿ ಮತ್ತು ಸ್ವಾಧೀನ ಕ್ರಮಗಳ ಕುರಿತು 'ಇ.ಡಿ' ಅಧಿಕಾರಿಗಳು ಮಾತನಾಡಿ, ''ಇತ್ತೀಚಿನ ಈ ಹೆಜ್ಜೆಯು ಕಳಂಕಿತ ಆಸ್ತಿಗಳ ಬಳಕೆ, ಅನುಭೋಗ ಹಾಗೂ ಮತ್ತಷ್ಟು ಸ್ವತ್ತು-ಸೃಷ್ಟಿಯನ್ನು ತಡೆಗಟ್ಟುವ ಗುರಿಯನ್ನು ಹೊಂದಿದೆ'' ಎಂದಿದ್ದಾರೆ.
- 'ಇ.ಡಿ'ಯ ಈ ಆಶಯದ ಅನ್ವಯ, ಸಂಸ್ಥೆಗೆ ಸೇರಿದ ದೆಹಲಿಯ ಬಹಾದುರ್ ಶಾ ಜಫರ್ ಮಾರ್ಗದಲ್ಲಿರುವ 'ಹೆರಾಲ್ಡ್ ಹೌಸ್', ಮುಂಬೈನ ಬಾಂದ್ರಾ (ಪೂರ್ವ) ಬಡಾವಣೆಯಲ್ಲಿರುವ ಕಟ್ಟಡ ಹಾಗೂ ಲಖನೌನ ಬಿಶ್ವೇಶ್ವರನಾಥ್ ರಸ್ತೆಯಲ್ಲಿರುವ ಕಟ್ಟಡ ಇವುಗಳ ಮೇಲೆ ಶುಕ್ರವಾರ ನೋಟಿಸ್ ಅಂಟಿಸಲಾಯಿತು ಹಾಗೂ ಸದರಿ ಆವರಣಗಳನ್ನು ತಕ್ಷಣವೇ ಖಾಲಿಮಾಡುವಂತೆ ನಿರ್ದೇಶಿಸಲಾಯಿತು.
- ಮುಂಬೈನ ಬಾಂದ್ರಾ (ಪೂರ್ವ) ಬಡಾವಣೆಯಲ್ಲಿರುವ, ಹೆರಾಲ್ಡ್ ಹೌಸ್‌ನ ಮೂರು ಅಂತಸ್ತುಗಳನ್ನು ಪ್ರಸ್ತುತ ಹೊಂದಿರುವ 'ಜಿಂದಾಲ್ ಸೌತ್‌ವೆಸ್ಟ್ ಪ್ರಾಜೆಕ್ಟ್ಸ್ ಲಿಮಿಟೆಡ್' ಸಂಸ್ಥೆಗೆ ಪಿಎಂಎಲ್‌ಎ ಕಾಯ್ದೆಯ ನಿಯಮ 5(3)ರ ಅಡಿಯಲ್ಲಿ ಈಗಾಗಲೇ ನೋಟಿಸ್ ನೀಡಲಾಗಿದೆ. ಜತೆಗೆ ಈ ಸಂಸ್ಥೆಯ ಭವಿಷ್ಯದ ಎಲ್ಲಾ ಬಾಡಿಗೆ ಮೊತ್ತವನ್ನು 'ಇ.ಡಿ'ಯಲ್ಲಿ ಠೇವಣಿ ಇರಿಸುವಂತೆ ಸೂಚಿಸಲಾಗಿದೆ.
- 'ಎಜೆಎಲ್' ಮತ್ತು 'ವೈಐಎಲ್' ಸಂಸ್ಥೆಗಳು 18 ಕೋಟಿ ರು.ಗಳ ಬೋಗಸ್ ದೇಣಿಗೆ, 38 ಕೋಟಿ ರು.ಗಳಷ್ಟು ಬೋಗಸ್ ಮುಂಗಡ ಬಾಡಿಗೆ ಮತ್ತು 38 ಕೋಟಿ ರು. ಮೌಲ್ಯದಷ್ಟು ಬೋಗಸ್ ಜಾಹೀರಾತುಗಳನ್ನು ಪಡೆದಿವೆ ಎಂದು 'ಇ.ಡಿ' ಆರೋಪಿಸಿದೆ.

# ಸ್ವಚ್ಛನಗರಿ ಪಟ್ಟಕ್ಕಾಗಿ ಮೈಸೂರು ಪಟ್ಟು!

## ರಾಜ್ಯ-ರಾಜ್ಯಗಳ ನಡುವೆಯೂ ಸ್ವಚ್ಛತಾ ವಿಷಯವಾಗಿ ಪೈಪೋಟಿ

ಜಿಲ್ಲಾ ನೋಟ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ಬೆಳೆಯುತ್ತಿರುವ ನಗರೀಕರಣದ ನಡುವೆ ನಾಗರಿಕ ಸಮಾಜದ ನಿರ್ವಹಣೆಯೂ ಅದ್ಯತಾ ವಿಷಯವಾಗಿದೆ. ಅಂತಹ ನಿರ್ವಹಣೆಯ ಪ್ರಮುಖ ಘಟ್ಟವೇ ಸ್ವಚ್ಛ ಸರ್ವೇಕ್ಷಣಾ ಅಭಿಯಾನ.

ಮುಂದುವರಿದ ದೇಶಗಳ ಸಾಲಿಗೆ ಸೇರುವ ನಿಟ್ಟಿನಲ್ಲಿ ದೇಶ-ದೇಶಗಳ ನಡುವೆ ಉಂಟಾಗಿರುವ ಪೈಪೋಟಿಯ ನಡುವೆ ಇದೀಗ ನಡೆದಿದೆ. ಆದರೆ, ಸಾರ್ವಜನಿಕರ ಸ್ಪಂದನೆ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದರ ಪರಿಣಾಮ ಮೈಸೂರಿನಂತಹ ಸಾಂಸ್ಕೃತಿಕ ನಗರಿಯೂ ಕೂಡ ಗರಿಷ್ಠ ಪ್ರಮಾಣದ ಸ್ವಚ್ಛತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಪರಿಣಾಮ, ದೇಶದ ವಿವಿಧ ಶ್ರೇಣಿಯ ನಗರಗಳಿಗೆ ಹೋಲಿಸಿದರೆ ಸ್ವಚ್ಛತೆಯ ವಿಷಯದಲ್ಲಿ ಇಂದು ಮೈಸೂರು 27ನೇ ಸ್ಥಾನದಲ್ಲಿದೆ.

ಇದರ ನಡುವೆಯೇ ಇದೀಗ ದೇಶದ ಅತ್ಯುತ್ತಮ ಸ್ವಚ್ಛ ನಗರಗಳನ್ನು ಗುರುತಿಸಲು ಮತ್ತೊಮ್ಮೆ ಸ್ವಚ್ಛ ಸರ್ವೇಕ್ಷಣಾ ಅಭಿಯಾನ ಆರಂಭವಾಗಿದ್ದು, ನಾಗರಿಕರು ಪಾಲ್ಗೊಂಡು ತಮ್ಮ ಅಭಿಪ್ರಾಯ ದಾಖಲಿಸಬಹುದಾದ ಕಾರ್ಯ ನಡೆದಿದ್ದು, ನಾಗರಿಕರು ನೀಡುವ ಅಭಿಪ್ರಾಯ ನಗರದ ಸ್ವಚ್ಛತೆಯ ರ‍್ಯಾಂಕಿಂಗ್ ನಿರ್ಧರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಎಂದಿನಂತೆ ಸಿಟಿಜನ್ ಫೀಡ್‌ಬ್ಯಾಕ್‌ಗೆ ಈ ಬಾರಿ ಒಟ್ಟು 500 ಅಂಕಗಳನ್ನು ನಿಗದಿಪಡಿಸಲಾಗಿದೆ.

### ಏರಿಕೆ ಕಾಣದ ಫಲಿತಾಂಶ

ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು 2015, 2016ರಲ್ಲಿ ನಂ.1 ಸ್ಥಾನ ಪಡೆದುಕೊಂಡಿದ್ದನ್ನು ಹೊರತುಪಡಿಸಿದರೆ 2017ರಲ್ಲಿ 5ನೇ ಸ್ಥಾನ, 2018ರಲ್ಲಿ 8, 2019ರಲ್ಲಿ 3, 2020ರಲ್ಲಿ 5, 2020ರಲ್ಲಿ 5, 2021ರಲ್ಲಿ 11, 2022ರಲ್ಲಿ 8, 2023ರಲ್ಲಿ 27ನೇ ಸ್ಥಾನ ಪಡೆಯಿತು. ಇದೀಗ 2024ನೇ ಸಾಲಿನ ಸ್ವಚ್ಛ ಸರ್ವೇಕ್ಷಣೆಯ ಸಮೀಕ್ಷೆ ನಡೆಯುತ್ತಿದ್ದು, ರಾಷ್ಟ್ರಮಟ್ಟದಲ್ಲಿ ಈ ಬಾರಿ ಮೈಸೂರು ಯಾವ ಸ್ಥಾನ ಪಡೆಯಲಿದೆ ಎಂಬುದು ಪ್ರಶ್ನಾರ್ಹವಾಗಿದೆ.

### ಫೀಡ್ ಬ್ಯಾಕ್ ನೀಡಿ....

ಸ್ವಚ್ಛ ಸರ್ವೇಕ್ಷಣೆ 2024ಕ್ಕೆ ಸಂಬಂಧಿಸಿದಂತೆ ಸಿಟಿಜನ್ ಫೀಡ್ ಬ್ಯಾಕ್ ಪಡೆಯುವ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಮೈಸೂರಿಗರು ಈ ಸರ್ವೇ ಕಾರ್ಯದಲ್ಲಿ ಭಾಗವಹಿಸಬಹುದು. ನಾಗರಿಕರು https://sbmurban.org/ feedback ಗೆ ಭೇಟಿ ನೀಡಿ ತಮ್ಮ ಫೀಡ್‌ಬ್ಯಾಕ್ ಅನ್ನು ನೀಡಬಹುದು. ಇದೀಗ ಕನ್ನಡ ಭಾಷೆಯಲ್ಲೂ ಅಭಿಪ್ರಾಯ ದಾಖಲಿಸಲು ಅವಕಾಶ ಮಾಡಿಕೊಡಲಾಗಿದೆ. ಸಿಟಿಜನ್ ಫೀಡ್‌ಬ್ಯಾಕ್ ಲಿಂಕ್ ಓಪನ್ ಮಾಡುತ್ತಿದ್ದಂತೆಯ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಇನ್ನುಳಿದಂತೆ ನಾಗರಿಕರು ತಮಗೆ ಬೇಕಾದ ಭಾಷೆಯನ್ನೂ ಕೂಡ ಆಯ್ಕೆ ಮಾಡಿಕೊಂಡು ಮುಂದುವರೆಯಲು ಅವಕಾಶ ಕಲ್ಪಿಸಲಾಗಿದೆ.

**ನಗರದ ಸ್ವಚ್ಛತೆ ಕುರಿತು ನಾಗರಿಕರು ತಮ್ಮ ಅಮೂಲ್ಯವಾದ ಅಭಿಪ್ರಾಯಗಳನ್ನು ನೀಡುವ ಮೂಲಕ ಸ್ವಚ್ಛ ಸರ್ವೇಕ್ಷಣೆಯ ಸಿಟಿಜನ್ ಫೀಡ್‌ಬ್ಯಾಕ್ ಗೆ ಸಹಕರಿಸಬೇಕು. ಈಗಾಗಲೇ ಆ ನಿಟ್ಟಿನಲ್ಲಿ ಕೆಲಸ ನಡೆದಿದ್ದು, ಸಾರ್ವಜನಿಕವಾಗಿ ಉತ್ತಮ ಪ್ರತಿಕ್ರಿಯೆ ಕಂಡುಬರುತ್ತಿದೆ. ಸಿಟಿಜನ್ ಫೀಡ್‌ಬ್ಯಾಕ್ ಹೆಚ್ಚಿನ ಪ್ರಮಾಣದಲ್ಲಿ ಪಡೆಯಲು ವಿವಿಧ ಮೂಲಗಳ ಮೂಲಕ ಅಗತ್ಯ ನೆರವು ಪಡೆಯಲಾಗುತ್ತಿದೆ.**

– **ಡಾ.ವೆಂಕಟೇಶ್** ಆರೋಗ್ಯಾಧಿಕಾರಿ ಮೈಸೂರು ಮಹಾನಗರಪಾಲಿಕೆ

**ಸ್ವಚ್ಛ ಸರ್ವೇಕ್ಷಣಾ ಅಭಿಯಾನಕ್ಕೆ ಜನರು ಸಹಕಾರ ನೀಡಬೇಕು. ಅಂತೆಯೇ ಈ ಕಾರ್ಯ ವರ್ಷದ ಕೆಲ ದಿನಗಳಿಗೆ ಸೀಮಿತವಾಗದೆ ವರ್ಷಪೂರ್ತಿ ನಡೆಯಬೇಕು. ಆಗಮಾತ್ರ ಮೈಸೂರು ನಗರಕ್ಕರ ನಿರೀಕ್ಷಿತ ಫಲಿತಾಂಶ ಬರಲು ಸಾಧ್ಯ. ಇಂದೋರ್ ರೀತಿಯ ಯೋಜನೆಗಳು ಮೈಸೂರಿನಲ್ಲೂ ಅನುಷ್ಠಾನ ಕಾಣಬೇಕು.**

– **ಶಿವಕುಮಾರ್** ಮಾಜಿ ಮೇಯರ್, ಮೈಸೂರು ಮಹಾನಗರಪಾಲಿಕೆ

# ತಡೆಗೋಡೆಗೆ ವರ್ಣಮಯ ಚಿತ್ತಾರದ ಹೊಳಪು!

## ಪ್ರವಾಸಿಗರನ್ನು ಸೆಳೆಯುವ ಸುಂದರ ಕಲೆಗಳ ಗೋಡೆ | ತಡೆಗೋಡೆಯಲ್ಲೀಗ ವರ್ಣಮಯ ಕಲಾಚಿತ್ರ

ಜಿಲ್ಲಾ ನೋಟ

ಅನಿಲ್ ಎಚ್.ಟಿ.

ಮಡಿಕೇರಿಯ ಮುಖ್ಯ ರಸ್ತೆಯಲ್ಲಿದ್ದ ತಡೆಗೋಡೆಯೊಂದು ಈಗ ಕೇವಲ ಗೋಡೆಯಾಗಿ ಮಾತ್ರ ಕಾಣುತ್ತಿಲ್ಲ. ತಡೆಗೋಡೆಯೊಂದು ಈಗ ಪ್ರವಾಸಿಗರನ್ನು ಸೆಳೆಯುವ ಸುಂದರ ಕಲೆಗಳ ಗೋಡೆಯಾಗಿ ಕಂಗೊಳಿಸಿದೆ.

ಮಡಿಕೇರಿಯ ರಾಜಾಸೀಟ್ ನಿಂದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮಾರ್ಗದ ರಸ್ತೆಯ ಬದಿ ಬೃಹತ್ ತಡೆಗೋಡೆಯನ್ನು ನಗರಸಭೆಯಿಂದ ನಿರ್ಮಿಸಲಾಗಿತ್ತು. ಈ ಗೋಡೆ ಕಾಂಕ್ರೀಟ್ ಗೋಡೆಯಾಗಿ ಬಿಕೋ ಎನ್ನುವಂತಿತ್ತು. ಈ ತಡೆಗೋಡೆಯನ್ನು ಅರ್ಥಪೂರ್ಣಕಾರ್ಯಕ್ಕೆ ಬಳಸಲು ಮೈಂಡ್ ಅಂಡ್ ಮ್ಯಾಟರ್ ಎಂಬ ಸರಕಾರೇತರ ಸಂಸ್ಥೆ ಮುಂದಾಯಿತು. ಈ ಸಂಸ್ಥೆಯ ಪ್ರಯತ್ನದಿಂದ ತಡೆಗೋಡೆಯಲ್ಲೀಗ ವರ್ಣಮಯ ಕಲಾಚಿತ್ರಗಳು ಮೂಡಿಬಂದು ಎಲ್ಲರ ಮನ ಸೆಳೆಯುತ್ತಿದೆ.

ಮಡಿಕೇರಿ ಮೂಲದ ಮಚ್ಚಾರಂಡ ದೀಪಿಕಾ ಅಪ್ಪಯ್ಯ ಅವರ ಮೈಂಡ್ ಅಂಡ್ ಮ್ಯಾಟರ್ ಸಂಸ್ಥೆಯು ಈ ತಡೆಗೋಡೆಯಲ್ಲಿ ಕೊಡಗಿನ ನಿಸರ್ಗ, ಕ್ರೀಡೆಯ ಮಹತ್ವ ಸಾರುವ ಚಿತ್ರಕಲೆಯನ್ನು ಸುಂದರವಾಗಿ ಚಿತ್ರಿಸಿದ್ದು, ಇದರ ಜತೆಗೇ ಆರೋಗ್ಯ, ಸಂಚಾರದ ಮಹತ್ವ ಸಾರುವ ಸಂದೇಶದ ಕಲಾಚಿತ್ರಗಳು ಜನಮನ ಸೆಳೆಯುತ್ತಿದೆ.

ಮಾನಸಿಕ ಸಮಸ್ಯೆಗಳಿಂದ ಅನೇಕ ಜನ ಬಳಲುತ್ತಿರುವುದನ್ನು ಮನಗಂಡು ಈ ಬಗ್ಗೆ ಜಾಗೃತಿ ಮೂಡಿಸಲು ಮಾನಸಿಕ ಆರೋಗ್ಯದ ಪ್ರಾಮುಖ್ಯತೆ ಬಗ್ಗೆಗೂ ಕಲೆಯಲ್ಲಿ ಗಮನ ಸೆಳೆಯಲಾಗಿದೆ. ಜೀವವೈವಿಧ್ಯತೆಗಳ ಬೀಡಾಗಿರುವ ಕೊಡಗಿನಲ್ಲಿ ಕಾಡು, ವನ್ಯಜೀವಿಗಳ ಮಹತ್ವ ಸಾರುವಂಥ ಚಿತ್ರಕೂಡ ಇಲ್ಲಿದೆ. ಪೂಜಾ ಆಚಾರ್ಯ, ಚೇತನ್ ಎಸ್ ಮೂರ್ತಿ, ದಿಯಾ ಹನೀಸ, ರೂಪಶ್ರೀ ವಿಪಿನ್ ಮಂದಣ್ಣ ಎಂ.ಆರ್. ಈ ಸುಂದರ ಚಿತ್ರಗಳನ್ನು ಬಿಡಿಸಿದ್ದಾರೆ.

ಮಚ್ಚಾರಂಡ ದೀಪಿಕಾ 5 ವರ್ಷಗಳ ಹಿಂದೆ ಮಾನಸಿಕ ಆರೋಗ್ಯ ಸಂರಕ್ಷಣೆ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸಲು ಸ್ಥಾಪಿಸಿದ ಸರಕಾರೇತರ ಸಂಸ್ಥೆಯಾದ ಮೈಂಡ್ ಅಂಡ್ ಮ್ಯಾಟರ್ ಈಗಾಗಲೇ ಅನೇಕ ಕಾರ್ಯಕ್ರಮಗಳ ಮೂಲಕ ಗಮನ ಸೆಳೆದಿದೆ. ಮುದ್ದಂಡ ಹಾಕಿ ಪಂದ್ಯಾವಳಿ ಆಯೋಜಕರೊಂದಿಗೆ ಇದೇ ತಿಂಗಳ 24 ರಂದು ಮಡಿಕೇರಿಯಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಮ್ಯಾರಥಾನ್‌ನ್ನು ಜಿಲ್ಲಾಡಳಿತ, ಪೊಲೀಸ್ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಹಯೋಗದಲ್ಲಿ ಆಯೋಜಿಸಲು ದೀಪಿಕಾ ಮುಂದಾಗಿದ್ದಾರೆ.

### ರಸ್ತೆ ಸುರಕ್ಷತಾ ಸಂದೇಶದ ಕಲಾಚಿತ್ರ

ಮಡಿಕೇರಿಯ ಬೃಹತ್ ತಡೆಗೋಡೆ ಈಗ ಕೇವಲ ಕಾಂಕ್ರೀಟ್ ಗೋಡೆಯಾಗಿ ಮಾತ್ರ ಉಳಿದಿಲ್ಲ. ಈ ತಡೆಗೋಡೆಯೇ ಈಗ ಹಲವಾರು ಸಂದೇಶದ ಮೂಲಕ ಚಿತ್ರಕಥೆ ಹೇಳುವಂತಿದೆ. ಈ ಮೂಲಕ ಸಂದರ್ಶಕರಿಗೆ ಸೂಕ್ತ ಫೋಟೋ ಪಾಯಿಂಟ್ ಕೂಡ ಈ ತಡೆಗೋಡೆ ಪರಿವರ್ತಿತವಾಗಿದೆ. ಕಳೆದ ವರ್ಷ ಇದೇ ತಡೆಗೋಡೆಯಲ್ಲಿ ದೀಪಿಕಾ ಪ್ರಯತ್ನದಿಂದಾಗಿ ಕೊಡಗಿನ ಕಾಫಿ ಕೊಯ್ಲಿನ ಬಗ್ಗೆ ಆಕರ್ಷಕ ಚಿತ್ರಕಲೆ ರೂಪುಗೊಂಡಿತ್ತು. ಈ ವರ್ಷ ಒಟ್ಟು 5 ಚಿತ್ರಗಳನ್ನು ಇಲ್ಲಿ ಮೈಂಡ್ ಅಂಡ್ ಮ್ಯಾಟರ್ ಸಂಸ್ಥೆಯು ಬೆಂಗಳೂರು ಮತ್ತು ಕೊಡಗಿನ ಕಲಾವಿದರಿಂದ ರೂಪಿಸಿದೆ. ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಈ ವರ್ಷ ಮುದ್ದಂಡ ಕಪ್ ಮೂಲಕ 25ನೇ ವರ್ಷಕ್ಕೆ ಕಾಲಿಟ್ಟ ಈ ಸಂದರ್ಭ ಕೊಡವ ಹಾಕಿಯ ಮಹತ್ವ ಸಾರುವ ಚಿತ್ರಕಲೆ ಈಗ ತಡೆಗೋಡೆಯಲ್ಲಿ ಕಲಾ ಚಿತ್ರವಾಗಿ ರೂಪುಗೊಂಡಿದೆ.ರಸ್ತೆ ಅಪಘಾತಗಳನ್ನು ನಿಯಂತ್ರಿಸುವ ಉದ್ದೇಶದಿಂದ ರಸ್ತೆ ಸುರಕ್ಷತೆ ಬಗೆಗೆ ತಿಳಿಹೇಳುವ ಪ್ರಯತ್ನವಾಗಿ ರಸ್ತೆ ಸುರಕ್ಷತಾ ಸಂದೇಶದ ಕಲಾಚಿತ್ರ ಕೂಡ ಇಲ್ಲಿ ರೂಪುಗೊಂಡಿದೆ.

ಮಡಿಕೇರಿಯ ಈ ಮುಖ್ಯ ರಸ್ತೆಯಲ್ಲಿ ದಿನನಿತ್ಯ ಸಾವಿರಾರು ಜನ ಸಂಚರಿಸುತ್ತಾರೆ. ಈ ರಸ್ತೆ ಬದಿಯಲ್ಲಿ ತಡೆಗೋಡೆ ಬಿಕೋ ಎನ್ನುತ್ತಾ ಬೇಸರ ತರಿಸುವಂತಿತ್ತು. ಈ ಗೋಡೆ ಮೇಲೆ ಮಹತ್ವದ ಸಂದೇಶವಿರುವ ಕಲಾ ಚಿತ್ರ ರೂಪಿಸಿ ಜನರ ಗಮನ ಸೆಳೆದು ಅವರಲ್ಲಿ ಯಾಕೆ ಆರೋಗ್ಯ, ಶಿಕ್ಷಣ, ಪ್ರಕೃತಿ, ರಸ್ತೆ ಸುರಕ್ಷತೆ, ಕ್ರೀಡೆಯ ಬಗ್ಗೆ ಜಾಗ್ರತಿ ಮೂಡಿಸಬಾರದು ಎಂದೆನಿಸಿತ್ತು. ಹೀಗಾಗಿಯೇ ಈ ಕಲಾಚಿತ್ರ ರೂಪಿಸಲು ಮುಂದಾಗಿದ್ದೇನೆ ಎಂದು ದೀಪಿಕಾ ತಿಳಿಸಿದರು. ಇಂಥ ಚಿತ್ರದ ಮೂಲಕ ಜನರ ಗಮನ ಸೆಳೆದು ಅವರ ಮನಸ್ಸಿನಲ್ಲಿಯೂ ಆಯಾ ವಿಚಾರದ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನ ನನ್ನದು ಎಂದು ದೀಪಿಕಾ ಹೇಳಿದರು.

## ಚಿತ್ತವಿಹಾರ

# ಗದ್ದಲದ ಹಿಂದಿರುವ ಶಾಂತಿ

● ಮಾಯಾ ಬಾಲಚಂದ್ರ

ಅಸುರಕ್ಷಿತ ಭಾವನೆಯನ್ನು ಹೊಂದಿರುವ ಅನೇಕರನ್ನು ನಮ್ಮ ನಡುವೆ ಕಾಣುತ್ತಿರುತ್ತೇವೆ. ಮನದಲ್ಲಿ ಗದ್ದಲ, ಗೊಂದಲಗಳು ನಡೆಯುತ್ತಲೇ ಇರುವುದು ಇದಕ್ಕೆ ಕಾರಣ. ಭೂತದ ನೆನಪುಗಳು, ಭವಿಷ್ಯದ ಅನಿಶ್ಚಿತತೆಯ ಭಯ, ಪಶ್ಚಾತ್ತಾಪ ಭಾವ ಮನಸ್ಸಿನಲ್ಲಿ ನಿರಂತರವಾಗಿ ಚಿಂತೆಯ ಅಲೆಗಳನ್ನು ಎಬ್ಬಿಸುತ್ತಾ, ಸಮಸ್ಯೆಗಳನ್ನು ಸೃಷ್ಟಿಸುತ್ತಿರುತ್ತವೆ. ಇವುಗಳಲ್ಲಿ ಹೆಚ್ಚಿನವು ಕಲ್ಪಿತ ಸಮಸ್ಯೆಗಳೇ.

ನಮ್ಮ ಯೋಚನೆಗಳನ್ನು ಕೇವಲ ಗಮನಿಸಿಕೊಳ್ಳಲು ಸಾಧ್ಯವಾದರೆ ಇಂತಹ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರೆಯಲು ಸಾಧ್ಯ. ಏನನ್ನೋ ಸಾಧಿಸುವ, ಏನನ್ನೋ ಪಡೆಯುವ ಆಸೆಯಾಧಾರಿತ ಯೋಚನೆಗಳು, ಕೋಪ, ಬೇಸರ, ಸಂತೋಷ ಮುಂತಾದವುಗಳಿಗೆ ಕಾರಣವಾಗುವ ಭಾವನಾತ್ಮಕ ಯೋಚನೆಗಳು, ಅವರು ನನಗಿಂತ ಹೆಚ್ಚು ಯಶಸ್ವಿಗಳು, ಹೆಚ್ಚು ಶ್ರೇಷ್ಠರು, ಹೆಚ್ಚು ಸಮರ್ಥರು ಮುಂತಾದ ಚಿಂತೆಗೆ ಕಾರಣವಾಗುವ ತುಲನಾತ್ಮಕ ಯೋಚನೆಗಳು ಎಲ್ಲವೂ ಮನಸ್ಸಿನಲ್ಲಿ ನಿರಂತರವಾಗಿ ಹಾದು ಹೋಗುತ್ತಲೇ ಇರುತ್ತವೆ. ಯಾವಾಗಲೂ ಸರಿಯಾಗಿರಬೇಕು, ಹೆಚ್ಚಿನದೇನನ್ನಾದರೂ ಮಾಡಬೇಕು ಎಂದು ಮನಸ್ಸಿಗೆ ನಿರಂತರವಾಗಿ ನೀಡಿದ ತರಬೇತಿಯಿಂದಾಗಿ, ಮನಸ್ಸು ತುಡಿಯುವುದೇ ಈ ಯೋಚನೆಗಳಿಗೆ ಕಾರಣ. ಈ ಎಲ್ಲಾ ಯೋಚನೆಗಳ ಬಗ್ಗೆ ನಾವು ಯಾವುದೇ ತೀರ್ಮಾನಗಳನ್ನು ಕೊಟ್ಟುಕೊಳ್ಳದೆ, ಅಂತರ್ಯದಲ್ಲಿ ನಡೆವ ಮಂಥನದ ಮಧ್ಯಪ್ರವೇಶಿಸದೆ, ಯಾವುದನ್ನೂ ಒಳ್ಳೆಯದು ಅಥವಾ ಕೆಟ್ಟದ್ದು ಎಂಬ ದೃಷ್ಟಿಯಿಂದ ನೋಡದೆ, ಕೇವಲ ಸಾಕ್ಷೀಭೂತರಾಗಿ ಗಮನಿಸಲು ತೊಡಗಿದರೆ, ಮನಸ್ಸು ಹಲವು ದಿಕ್ಕುಗಳಲ್ಲಿ ಓಡುವುದನ್ನು ನಿಲ್ಲಿಸಿ ಮೌನ ತಾಳುತ್ತದೆ. ಆಗ ಅಂತರ್ಯದಲ್ಲಿ ಅದ್ಭುತವನ್ನು ಕಾಣಲು ಸಾಧ್ಯ.

ಯೋಚನೆಗಳಿಗೆ ಸ್ವತಃ ಕಾರ್ಯರೂಪಕ್ಕೆ ಇಳಿಯುವ ಶಕ್ತಿ ಇಲ್ಲ. ನಾವು ಅವುಗಳನ್ನು ನಮ್ಮೊಂದಿಗೆ ಗುರುತಿಸಿಕೊಂಡು, ಆ ಯೋಚನೆಗಳನ್ನು ನಮ್ಮವೇ ಎಂದು ಅವುಗಳಿಗೆ ಶಕ್ತಿ ತುಂಬಿ ಮತ್ತಷ್ಟು ನೀಡುತ್ತಾ ಹೋದರೆ ಮಾತ್ರ ಅವು ಸಕ್ರಿಯವಾಗುತ್ತವೆ. ಮುಂದೆ ಬಳಲಿಕೆಗೆ ಕಾರಣವಾಗುತ್ತವೆ. ಯೋಚನೆಗಳು ಮನದಲ್ಲಿ ಚಲಿಸುವ ತರಂಗಗಳು. ಅವುಗಳನ್ನು ತೀವ್ರವಾಗಿ ಪರಿಗಣಿಸದೆ ಹಾಗೆಯೇ ಹರಿಯಲು ಬಿಟ್ಟರೆ, ಹರಿಯುವ ನದಿಯ ನೀರಿನಂತೆ ಚಲಿಸುತ್ತಾ ಮುಂದೆ ಸಾಗಿ ಬಿಡುತ್ತವೆ. ಯೋಚನೆಗಳಿಗೆ ಅಂಟಿಕೊಳ್ಳುವುದು, ಸೆಣಸುವುದು, ಹಿಂಬಾಲಿಸುವುದು ಮಾಡದೆ ಕೇವಲ ಗಮನಿಸಿದರೆ ಆ ಗದ್ದಲದ ಹಿಂದಿರುವ ಪ್ರಶಾಂತತೆ ಮನವನ್ನೆಲ್ಲ ಆವರಿಸಿಬಿಡುತ್ತದೆ. ಇದೇ ಮನಃಶಾಂತಿ.

## ಹನಿ ಮಳೆ

### ಮಳೆ

ಅಲ್ಲೆಲ್ಲೋ ಆಗಿದೆಯಂತೆ ಮಳೆ
ತಂಪಿನ ಸಿಂಚನಕೆ ಕಾಯುತಿದೆ ಇಳೆ
ಬುರಬುರನೆ ಬೀಸಿತು ಸುಳಿಗಾಳಿ
ಮೈ ನಡುಗಿದೆ ಇಲ್ಲೆಲ್ಲಾ ಚಳಿ ಚಳಿ!

● ಕಿರಣ್ ಕೊಕ್ಕರ್ಣೆ

# ಸಿಹಿ ಜಡೆ ಈರುಳ್ಳಿ ಬಲ್ಲಿರಾ?

**ಜಡೆಯ ರೀತಿ ಸುತ್ತಿ ಶೇಖರಿಸಿಡುವ ಈ ಈರುಳ್ಳಿಯನ್ನು ಹೆಚ್ಚಿದರೆ ಕಣ್ಣಲ್ಲಿ ನೀರು ಬರುವುದಿಲ್ಲ!**

● ಸುರೇಂದ್ರ ಪೈ, ಭಟ್ಕಳ

ಈರುಳ್ಳಿಯನ್ನು ಅಡುಗೆಗೆ ಬಳಸದೇ ಇರುವವರು ಅಪೂರ್ವ. ಅಡುಗೆ ಮನೆಯಲ್ಲಿ ತರಕಾರಿಗಳಿಗಿಂತಲೂ ಹೆಚ್ಚಾಗಿ ಈರುಳ್ಳಿ ಬಳಕೆ ಇದೆ. ಈರುಳ್ಳಿಯು ಕತ್ತರಿಸುವಾಗಲೇ ಕಣ್ಣಲ್ಲಿ ನೀರು ತರಿಸಿ ಬಿಡುತ್ತದೆ. ಆದರೆ ಕಣ್ಣಲ್ಲಿ ನೀರು ತರಿಸದ, ಸ್ವಲ್ಪ ಸಿಹಿ ರುಚಿ ಹೊಂದಿರುವ ಬಗ್ಗೆ ಕೇಳಿದ್ದೀರಾ?

ರುಚಿಯಲ್ಲಿ ತುಸು ಸಿಹಿಯಾಗಿಯೂ, ಕತ್ತರಿಸುವಾಗ ಕಣ್ಣಲ್ಲಿ ನೀರು ತರಿಸದ ಈರುಳ್ಳಿಯನ್ನು ಉತ್ತರಕನ್ನಡ ಜಿಲ್ಲೆಯ ಕುಮಟ ತಾಲೂಕಿನಲ್ಲಿ ಮತ್ತು ಕರಾವಳಿಯ ಇತರ ಕೆಲವು ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಇದನ್ನು ಆ ಭಾಗದಲ್ಲಿ ಜಡೆ ಈರುಳ್ಳಿ, ಪೊತ್ತೆ ಈರುಳ್ಳಿ ಎಂಬುದಾಗಿಯೂ ಕರೆಯುತ್ತಾರೆ. ಅಷ್ಟೇ ಕುಮಟ ಭಾಗದಲ್ಲಿ ಇದನ್ನು 'ಕುಮಟ ಈರುಳ್ಳಿ' ಎಂತಲೂ ಕರೆಯುತ್ತಾರೆ.

ಈ ಈರುಳ್ಳಿ ಬೆಳೆಯನ್ನು ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಸಮಯದಲ್ಲಿ ಕುಮಟ, ಹಂದಿಗೋಣ, ಗೋಕರ್ಣ ಮತ್ತು ಸುತ್ತಮುತ್ತಲಿನ ಭಾಗದಲ್ಲಿ ಕೃಷಿಕರು ಬೆಳೆಯುವುದನ್ನು ಕಾಣಬಹುದು. ಕುಮಟಾ ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಜಡೆ ಈರುಳ್ಳಿಯ ರಾಶಿಗಳನ್ನು ಇಟ್ಟು ಮಾರಾಟ ಮಾಡುವ ದೃಶ್ಯ ಈ ಸಮಯದಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತವೆ. ಈ ಈರುಳ್ಳಿಯನ್ನು ಜುಟ್ಟು ಸಮೇತ ಮಣ್ಣಿನಿಂದ ತೆಗೆದು ಅವುಗಳ ಒಣಗಿದ ಎಲೆಗಳನ್ನು ಕೂದಲನ್ನು ಹೆಣೆಯುವ ರೀತಿ ಹೆಣೆದು, ಆ ಜಡೆ ಈರುಳ್ಳಿಯನ್ನು ನೇತು ಹಾಕಿರುತ್ತಾರೆ. ಹಾಗಾಗಿ ಇದು ನೋಡಲು ಜಡೆಯ ರೀತಿಯ ಇರುವುದರಿಂದ 'ಜಡೆ ಈರುಳ್ಳಿ' ಎಂದು ಕರೆಯುತ್ತಾರೆ. ಈ ಈರುಳ್ಳಿಯು ರುಚಿಯಲ್ಲಿ ಖಾರದ ಅಂಶ ಕಡಿಮೆ.

ಇವು ಬೇಗನೇ ಹಾಳಾಗುವುದಿಲ್ಲ. ಹಾಗೂ ಇದನ್ನು ಕತ್ತರಿಸುವಾಗ ಕಣ್ಣಿನಿಂದ ನೀರು ಬರುವುದಿಲ್ಲ. ಮೊದಲೆಲ್ಲಾ ಇವುಗಳ ಗೊಂಚಲುಗಳನ್ನು ಅಡುಗೆ ಮನೆಯ ಮೇಲ್ಭಾಗದಲ್ಲಿ ಬಿದಿರಿನ ಗಳಕ್ಕೆ ಕಟ್ಟಿಡುತ್ತಿದ್ದರು. ಆಗ ಕಟ್ಟಿಗೆ ಒಲೆಯನ್ನು ಬಳಸುತ್ತಿದ್ದರಿಂದ ಅಡುಗೆ ಒಲೆಯ ಹೊಗೆಯು ಈರುಳ್ಳಿಯನ್ನು ಇನ್ನಷ್ಟು ದಿನ ಹಾಳಾಗದಂತೆ ಕಾಪಾಡುತ್ತಿತ್ತು. ಈಗ ಕಟ್ಟಿಗೆ ಒಲೆ ಇಲ್ಲದಿದ್ದರೂ ಸಹ ಮೇಲ್ಚಾವಣಿಯಲ್ಲಿ ಕಟ್ಟಿಡುವುದನ್ನು ಕಾಣಬಹುದು.

ಕರಾವಳಿಯ ಭಾಗದಲ್ಲಿ, ಮರಳು ಬೆರೆತ ನೆಲ ಈ ಈರುಳ್ಳಿಗೆ ಪ್ರಶಸ್ತ. ಇದನ್ನು ಕರಾವಳಿಯ ಕೃಷಿಕರು ನೂರಾರು ವರ್ಷಗಳಿಂದ ಬೆಳೆಯುತ್ತಿದ್ದಾರೆ. ಮುಂಗಾರು ಭತ್ತದ ಕೊಯ್ಲು ಮುಗಿದ ತಕ್ಷಣ ರೈತರು ಡಿಸೆಂಬರ್ ವೇಳೆಯಲ್ಲಿ ಈರುಳ್ಳಿ ಬೀಜದ ನಾಟಿ ಮಾಡುತ್ತಾರೆ. ಸಾಮಾನ್ಯವಾಗಿ ಸಾವಯುವ ಕೃಷಿ ಪದ್ಧತಿ ಮೂಲಕ ಬೆಳೆಯಲಾಗುತ್ತದೆ. ನಾಟಿ ಮಾಡಿದ ಮೂರು ತಿಂಗಳಲ್ಲಿ ಈರುಳ್ಳಿ ಕಟಾವಿಗೆ ಬರುತ್ತದೆ. ಆಗ ರೈತರು ಅದನ್ನು ಜುಟ್ಟು ಸಮೇತ ಕೀಳುತ್ತಾರೆ. ನಂತರ ಅವುಗಳನ್ನು ಐದರಿಂದ ಹತ್ತು ಕೆ ಜಿ ತೂಕದ ಒಂದೊಂದೆ ಪೊತ್ತೆಗಳನ್ನು ಕಟ್ಟಿ ಮಾರುಕಟ್ಟೆಗೆ ತರುತ್ತಾರೆ.

ಸಿಮೀತ ಅವಧಿಯಲ್ಲಿ ಮಾತ್ರ ಬೆಳೆಯುವ ಬೆಳೆಯಾದ್ದರಿಂದ ಇದರ ರುಚಿ ನೋಡಿದವರು ಹಲವು ತಿಂಗಳುಗಳಿಗೆ ಬೇಗಾಗುವಷ್ಟು ಈರುಳ್ಳಿಯನ್ನು, ಒಮ್ಮೆಲೇ ಖರೀದಿ ಮಾಡುತ್ತಾರೆ. ಈ ಸಮಯದಲ್ಲಿ ಕುಮಟಾ ಮತ್ತು ಕರಾವಳಿಯ ಇತರ ಭಾಗಗಳಿಗೆ ಪ್ರವಾಸ ಹೋಗುವಿರಾದರೆ, ಈ ಈರುಳ್ಳಿಯನ್ನು ಖರೀದಿಸಿ, ರುಚಿ ನೋಡಿ. ಅಂದ ಹಾಗೆ, ಮಾಮೂಲಿ ಈರುಳ್ಳಿಗಿಂತ ಇದರ ಬೆಲೆ ಹೆಚ್ಚು!

### ಇದೇ ಈರುಳ್ಳಿ ಬೇಕು!

ಕುಮಟಾ, ಅಂಕೋಲಾ ಮೊದಲಾದ ಕರಾವಳಿ ತಾಲೂಕುಗಳಲ್ಲಿ ಬೆಳೆಯುವ ಈ ಈರುಳ್ಳಿಗೆ ರುಚಿ ಜಾಸ್ತಿ; ತುಸು ಸಿಹಿ ಬೆರೆತ ರುಚಿ ಮತ್ತು ಖಾರ ಕಡಿಮೆ; ಜತೆಗೆ, ಕತ್ತರಿಸುವಾಗ ಕಣ್ಣಲ್ಲಿ ನೀರು ಬರುವುದಿಲ್ಲ! ಆದ್ದರಿಂದ, ಈರುಳ್ಳಿ ಹೆಚ್ಚುತ್ತಾ ಅಳುತ್ತಿರುತ್ತಾರೆ ಎಂಬ ನುಡಿಗಟ್ಟು, ಕುಮಟಾ ಈರುಳ್ಳಿಗೆ ಅನ್ವಯವಾಗುವುದಿಲ್ಲ. ಮಾರ್ಚ್ ಎಪ್ರಿಲ್ ತಿಂಗಳುಗಳಲ್ಲಿ, ಕರಾವಳಿಯ ಕುಂದಾಪುರ, ಬೈಂದೂರು ಪ್ರದೇಶಗಳಿಂದ ಹಿಡಿದು ಕುಮಟಾದ ತನಕ ಈ ಈರುಳ್ಳಿಯನ್ನು ಬೆಳೆಯತ್ತಾರೆ. ಉಪ್ಪು ಬೆರೆತ ನೀರನ್ನು ಇದರ ಕೃಷಿಗೆ ಉಪಯೋಗಿಸುವುದು ಪದ್ಧತಿ. ಕೆಲವು ಪ್ರಕಾರದ ಅಡುಗೆಗೆ ಈ ಜಡೆ ಈರುಳ್ಳಿಯೇ ಅಗತ್ಯ ಎಂದು ನಂಬಿದವರು ಕರಾವಳಿಯ ಜನರು!

# ತಿರುಮಲದಲ್ಲಿ ನೇರ ದರ್ಶನ

● ಹೆಚ್.ಕೆ.ಮಧು ದೋಹಾ ಕತಾರ್

ತಿರುಮಲ ಬೆಟ್ಟದ ಮೇಲಿರುವ ತಿಮ್ಮಪ್ಪನ ದರ್ಶನ ಭಾಗ್ಯ ಆಸ್ತಿಕರ ಜೀವನದ ಕನಸು. ವಿಧ ವಿಧ ರೀತಿಯ ಪ್ರಾಕಾರಗಳಲ್ಲಿ ವೆಂಕಟೇಶ್ವರ ಸ್ವಾಮಿಯ ದರ್ಶನ ಲಭ್ಯವಿದೆ. ಧರ್ಮದರ್ಶನ (ಮತ್ತು ಪ್ರಭಾವಿಗಳನ್ನು) ಹೊರತುಪಡಿಸಿ ಬೇರೆ ಯಾವುದೇ ರೀತಿಯ ಸೇವೆ ಹಾಗೂ ಶ್ರೀನಿವಾಸನ ದರ್ಶನಕ್ಕೆ ಮುಂಗಡವಾಗಿ ಕಾಯ್ದಿರಿಸಿದ ನಿಗದಿತ ದಿನಾಂಕ ಹಾಗೂ ವೇಳೆಯಲ್ಲಿ ಮಾತ್ರ ಸಾಧ್ಯ. ಗಂಟೆಗಟ್ಟಲೆ ಸಾಲಿನಲ್ಲಿ ನಿಂತ ಮೇಲೆ ತಿಮ್ಮಪ್ಪನ ಕರುಣೆಯ ಮೇರೆಗೆ ಕೆಲವೇ ಕ್ಷಣಗಳು ಮಾತ್ರ ಆ ಅನಾಥರಕ್ಷಕನನ್ನು ಕಂಡು, ಪ್ರಾರ್ಥಿಸಲು ಅವಕಾಶ ಸಿಗುತ್ತದೆ.

ಎಷ್ಟೇ ಸಮಯ ಜನಜಂಗುಳಿಯ ನಡುವೆ ನಿಂತಿದ್ದರೂ, ದೇವಸ್ಥಾನದ ಒಳ ಪ್ರಾಂಗಣದೊಳಗೆ ಬಂದಾಗ, ಗೋವಿಂದಾ, ಗೋವಿಂದಾ ಎನ್ನುವ ಭಕ್ತರ ಆರ್ತನಾದದ ಕೂಗು ಮನದಲ್ಲಿ ಝೇಂಕರಿಸುತ್ತದೆ. ತಾನೇ ತಾನಾಗಿ ಆ ಕೂಗಿಗೆ ನಮ್ಮ ದನಿ ಸೇರಿಬಿಡುತ್ತದೆ. ಇನ್ನೇನು ಕೆಲವೇ ಕ್ಷಣಗಳಲ್ಲಿ ಬಾಲಾಜಿಯನ್ನು ಕಾಣುತ್ತೇವೆ ಹಾಗೂ ಮನದಾಳದ ಪ್ರಾರ್ಥನೆಯನ್ನು ಸಲ್ಲಿಸುತ್ತೇವೆ ಎಂಬ ಭಾವವೇ ಪುಳಕಗೊಳಿಸುತ್ತದೆ. ಆ ದಿವ್ಯ ಮೂರ್ತಿಯ ಮುಂದೆ ಬಂದಾಗ ಭಕ್ತರ ಪರಾಕಾಷ್ಠೆ ಮುಗಿಲು ಮುಟ್ಟಿಬಿಡುತ್ತದೆ. ಇನ್ನೊಂದು ಕ್ಷಣ, ಇನ್ನೂ ಸ್ವಲ್ಪ ಸಮಯ ಭಗವಂತನನ್ನು ಕಣ್ತುಂಬಿಸಿಕೊಳ್ಳಬೇಕೆನ್ನುವಷ್ಟರಲ್ಲಿ ಅಲ್ಲಿನ ಸಿಬ್ಬಂದಿ ದಬ್ಬಿಬಿಡುತ್ತಾರೆ. ಇದು, ಸಾಮಾನ್ಯವಾಗಿ ನೂರಕ್ಕೆ 99 ಭಾಗ ಎಲ್ಲಾ ಭಕ್ತರ ಅನುಭವ.

ಅನಿವಾಸಿ ಭಾರತೀಯರಿಗೆ ತಿರುಮಲ ದೇವಸ್ಥಾನದ ಆಡಳಿತ ಮಂಡಳಿ ಯಾವುದೇ ಮುಂಗಡ ಕಾಯ್ದಿರಿಸುವಿಕೆಯಿಲ್ಲದೆ ಸುಲಭ ರೀತಿಯ ದರ್ಶನದ ವ್ಯವಸ್ಥೆ ಕಲ್ಪಿಸಿದೆ. ಅನಿವಾಸಿ ಭಾರತೀಯರು ತಮ್ಮ ಪಾಸ್ ಪೋರ್ಟ್ ಮತ್ತು ತಮ್ಮ ವಿದೇಶ ವಾಸ್ತವ್ಯದ ವೀಸಾ ಅಥವಾ ಗುರುತಿನ ಕಾರ್ಡ್‌ಗಳೊಂದಿಗೆ, ಬೆಟ್ಟದ ಮೇಲಿನ ವೈಕುಂಠಮ್ -1 ಸಮುಚ್ಚಯದ ಬಳಿಯ ವಿಶೇಷ ದರ್ಶನದ ಸಾಲಿನವರೊಂದಿಗೆ ಸೇರಿಕೊಳ್ಳಬೇಕು. ಅವಶ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, 300 ರೂಪಾಯಿಗಳನ್ನು ಪಾವತಿಸಿದ ಮೇಲೆ ದರ್ಶನಕ್ಕೆ ಹೋಗಬಹುದು. (ಭಾರತಕ್ಕೆ ಬಂದ 30 ದಿನಗಳ ಒಳಗೆ ಈ ಸೌಲಭ್ಯ ಲಭ್ಯ). ಬೇರೆ ದೇಶಗಳಲ್ಲಿ ವಾಸಿಸಿರುವ ಭಾರತೀಯರಿಗೆ ಅನುಕೂಲ ಮಾಡಿಕೊಡುವಂತಹ ಈ ವಿಶೇಷ ಸೌಲಭ್ಯವು, ಅನಿವಾಸಿ ಭಾರತೀಯರ ಮೆಚ್ಚುಗೆ ಗಳಿಸಿದೆ.

# ಕಂದನ ಅದ್ಭುತ ಜಗತ್ತು

● ಹೊಸ್ಮನೆ ಮುತ್ತು

ಇರಬೇಕು, ಇರಬೇಕು ಅರಿಯದ ಕಂದನ ತರಹ ಎನ್ನುವುದು ಎಷ್ಟು ಸತ್ಯ! ಚಂದ್ರಮನ ನಾಚಿಸುವ ದುಂಡು ಮುಖದಲ್ಲಿ ಜಗದೆಲ್ಲ ಭಾವಗಳು, ಬಹು ವಿಧದ ನೋಟಗಳು! ನಮಗಾರಿಗೂ ಗೋಚರಿಸದ, ನಮ್ಮ ಗ್ರಹಿಕೆಗೆ ನಿಲುಕದ ಅದೆಷ್ಟೋ ನವನವೀನ ಸಂಗತಿಗಳು, ವಿಚಾರಗಳು ಪುಟ್ಟ ಮಗುವಿನ ಅರಿವಿಗೆ ಬಂದಿರುತ್ತವೆ.

ಮಗುವೊಂದು ಈ ಜಗತ್ತನ್ನು ನೋಡುವ ಪರಿಯೇ ಸೋಜಿಗ! ಮಕ್ಕಳ ಲೋಕ ಒಂದು ಅದ್ಭುತ, ಆನಂದಮ ಯ ಜಗತ್ತು. ಚಿಕ್ಕ ಮಕ್ಕಳ ಲೋಕ ಒಂದು ಬಣ್ಣಗಳ ಚಿತ್ತಾರವಿದ್ದಂತೆ. ಜಗದ ಅಸಂಖ್ಯಾತ ಭಾವನೆಗಳನ್ನು ಚಿತ್ರಿಸಿದ ಕ್ಯಾನ್ವಾಸ್ ಅದು. ಅಲ್ಲಿ ಆಶ್ಚರ್ಯದ ಕಣ್ಣುಗಳು, ಕುತೂಹಲದ ಚಿಗುರು ಮತ್ತು ಮುಗ್ಧತೆಯ ಹೊನಲು ಸದಾ ಹರಿಯುತ್ತಿರುತ್ತದೆ. ಮುಗ್ಧ ನಗೆಯಲ್ಲಿ ಎಣಿಸಲಾರದ ಅದೆಷ್ಟು ಅದ್ಭುತ ಭಾವಗಳಿವೆ! ಆ ಪುಟ್ಟ ಕೈಗಳು ಜಗತ್ತನ್ನು ಅರಿಯಲು ತಡಕಾಡುತ್ತವೆ, ಹೊಸ ಸ್ಪರ್ಶಕ್ಕೆ ಮಿಡಿಯುತ್ತವೆ. ಅವರ ತೊದಲು ಮಾತುಗಳು ತೊಟ್ಟಿಕ್ಕುವ ಜೇನ ಸಿಹಿಯಂತೆ. ಅವರ ಆಟಗಳು ಕೇವಲ ಮನರಂಜನೆಯಲ್ಲ, ಅದು ಕಲಿಯುವ, ಬೆಳೆಯುವ ಸುಂದರ ಪಯಣ.

# ಮೋಹ ಮಮತೆಯ ಕಟ್ಟುಪಾಡು!

**ಕ್ಷಣವೊಂದರೊಳೆ ಪೂರ್ತಿ ಕೊಲ್ಲುವುದು ಯಮಶೂಲ**
**ಕ್ಷಣವನುಕ್ಷಣ ಕೊಲ್ಲುವುವು ಮೋಹಮಮತೆ**
**ಕುಣಿಕೆಯನು ನಿನ್ನ ಕೊರಳಿಗೆ ಹೂಡಿ ಚಿರಕಾಲ**
**ವಣುವಣುವೆ ಬಿಗಿಯುವುವೊ - ಮಂಕುತಿಮ್ಮ॥**

ಕ್ಷಣವೊಂದರಲ್ಲಿ ಯಮಶೂಲವು ನಮ್ಮನ್ನು ಪೂರ್ತಿಯಾಗಿ ಕೊಲ್ಲುತ್ತದೆ. ಆದರೆ ಮೋಹ, ಮಮತೆ, ಸಂಬಂಧಗಳ ನೆಂಟೆಂಬುದು ನಮಗೆ ಅಂಟಿಕೊಂಡು ನಮ್ಮನ್ನು ಕ್ಷಣ ಕ್ಷಣವೂ ಕೊಲ್ಲುತ್ತವೆ. ಸಂಬಂಧಗಳೆಂಬ ಪಾಶವನ್ನು ನಮ್ಮ ಕುತ್ತಿಗೆಗೆ ಸುತ್ತಿ, ಕ್ಷಣ ಕ್ಷಣವೂ ನಮ್ಮ ದೇಹದ ಅಣು ಅಣುವನ್ನೂ ಬಿಗಿಯುತ್ತಾ ನಮ್ಮನ್ನು ಕೊಲ್ಲುತ್ತಿರುತ್ತವೆ. ಈ ಭಾಂಧವ್ಯದ ಕುಣಿಕೆಗಳು ಯಮನ ಪಾಶಕ್ಕಿಂತಲೂ ಅಪಾಯಕಾರಿಯಾಗಿರುತ್ತವೆ.

ಮಾನವನು ಹುಟ್ಟಿನಿಂದ ಸಾಯುವವರೆಗೂ ಸಂಘ ಜೀವಿ. ಹುಟ್ಟಿನ ಲಾಗಾಯ್ತು ಆತನ ಜೀವನದಲ್ಲಿ ಹಲವಾರು ಜನರು ಭಾಂಧವರಾಗಿಯೋ, ಸ್ನೇಹಿತರಾಗಿಯೋ, ನೆಂಟಷ್ಟರಾಗಿಯೋ ಪ್ರವೇಶಿಸುತ್ತಾರೆ. ಸರಿಯಾದ ನಡೆ ಕಲಿಸುವ ಗುರು, ಸಂಸ್ಕಾರ ಕಲಿಸುವ ಅಪ್ಪ ಅಮ್ಮ, ಅರ್ಥ ಮಾಡಿಕೊಳ್ಳುವ ಸತಿ, ಹೇಳಿದ ಮಾತು ಕೇಳುವ ಪುತ್ರ ಪುತ್ರಿಯರು, ನಿಸ್ವಾರ್ಥದ ಸ್ನೇಹಿತರುಗಳು, ಏಳಿಗೆ ಬಯಸುವ ಬಂಧುವರ್ಗದವರು ನಮಗೆ ಸಿಕ್ಕಿದರೆ ಅದೊಂದು ಸಂತೋಷದ ಸಂಗತಿ. ಅದೊಂದು ಸ್ವರ್ಗ ಸಮಾನವಾದ ಬದುಕು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಸಂಸ್ಕಾರ ಕಲಿಸದ ತಂದೆ ತಾಯಿ, ನಡೆ ತೋರದ ಗುರುವು, ಅರ್ಥ ಮಾಡಿಕೊಳ್ಳದ ಸತಿ, ಮಾತು ಕೇಳದ ಪುತ್ರರು, ಸ್ವಾರ್ಥದ ಸ್ನೇಹಿತರು, ಹಿತದ್ವೇಷಿಗಳಾದ ಬಂಧುಗಳು ಸಿಕ್ಕಿದರೆ ಅಂತಹವನ ಬಾಳು ಒಂದು ರೀತಿಯಲ್ಲಿ ನರಕವೇ ಹೌದು. ಯಮನ ಶೂಲವು ಒಂದು ಬಾರಿ ಪ್ರಾಣವನ್ನು ತಗೆದರೆ ಇಂಥಹ ಮನಸ್ಥಿತಿಯವರಿಂದ, ಈ ಮೋಹ, ಪ್ರೇಮಗಳ ಬಂಧವು ನಮಗೆ ಕುತ್ತಿಗೆಗೆ ಹಾಕಿಕೊಂಡಂತಹ ನೇಣು. ಆ ನೇಣು ನಮ್ಮನ್ನು ಒಮ್ಮೆ ಮಾತ್ರವೇ ಕೊಲ್ಲದೆ, ದಿನ ದಿನವೂ ಸಹ ತನ್ನ ಕುಣಿಕೆಯನ್ನು ಬಿಗಿಗೊಳಿಸುತ್ತಾ ಅನುಕ್ಷಣವೂ ನಮ್ಮನ್ನು ಕೊಲ್ಲುತ್ತವೆ. ಜೀವವಂತಿಕೆಯಾಗಿದ್ದರೂ ಸಹ ನಮ್ಮನ್ನು ಜೀವ ಶವವನ್ನಾಗಿ ಮಾಡಿ ಬಿಡುತ್ತವೆ. ನಮ್ಮ ಸಂಬಂಧಗಳು ಬಿಟ್ಟೆನೆಂದರೂ ಬಿಡದೆ ಅವುಗಳು ಪಾಶವಾಗಿ ನಮ್ಮನ್ನು ಕೊಲ್ಲುತ್ತಲಿರುತ್ತವೆ. ಈ ಸಂಬಂಧಗಳು ಎಲ್ಲಿಯತನಕ ತಮ್ಮ ಶುದ್ಧತೆಯನ್ನು ಉಳಿಸಿಕೊಳ್ಳುತ್ತವೋ ಅಲ್ಲಿಯತನಕ ಅವು ಎಲ್ಲರಿಗೂ ಆನಂದವನ್ನು ನೀಡುತ್ತಿರುತ್ತವೆ. ಎಂದು ಈ ಬಂಧಗಳಿಗೆ, ಸ್ವಾರ್ಥದ, ಮೋಹದ, ಅಹಂಕಾರದ, ದೈನ್ಯತೆಯ ಲೇಪನವಾಗುತ್ತದೋ ಅಂದು ಆಪ್ಯಾಯಮಾನವಾಗಿದ್ದ ಸಂಬಂಧಗಳು ಕಲುಷಿತವಾಗಿ ನಮಗೆ ನೋವಿಗೆ ಕಾರಣವಾಗುತ್ತದೆ. ಸುಲಭದಲ್ಲಿ ಬಿಡಲಾಗದ ಬಂಧಗಳು, ಸಂಬಂಧಗಳಂತೂ ಪ್ರತಿ ನಿತ್ಯ ವೇದನೆಯನ್ನು ಕೊಡುವ ಕುತ್ತಿಗೆಯ ಕುಣಿಕೆಯಂತಾಗುತ್ತದೆ. ನಮ್ಮನ್ನು ಜಗ್ಗೀ ಜಗ್ಗೀ ಹತಾಶರನ್ನಾಗಿಸುತ್ತದೆ. ಇದಕ್ಕೆ ಕಾರಣ ನಾವು ಕಟ್ಟಿ ಕೊಂಡ ಸಂಬಂಧಗಳು. ಹಾಗಾಗಿಯೇ ಇಂಥಹ ಸಂಭಂಧಗಳಿಂದ ಜಾಗೃತನಾಗಿರುವುದು ಉಚಿತ. ಮಹಾಭಾರತದ ಒಂದು ಉದಾಹರಣೆಯನ್ನೇ ನಾವು ತಗೆದುಕೊಂಡಲ್ಲಿ, ಧೃತರಾಷ್ಟ್ರನು ತನ್ನ ದಾಯಾದಿಯ ಮಕ್ಕಳನ್ನು ತನ್ನವರೆಂದು ತಿಳಿಯಲಿಲ್ಲ. ಆತನಿಗೆ ತನ್ನ ಮಕ್ಕಳಾದ ಕೌರವಾದಿಗಳು ತಪ್ಪುಗಳನ್ನು ಮಾಡುತ್ತಿದ್ದರೂ ಸಹ ಅವರುಗಳ ಮೇಲಿನ ಮೋಹ, ಪ್ರೀತಿಗಳಿಗೆ ಬಲಿ ಬಿದ್ದು ಪಾಂಡು ಕುಮಾರರನ್ನು ತನ್ನವರೆಂದು ಆತ ಅಂದುಕೊಳ್ಳಲಿಲ್ಲ. ಹಾಗಾಗಿಯೇ ಮಹಾಭಾರತದ ಕುರುಕ್ಷೇತ್ರಕ್ಕೆ ನಾಂದಿ ಆಗಿತು. ಇಲ್ಲಿ ಧೃತರಾಷ್ಟ್ರನಿಗೆ ತನ್ನ ಮಕ್ಕಳ ಮೇಲಿನ ಮೋಹ, ನೆಂಟುಗಳೇ ಆ ಕೌರವರಿಗೆ ಜೀವಹಾನಿಯಾಗುವಂತಾಯಿತು. ಹಲವಾರು ಪುಣ್ಯ ಕಥೆಗಳಲ್ಲಿ ಸಂಬಂಧಗಳ ಮೇಲೆಯೇ ಹಲವಾರು ಕಥೆಗಳು ಇವೆ. ಯಾವ ಭವ ಬಂಧನಗಳೂ ಇರದಂತೆ ನಾವು ನಿರ್ಲಿಪ್ತರಾಗಿ, ಯಾವ ಸ್ವಾರ್ಥಾಕಾಂಕ್ಷೆಗಳು ಇಲ್ಲದೆ ನಮ್ಮ ಜೀವನವನ್ನು ನಡೆಸಿಕೊಂಡರೆ ಅದೇ ಉತ್ತಮ ಬಾಳು. ಹಾಗಾಗಿಯೇ ಯಮನ ಶೂಲ ಎಂಬುದು ಒಮ್ಮೆ ಮಾತ್ರವೇ ನಮ್ಮನ್ನು ಕೊಂದರೆ, ಸ್ವಾರ್ಥ ತುಂಬಿದ ಈ ಮೋಹಗಳು, ಪ್ರೀತಿಗಳು, ಸ್ನೇಹಗಳು ನಮ್ಮನ್ನು ದಿನದಿನವೂ ಕುತ್ತಿಗೆಗೆ ನೇಣಾಗಿ, ಪ್ರತಿದಿನವೂ ಈ ನೆಂಟಿನ ಅಂಟಿನಲ್ಲಿ ಕುತ್ತಿಗೆಗೆ ನೇಣು ಬಿಗಿದು, ದಿನದಿನವೂ ಬಿಗಿಗೊಳಿಸುತ್ತಿರುತ್ತವೆ.

**ಶುಭೋದಯಕ್ಕೊಂದು ಕಗ್ಗ**



ರವೀ ಚಿಕ್ಕನಾಯಕನಹಳ್ಳಿ

## ಪುಸ್ತಕ ಲೋಕ



ಕವಿ ಬಿ.ಆರ್.ಲಕ್ಷ್ಮಣರಾವ್ ಅವರು ಕಳೆದ ನಾಲ್ಕೈದು ದಶಕಗಳಿಂದ ಬರೆಯುತ್ತಿದ್ದಾರೆ. ಮುಖ್ಯವಾಗಿ ಭಾವಗೀತೆಯ ಕವಿ ಎಂದೇ ಪ್ರಸಿದ್ಧರಾದ ಅವರು ಇತರ ಪ್ರಕಾರದಲ್ಲೂ ಸಾಕಷ್ಟು ಸಾಹಿತ್ಯಕೃಷಿ ನಡೆಸಿದ್ದಾರೆ. ಅವರು ರಚಿಸಿದ, ಉತ್ತಮ ಎನಿಸಿದ ಹಲವು ರಚನೆಗಳು ಈ ಪುಸ್ತಕದಲ್ಲಿವೆ. ಹನಿಗವನ, ಇಡಿಗವನ ಮತ್ತು ಭಾವಗೀತೆಗಳನ್ನು ಒಳಗೊಂಡಿರುವ ಈ ಪುಸ್ತಕವನ್ನು ಬೆಂಗಳೂರಿನ ಸಪ್ನ ಬುಕ್ ಹೌಸ್ ಪ್ರಕಟಿಸಿದೆ. ಸಪ್ನ ಆನ್‌ಲೈನ್‌ನಲ್ಲೂ ಇದು ಲಭ್ಯವಿದೆ.

## ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

| | | | | | | | | |
|---|---|---|---|---|---|---|---|---|
| 1 | ■ | 2 | | | ■ | 3 | ■ | 4 |
| 5 | | | ■ | ■ | 6 | | | |
| | ■ | 7 | 8 | | ■ | | ■ | |
| ■ | 9 | ■ | | ■ | 10 | | 11 | ■ |
| 12 | | ■ | 13 | | | ■ | 14 | |
| ■ | 15 | 16 | | ■ | | ■ | | ■ |
| 17 | ■ | | ■ | 18 | | 19 | ■ | 20 |
| 21 | | | | ■ | ■ | 22 | | |
| | ■ | | ■ | 23 | | | ■ | |

### ಎಡದಿಂದ ಬಲಕ್ಕೆ

2. ಮಧ್ಯಮ ಪಾಂಡವ (3)
5. ಮನಸ್ಸಿನ ಓಘ (3)
6. ಯೋಗ್ಯವಾದ ಎಂದರ್ಥ (4)
7. ಕೋಪಗೊಳ್ಳು ಎನ್ನುವ ಪದ (3)
10. ಯಮನಿಗೆ ಮತ್ತೊಂದು ಹೆಸರು (3)
12. ಎರಡಕ್ಷರದ ಆಡು (2)
13. ಚಳಿಗಾಲವನ್ನು ನೆನಪಿಸುವ ಋತು (3)
14. ನೇರವಲ್ಲ, ಬಾಗಿದ (2)
15. ಕಪ್ಪು ಕೂದಲಿನ ಭಲ್ಲೂಕ (3)
18. ಕಾಲಿಲ್ಲದವನು (3)
21. ಸಂಕಟ ಅಥವಾ ದುಃಖ (4)
22. ಜನರು ಒಪ್ಪಿಸಿದ ಕಾಣಿಕೆ (3)
23. ತಮ್ಮನಿಗೆ ಮತ್ತೊಂದು ಹೆಸರು (3)

### ಮೇಲಿಂದ ಕೆಳಕ್ಕೆ

1. ಜಿನುಗುವುದು ಅಥವಾ ಸೋರುವುದು (3)
2. ಅರಿವಾಗುವಂತೆ ಮಾಡಿದ ವಿಜ್ಞಾಪನೆ (3)
3. ಮೃತ್ಯುದೇವನ ಕಿಂಕರ (4)
4. ಹಣೆಬರಹ ತಿಳಿಸಬಲ್ಲ ಜನ್ಮಕುಂಡಲಿ (3)
8. ಯುದ್ಧಕ್ಕೆ ಹೆದರಿ ಓಡಿಹೋದವನು (4)
9. ಕಚೇರಿಯ ಬಿಡುವು ಮತ್ತು ಕಳ್ಳಾಟ ಸೇರಿದಾಗ (3)
10. ನಡುವಿನ ಭಾಗ (4)
11. ಕಲ್ಲನ್ನು ಎಸೆಯುವ ಸಾಧನ (3)
16. ಬೆಳ್ಳಿಯ ಬೆಟ್ಟವಿದು (4)
17. ನಡುಕಕ್ಕೆ ಮತ್ತೊಂದು ಹೆಸರು (3)
19. ನೀರಿನಲ್ಲಿ ಹುಟ್ಟಿದ್ದುದು ಎಂದರ್ಥ (3)
20. ದಯೆಗೆ ಇನ್ನೊಂದು ಹೆಸರು (3)

### ಸರಿಯುತ್ತರಗಳು

**ಮೇಲಿಂದ ಕೆಳಕ್ಕೆ**
1. ಗಲನ 2. ಅರಿಕೆ 3. ಯಮದೂತ 4. ಜಾತಕ 8. ರಣಹೇಡಿ 9. ರಜಕ 10. ಅಂತರಾಳ 11. ಕವಣೆ 16. ರಜತಾದ್ರಿ 17. ಕಂಪನ 19. ವನಜ 20. ಕಾರುಣ್ಯ

**ಎಡದಿಂದ ಬಲಕ್ಕೆ**
2. ಅರ್ಜುನ 5. ಲಹರಿ 6. ಸಮರ್ಪಕ 7. ಕೆರಳು 10. ಅಂತಕ 12. ಅಜ 13. ಹೇಮಂತ 14. ವಕ್ರ 15. ಕರಡಿ 18. ಹೆಳವ 21. ಪರಿತಾಪ 22. ನಜರು 23. ಅನುಜ

# ಭಕ್ತಿ ಒಂದೇ ಅಲ್ಲ ದೇವರಲ್ಲಿ ನಂಬಿಕೆಯೂ ಬೇಕು

ಒಮ್ಮೆ ಶಿವ ಪಾರ್ವತಿಯರು ಹರಿದ್ವಾರದ ಆಕಾಶದಲ್ಲಿ ಸಂಚರಿಸುತ್ತಿದ್ದರು. ಕೆಳಗೆ ಪರಮ ಪಾವನೆ ಗಂಗಾ ನದಿಯಲ್ಲಿ ಮುಳುಗಿ ಸ್ನಾನ ಮಾಡಲು ಜನಸಾಗರವೇ ಹರಿದು ಬರುತ್ತಿತ್ತು. ಆಕಾಶಮಾರ್ಗದಲ್ಲಿ ವಿಹರಿಸುತ್ತಿದ್ದ ಪಾರ್ವತಿ ಇದನ್ನು ನೋಡಿದ ಅವಳಿಗೆ ಪಾಪನಾಶಿನಿ ಗಂಗೆಯಲ್ಲಿ ಸ್ನಾನ ಮಾಡಿದರು ಅವರು ಸಂತೋಷವಾಗಿಲ್ಲ ಏಕೆ ಹೀಗೆ ಎಂದು ಅವಳಿಗೆ ಆಶ್ಚರ್ಯವಾಯಿತು. ಅವಳು ಶಿವನಲ್ಲಿ ಕೇಳಿದಳು.

ಸ್ವಾಮಿ, ಜನರು ಪವಿತ್ರ ಗಂಗೆಯಲ್ಲಿ ಎಷ್ಟು ಸಲ ಸ್ನಾನ ಮಾಡಿದರೂ ಈ ಜನರ ದುಃಖ ಮತ್ತು ಪಾಪ ಏಕೆ ನಾಶವಾಗುತ್ತಿಲ್ಲ. ಇವರ ಪಾಪಗಳನ್ನು ನಾಶಪಡಿಸುವ ಶಕ್ತಿ ಗಂಗೆಯಲ್ಲಿ ಇಲ್ಲವೇ ಎಂದು ಕೇಳಿದಳು. ಶಿವನು ಪಾರ್ವತಿ ಈ ಪ್ರಶ್ನೆಗೆ ದೇವಿ, ''ಗಂಗೆಗೆ ಜನಗಳ ಪಾಪ ತೊಳೆಯುವ ಸಾಮರ್ಥ್ಯವಿದೆ. ಆದರೆ ಈ ಜನರು ಪವಿತ್ರ ಗಂಗೆಯಲ್ಲಿ ಸ್ನಾನ ಮಾಡದೆ ಬರೀ ನೀರಿನಲ್ಲಿ ಮುಳುಗೇಳುತ್ತಿದ್ದಾರೆ. ಹೀಗಿರುವಾಗ ಪಾಪ ಹೇಗೆ ನಾಶವಾಗುತ್ತದೆ?'' ಎಂದು ಹೇಳುತ್ತಾ ಇದನ್ನು ನಿನಗೆ ನಾಳೆ ನಿರೂಪಿಸುತ್ತೇನೆ ಎಂದನು.

ಮರುದಿನ ಪರಮೇಶ್ವರನು ತನ್ನ ಲೀಲೆಯಿಂದ ವೃದ್ಧ ಬ್ರಾಹ್ಮಣನಾದನು. ಮೈ ಕೈ ನಡುಗುತ್ತಿದೆ ಹಣ್ಣು ಹಣ್ಣು ಮುದುಕ, ಬಂದವನೇ ಗಂಗೆಯಲ್ಲಿ ಸ್ನಾನಕ್ಕೆ ಇಳಿದು ವಾಲಾಡುತ್ತಾ ಎದುಸಿರು ಬಿಡುತ್ತಾ ಎದ್ದು ಬಿದ್ದು ಒದ್ದಾಡುತ್ತಿದ್ದವನು ಒಮ್ಮೆ ನದಿಯ ಒಂದು ಗುಂಡಿ ಜಾಗದಲ್ಲಿ ಬಿದ್ದನು. ಆ ಗುಂಡಿಯಿಂದ ಕಾಲು ಎತ್ತಲು ಅವನಿಂದ ಆಗಲಿಲ್ಲ. ಪಾರ್ವತಿಯನ್ನು ಕೂಗಿ, ಯಾರನ್ನಾದರೂ ಸಹಾಯಕ್ಕೆ ಕರಿ ಎಂದ. ವಯಸ್ಸಾದ ಮುತ್ತೈದೆಯ ರೂಪದಲ್ಲಿದ್ದ ಪಾರ್ವತಿ ದೀನಳಾಗಿ ಅಲ್ಲಿರುವ ಜನರನ್ನು ಕೂಗಿದಳು.

ಅವಳ ಕೂಗು ಕೇಳಿ ಒಂದಷ್ಟು ಜನ ದಾವಿಸಿ ಬಂದು ಮುದುಕನನ್ನು ಎತ್ತಿ ತರಲು ಹೊರಟರು. ಆಗ ಪಾರ್ವತಿ ಅವರನ್ನು ತಡೆದು,ನೋಡಿ 'ನನ್ನ ಪತಿ ಯಾವುದೇ ಪಾಪ ಕಾರ್ಯ ಮಾಡದ ಮಹಾ ಪುಣ್ಯವಂತನಾಗಿದ್ದಾನೆ. ಅವರನ್ನು ಮುಟ್ಟುವವರು ಪಾಪರಹಿತರಾಗಿರಬೇಕು. ಇಲ್ಲದಿದ್ದರೆ ಅವರನ್ನು ಮುಟ್ಟುತ್ತಲೇ ಭಸ್ಮವಾಗುವರು' ಎಂದಾಗ ಬಂದ ಜನ ಹೆದರಿ ಹಿಂದೆ ಸರಿದರು ಏಕೆಂದರೆ ಅವರ್ಯಾರಿಗೂ ಸಾಯಲು ಇಷ್ಟವಿರಲಿಲ್ಲ.

ಶಿವ ಪಾರ್ವತಿಗೆ ಹೇಳಿದ, ನೋಡಿದೆಯಾ? ದೇವಿ ಯಾರೊಬ್ಬರೂ ಮೇಲೆ ಎತ್ತಲು ಬರಲಿಲ್ಲ. ಅವರಲ್ಲಿ ಒಬ್ಬನಿಗಾದರೂ ಗಂಗೆ ಪಾಪನಾಶಿನಿ ಎಂಬ ನಂಬಿಕೆ ಇರಲಿಲ್ಲ, ನಂಬಿಕೆ ಇದ್ದವರು ನನ್ನನ್ನು ಮೇಲೆತ್ತಲು ಬಂದರೆ, ಎನ್ನುತ್ತಿದ್ದಂತೆ ಒಬ್ಬ ಯುವಕ ಮುದುಕನನ್ನು ಮೇಲೆತ್ತಲು ಬಂದಾಗ, ಪಾರ್ವತಿ ಅವನನ್ನು ತಡೆದು, ಆತನಿಗೂ ನಿಬಂಧನೆ ಹೇಳಿದಳು. ಆದರೆ ಯುವಕ ದೃಢ ನಿಶ್ಚಯದಿಂದ ಪಾರ್ವತಿಗೆ ಹೇಳಿದ. ಅಮ್ಮಾ, ನಾನೂ ಪಾಪ ಕಾರ್ಯ ಮಾಡಿರುವೆ ಎಂಬ ಸಂದೇಹ ನಿಮಗೆ ಬಂದಿದೆ. ನಾನು ಅರಿವಿದ್ದು ಅರಿವಿಲ್ಲದೆಯೋ ಪಾಪ ಕಾರ್ಯ ಮಾಡಿದ್ದೇನೆ. ಆದರೂ ಹೇಳುತ್ತೇನೆ ನೀವೇ ನೋಡಿದಂತೆ ನಾನು ಇದೇ ಈಗ ತಾನೇ ಶುದ್ಧ ಮನಸ್ಸಿನಿಂದ ಗಂಗೆಯಲ್ಲಿ ಸ್ನಾನ ಮಾಡಿ ಮಡಿಬಟ್ಟೆ ಉಟ್ಟು ಬಂದಿದ್ದೇನೆ. ಇಂಥ ಪವಿತ್ರ ಪಾಪನಾಶಿನಿ ಗಂಗೆಯಲ್ಲಿ ಮುಳುಗಿ ಸ್ನಾನ ಮಾಡಿದ ಮೇಲೆ ಇನ್ನು ನನ್ನ ಪಾಪ ಕರ್ಮಗಳು ಉಳಿಯಲು ಹೇಗೆ ಸಾಧ್ಯ? ನೀವು ಹೆದರಬೇಡಿ ನಾನು ನೀರಿನ ಕೊಂಡದಲ್ಲಿ ಸಿಕ್ಕಿಕೊಂಡಿರುವ ನಿಮ್ಮ ಪತಿಯನ್ನು ಮೇಲಕ್ಕೆತ್ತಿ ತರುತ್ತೇನೆ ಎಂದು ಪಾರ್ವತಿಗೆ ಹೇಳಿ ನದಿಗೆ ಇಳಿದು ಆಕೆಯ ಪತಿಯನ್ನು ಹೊಂಡದಿಂದ ಮೇಲೆತ್ತಿ ದಡಕ್ಕೆ ತಂದನು.

ಎಲ್ಲಕ್ಕಿಂತ ನಂಬಿಕೆ ಮುಖ್ಯ ಗಂಗೆಯಲ್ಲಿ ಪುಣ್ಯ ಸ್ನಾನ ಮಾಡಿದರೆ ಪಾಪ ಪರಿಹಾರವಾಗುತ್ತದೆ ಎನ್ನುವ ನಂಬಿಕೆ ಮೊದಲು ಭಕ್ತರಿಗೆ ಇರಬೇಕು. ದಾನ, ಭಗವಂತನ ನಾಮಸ್ಮರಣೆ, ಪೂಜೆ, ಭಜನೆ ಏನೇ ಮಾಡಿದರೂ ಪಾಪ ಕಳೆದು ಕಿಂಚಿತ್ ಪುಣ್ಯದ ಫಲ ಅವಶ್ಯವಾಗಿ ಸಿಗುತ್ತದೆ ಎಂದು ಈಶ್ವರ. ನಿಜವೇ ಅಲ್ಲವೇ ಈ ಮಾತು ನಮ್ಮೆಲ್ಲರಿಗೂ ಅನ್ವಯಿಸುತ್ತದೆ

**ಒಂದೊಳ್ಳೆ ಮಾತು**

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

# ಅತಿಯಾದದ್ದನ್ನು ದೂರವಿಡಿ

ಬಂಗಾರ, ಕಲ್ಲು ಹಾಗೂ ಮಣ್ಣುಗಳನ್ನು ಒಂದೇ ಸಮಾನ ವಾಗಿ ಕಾಣುವಂತೆ ಕೃಷ್ಣ ತಿಳಿಸಿದ್ದಾನೆ. ಮುಂದುವರೆದು ಅವನು ಹೇಳುತ್ತಾನೆ -ಯಾರು ಪೋಷಕರನ್ನು, ಅಪರಿಚಿತರನ್ನು, ಸಂಬಂಧಿಗಳನ್ನು, ಮಿತ್ರರನ್ನು, ಶತ್ರುಗಳನ್ನು, ಧ್ಯಾನಿಗಳನ್ನು, ಹಗೆತನ ಇದ್ದವರನ್ನು, ಧಾರ್ಮಿಕರನ್ನು, ಮತ್ತು ದಿವ್ಯತೆ ಇಲ್ಲದವರನ್ನು ಒಂದೇ ರೀತಿ ಕಾಣುತ್ತಾರೋ ಅವರು ಉತ್ತಮರು.(6.9)

ಕೃಷ್ಣ ವಸ್ತುಗಳೊಂದಿಗೆ ಪ್ರಾರಂಭಿಸಿ ಅವುಗಳನ್ನು ಸಮಾನತೆಯಿಂದ ನೋಡಿಕೊಳ್ಳುವಂತೆ ಸೂಚಿಸಿದ್ದಾನೆ. ನಂತರ ಅವನು ಮುಂದುವರೆದು ಜನರ ಬಗ್ಗೆ ಹೇಳುತ್ತಾ ಮಿತ್ರರು, ಶತ್ರುಗಳು, ಸಜ್ಜನರು ಹಾಗೂ ದುರ್ಜನರನ್ನು ಹಾಗೂ ಅಪರಿಚಿತರನ್ನು ಮತ್ತು ಸಂಬಂಧಿಗಳನ್ನು ಸಮಾನವಾಗಿ ಕಾಣುವಂತೆ ತಿಳಿಸುತ್ತಾನೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ಇವೆಲ್ಲವುಗಳ ಹಣೆಪಟ್ಟಿಯನ್ನು ನಮ್ಮ ಸುತ್ತಲಿನ ಜನರಿಗೆ ನಾವು ಕೊಡುತ್ತೇವೆ ಹಾಗೂ ಈ ಹಣೆ ಪಟ್ಟಿಯ ಆಧಾರದ ಮೇಲೆ ನಾವು ಅವರೊಂದಿಗೆ ನಡೆದುಕೊಳ್ಳುತ್ತೇವೆ. ಆಸಕ್ತಿದಾಯಕ ವಿಷಯವೆಂದರೆ ನಮಗೆ ಮಿತ್ರನಾದವನು ಇನ್ನೊಬ್ಬನಿಗೆ ಶತ್ರು ಆಗಿರಬಹುದು ಹಾಗೂ ಇವತ್ತಿನ ನಮ್ಮ ಗೆಳೆಯ ನಾಳೆ ನಮ್ಮ ಶತ್ರುವಾಗಬಹುದು ಇದರ ಅರ್ಥವೆಂದರೆ ನಾವು ಹೀಗೆ ಹಣೆಪಟ್ಟಿ ಮಾಡಿದ್ದು ಸಂದರ್ಭಗಳ ಆಧಾರದ ಮೇಲೆ ಅಥವಾ ಪೂರ್ವಗ್ರಹ ಪೀಡಿತರಾಗಿ. ಆದ್ದರಿಂದ ಈ ಹಣೆ ಪಟ್ಟಿಯನ್ನು ಬಿಟ್ಟು ಅವನ್ನು ಸಮದೃಷ್ಟಿಯಿಂದ ನೋಡುವಂತೆ ಕೃಷ್ಣ ತಿಳಿಸುತ್ತಾನೆ.ಈ ವಿಷಯದಲ್ಲಿ ಒಂದು ಸೂಕ್ಷ್ಮ ವಿಚಾರವೆಂದರೆ ಸಂಬಂಧ ಹಾಗೂ ಜನರನ್ನು ಖಾದ್ಯ ವಸ್ತುಗಳಂತೆ ನೋಡ ಬಾರದು. ಜನರು ತನಗೆ ಕೊಡಬೇಕಾದ ಗೌರವವನ್ನು ಕೊಡಲಿಲ್ಲವೆಂದು ಅವರೊಂದಿಗಿನ ತನ್ನ ಕಹಿಯನ್ನು ವ್ಯಕ್ತಪಡಿಸಿ ಸಂಬಂಧವನ್ನು ಮುರಿದುಕೊಂಡವನು ಮಾಡುವ ಈ ಆಕ್ಷೇಪಣೆಯನ್ನು ನಾವು ಕೇಳುತ್ತಿರುತ್ತೇವೆ.

ಕೊನೆಯದಾಗಿ ಕೃಷ್ಣ ಹೇಳುತ್ತಾನೆ- ಯಾರು ಅತಿಯಾಗಿ ತಿನ್ನುತ್ತಾರೋ ಅಥವಾ ಏನನ್ನೂ ತಿನ್ನುವುದಿಲ್ಲವೋ ಹಾಗೂ ಯಾರು ಅತಿಯಾಗಿ ನಿದ್ರಿಸುತ್ತಾರೋ ಅಥವಾ ನಿದ್ದೆಯನ್ನೇ ಮಾಡುವುದಿಲ್ಲವೋ ಅವರಿಗೆ ಯೋಗಾಭ್ಯಾಸ ಇರುವುದಿಲ್ಲ. (6.16) ಇಲ್ಲಿ ತಿನ್ನುವದು ಇಂದ್ರಿಯಗಳ ರೀತಿಯನ್ನು ಸೂಚಿಸುತ್ತದೆ. ಸ್ಥೂಲಕಾಯ ಹಾಗೂ ಭಾವನಾತ್ಮಕ ವಿಷಯದಲ್ಲಿ ಹೇಳುವುದಾದರೆ ನಾವು ದೇಹದ ಅವಶ್ಯಕತೆಗೆ ತಕ್ಕಂತೆ ತಿನ್ನದೆ ಮನಸ್ಸು ಮತ್ತು ನಾಲಿಗೆಯನ್ನು ಸಂತೃಪ್ತಿಗೊಳಿಸಲು ತಿನ್ನುತ್ತಿದ್ದೇವೆ ಎಂಬುದು ಸ್ಥಾಪಿತ ಸಿದ್ಧಾಂತ ಇದು ಆರೋಗ್ಯವನ್ನು ದುರ್ಬಲ ಗೊಳಿಸುತ್ತದೆ. ನಮ್ಮ ನಿಂದನಾತ್ಮಕ ಮಾತು ಮತ್ತು ಇತರ ಇಂದ್ರಿಯಗಳ ಅತಿಯಾದ ಉಪಯೋಗಗಳಿಗೂ ಇದೇ ಮಾತು ಅನ್ವಯವಾಗುತ್ತದೆ. ಇದು ದುಃಖಕ್ಕೆ ಕಾರಣವಾಗುತ್ತದೆ. ಆದ್ದರಿಂದಲೇ ಇಂದ್ರಿಯಗಳ ಉಪಯೋಗದಲ್ಲಿ ಸಮತೋಲನ ಇರಬೇಕೆಂದು ಕೃಷ್ಣ ಹೇಳುತ್ತಾನೆ.

**ನಿತ್ಯಜೀವನದಲ್ಲಿ ಭಗವದ್ಗೀತೆ**

ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

## ಅಂಕ ಪಟ್ಟಿ

| | ಪಂದ್ಯ | ಗೆಲುವು | ಸೋಲು | ಅಂಕ |
|---|---|---|---|---|
| ಗುಜರಾತ್ | 06 | 04 | 02 | 08 |
| ಡೆಲ್ಲಿ | 05 | 04 | 01 | 08 |
| ಬೆಂಗಳೂರು | 06 | 04 | 02 | 08 |
| ಲಖನೌ | 06 | 04 | 02 | 08 |
| ಕೋಲ್ಕತ್ತಾ | 06 | 03 | 03 | 06 |
| ಪಂಜಾಬ್ | 05 | 03 | 02 | 06 |
| ಮುಂಬೈ | 06 | 02 | 04 | 04 |
| ರಾಜಸ್ಥಾನ್ | 06 | 02 | 04 | 04 |
| ಹೈದರಾಬಾದ್ | 06 | 02 | 04 | 04 |
| ಚೆನ್ನೈ | 06 | 01 | 05 | 02 |

## ಗಂಗೂಲಿ ಐಸಿಸಿ ಪುರುಷರ ಕ್ರಿಕೆಟ್ ಸಮಿತಿ ಮುಖ್ಯಸ್ಥ

ಭಾರತ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ (ಐಸಿಸಿ) ಪುರುಷರ ಕ್ರಿಕೆಟ್ ಸಮಿತಿ ಮುಖ್ಯಸ್ಥರಾಗಿ ಪುನರಾಯ್ಕೆಯಾಗಿದ್ದಾರೆ. ರಾಷ್ಟ್ರೀಯ ತಂಡದಲ್ಲಿ ಅವರ ಸಹ ಆಟಗಾರನಾಗಿದ್ದ ವಿವಿಎಸ್ ಲಕ್ಷ್ಮಣ್ ಅವರೂ ಸಮಿತಿಯಲ್ಲಿ ಮತ್ತೆ ಸ್ಥಾನ ಪಡೆದಿದ್ದಾರೆ. 2000ರಿಂದ 2005ರ ವರೆಗೆ ಭಾರತ ಕ್ರಿಕೆಟ್ ತಂಡವನ್ನು ಮುನ್ನಡೆಸಿದ್ದ ಗಂಗೂಲಿ, 2021ರಲ್ಲಿ ಸ್ಪಿನ್ ದಿಗ್ಗಜ ಅನಿಲ್ ಕುಂಬ್ಳೆ ಅವರಿಂದ ತೆರವಾದ ಐಸಿಸಿ ಕ್ರಿಕೆಟ್ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಮೊದಲ ಬಾರಿ ನೇಮಕಗೊಂಡಿದ್ದರು.

## ಹೈದರಾಬಾದ್ ಆಟಗಾರರ ಹೋಟೆಲ್‌ನಲ್ಲಿ ಅಗ್ನಿ ಅವಘಡ

**ಹೈದರಾಬಾದ್:** ಐಪಿಎಲ್ ಕ್ರಿಕೆಟ್ ತಂಡವಾದ ಸನ್ ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ತಂಡದ ಆಟಗಾರರು ಉಳಿದುಕೊಂಡಿದ್ದ ಹೈದರಾಬಾದ್‌ನ ಬಂಜಾರಾ ಹಿಲ್ಸ್‌ನ ಖಾಸಗಿ ಐಷಾರಾಮಿ ಹೋಟೆಲ್‌ನಲ್ಲಿ ಅಗ್ನಿ ಆಕಸ್ಮಿಕ ಸಂಭವಿಸಿರುವ ಘಟನೆ ಇಂದು ನಡೆದಿದೆ. ಅದೃಷ್ಟವಶಾತ್ ಈ ಘಟನೆಯಲ್ಲಿ ಯಾವುದೇ ಆಟಗಾರರಿಗೆ ಹಾನಿಯಾಗಿಲ್ಲ ಎಂದು ಬಂಜಾರಾ ಹಿಲ್ಸ್ ಪೊಲೀಸ್ ಠಾಣೆಯ ಅಧಿಕಾರಿಗಳು ತಿಳಿಸಿದ್ದಾರೆ. ಹೋಟೆಲ್ ಸ್ಪಾ ಒಳಗಿನ ಸ್ಟೀಮ್ ರೂಂನಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಅಗ್ನಿ ಆಕಸ್ಮಿಕ ಸಂಭವಿಸಿತ್ತು. ಸುದ್ದಿ ತಿಳಿದ ಕೂಡಲೇ ಅಗ್ನಿಶಾಮಕ ತಂಡ ಸ್ಥಳಕ್ಕೆ ದೌಡಾಯಿಸಿ ಬೆಂಕಿ ನಂದಿಸುವಲ್ಲಿ ಸಫಲವಾಗಿದೆ ಎಂದು ಅವರು ಹೇಳಿದ್ದಾರೆ. ಬೆಂಕಿ ಅವಘಡ ಉಂಟಾದ ವೇಳೆ ಸ್ಪಾ ಒಳಗೆ ಎಸ್‌ಆರ್‌ಎಚ್‌ನ ಯಾವುದೇ ಆಟಗಾರರು ಇರಲಿಲ್ಲ ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿರುವುದಾಗಿ ಅವರು ಹೇಳಿದ್ದಾರೆ.

## ಎಜಿಲಿಟಾಸ್‌ನಲ್ಲಿ ವಿರಾಟ್ ಹೂಡಿಕೆ

**ದೆಹಲಿ:** ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರು ಕ್ರೀಡಾ ಉಡುಪುಗಳ ಉತ್ಪಾದಕರಾದ 'ಎಜಿಲಿಟಾಸ್' ಕಂಪೆನಿಯಲ್ಲಿ ಹೂಡಿಕೆ ಮಾಡಿದ್ದಾರೆ, ಜೊತೆಗೆ ಕೋ ಕ್ರಿಯೇಟರ್ ಕೂಡ ಆಗಿದ್ದಾರೆ ಎಂದು ಉದ್ಯಮದ ಮೂಲಗಳು ತಿಳಿಸಿವೆ. ಕ್ರೀಡಾ ಉಡುಪು ತಯಾರಿಕಾ ಸಂಸ್ಥೆ 'ಪೂಮಾ'ದೊಂದಿಗೆ ವಿರಾಟ್ ಅವರು ಮಾಡಿಕೊಂಡಿದ್ದ ಎಂಟು ವರ್ಷಗಳ ಒಪ್ಪಂದ ಇತ್ತೀಚೆಗೆ ಕೊನೆಗೊಂಡಿತ್ತು. ಜರ್ಮನ್ ಮೂಲದ ಪೂಮಾ ಸಂಸ್ಥೆಗೆ ವಿರಾಟ್ ಪ್ರಚಾರ ರಾಯಭಾರಿಯಾಗಿದ್ದರು. ಒಪ್ಪಂದವನ್ನು ಮುಂದಿನ ಎಂಟು ವರ್ಷಗಳ ಅವಧಿಗೆ ಮುಂದುವರಿಸಲು ಕೊಹ್ಲಿ ಅವರಿಗೆ ಪೂಮಾ ಸಂಸ್ಥೆಯು ರು. 300 ಕೋಟಿ ನೀಡುವುದಾಗಿ ಪ್ರಸ್ತಾವ ಸಲ್ಲಿಸಿತ್ತು, ಆದರೆ ಕೊಹ್ಲಿ ಅವರು ಅದಕ್ಕೆ ಸಮ್ಮತಿಸಿರಲಿಲ್ಲ. ಎಜಿಲಿಟಾಸ್ ಸಂಸ್ಥೆಯಲ್ಲಿ ಹೂಡಿಕೆ ಮಾಡಿ ಪಾಲುದಾರರಾಗುವ ನಿರ್ಧಾರವನ್ನು ಕೊಹ್ಲಿ ಕೈಗೊಂಡಿದ್ದು, ಆ ಕುರಿತು ಮುಂದಿನ ಮೂರು ತಿಂಗಳೊಳಗೆ ಅವರು ಅಧಿಕೃತವಾಗಿ ಘೋಷಣೆ ಮಾಡುವ ಸಾಧ್ಯತೆ ಇದೆ. ಎಜಿಲಿಟಾಸ್ ಸಂಸ್ಥೆಯು 2023ರಲ್ಲಿ ಆರಂಭವಾಗಿತ್ತು.

## ಚೆನ್ನೈ ತಂಡಕ್ಕೆ ಆಯುಷ್?

**ಚೆನ್ನೈ:** ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ಪ್ರದರ್ಶನ ಅತ್ಯಂತ ಹೀನಾಯವಾಗಿದೆ. ಇದರ ನಡುವೆ ಕಳೆದ ವಾರ ಚೆನ್ನೈ ತಂಡದ ನಾಯಕ ಋತುರಾಜ್ ಗಾಯಕ್ವಾಡ್ ಟೂರ್ನಿಯ ಇನ್ನುಳಿದ ಭಾಗದಿಂದ ಹೊರ ನಡೆದಿದ್ದು, ಟೂರ್ನಿಯ ಇನ್ನುಳಿದ ಭಾಗದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎಂಎಸ್ ಧೋನಿ ಮುನ್ನಡೆಸುತ್ತಿದ್ದಾರೆ. ಗಾಯಕ್ವಾಡ್ ಅವರ ಸ್ಥಾನಕ್ಕೆ ಹೊಸ ಆಟಗಾರನನ್ನು ಕರೆತರಲು ಚೆನ್ನೈ ಫ್ರಾಂಚೈಸಿ ಎದುರು ನೋಡುತ್ತಿದ್ದು, ಅದರಂತೆ ಮುಂಬೈನ ಯುವ ಬ್ಯಾಟ್ಸ್‌ಮನ್ ಆಯುಷ್ ಮ್ಹಾತ್ರೆ ಸಿಎಸ್‌ಕೆ ತಂಡವನ್ನು ಸೇರ್ಪಡೆಯಾಗಲಿದ್ದಾರೆಂದು ವರದಿಯಾಗಿದೆ. ಮುಂಬೈನ ಯುವ ಬ್ಯಾಟ್ಸ್‌ಮನ್ ಆಯುಷ್ ಮ್ಹಾತ್ರೆಗೆ ಸಿಎಸ್‌ಕೆ ಅವಕಾಶ ನೀಡಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದೆ. 2024-25ರ ಸಾಲಿನಲ್ಲಿ ದೇಶಿ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಆಯುಷ್ ಮ್ಹಾತ್ರೆ, ಮುಂಬೈ ಪರ 7 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದು, 504 ರನ್‌ಗಳನ್ನು ದಾಖಲಿಸಿದ್ದಾರೆ. 7 ಲಿಸ್ಟ್-ಎ ಪಂದ್ಯಗಳಿಂದ 4458 ರನ್‌ಗಳನ್ನು ಗಳಿಸಿದ್ದರೂ, ದೇಶಿ ಕ್ರಿಕೆಟ್‌ನಲ್ಲಿ ಇನ್ನೂ ಟಿ20 ಪಂದ್ಯವನ್ನು ಆಡಿಲ್ಲ.

## ಐಪಿಎಲ್ ಟೂರ್ನಿಯಿಂದ ಲಾಕಿ ಫರ್ಗ್ಯೂಸನ್ ಔಟ್

**ದೆಹಲಿ:** ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಗಾಯಕ್ಕೆ ತುತ್ತಾಗಿದ್ದ ಪಂಜಾಬ್ ಕಿಂಗ್ಸ್ ವೇಗಿ ಲಾಕಿ ಫರ್ಗ್ಯೂಸನ್ ಅವರು ಇದೀಗ ನಡೆಯುತ್ತಿರುವ ಐಪಿಎಲ್ ಟೂರ್ನಿಯ ಇನ್ನುಳಿದ ಭಾಗದಿಂದ ಹೊರ ನಡೆದಿದ್ದಾರೆಂದು ಪಂಜಾಬ್ ಫಾಸ್ಟ್ ಬೌಲಿಂಗ್ ಕೋಚ್ ಜೇಮ್ಸ್ ಹೋಪ್ಸ್ ಮಾಹಿತಿ ನೀಡಿದ್ದಾರೆ. ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಫರ್ಗ್ಯೂಸನ್ ಅವರು ಕೇವಲ ಎರಡು ಎಸೆತಗಳನ್ನು ಮಾತ್ರ ಎಸೆದಿದ್ದರು. ಗಾಯವಾದ ಕಾರಣ ಅವರು ತಮ್ಮ ನಾಲ್ಕು ಓವರ್‌ಗಳನ್ನು ಪೂರ್ಣಗೊಳಿಸಲು ಸಾಧ್ಯವಾಗದೆ ಮೈದಾನವನ್ನು ತೊರೆದಿದ್ದರು. ಈ ಹಿನ್ನೆಲೆಯಲ್ಲಿ ಪ್ರಸಕ್ತ ಟೂರ್ನಿಯಲ್ಲಿ ಅತ್ಯುತ್ತಮ ಆರಂಭ ಕಂಡಿರುವ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್‌ಗೆ ಆಘಾತವಾಗಿದೆ. ಲಾಕಿ ಫರ್ಗ್ಯೂಸನ್ ಅವರು ಟೂರ್ನಿಯ ಕೊನೆಯ ಹಂತದಲ್ಲಿ ತಂಡಕ್ಕೆ ಲಭ್ಯರಾಗುವುದು ಬಹುತೇಕ ಅನುಮಾನವಾಗಿದೆ. ಅವರು ದೊಡ್ಡ ಗಾಯದಿಂದ ಬಳಲುತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ ಎಂದು ಪಂಜಾಬ್ ಕಿಂಗ್ಸ್ ವೇಗದ ಬೌಲಿಂಗ್ ಕೋಚ್ ಹೋಪ್ಸ್ ಪ್ರತಿಕ್ರಿಯಿಸಿದ್ದಾರೆ.

15-04-2025, ಮಂಗಳವಾರ
vishwavani.news

### ಇಂದಿನ ಪಂದ್ಯ

7.30 PM

ಪಂಜಾಬ್ ಕಿಂಗ್ಸ್
Vs
ಕೋಲ್ಕತ್ತಾ ನೈಟ್‌ರೈಡರ್ಸ್

ಪಿಸಿಎ ಸ್ಟೇಡಿಯಂ
ನ್ಯೂ ಚಂಡೀಗಢ

## ಅಕ್ಷರ್ ಪಟೇಲ್‌ಗೆ ದಂಡ

**ದೆಹಲಿ:** ಮುಂಬೈ ಇಂಡಿಯನ್ಸ್ ವಿರುದ್ಧದ ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ನಿಧಾನಗತಿಯ ಬೌಲಿಂಗ್ ಕಾರಣ, ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಅಕ್ಷರ್ ಪಟೇಲ್‌ಗೆ 12 ಲಕ್ಷ ರು.ದಂಡವನ್ನು ವಿಧಿಸಲಾಗಿದೆ, ಆ ಮೂಲಕ ಹದಿನೆಂಟನೇ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ ನಿಧಾನಗತಿಯ ಓವರ್ ಪ್ರಮಾದವೆಸಗಿದ ಆರನೇ ನಾಯಕ ಅಕ್ಷರ್ ಪಟೇಲ್ ಆಗಿದ್ದಾರೆ. ಪ್ರಸಕ್ತ ಆವೃತ್ತಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಅಕ್ಷರ್ ಪಟೇಲ್ ಪಾಲಿಗೆ ಮೊದಲ ನಿಧಾನಗತಿಯ ಓವರ್ ಪ್ರಮಾದ ಇದಾಗಿದೆ. ನಿಧಾನಗತಿಯ ಬೌಲಿಂಗ್ ಪ್ರಮಾದವನ್ನು ಸತತವಾಗಿ ಎಸಗಿದ ನಾಯಕರನ್ನು ಬ್ಯಾನ್ ಮಾಡುವ ನಿಯಮವನ್ನು ಪ್ರಸಕ್ತ ಆವೃತ್ತಿಯಲ್ಲಿ ಬಿಸಿಸಿಐ ತೆಗೆದು ಹಾಕಿದೆ. ಕಳೆದ ಆವೃತ್ತಿಯವರೆಗೂ ಮೂರು ಬಾರಿ ತಂಡದ ನಾಯಕ ನಿಧಾನಗತಿಯ ಓವರ್ ರೇಟ್ ಪ್ರಮಾದವೆಸಗಿದರೆ, ಅಂತಹ ನಾಯಕರನ್ನು ಒಂದು ಪಂದ್ಯಕ್ಕೆ ಬ್ಯಾನ್ ಮಾಡಲಾಗುತ್ತದೆ. ಐಪಿಎಲ್‌ನ ನೀತಿ ಸಂಹಿತೆಯ ಆರ್ಟಿಕಲ್ 2.22ರ ಅಡಿಯಲ್ಲಿ ಕನಿಷ್ಠ ಓವರ್-ರೇಟ್ ಅಪರಾಧಗಳಿಗೆ ಸಂಬಂಧಿಸಿದಂತೆ, ಇದು ಅಕ್ಷರ್ ಪಟೇಲ್‌ರವರ ಈ ಋತುವಿನ ಮೊದಲ ಅಪರಾಧವಾಗಿರುವುದರಿಂದ ದಂಡವನ್ನು ಮಾತ್ರ ವಿಧಿಸಲಾಗಿದೆ ಎಂದು ಬಿಸಿಸಿಐ ತನ್ನ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

### ಲಖನೌ ನಾಯಕ ರಿಷಭ್ ಪಂತ್ ಅರ್ಧಶತಕ | ಚೆನ್ನೈ ತಂಡದ ಶಿಸ್ತಿನ ದಾಳಿ

# ಚೆನ್ನೈಗೆ 167 ರನ್‌ಗಳ ಗುರಿ

**ಲಖನೌ:** ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ವಿರುದ್ಧ ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಕ್ರಿಕೆಟ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಸೂಪರ್ ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 166 ರನ್ ಗಳಿಸಿದೆ.

ಸತತ 5 ಸೋಲು ಕಂಡಿದ್ದ ಚೆನ್ನೈ ಸೂಪರ್ ಕಿಂಗ್ಸ್ ನಾಯಕ ಗೆಲ್ಲಲೇಬೇಕಾದ ಒತ್ತಡದಲ್ಲಿದ್ದು, ಇಂದು ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡರು. ಬ್ಯಾಟಿಂಗ್‌ಗೆ ಇಳಿದ ಲಖನೌ ತಂಡ ಆರಂಭದಲ್ಲೇ 2 ವಿಕೆಟ್ ಕಳೆದುಕೊಂಡಿರು. ಉತ್ತಮ ಫಾರ್ಮ್‌ನಲ್ಲಿದ್ದ ಐಡೆನ್ ಮಾರ್ಕ್ರಮ್ (6) ಹಾಗೂ ನಿಕೋಲಸ್ ಪೂರನ್ (8) ಕ್ರಮವಾಗಿ ಖಲೀಲ್ ಅಹ್ಮದ್ ಹಾಗೂ ಕಾಂಬೋಜ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು.

ಮಿಚೆಲ್ ಮಾರ್ಷ್ (30), ಬದೋನಿ (22), ಅಬ್ದುಲ್ ಸಮದ್ (20) ರನ್ ಗಳಿಸಿ ತಂಡದ ಮೊತ್ತವನ್ನು ಹೆಚ್ಚಿಸಿದರು. ನಂತರ ನಾಯಕ ರಿಷಭ್ ಪಂತ್ ಹಾಗೂ ಮಿಚೆಲ್ ಮಾರ್ಷ್ 33 ಎಸೆತಗಳಲ್ಲಿ 50 ರನ್‌ಗಳ ಜೊತೆಯಾಟ ನೀಡಿ ತಂಡಕ್ಕೆ ಚೇತರಿಕೆ ನೀಡಿದರು. ಇಂದು ತಮ್ಮ ನೈಜ ಆಟವನ್ನು ಆಡಲು ವಿಫಲರಾದ ಮಾರ್ಷ್ 25 ಎಸೆತಗಳಲ್ಲಿ 2 ಬೌಂಡರಿ, 2 ಸಿಕ್ಸರ್ ಸಹಿತ 30 ರನ್ ಗಳಿಸಿ ಜಡೇಜಾ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ನಂತರ ಬದೋನಿ ನಾಯಕನ ಜೊತೆ ಸೇರಿ 32 ರನ್ ಸೇರಿಸಿದರು. ಬದೋನಿ 17 ಎಸೆತಗಳಲ್ಲಿ 1 ಬೌಂಡರಿ, ಸಿಕ್ಸರ್ ಸಹಿತ 22 ರನ್‌ಗಳಿಗೆ ಸೀಮಿತವಾದರು.

**ಪಂತ್ ಆಕರ್ಷಕ ಬ್ಯಾಟಿಂಗ್:** 5ನೇ ವಿಕೆಟ್‌ಗೆ ಪಂತ್ ಜೊತೆಗೂಡಿದಿ ಅಬ್ದುಲ್ ಸಮದ್ 33 ಎಸೆತಗಳಲ್ಲಿ 53 ರನ್‌ಗಳ ಜೊತೆಯಾಟ ನೀಡಿ ತಂಡದ ಮೊತ್ತವನ್ನು ಹೆಚ್ಚಿಸಿದರು. ರಿಷಭ್ ಪಂತ್ 49 ಎಸೆತಗಳಲ್ಲಿ 4 ಬೌಂಡರಿ, 4 ಸಿಕ್ಸರ್‌ಗಳ ಸಹಿತ 63 ರನ್ ಗಳಿಸಿದರೆ, ಸಮದ್ 11 ಎಸೆತಗಳಲ್ಲಿ 2 ಸಿಕ್ಸರ್‌ಗಳ ಸಹಿತ 20 ರನ್ ಗಳಿಸಿ ಧೋನಿ ಹೊಡೆದ ಅದ್ಭುತ ರನೌಟ್‌ಗೆ ಬಲಿಯಾದರು.

ಚೆನ್ನೈ ಪರ ಅದ್ಭುತವಾಗಿ ಬೌಲಿಂಗ್ ಮಾಡಿದ ರವೀಂದ್ರ ಜಡೇಜಾ 24 ರನ್‌ಗಳನ್ನು ನೀಡಿ 2 ವಿಕೆಟ್ ಪಡೆದರೆ, ಅನ್ಶುಲ್ ಕಾಂಬೋಜ್ 20 ರನ್ ಕೊಟ್ಟು 1, ಖಲೀಲ್ ಅಹ್ಮದ್ 38 ರನ್ ನೀಡಿ 1, ಪತೀರಣ 45 ರನ್ ಕೊಟ್ಟು 2 ವಿಕೆಟ್ ಪಡೆದರು.

**ತಂಡದಲ್ಲಿ ಬದಲಾವಣೆ:** ಈ ಪಂದ್ಯದಲ್ಲಿ ಸಿಎಸ್‌ಕೆ ತಂಡದಲ್ಲಿ ಎರಡು ಬದಲಾವಣೆ ಮಾಡಲಾಗಿದ್ದು, ಲಖನೌ ಒಂದು ಬದಲಾವಣೆ ಮಾಡಿದೆ. ಸಿಎಸ್‌ಕೆ ತಂಡ ಆರ್. ಅಶ್ವಿನ್ ಮತ್ತು ಡೆವೊನ್ ಕಾನ್ವೇ ಅವರನ್ನು ಕೈಬಿಟ್ಟಿದೆ. ಅವರ ಸ್ಥಾನದಲ್ಲಿ ಜೇಮೀ ಓವರ್ಟನ್ ಮತ್ತು ಶೇಖ್ ರಶೀದ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ. ಲಖನೌ ತಂಡಕ್ಕೆ ಮಿಚೆಲ್ ಮಾರ್ಷ್ ಮರಳಿದ್ದಾರೆ.

### ಹೆಡ್ ಟು ಹೆಡ್ ದಾಖಲೆ

**ಎರಡೂ ತಂಡಗಳ ಹೆಡ್ ಟು ಹೆಡ್ ದಾಖಲೆಯ ನೋಡುವುದಾದರೆ, 2022ರಿಂದ 2 ತಂಡಗಳು ಆಡಿರುವ 5 ಪಂದ್ಯಗಳಲ್ಲಿ ಕೇವಲ ಒಂದು ಪಂದ್ಯವನ್ನು ಮಾತ್ರ ಗೆದ್ದಿದೆ, ಆದರೆ ಲಖನೌ 3 ಪಂದ್ಯಗಳಲ್ಲಿ ಜಯ ಗಳಿಸಿದೆ. ಒಂದು ಪಂದ್ಯದಲ್ಲಿ ಫಲಿತಾಂಶ ಬಂದಿಲ್ಲ.**

## ಬುಮ್ರಾ ಹಾಗೂ ಕರುಣ್: ವೈರಲ್ ಆದ ವಾಗ್ಯುದ್ಧ

**ದೆಹಲಿ:** ರವಿವಾರ ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ದಿಲ್ಲಿ ಕ್ಯಾಪಿಟಲ್ಸ್ ಹಾಗೂ ಮುಂಬೈ ಇಂಡಿಯನ್ಸ್ ತಂಡಗಳ ನಡುವಿನ ಪಂದ್ಯದಲ್ಲಿ ದಿಲ್ಲಿ ಕ್ಯಾಪಿಟಲ್ಸ್ ತಂಡದ ಬ್ಯಾಟರ್ ಕರುಣ್ ನಾಯರ್ ರನ್‌ಗಾಗಿ ವಿಕೆಟ್‌ಗಳ ನಡುವೆ ಓಡುವಾಗ ಮುಂಬೈ ಇಂಡಿಯನ್ಸ್ ತಂಡದ ವೇಗಿ ಜಸ್ಪ್ರೀತ್ ಬುಮ್ರಾರಿಗೆ ಢಿಕ್ಕಿ ಹೊಡೆದ ಪರಿಣಾಮ ಅವರಿಬ್ಬರ ನಡುವೆ ಮಾತಿನ ಚಕಮಕಿ ಘಟನೆ ನಡೆಯಿತು.

ದಿಲ್ಲಿ ಕ್ಯಾಪಿಟಲ್ಸ್ ತಂಡದ ಬ್ಯಾಟರ್ ಕರುಣ್ ನಾಯರ್ ಕೇವಲ 40 ಬಾಲ್‌ಗಳಲ್ಲಿ ಆಕರ್ಷಕ 89 ರನ್ ಗಳಿಸಿದ್ದಾಗ ಈ ಘಟನೆ ನಡೆಯಿತು. ಈ ಮೊತ್ತದಲ್ಲಿ ಅವರು ಕೇವಲ 22 ಬಾಲ್‌ಗಳಲ್ಲಿ ಸಿಡಿಸಿದ ಅರ್ಧಶತಕವೂ ಸೇರಿತ್ತು

ಬುಮ್ರಾ ಎಸೆದ ಓವರ್ ವೇಳೆ ರನ್‌ಗಾಗಿ ಓಡುವಾಗ ಕರುಣ್ ನಾಯರ್, ಬುಮ್ರಾ ಅವರಿಗೆ ಢಿಕ್ಕಿ ಹೊಡೆದರು. ಇದರಿಂದ ಕೋಪಗೊಂಡಂತೆ ಕಂಡು ಬಂದ ಬುಮ್ರಾ, ಅವರೊಂದಿಗೆ ಮಾತಿನ ಚಕಮಕಿಗೆ ಇಳಿದರು. ನಂತರ, ಮಧ್ಯಪ್ರವೇಶಿಸಿದ ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಇಬ್ಬರನ್ನೂ ಸಮಾಧಾನಗೊಳಿಸಿದರು. ಈ ವೇಳೆ ಈ ಘಟನೆಯ ವೇಳೆ ಮೈದಾನದಲ್ಲಿದ್ದ ಮುಂಬೈ ಇಂಡಿಯನ್ಸ್ ತಂಡದ ಆಟಗಾರ ರೋಹಿತ್ ಶರ್ಮಾ ನೀಡಿದ ತಮಾಷೆಯ ಪ್ರತಿಕ್ರಿಯೆ ಕ್ರೀಡಾಂಗಣದಲ್ಲಿದ್ದ ಪ್ರೇಕ್ಷಕರನ್ನು ನಗೆಗಡಲಲ್ಲಿ ಮುಳುಗಿಸಿತು. ರೋಹಿತ್ ಶರ್ಮಾರ ಈ ತಮಾಷೆಯ ವರ್ತನೆ ಸಾಮಾಜಿಕ ಮಾಧ್ಯಮಗಳಲ್ಲೂ ವೈರಲ್ ಆಗಿದೆ.

## ಸೋಲುವ ಪಂದ್ಯದಲ್ಲಿ ಗೆಲುವು: ಕಾರಣ ತಿಳಿಸಿದ ಕರಣ್ ಶರ್ಮಾ

**ದೆಹಲಿ:** ದೆಹಲಿ ಮತ್ತು ಮುಂಬೈ ಇಂಡಿಯನ್ಸ್ ಪಂದ್ಯದ ಬಳಿಕ ಮಾತನಾಡಿದ ಮುಂಬೈ ಸ್ಪಿನ್ನರ್ ಕರಣ್ ಶರ್ಮಾ, ಒಂದು ಹಂತದಲ್ಲಿ ನಾವು ಓವರ್‌ಗೆ 10 ರಿಂದ 11 ರನ್‌ಗಳನ್ನು ನೀಡುತ್ತಿದ್ದೆವು. ಹಾಗಾಗಿ ಮಧ್ಯಮ ಓವರ್‌ಗಳಲ್ಲಿ ವಿಕೆಟ್‌ಗಳನ್ನು ಪಡೆಯುವುದು ನನ್ನ ಗುರಿಯಾಗಿತ್ತು. ದೆಹಲಿ ಬ್ಯಾಟ್ ಮಾಡುತ್ತಿದ್ದ ಹಾದಿ ಅತ್ಯುತ್ತಮವಾಗಿತ್ತು, ಹಾಗಾಗಿ ನಮಗೆ ಪ್ರತಿಯೊಂದು ವಿಕೆಟ್ ತುಂಬಾ ಮುಖ್ಯವಾಗಿತ್ತು. ಕರುಣ್ ನಾಯರ್ ವಿಕೆಟ್ ಒಪ್ಪಿಸಿದ್ದು ಟರ್ನಿಂಗ್ ಪಾಯಿಂಟ್. ಇದಾದ ಬಳಿಕ ನಾವು 2-3 ವಿಕೆಟ್‌ಗಳನ್ನು ಕಬಳಿಸಿದೆವು. ಇದು ಪಂದ್ಯದ ದಿಕ್ಕನ್ನು ಬದಲಿಸಿತು ಎಂದು ವಿವರಿಸಿದ್ದಾರೆ. ಲೆಗ್ ಸ್ಪಿನ್ನರ್ ಕರಣ್ ಶರ್ಮಾ ಅವರನ್ನು ಪಿಯೂಷ್ ಚಾವ್ಲಾ ಮುಕ್ತಕಂಠದಿಂದ ಗುಣಗಾನ ಮಾಡಿದ್ದಾರೆ. ಮುಂಬೈ ಇಂಡಿಯನ್ಸ್ ತಂಡದ ಗೆಲುವಿನ ಶ್ರೇಯಸ್ಸು ಕರಣ್ ಶರ್ಮಾಗೆ ಸಲ್ಲಬೇಕು ಏಕೆಂದರೆ 6-7 ಪಂದ್ಯಗಳ ಬಳಿಕ ತಂಡಕ್ಕೆ ಬಂದು ಈ ರೀತಿಯ ಪ್ರದರ್ಶನ ತೋರುವುದು ಸುಲಭವಲ್ಲ. ಅದರಲ್ಲಿಯೂ ಪಂದ್ಯದ ಅಮತಹ ಕಠಿಣ ಸನ್ನಿವೇಶದಲ್ಲಿ ಅವರು ಪ್ರತಿಕ್ರಿಯಿಸಿದ ರೀತಿ ಅದ್ಭುತವಾಗಿತ್ತು, ಎಂದು ಭಾರತದ ಮಾಜಿ ಸ್ಪಿನ್ನರ್ ಹೇಳಿದ್ದಾರೆ.

### ಕೆಕೆಆರ್-ಪಂಜಾಬ್ ಕಿಂಗ್ಸ್ ಪಂದ್ಯ
### ಚಂಡೀಗಢದಲ್ಲಿಂದು ಸಮಬಲರ ಹೋರಾಟ

# ಕೋಲ್ಕತ್ತಾ ಮಣಿಸಿ ಪಂಜಾಬ್ ಇಂದು ಕಿಂಗ್ ಆಗಲಿದೆಯೇ?

**ಪಂಜಾಬ್ ತಂಡ**
ಶ್ರೇಯಸ್ ಅಯ್ಯರ್ (ನಾಯಕ)
ಜಾಶ್ ಇಂಗ್ಲಿಸ್
ಪ್ರಭ್ಸಿಮ್ರಾನ್ ಸಿಂಗ್
ಗ್ಲೆನ್ ಮ್ಯಾಕ್ಸ್‌ವೆಲ್
ಎ. ಒಮರ್ಜಾಯ್
ಶಶಾಂಕ್ ಸಿಂಗ್
ನೆಹಾಲ್ ವಧೇರಾ
ಮಾರ್ಕೊ ಜೆನ್ಸನ್
ಹರಪ್ರೀತ್ ಬ್ರಾರ್
ಅರ್ಷದೀಪ್ ಸಿಂಗ್
ಯುಜ್ವೇಂದ್ರ ಚಹಲ್
ವಿ. ವಿಜಯ್ ಕುಮಾರ್
ವಿಷ್ಣು ವಿನೋದ್
ಪ್ರಿಯಾನ್ಸ್ ಆರ್ಯ



**ಕೋಲ್ಕತ್ತಾ ತಂಡ**
ಅಜಿಂಕ್ಯ ರಹಾನೆ(ನಾಯಕ)
ಕ್ವಿಂಟನ್ ಡಿ ಕಾಕ್
ವೆಂಕಟೇಶ್ ಅಯ್ಯರ್
ರಿಂಕು ಸಿಂಗ್
ಎ. ರಘುವಂಶಿ
ಸುನಿಲ್ ನರೈನ್
ಆ್ಯಂಡ್ರೆ ರಸೆಲ್
ರಮನ್‌ದೀಪ್ ಸಿಂಗ್
ಸ್ಪೆನ್ಸರ್ ಜಾನ್ಸನ್
ಹರ್ಷಿತ್ ರಾಣಾ
ವರುಣ್ ಚಕ್ರವರ್ತಿ
ಆರ್. ಪೊವೆಲ್
ಎಲ್. ಸಿಸೋಡಿಯಾ
ಮನೀಶ್ ಪಾಂಡೆ

**ಚಂಡೀಗಢ:** ಇಲ್ಲಿನ ಪಿಸಿಎ ಸ್ಟೇಡಿಯಂನಲ್ಲಿ ಮಂಗಳವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಪಂಜಾಬ್ ಕಿಂಗ್ಸ್ ತಂಡವು, ಕೋಲ್ಕತ್ತಾ ನೈಟ್‌ರೈಡರ್ಸ್ ತಂಡವನ್ನು ಎದುರಿಸಲಿದೆ. ಈಗಾಗಲೇ 5 ಪಂದ್ಯಗಳನ್ನು ಆಡಿರುವ ಪಂಜಾಬ್ ತಂಡವು 6 ಅಂಕಗಳನ್ನು ಸಂಪಾದಿಸಿದ್ದು, 6 ಪಂದ್ಯಗಳನ್ನು ಆಡಿರುವ ಕೋಲ್ಕತ್ತಾ ತಂಡವು ಕೂಡಾ ಅಷ್ಟೇ ಅಂಕ ಸಂಪಾದಿಸಿದೆ.

ಮಾರ್ಚ್-25ರಂದು ನಡೆದ ಪಂದ್ಯದಲ್ಲಿ ಪಂಜಾಬ್ ತಂಡವು ಗುಜರಾತ್ ವಿರುದ್ಧ 11 ರನ್‌ಗಳ ರೋಮಾಂಚನಕಾರಿ ಜಯ ಸಾಧಿಸಿತು. ಏಪ್ರಿಲ್-1ರಂದು ನಡೆದ ಪಂದ್ಯದಲ್ಲಿ ಲಖನೌ ನೀಡಿದ 172 ರನ್‌ಗಳ ಗುರಿಯನ್ನು ಪಂಜಾಬ್ ತಂಡವು ಕೇವಲ 2 ವಿಕೆಟ್ ಕಳೆದುಕೊಂಡು ತಲುಪಿ, 8 ವಿಕೆಟ್‌ಗಳ ಗೆಲುವನ್ನು ತನ್ನದನ್ನಾಗಿಸಿತು.

ಏಪ್ರಿಲ್-5ರಂದು ಆಯೋಜನೆಗೊಂಡಿದ್ದ ಪಂದ್ಯದಲ್ಲಿ ರಾಜಸ್ಥಾನ ತಂಡವು ಪಂಜಾಬ್‌ಗೆ 206 ರನ್‌ಗಳ ಗೆಲುವಿನ ಗುರಿ ನೀಡಿದ ಕಾರಣ, ಪಂಜಾಬ್ 155 ರನ್ ಗಳಿಸಲಷ್ಟೇ ಶಕ್ತವಾಗಿ 50 ರನ್‌ಗಳ ಸೋಲನ್ನೊಪ್ಪಿಕೊಂಡಿತ್ತು. ಏಪ್ರಿಲ್-8ರಂದು ನಡೆದ ಪಂದ್ಯದಲ್ಲಿ ಚೆನ್ನೈ ವಿರುದ್ಧ ಕಾದಾಡಿದ್ದ ಪಂಜಾಬ್, 18 ರನ್‌ಗಳ ಗೆಲುವನ್ನು ಪಡೆದಿತ್ತು.

ಏಪ್ರಿಲ್-12ರಂದು ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ಪಂಜಾಬ್ 245 ರನ್ ಗಳಿಸಿದ್ದರೂ, ಆ ಗುರಿಯನ್ನು ಬೆಂಬತ್ತಿದ್ದ ಹೈದರಾಬಾದ್ ಕೇವಲ 2 ವಿಕೆಟ್ ಕಳೆದುಕೊಂಡು 8 ವಿಕೆಟ್‌ಗಳ ಅಂತರದಲ್ಲಿ ಪಂಜಾಬ್ ಅನ್ನು ಸೋಲಿಸಿತು.

ಪಂಜಾಬ್ ತಂಡವನ್ನು ಮಂಗಳವಾರ ಎದುರಿಸಲಿರುವ ಕೋಲ್ಕತ್ತಾ ತಂಡವು ಈ ಐಪಿಎಲ್ ಆವೃತ್ತಿಯಲ್ಲಿ 6 ಪಂದ್ಯಗಳನ್ನು ಆಡಿದೆ. ಮಾರ್ಚ್-28ರಂದು ಈಡೆನ್ ಗಾರ್ಡನ್‌ನಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು ಕೆಕೆಆರ್ ಅನ್ನು 7 ವಿಕೆಟ್‌ಗಳಿಂದ ಬಗ್ಗು ಬಡಿದಿತ್ತು.

ಮಾರ್ಚ್-26ರಂದು ನಡೆದ ಪಂದ್ಯದಲ್ಲಿ ಮತ್ತೆ ಪುಟಿದೆದ್ದಿದ್ದ ಕೋಲ್ಕತ್ತಾ ತಂಡವು ರಾಜಸ್ಥಾನವನ್ನು 8 ವಿಕೆಟ್‌ಗಳಿಂದ ಸೋಲಿಸಿ ಈ ಆವೃತಿಯ ಮೊದಲ ಗೆಲುವನ್ನು ದಾಖಲಿಸಿಕೊಂಡಿತ್ತು. ಮಾರ್ಚ್-3ರಂದು ನಡೆದಿದ್ದ ಪಂದ್ಯದಲ್ಲಿ ಕೆಕೆಆರ್ ಮುಂಬೈ ಎದುರು ಮುಗ್ಗರಿಸಿತು. ಮುಂಬೈ ಆ ಪಂದ್ಯದಲ್ಲಿ 8 ವಿಕೆಟ್‌ಗಳ ಭರ್ಜರಿ ಜಯ ಕಂಡಿತ್ತು.

ಏಪ್ರಿಲ್-3ರಂದು ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಕೆಕೆಆರ್ ತಂಡವು ನಿಗದಿತ ಓವರ್‌ಗಳಲ್ಲಿ 200 ರನ್ ಗಳಿಸಿತ್ತು. ಆ ಗುರಿ ಬೆಂಬತ್ತಿದ್ದ ಹೈದರಾಬಾದ್ ತಂಡವು 120 ರನ್‌ಗಳಿಗೆ ಆಲೌಟ್ ಆಗಿ 80 ರನ್‌ಗಳ ಭರ್ಜರಿ ಜಯ ಪಡೆಯಿತು. ಏಪ್ರಿಲ್-8ರಂದು ನಡೆದ ಪಂದ್ಯದಲ್ಲಿ ಲಖನೌ ತಂಡ 238 ರನ್ ಗಳಿಸಿತ್ತು, ಆದರೆ ಅದನ್ನು ಬೆಂಬತ್ತಿದ್ದ ಕೆಕೆಆರ್ 234 ರನ್ ಗಳಿಸ ಲಷ್ಟೇ ಶಕ್ತವಾಗಿ 4 ರನ್‌ಗಳ ಸೋಲನ್ನೊಪ್ಪಿತ್ತು. ಏಪ್ರಿಲ್-11ರಂದು ಆಯೋಜನೆಗೊಂಡಿದ್ದ ಪಂದ್ಯದಲ್ಲಿ ಚೆನ್ನೈ ಮೊದಲು ಬ್ಯಾಟಿಂಗ್ ಮಾಡಿ 103 ರನ್ ಗಳಿಸಿತ್ತು, ಕೆಕೆಆರ್ ಆ ಗುರಿ ಬೆಂಬತ್ತಿ 8 ವಿಕೆಟ್‌ಗಳ ಭರ್ಜರಿ ಜಯ ಪಡೆದಿತ್ತು. ಪಂಜಾಬ್ ಮತ್ತು ಕೋಲ್ಕತ್ತಾ ತಂಡಗಳು ಇದೀಗ ಅಂಕಪಟ್ಟಿಯಲ್ಲಿ ಸಮಬಲದಲ್ಲಿದ್ದರೂ, ಮಂಗಳವಾರದ ಪಂದ್ಯಕ್ಕೆ ಪಂಜಾಬ್ ತಂಡಕ್ಕೆ ತವರಿನಲ್ಲಿ ಹೆಚ್ಚಿನ ಪ್ರೇಕ್ಷಕರ ಬೆಂಬಲ ಸಿಗುವುದು ಖಚಿತ, ಹಾಗಾಗಿ ಕೋಲ್ಕತ್ತಾ ತಂಡಕ್ಕಿಂತ ಪಂಜಾಬ್ ತಂಡಕ್ಕೆ ಆತ್ಮವಿಶ್ವಾಸ ಹೆಚ್ಚುವುದು ಸಹಜ. ಏನೇ ಲೆಕ್ಕಾಚ್ಚಾರಗಳಿದ್ದರೂ ಪಂದ್ಯದ ಪಲಿತಾಂಶವು ಆಟಗಾರರ ಬ್ಯಾಟಿಂಗ್ ಮತ್ತು ಬೌಲರ್‌ಗಳ ಸಾಮರ್ಥ್ಯದ ಮೇಲೆ ನಿಂತಿರುವುದಂತೂ ಸ್ಪಷ್ಟ.

## ಪಾಕ್ ಲೀಗ್‌ಗೆ ಪ್ರೇಕ್ಷಕರ ಅಭಾವ

**ಕರಾಚಿ:** ಪಾಕಿಸ್ತಾನ ಸೂಪರ್ ಲೀಗ್‌ನ 10ನೇ ಆವೃತ್ತಿ ಪ್ರಾರಂಭವಾಗಿದ್ದು, ಎರಡು ದಿನಗಳಲ್ಲಿ 3 ಪಂದ್ಯಗಳು ನಡೆದಿವೆ. ಪಿಎಸ್‌ಎಲ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಿಶ್ವದ ಅತ್ಯಂತ ಜನಪ್ರಿಯ ಟಿ20 ಲೀಗ್ ಐಪಿಎಲ್ ನಡೆಯುತ್ತಿರುವ ಹೊತ್ತಲ್ಲೇ ಈ ಪಂದ್ಯಾವಳಿಯನ್ನು ಆಯೋಜಿಸಲಾಗುತ್ತಿದ್ದು, ಮತ್ತೊಮ್ಮೆ ಎರಡೂ ಲೀಗ್‌ಗಳ ನಡುವಿನ ಜನಪ್ರಿಯತೆಯ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುತ್ತಿದೆ. ಇದು ಕೇವಲ ಆಟ ಅಥವಾ ಲೀಗ್‌ಗೆ ಹರಿದುಬರುವ ಹಣದ ಕುರಿತಾದ ವಿಷಯ ಮಾತ್ರವಲ್ಲ, ಬದಲಿಗೆ ಪ್ರೇಕ್ಷಕರಿಲ್ಲದೆ ಪೆವಿಲಿಯನ್ ಬೀಕೋ ಎನ್ನುತ್ತಿದೆ ಎಂಬ ವರದಿ ಬರತೊಡಗಿದೆ.

ಮೊಹಮ್ಮದ್ ರಿಜ್ವಾನ್, ಡೇವಿಡ್ ವಾರ್ನರ್, ಹಸನ್ ಅಲಿ, ಟಿಮ್ ಸೀಫರ್ಟ್ ಮತ್ತು ಜೇಮ್ಸ್ ವಿನ್ಸ್‌ರಂತಹ ಅನೇಕ ಪಾಕಿಸ್ತಾನಿ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟಿಗರು ಇದ್ದರೂ, ಪಂದ್ಯವನ್ನು ವೀಕ್ಷಿಸಲು ಬಹಳ ಕಡಿಮೆ ಪ್ರೇಕ್ಷಕರು ಬರುತ್ತಿದ್ದಾರೆ. ಪಂದ್ಯಗಳಿಗಾಗಿ ಕ್ರೀಡಾಂಗಣಕ್ಕೆ ಬಂದಿದ್ದ ಪ್ರೇಕ್ಷಕರಿಗಿಂತ, ಹೆಚ್ಚಿನ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ. ಪಾಕಿಸ್ತಾನಿ ಪತ್ರಕರ್ತರೊಬ್ಬರು ಆ ಸತ್ಯವನ್ನು ಬಹಿರಂಗಪಡಿಸಿದ್ದು, ಪಂದ್ಯ ವೀಕ್ಷಿಸಲು ಕೇವಲ 5 ಸಾವಿರ ಪ್ರೇಕ್ಷಕರು ಮಾತ್ರ ಬಂದಿದ್ದರೆ, ಪಂದ್ಯಕ್ಕಾಗಿ 6700 ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ ಎಂದು ತಮ್ಮ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಪ್ರೇಕ್ಷಕರ ಕೊರತೆ ಇದೇ ಮೊದಲಲ್ಲ: ಪಿಎಸ್‌ಎಲ್ ಪಂದ್ಯಗಳಲ್ಲಿ ಪ್ರೇಕ್ಷಕರ ಕೊರತೆ ಉಂಟಾಗಿರುವುದು ಇದೇ ಮೊದಲಲ್ಲ. ವಿಶೇಷವಾಗಿ ಕರಾಚಿಯಲ್ಲಿ ಕಳೆದ ಕೆಲವು ಸೀಸನ್‌ಗಳಿಂದ ಅಭಿಮಾನಿಗಳ ಕೊರತೆಯ ಬಗ್ಗೆ ನಿರಂತರ ದೂರುಗಳು ಬರುತ್ತಿವೆ. ಪಿಎಸ್‌ಎಲ್ ಮಾತ್ರವಲ್ಲ, ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲೂ ಕಳೆದ ಕೆಲವು ವರ್ಷಗಳಿಂದ ಅಭಿಮಾನಿಗಳು ಕ್ರೀಡಾಂಗಣಕ್ಕೆ ಬರುತ್ತಿರುವ ಪ್ರಮಾಣ ತೀರ ಕಡಿಮೆಯಾಗಿದೆ. ಸೀಸನ್ ಮುಂದುವರೆದಂತೆ ಈ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವ ಸಾಧ್ಯತೆಗಳಿವೆ. ಈ ಪರಿಸ್ಥಿತಿಯು ಪಿಎಸ್‌ಎಲ್ ಪಂದ್ಯಾವಳಿ ಮತ್ತು ಪಾಕಿಸ್ತಾನ ಕ್ರಿಕೆಟ್‌ಗೆ ಕಳವಳಕಾರಿ ವಿಷಯವಾಗಿದೆ.

### ತಂಡದ ನೀರಸ ಪ್ರದರ್ಶನ | ರೋಹಿತ್ ಶರ್ಮಾ ಅವರನ್ನು ನಾಯಕನನ್ನಾಗಿ ಮಾಡಿ

# ನೀತಾ ಅಂಬಾನಿಗೆ ಅಭಿಮಾನಿಯ ಮನವಿ



**ಮುಂಬೈ:** ದೇಶದಾದ್ಯಂತ ಐಪಿಎಲ್ ಕಾವು ಜೋರಾಗಿದ್ದರೂ, ಈ ಬಾರಿ ಮುಂಬೈ ಇಂಡಿಯನ್ಸ್ ತಂಡದ ಪ್ರದರ್ಶನ ಅಭಿಮಾನಿಗಳಲ್ಲಿ ಬೇಸರ ತಂದಿದೆ. ಹೀಗಿರುವಾಗ ರೋಹಿತ್ ಶರ್ಮಾ ಅವರ ಅಭಿಮಾನಿಯೊಬ್ಬರು ಮುಂಬೈ ಇಂಡಿಯನ್ಸ್ ಸಹ-ಮಾಲೀಕರಾದ ನೀತಾ ಅಂಬಾನಿ ಅವರು ಶಿರಡಿ ಸಾಯಿಬಾಬಾ ದೇವಸ್ಥಾನಕ್ಕೆ ಹೋಗಿದ್ದಾಗ ಅವರ ಬಳಿ ತೆರಳಿ, ಮುಂಬೈ ತಂಡದ ನಾಯಕರನ್ನು ಬದಲಾವಣೆ ಮಾಡಿ, ಬದಲಿಗೆ ರೋಹಿತ್ ಶರ್ಮಾ ಅವರಿಗೆ ನಾಯಕತ್ವವನ್ನು ನೀಡಿ ಎಂದು ಕೈ ಮುಗಿದು ಕೇಳಿಕೊಂಡಿದ್ದಾರೆ.

ಸಾಯಿಬಾಬಾ ದೇವಾಲಯದ ಹೊರಗೆ ನೀತಾ ಅಂಬಾನಿಯನ್ನು ಭೇಟಿಯಾದ ಅಭಿಮಾನಿಯ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ದೇವಾಲಯದಿಂದ ಹೊರಕ್ಕೆ ಬರುತ್ತಿರುವ ನೀತಾ ಅಂಬಾನಿಯವರಿಗೆ ವ್ಯಕ್ತಿ ಕೈ ಮುಗಿದಿದ್ದಾನೆ. ನಂತರ ಆತ 'ದಯವಿಟ್ಟು ರೋಹಿತ್ ಶರ್ಮಾ ಅವರನ್ನು ಮುಂಬೈ ತಂಡದ ನಾಯಕನನ್ನಾಗಿ ಮಾಡಿ' ಎಂದು ಕೇಳಿಕೊಂಡಿದ್ದಾನೆ. ಅದಕ್ಕೆ ನೀತಾ ಅವರು ಕೂಡ ಪ್ರತಿಕ್ರಿಯೆ ನೀಡಿ ನಗುತ್ತಾ, ಎಲ್ಲಾ ದೇವರ ಇಚ್ಛೆ ಎಂದು ಹೇಳಿದ್ದಾರೆ.

ಕಳೆದ ವರ್ಷ ಮುಂಬೈ ಇಂಡಿಯನ್ಸ್ ತಂಡವು ಹಾರ್ದಿಕ್ ಪಾಂಡ್ಯ ಅವರನ್ನು ತಂಡದ ನಾಯಕನನ್ನಾಗಿ ಘೋಷಿಸಿತ್ತು, ಅದಾದ ಬಳಿಕ ಅಭಿಮಾನಿಗಳು ಬೇಸರ ವ್ಯಕ್ತಪಡಿಸಿದ್ದರು. ಐದು ಬಾರಿ ತಂಡಕ್ಕೆ ಟ್ರೋಫಿ ಗೆದ್ದು ಕೊಟ್ಟಿದ್ದ ನಾಯಕ ರೋಹಿತ್ ಅವರನ್ನು ಕಡೆಗಣಿಸಿದ್ದಕ್ಕೆ ಸಾಕಷ್ಟು ಟೀಕೆಗಳು ವ್ಯಕ್ತವಾಗಿದ್ದವು.

ಡ್ರೆಸ್ಸಿಂಗ್ ರೂಮ್‌ನಲ್ಲಿನ ವೈಮನಸ್ಸು ತಂಡದ ನಾಯಕತ್ವದ ಬದಲಾವಣೆಗೆ ಕಾರಣವಾಗಿದೆ ಎಂಬ ವರದಿಗಳು ಹೊರಬಿದ್ದವು. ಐಪಿಎಲ್ 2024ರಲ್ಲಿ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದ್ದರೂ, ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ಜಸ್ಪ್ರೀತ್ ಬುಮ್ರಾ ಮತ್ತು ತಿಲಕ್ ವರ್ಮಾ ಅವರನ್ನು ಹಾರ್ದಿಕ್ ಜೊತೆಗೆ ಉಳಿಸಿಕೊಳ್ಳಲಾಯಿತು. ಇದೀಗ ನಡೆಯುತ್ತಿರುವ ಐಪಿಎಲ್‌ನಲ್ಲಿಯೂ ಮುಂಬೈ ಹೇಳಿಕೊಳ್ಳುವ ಪ್ರದರ್ಶನ ನೀಡಿಲ್ಲ. ಹಾರ್ದಿಕ್ ಪಾಂಡ್ಯ ನೇತೃತ್ವದ ತಂಡವು ತಮ್ಮ ಮೊದಲ ಆರು ಪಂದ್ಯಗಳಲ್ಲಿ ಎರಡನ್ನು ಮಾತ್ರ ಗೆದ್ದಿದ್ದು, ಪ್ರಸ್ತುತ 10 ತಂಡಗಳ ಪಾಯಿಂಟ್‌ಗಳ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿ ನಾಲ್ಕು ಅಂಕಗಳನ್ನಷ್ಟೇ ಪಡೆದಿದೆ.

### ಕೆಯುಡಬ್ಲ್ಯೂಜೆ ವತಿಯಿಂದ ರಾಜ್ಯಮಟ್ಟದ ಪತ್ರಕರ್ತರ ಕ್ರಿಕೆಟ್ ಟೂರ್ನಿ

# ಬೆಂಗಳೂರು ನಗರ ಜಿಲ್ಲಾ ತಂಡ ರನ್ನರ್ ಅಪ್

**ಬೆಂಗಳೂರು:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು (ಕೆಯುಡಬ್ಲ್ಯೂಜೆ) ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಏ.12 ಮತ್ತು 13ರಂದು ಹಾಸನದಲ್ಲಿ ನಡೆದ ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಅತಿಥೇಯ ಹಾಸನ ತಂಡವು ಪ್ರಥಮ, ಬೆಂಗಳೂರು ನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ತಂಡವು ರನ್ನರ್ ಅಪ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಕೊಡಗು ತಂಡ ಮೂರನೇ ಸ್ಥಾನ ಪಡೆಯಿತು

ಬೆಂಗಳೂರು ನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕ್ರಿಕೆಟ್ ತಂಡವು ವೈ. ಎಸ್.ಎಲ್ ಸ್ವಾಮಿ ಸಾರಥ್ಯದಲ್ಲಿ ಉತ್ತಮ ಪ್ರದರ್ಶನ ನೀಡಿತು. ಮಳೆಯ ಕಾರಣ ಫೈನಲ್ ಪಂದ್ಯವನ್ನು 3 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಹಾಸನ ತಂಡದ ಅಭಿ 42 ರನ್ ಗಳಿಸಿ ಅಮೋಘ ಪ್ರದರ್ಶನ ನೀಡಿದರು. ಬೆಂಗಳೂರು ತಂಡದ ಪ್ರಲಾಪ ಅತ್ಯುತ್ತಮ ಫೀಲ್ಡರ್ ಪ್ರಶಸ್ತಿಗೆ ಭಾಜನರಾದರು.

ಬೆಂಗಳೂರು ತಂಡವು ಕೋಲಾರ ಮತ್ತು ಬಳ್ಳಾರಿ ತಂಡಗಳ ವಿರುದ್ಧ ಗೆದ್ದು ಪ್ರೀ ಕ್ವಾರ್ಟರ್ ಫೈನಲ್ಸ್‌ಗೆ ಲಗ್ಗೆಯಿಟ್ಟಿತು. ಕೋಲಾರ ವಿರುದ್ಧ ಹತ್ತು ವಿಕೆಟ್ ಹಾಗೂ ಬಳ್ಳಾರಿ ವಿರುದ್ಧ ಒಂಬತ್ತು ವಿಕೆಟ್‌ಗಳ ಅಂತರದ ಭರ್ಜರಿ ಗೆಲುವು ಸಾಧಿಸಿತು.

ಚಿಕ್ಕಮಗಳೂರಿನ ವಿರುದ್ಧ ಪ್ರೀ ಕ್ವಾರ್ಟರ್ ಫೈನಲ್ಸ್ ನಲ್ಲಿ ಚಿಕ್ಕಬಳ್ಳಾಪುರ ವಿರುದ್ಧ ಕ್ವಾರ್ಟರ್ ಫೈನಲ್ಸ್ ನಲ್ಲಿ, ಕೊಡಗು ವಿರುದ್ಧ ಸೆಮಿಫೈನಲ್ಸ್ ನಲ್ಲಿ ಬೆಂಗಳೂರು ತಂಡವು ಗೆಲುವು ಸಾಧಿಸಿತ್ತು.

## ಲಖನೌಗೆ ಮಯಾಂಕ್ ಸೇರ್ಪಡೆ?

**ದೆಹಲಿ:** ತಮ್ಮ ಮಾರಕ ಬೌಲಿಂಗ್ ಮೂಲಕ 2024ನೇ ಆವೃತ್ತಿಯ ಟೂರ್ನಿಯಲ್ಲಿ ಕ್ರಿಕೆಟ್ ಅಭಿಮಾನಿಗಳ ಗಮನವನ್ನು ಸೆಳೆದಿದ್ದ ಫಾಸ್ಟ್ ಬೌಲರ್ ಮಯಾಂಕ್ ಯಾದವ್ ಸದ್ಯದಲ್ಲೇ ಈ ಆವೃತ್ತಿಯ ಟೂರ್ನಿಯಲ್ಲಿ ಲಖನೌ ತಂಡಕ್ಕೆ ಸೇರ್ಪಡೆಯಾಗಲಿದ್ದಾರೆಂದು ವರದಿಯಾಗಿದೆ. ಸದ್ಯ ಬೆಂಗಳೂರಿನ ನ್ಯಾಷನಲ್ ಕ್ರಿಕೆಟ್ ಅಕಾಡೆಮಿಯಲ್ಲಿರುವ ಅವರು ಸಂಪೂರ್ಣವಾಗಿ ಗುಣಮುಖರಾಗಿದ್ದಾರೆಂದು ಎನ್‌ಸಿಎ ತಿಳಿಸಿದೆ. ಕಳೆದ ಆವೃತ್ತಿಯಲ್ಲಿ ಐಪಿಎಲ್ ಟೂರ್ನಿಯಲ್ಲಿ ಕೇವಲ ನಾಲ್ಕು ಪಂದ್ಯಗಳನ್ನು ಆಡಿದ್ದರ ಹೊರತಾಗಿಯೂ, ಮಯಾಂಕ್ ಯಾದವ್ ಅವರನ್ನು ಲಖನೌ ಫ್ರಾಂಚೈಸಿ 11 ಕೋಟಿ ರೂ. ಗಳಿಗೆ ಉಳಿಸಿಕೊಂಡಿತ್ತು.

ಗಾಯದ ಸಮಸ್ಯೆಯಿಂದ ಬಳಲುತ್ತಿದ್ದ ಮಯಾಂಕ್ ಯಾದವ್, ಏಪ್ರಿಲ್ ಮೊದಲ ವಾರ ಸಂಪೂರ್ಣ ಫಿಟ್ ಆಗಲಿದ್ದಾರೆಂದು ನಿರೀಕ್ಷೆ ಮಾಡಲಾಗಿತ್ತು. ಆದರೆ ಕಾಲ್ಬೆರಳಿನ ಗಾಯವಾದ ಕಾರಣ ಅವರ ಸೇರ್ಪಡೆ ತಡವಾಗಲು ಕಾರಣವಾಗಿದೆ. ಜಸ್ಟಿನ್ ಲ್ಯಾಂಗರ್ ಅವರು ಈ ಆವೃತ್ತಿಯಲ್ಲಿ ಆರಂಭದಲ್ಲಿ ಮಯಾಂಕ್ ಯಾದವ್ ಅವರ ಗಾಯದ ಬಗ್ಗೆ ಮಾತನಾಡಿದ್ದರು, ಅನಿರೀಕ್ಷಿತವಾಗಿ ಹಾಸಿಗೆಯನ್ನು ಒದೆಯುವ ಸಮಯದಲ್ಲಿ ಮಯಾಂಕ್ ಯಾದವ್ ಅವರ ಕಾಲ್ಬೆರಳಿಗೆ ಗಾಯವಾಗಿದೆ ಎಂದು ಮಾಹಿತಿ ನೀಡಿದ್ದರು.

ಮಯಾಂಕ್ ಯಾದವ್ ಮರಳಿದರೆ ಲಖನೌ ಸೂಪರ್ ಜಯಂಟ್ಸ್ ತಂಡ ಇನ್ನಷ್ಟು ಬಲಿಷ್ಠವಾಗಲಿದೆ. ಈಗಾಗಲೇ ಬ್ಯಾಟಿಂಗ್‌ನಲ್ಲಿ ಮೇಲುಗೈ ಪಡೆದಿರುವ ಲಖನೌ ತಂಡ, ಮಯಾಂಕ್ ಯಾದವ್ ಸೇರ್ಪಡೆಯಾದರೆ, ಬೌಲಿಂಗ್‌ನಲ್ಲೂ ಅತ್ಯಂತ ಅಪಾಯಕಾರಿಯಾಗಿ ಕಾಣಲಿದೆ. ಈ ಆವೃತ್ತಿಯ ಆರಂಭದಲ್ಲಿ ಮೊಹ್ಸಿನ್ ಖಾನ್ ಗಾಯಕ್ಕೆ ತುತ್ತಾಗಿದ್ದರಿಂದ ಟೂರ್ನಿಯಿಂದ ಹೊರ ಬಿದ್ದಿದ್ದರು, ಹಾಗಾಗಿ ಅವರ ಸ್ಥಾನದಲ್ಲಿ ಮೆಗಾ ಹರಾಜಿನಲ್ಲಿ ಅನ್ ಸೋಲ್ಡ್ ಆಗಿದ್ದ ಶಾರ್ದೂಲ್ ಠಾಕೂರ್‌ಗೆ ಅವಕಾಶವನ್ನು ನೀಡದ ಲಖನೌ ಫ್ರಾಂಚೈಸಿ ಅವರನ್ನು ಖರೀದಿಸಿತು. ಐಪಿಎಲ್‌ನ ಇದುವರೆಗಿನ ಪಂದ್ಯಗಳಲ್ಲಿ ಶಾರ್ದೂಲ್ ಉತ್ತಮ ಬೌಲಿಂಗ್ ಪ್ರದರ್ಶನ ನೀಡುತ್ತಿದ್ದಾರೆ.